ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಸರ್ವಶಿಕ್ಷಣ ಅಭಿಯಾನ

ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಹಾಗೂ ಮೇಲ್ವಿಚಾರಣೆ
**(Research, Evaluation, Monitoring and Supervision)**

**ಸಂಶೋಧನಾ ಅಧ್ಯಯನದ ವರದಿ**
**2014–15**

ಅಧ್ಯಯನದ ಶೀರ್ಷಿಕೆ

# ಮೈಸೂರು ಜಿಲ್ಲೆಯಲ್ಲಿ ಎನ್.ಜಿ.ಒ.ಗಳು ಕೈಗೊಂಡಿರುವ ಶೈಕ್ಷಣಿಕ ಚಟುವಟಿಕೆಗಳ ಮೌಲ್ಯಮಾಪನ–ಒಂದು ಅಧ್ಯಯನ.

**(An Evaluation Study on the Implementation of Educational Activities by NGO's in Mysuru District.)**


**ಅಧ್ಯಯನಕಾರರು**

**ರಾಜು.ಎಂ.,** ಹಿರಿಯ ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.
**ತ್ರಿವೇಣಿ.ಕೆ,** ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.
**ಶ್ರೀಕಂಠಸ್ವಾಮಿ.ಎಂ.ಬಿ.,** ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.
**ಮಮತಾ.ಎಂ.,** ಉಪನ್ಯಾಸಕರು, ಪಿ.ಎಸ್.ಟಿ.ಇ. ವಿಭಾಗ, ಡಯಟ್, ಮೈಸೂರು.
**ಪ್ರಶಾಂತ್.ಎಮ್.ಸಿ.,** ಉಪನ್ಯಾಸಕರು, ಇ.ಟಿ. ವಿಭಾಗ, ಡಯಟ್, ಮೈಸೂರು.

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು.

# ಮುನ್ನುಡಿ

ಶಿಕ್ಷಣ ಎಲ್ಲರ ಸೊತ್ತು. ಇದರ ಅಭಿವೃದ್ಧಿಯ ಜವಾಬ್ದಾರಿಯೂ ಎಲ್ಲರದ್ದಾಗಿದೆ. ಶಿಕ್ಷಣ ಸಾಮಾಜೀಕರಣದ ಮೂಲ ಅಸ್ತ್ರವಾಗಿರುವುದರಿಂದ ಸಮಾಜದಲ್ಲಿರುವ ಎಲ್ಲರೂ ಶಿಕ್ಷಣದ ಅಭಿವೃದ್ಧಿಗೆ ಜವಾಬ್ದಾರರಾಗಿರುತ್ತಾರೆ. ಈ ದೇಶದಲ್ಲಿರುವ ಎಲ್ಲಾ ಪ್ರಜೆಗಳು ಶಿಕ್ಷಣ ಸಂಸ್ಥೆಗಳ ಭಾಗೀದಾರರಾಗಿರುತ್ತಾರೆ. ಶಿಕ್ಷಣ ಇಲಾಖೆ ಸರಕಾರದ್ದಾದರೂ ಅದರ ಆಗುಹೋಗುಗಳ ಪ್ರಗತಿಗೆ ಎಲ್ಲರೂ ಶ್ರಮಿಸಬೇಕಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಜೊತೆ ಹಲವಾರು ಸರಕಾರೇತರ ಸಂಘ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಮೈಸೂರು ಜಿಲ್ಲೆಯಲ್ಲೂ ಸಾಕಷ್ಟು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸರಕಾರೇತರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಕಾರ್ಯ ನಿರತವಾಗಿವೆ. ಈ ಸಂಸ್ಥೆಗಳು ಇಲಾಖೆಯ ಆಶಯದನ್ವಯ ಕಾರ್ಯ ನಿರ್ವಹಿಸುತ್ತಿವೆಯೇ? ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರಿವೆಯೇ? ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಮುಂದೆ ಏನು ಮಾಡಬೇಕೆನ್ನುವುದನ್ನು ನಿರ್ಧರಿಸಲು ಅಧ್ಯಯನಗಳು ಸಹಾಯ ಮಾಡುತ್ತವೆ. ಆರ್.ಇ.ಎಂ.ಎಸ್ ಮಧ್ಯವರ್ತನೆಯು ಈ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಎನ್.ಜಿ.ಓ.ಗಳು ನಡೆಸುತ್ತಿರುವ ಶೈಕ್ಷಣಿಕ ಚಟುವಟಿಕೆಗಳ ಪರಿಣಾಮವನ್ನು ಮೌಲ್ಯಮಾಪನ ಮಾಡುವಂತೆ ಸೂಚಿಸಿದ್ದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಕಾರ್ಯ ನಿರತವಾಗಿರುವ ಅಗಸ್ತ್ಯ ಅಂತರಾಷ್ಟ್ರೀಯ ಪ್ರತಿಷ್ಠಾನ, ಪ್ರಜಾ ಯತ್ನ ಮತ್ತು ವಿವಿಧ ಯುಡಿಸಿ ಕೇಂದ್ರಗಳ ನಿರ್ವಹಣೆಯನ್ನು ವಿವಿಧ ಸ್ವಯಂಸೇವಾ ಸಂಸ್ಥೆಗಳು ವಹಿಸಿಕೊಂಡಿದ್ದು, ಅದನ್ನು ಮೌಲ್ಯಮಾಪನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಜಾಯತ್ನ ಈ ಸ್ವಯಂಸೇವಾ ಸಂಸ್ಥೆಯು ಮೈಸೂರು ಜಿಲ್ಲೆಯಲ್ಲಿ ತಮ್ಮ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ವಿವಿಧ ಕಾರಣಗಳಿಂದ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಕೈಬಿಟ್ಟಿರುವುದರಿಂದ ಅದರ ಕಾರ್ಯನಿರ್ವಹಣೆಯ ಅಧ್ಯಯನವನ್ನೂ ಕೈಬಿಡಲಾಗಿದೆ. ಯು.ಡಿ.ಸಿ. ಕೇಂದ್ರಗಳಿಗೆ ಸಂಬಂಧಿಸಿದಂತೆ ಸರಕಾರ ನಿಗದಿಪಡಿಸಿರುವ ಟರ್ಮ್ಸ್ & ಕಂಡಿಷನ್ಸ್‌ಗಳನ್ನು ಆಧಾರವಾಗಿಟ್ಟುಕೊಂಡು ಪ್ರಶ್ನಾವಳಿಗಳನ್ನು ಸಿದ್ಧಪಡಿಸಿದೆ. ಅದರಂತೆ ಕ್ಷೇತ್ರ ಭೇಟಿ ಮಾಡಿ ಮಾಹಿತಿಯನ್ನು ಕಲೆಹಾಕಿ ವಿಶ್ಲೇಷಿಸಲಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ವಾಸ್ತವಿಕ ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಈ ಅಧ್ಯಯನವು ಎನ್.ಜಿ.ಓ.ಗಳ ಕಾರ್ಯನಿರ್ವಹಣೆಯ ಬಗ್ಗೆ ಉತ್ತಮವಾದ ಒಳನೋಟಗಳನ್ನು ನೀಡಿದೆ. ಈ ಒಳನೋಟಗಳು ಮುಂದಿನ ಸಾಲಿಗೆ ಶೈಕ್ಷಣಿಕ ಪ್ರಗತಿಗೆ ಮಾರ್ಗದರ್ಶಿಯಾಗಲಿ, ಎನ್.ಜಿ.ಓ.ಗಳ ಕಾರ್ಯನಿರ್ವಹಣೆಗೆ ದಿಕ್ಸೂಚಿಯಾಗಲಿ, ಇಲಾಖೆಯ ಕಾರ್ಯಕ್ರಮದ ಜೊತೆಗೆ ಎನ್.ಜಿ.ಓ.ಗಳ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಪಾಲನೆ ಮಾಡುತ್ತಾ ಮುನ್ನಡೆಸಲು ಜಿಲ್ಲೆಯ ಅಧಿಕಾರಿಗಳಿಗೆ ಮಾರ್ಗಸೂಚಿಯಾಗಲಿ ಎಂದು ಹಾರೈಸುತ್ತೇನೆ.

ಬಿ.ಕೆ ಬಸವರಾಜ
ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತ ಮಹಲ್, ಮೈಸೂರು

# ಕೃತಜ್ಞತೆಗಳು

ಶಿಕ್ಷಣವೆಂದರೆ ಅರಿವಿನ, ಕಲಿಕೆಯ ಮತ್ತು ಪ್ರಗತಿಯ ಪ್ರಕ್ರಿಯೆಯಾಗಿದೆ. ಇದು ಸಮಾಜದ ತಳಹದಿಯಾಗಿದ್ದು, ವಿಶೇಷವಾಗಿ ಆರ್ಥಿಕ ಸಮೃದ್ಧಿ, ಸಾಮಾಜಿಕ ಸಾಮರಸ್ಯ ಮತ್ತು ರಾಜಕಾರಣದ ಸ್ಥಿರತೆಯನ್ನು ತರುವಲ್ಲಿ ಮುಖ್ಯವಾಗುತ್ತದೆ. ಶಿಕ್ಷಣದ ಮುಖ್ಯ ಉದ್ದೇಶ ಸಾಮಾಜಿಕವಾಗಿ ಎಲ್ಲರನ್ನೂ ಸುಶಿಕ್ಷಿತರನ್ನಾಗಿಸುವುದು, ಕೆಲಸದ ಮೂಲಕ ಆರ್ಥಿಕತೆಯಲ್ಲಿ ಅರ್ಹರನ್ನಾಗಿಸುವುದು, ಸಮಾಜದಲ್ಲಿ ಐಕ್ಯಮತವನ್ನು ತರುವುದು, ಸಮಾಜಕ್ಕೆ ಬೇಕಾದ ಮೌಲ್ಯಗಳು ಮತ್ತು ನೀತಿಗಳನ್ನು ಕಲಿಸುವುದು ಮುಂತಾದವು ಆಗಿವೆ. ಈ ನಿಟ್ಟಿನಲ್ಲಿ ದೇಶದ ಪ್ರಜೆಗಳನ್ನು ಸುಶಿಕ್ಷಿತರನ್ನಾಗಿ ಮಾಡುವಲ್ಲಿ ಶಿಕ್ಷಣ ಕ್ಷೇತ್ರವು ಸಾಕಷ್ಟು ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಗುಣಾತ್ಮಕ ಶಿಕ್ಷಣದ ಅಭಿವೃದ್ಧಿಯಲ್ಲಿ ಇಲಾಖೆಯ ಕಾರ್ಯಾಭಾರದ ಜೊತೆಗೆ ಭಾಗೀದಾರರ ಭಾಗವಹಿಸುವಿಕೆ ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ವಿಶ್ಲೇಷಣೆ ಮಾಡಿದಾಗ ಜನಪ್ರತಿನಿಧಿಗಳು, ಸಮುದಾಯ, ಸಂಘಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು, ಸಾಕಷ್ಟು ಸಹಕಾರವನ್ನು ಇಲಾಖೆಗೆ ಕೊಡುತ್ತಾ ಬಂದಿವೆ.

ಅಧ್ಯಯನದ ಒಳನೋಟಗಳನ್ನು ಆಧರಿಸಿ ಯಾವುದೇ ಕ್ಷೇತ್ರದಲ್ಲಿ ಕಾರ್ಯ ಮಾಡುವುದು ಇಂದಿನ ಅಗತ್ಯತೆ–ಯಾಗಿದೆ. ಈ ನಿಟ್ಟಿನಲ್ಲಿ ಸರ್ವಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು, ಈ ಸಾಲಿನಲ್ಲಿ ಎನ್.ಜಿ.ಒ.ಗಳು ಮೈಸುರು ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ಅನುಷ್ಠಾನಗೊಳಿಸುತ್ತಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವ ಒಂದು ಅವಕಾಶವನ್ನು ಕಲ್ಪಿಸಿತು. ಮೈಸೂರು ಜಿಲ್ಲೆಯಲ್ಲಿ ಸಾಕಷ್ಟು ಎನ್.ಜಿ.ಒ.ಗಳು ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಸಾಲಿನ ಅಧ್ಯಯನದಲ್ಲಿ 1. **ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ** ಅನುಷ್ಠಾನಗೊಳಿಸುತ್ತಿರುವ **ಅಗಸ್ತ್ಯ ವಿಜ್ಞಾನ ಕೇಂದ್ರ** ಮತ್ತು **ಅಗಸ್ತ್ಯ ಪೆಟ್ಟಿಗೆಯಲ್ಲಿ ಪ್ರಯೋಗಾಲಯ, 2. ಯುಡಿಸಿ ಕೇಂದ್ರಗಳ ನಿರ್ವಹಣೆ** ಮಾಡುತ್ತಿರುವ ವಿವಿಧ ಎನ್.ಜಿ.ಒ.ಗಳ ಶೈಕ್ಷಣಿಕ ಚಟುವಟಿಕೆಗಳನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಿದೆ. ಈ ಅಧ್ಯಯನಗಳು ಈ ಸಾಲಿನ ಶೈಕ್ಷಣಿಕ ಚಟುವಟಿಕೆಗಳಿಗೆ ಹೊಸ ಮುನ್ನುಡಿ ಬರೆಯಲು ಉತ್ತಮವಾದ ಒಳನೋಟಗಳನ್ನು ನೀಡಿದೆ ಎಂದು ಹೇಳಬಹುದು.

ಈ ಅಧ್ಯಯನವನ್ನು ಕೈಗೊಳ್ಳಲು ಅವಕಾಶ ನೀಡಿರುವ ನಿರ್ದೇಶಕರು, ಎಸ್.ಎಸ್.ಎ, ಬೆಂಗಳೂರು ಇವರಿಗೆ ಕೃತಜ್ಞತೆಗಳು. ಈ ಅಧ್ಯಯನ ನಡೆಸಲು ಮಾರ್ಗದರ್ಶನ ನೀಡಿರುವ ಈ ಸಂಸ್ಥೆಯ ಮುಖ್ಯಸ್ಥರಾದ ಶೀ ಬಿ.ಕೆ. ಬಸವರಾಜ, ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ದಿ) ಇವರಿಗೆ ಹೃತ್ಪೂರ್ವಕ ವಂದನೆಗಳು. ರೆಮ್ಸ್ ನೋಡೆಲ್ ಅಧಿಕಾರಿಯಾಗಿ ಸಲಹೆಗಳನ್ನು ನೀಡಿರುವ ಶ್ರೀಮತಿ ಮಂಜುಳಾ, ಹಿರಿಯ ಉಪನ್ಯಾಸಕರು, ಇವರಿಗೆ ವಂದನೆಗಳು. ಅಧ್ಯಯನ ತಂಡದಲ್ಲಿ ಕಾರ್ಯ ನಿರ್ವಹಿಸಿದ ಶ್ರೀಮತಿ ತ್ರಿವೇಣಿ.ಕೆ, ಶ್ರೀ ಶ್ರೀಕಂಠಸ್ವಾಮಿ.ಎಂ.ಬಿ. ಶ್ರೀಮತಿ ಮಮತಾ ಎಂ, ಶ್ರೀ ಪ್ರಶಾಂತ್ ಎಮ.ಸಿ, ಉಪನ್ಯಾಸಕರು, ಡಯಟ್, ಮೈಸೂರು ಇವರಿಗೆ ಧನ್ಯವಾದಗಳು. ಅಧ್ಯಯನದ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣಾ ಕಾರ್ಯದಲ್ಲಿ ಬೆಂಬಲಿಸಿದ ಶ್ರೀಮತಿ ಪುಷ್ಪಲತಾ ಕೆ.ಎಂ, ಉಪನ್ಯಾಸಕರು ಮತ್ತು ಶ್ರೀಮತಿ ಶಿವಮ್ಮ.ಎಂ ಕುರುಬರ, ಬೋಧಕರು, ಇ.ಎಲ್.ಟಿ.ಸಿ. ವಿಭಾಗ ಇವರಿಗೆ ಅಭಿನಂದನೆಗಳು. ಅಧ್ಯಯನದ ಸಾಧನ ತಂತ್ರಗಳ ತಯಾರಿಗೆ ಸಹಕರಿಸಿದ ಶಿಕ್ಷಕ ವೃಂದ, ಮಾಹಿತಿ ನೀಡಿರುವ ಅನುಪಾಲನಾ ಅಧಿಕಾರಿ ವೃಂದ, ಶಿಕ್ಷಕ ವೃಂದ, ಎನ್.ಜಿ.ಒ– ಸಿಬ್ಬಂದಿ ವರ್ಗ ಮತ್ತು ಎಲ್ಲಾ ಮಕ್ಕಳಿಗೆ ಕೃತಜ್ಞತೆಗಳು.

**ರಾಜು.ಎಂ.**

ಹಿರಿಯ ಉಪನ್ಯಾಸಕರು, ಐಫಿಕ್ ವಿಭಾಗ ಡಯಟ್, ಮೈಸೂರು

# ಒಳಗೇನಿದೆ?


| ಕ್ರ ಸಂ | ವಿವರ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ | 05 |
| 2 | ಅಧ್ಯಯನ ತಂಡ | 11 |
| **ಭಾಗ–1 (ಪುಟ ಸಂಖ್ಯೆ 12–54)**<br>**ಎನ್.ಜಿ.ಒ.–1, ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ (ವಿಜ್ಞಾನ ಕೇಂದ್ರ)** | | |
| 4 | ಅಧ್ಯಯನದ ಉದ್ದೇಶಗಳು | 13 |
| 5 | ಸ್ಯಾಂಪಲ್ | 13 |
| 6 | ಸಾಧನ ಮತ್ತು ತಂತ್ರಗಳು | 13 |
| 7 | ಮಾಹಿತಿ ಸಂಗ್ರಹಣೆ | 13 |
| 8 | ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ | 14–41 |
| 9 | ಅಧ್ಯಯನದ ಒಳನೋಟಗಳು | 42–45 |
| 10 | ಶೈಕ್ಷಣಿಕ ನಿಹಿತಾರ್ಥಗಳು | 46–47 |
| 11 | ಉಪಸಂಹಾರ | 48 |
| 12 | ಅನುಬಂಧ | 49–54 |
| **ಭಾಗ–2 (ಪುಟ ಸಂಖ್ಯೆ 55–94)**<br>**ಎನ್.ಜಿ.ಒ.–1, ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ (ಪೆಟ್ಟಿಗೆಯಲ್ಲಿ ಪ್ರಯೋಗಾಲಯ)** | | |
| 13 | ಅಧ್ಯಯನದ ಉದ್ದೇಶಗಳು | 56 |
| 14 | ಸ್ಯಾಂಪಲ್ | 56 |
| 15 | ಸಾಧನ ಮತ್ತು ತಂತ್ರಗಳು | 56 |
| 16 | ಮಾಹಿತಿ ಸಂಗ್ರಹಣೆ | 56 |
| 17 | ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ | 57–79 |
| 18 | ಅಧ್ಯಯನದ ಒಳನೋಟಗಳು | 80–85 |
| 19 | ಶೈಕ್ಷಣಿಕ ನಿಹಿತಾರ್ಥಗಳು | 86 |
| 20 | ಉಪಸಂಹಾರ | 87 |
| 21 | ಅನುಬಂಧ | 88–94 |
| **ಭಾಗ–3 (ಪುಟ ಸಂಖ್ಯೆ 95–156)**<br>**ಎನ್.ಜಿ.ಒ.(ಒಟ್ಟು 5), ನಗರ ಸೌಲಭ್ಯ ವಂಚಿತ ಮಕ್ಕಳ ಚಿಣ್ಣರ ತಂಗುಧಾಮ(ಯುಡಿಸಿ ಕೇಂದ್ರ)** | | |
| 22 | ಅಧ್ಯಯನದ ಉದ್ದೇಶಗಳು | 96 |
| 23 | ಸ್ಯಾಂಪಲ್ | 96 |
| 24 | ಸಾಧನ ಮತ್ತು ತಂತ್ರಗಳು | 96 |
| 25 | ಮಾಹಿತಿ ಸಂಗ್ರಹಣೆ | 96 |
| 26 | ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ | 97–132 |
| 27 | ಅಧ್ಯಯನದ ಒಳನೋಟಗಳು | 133–137 |
| 22 | ಶೈಕ್ಷಣಿಕ ನಿಹಿತಾರ್ಥಗಳು | 138–139 |
| 23 | ಉಪಸಂಹಾರ | 140 |
| 24 | ಅನುಬಂಧ | 141–156 |

# ಪೀಠಿಕೆ

ಶಿಕ್ಷಣ ನೀಡುವುದರ ಜೊತೆಗೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು, ವಿದ್ಯಾರ್ಥಿಗಳಲ್ಲಿ ಸಮಾಜಮುಖಿ ಚಿಂತನೆಗಳನ್ನು ಬೆಳೆಸುವುದು, ಸಾಮಾಜಿಕ ಕಂದರಗಳನ್ನು ತೊಡೆದು ಹಾಕಿ ಸಮಾನತೆಯ ಚಿಂತನೆಗಳನ್ನು ಹುಟ್ಟುಹಾಕುವುದು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು ಇಂದಿನ ಆದ್ಯತೆಯಾಗಿದೆ. ಇವುಗಳನ್ನು ಸಾಕಾರಗೊಳಿಸುವಲ್ಲಿ ಸರ್ಕಾರಿ ಇಲಾಖೆಯ ಜೊತೆಗೆ ಕೈಜೋಡಿಸಿರುವ ಸಂಸ್ಥೆಗಳೆಂದರೆ ಸರಕಾರೇತರ ಸಂಸ್ಥೆಗಳು. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲೂ ಸರ್ವಶಿಕ್ಷಣ ಅಭಿಯಾನದ ಸಹಕಾರದೊಂದಿಗೆ ಸಾಕಷ್ಟು ಸರಕಾರೇತರ ಸಂಸ್ಥೆಗಳು ಶೈಕ್ಷಣಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಕಾರ್ಯಸಾಧನೆಯ ಪರಿಣಾಮಕತೆಯನ್ನು ಅವಲೋಕನ ಮಾಡಿ, ಅದು ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ಎಷ್ಟು ಪೂರಕವಾಗಿದೆ ಎಂಬುದನ್ನು ಅರ್ಥಮಾಡಿಕೊಂಡು, ಹಿಮ್ಮಾಹಿತಿ ನೀಡುವುದು ಜಿಲ್ಲೆಯ ಶೈಕ್ಷಣಿಕ ಉಸ್ತುವಾರಿ ಹೊಣೆಹೊತ್ತಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಜಬಾಬ್ದಾರಿಯಾಗಿದೆ. ಈ ಅಧ್ಯಯನದ ಮೂಲಕ ಸರಕಾರೇತರ ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲು ಸರ್ವಶಿಕ್ಷಣ ಅಭಿಯಾನದ ಮಧ್ಯವರ್ತನೆಗಳಲ್ಲೊಂದಾದ ಆರ್.ಇ.ಎಂ.ಎಸ್. ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

ಈ ಅಧ್ಯಯನದ ಮೂಲಕ ಈ ಕೆಳಕಂಡ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲಾಗುವುದು.

## 1. ಅಗಸ್ತ್ಯ ಇಂಟರ್ ನ್ಯಾಷನಲ್ ಪೌಂಡೇಶನ್

ಈ ಸ್ವಯಂಸೇವಾ ಸಂಸ್ಥೆಯು ಮೈಸೂರು ನಗರ ವಲಯದಲ್ಲಿ "ಸೈನ್ಸ್ ಸೆಂಟರ್ ಮತ್ತು ಲ್ಯಾಬ್ ಇನ್ ಎ ಬಾಕ್ಸ್ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದೆ.

- 2014–15 ನೇ ಸಾಲಿಗೆ ಸರ್ವಶಿಕ್ಷಣ ಅಭಿಯಾನದಿಂದ ಒಂದು ವಿಜ್ಞಾನ ಕೇಂದ್ರ ಹಾಗೂ 5–ಸೆಟ್ ಲ್ಯಾಬ್– ಇನ್– ಎ– ಬಾಕ್ಸ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

### ಅ). ವಿಜ್ಞಾನ ಕೇಂದ್ರದ ಬಗ್ಗೆ:–

ವಿಜ್ಞಾನ ಕೇಂದ್ರವೆಂದರೆ ಹತ್ತಿರವಿರುವ 10 ಶಾಲೆಗಳ ನಡುವೆ ಒಂದು ಬೃಹತ್ ಕೊಠಡಿಯಲ್ಲಿ ಸರಿ ಸುಮಾರು 300 ಪ್ರಯೋಗ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ವಿಜ್ಞಾನ ಪ್ರಯೋಗಾಲಯ. ಈ ಪ್ರಯೋಗಾಲಯವು 10 ಶಾಲೆಗಳ ನಡುವೆ ಕೆಲಸ ನಿರ್ವಹಿಸುತ್ತದೆ. ಆ ಕಾರಣಕ್ಕಾಗಿ ಇದನ್ನು ವಿಜ್ಞಾನ ಕೇಂದ್ರವೆಂದು ಹೇಳಬಹುದು, ಈ ಕೇಂದ್ರವು ದಿನವೊಂದಕ್ಕೆ 2 ತಾಸುಗಳ 2 ಅವಧಿಗಳು ಮಕ್ಕಳಿಗೆ ವಿಜ್ಞಾನ ಕಲಿಯುವ ಅವಕಾಶ ಕಲ್ಪಿಸಿದೆ. ಈ ಕೇಂದ್ರವು ಪ್ರತಿದಿನವು ಹತ್ತಿರ ಇರುವ ಶಾಲೆಯ ಮಕ್ಕಳು ವೇಳಾಪಟ್ಟಿಗೆ ಅನುಗುಣವಾಗಿ ಆಗಮಿಸಿ ತಮ್ಮ ಪಠ್ಯ ಪುಸ್ತಕದಲ್ಲಿರುವ ಪ್ರಯೋಗಗಳನ್ನು ಮಾಡಲು ಸಹಾಯಕವಾಗಿದೆ.

**ವಿಜ್ಞಾನ ಕೇಂದ್ರದ ಗುರಿ ಉದ್ದೇಶಗಳು:–**

1) ಮಕ್ಕಳಲ್ಲಿ ವೈಜ್ಞಾನಿಕ ಅರಿವು ಮೂಡಿಸಲು.
2) ಮೂಲ ವಿಜ್ಞಾನವನ್ನು ಪ್ರಯೋಗದ ಮುಖಾಂತರ ತಿಳಿಸಲು.
3) ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು.
4) ಮಕ್ಕಳಲ್ಲಿ ಕುತೂಹಲವನ್ನು ಪ್ರೇರೇಪಿಸಲು.
5) ಕಲಿಕೆಯನ್ನು ಸರಳಗೊಳಿಸುವುದು ಮುಂತಾದವು.

**ವಿಜ್ಞಾನ ಕೇಂದ್ರದ ಈ ವರ್ಷದ ಪೂರ್ವ ಯೋಜನೆಗಳು :–**

- ಹತ್ತಿರವಿರುವ ಶಾಲೆಗಳಿಗೆ ವೇಳಾಪಟ್ಟಿ ತಯಾರಿಸಿ ವೇಳಾಪಟ್ಟಿಗನುಸಾರವಾಗಿ ಮೊದಲನೆ ಮತ್ತು ಎರಡನೇ ಸೆಮಿಸ್ಟರ್‌ಗೆ ಸಂಬಂಧಿಸಿದ ವಿಷಯಗಳ ಕುರಿತಂತೆ ಪಾಯೋಗಿಕ ಬೋಧನೆ ಮಾಡುವುದು.
- ಕನಿಷ್ಠ 4 ಶಾಲೆಗಳಲ್ಲಿ ವಿಜ್ಞಾನ ಸಂಘವನ್ನು ಸ್ಥಾಪಿಸುವುದು.
- ಶಿಕ್ಷಕರ ತರಬೇತಿ ಕಾಯಾಗಾರವನ್ನು ಮಾಡುವುದು.
- ಮಹಾ ವಿಜ್ಞಾನ ಮೇಳವನ್ನು ಹಮ್ಮಿಕೊಳ್ಳುವುದು.
- ಚಳಿಗಾಲದ ಶಿಬಿರ ಹಮ್ಮಿಕೊಳ್ಳುವುದು.
- ಬೇಸಿಗೆ ಶಿಬಿರ ಹಮ್ಮಿಕೊಳ್ಳುವುದು.

**ವಿಜ್ಞಾನ ಕೇಂದ್ರದಿಂದ ಈ ವರ್ಷದಲ್ಲಿ ನಡೆಸಬೇಕಾದ ಕಾರ್ಯಕ್ರಮಗಳು:–**

- ವಿಜ್ಞಾನ ಕೇಂದ್ರಕ್ಕೆ ಹತ್ತಿರವಿರುವ 3–ಪ್ರಾಥಮಿಕ ಮತ್ತು 4–ಪ್ರೌಢ ಶಾಲೆಗಳಿಗೆ ವೇಳಾಪಟ್ಟಿ ತಯಾರಿಸಿ ವೇಳಾಪಟ್ಟಿ ತಯಾರಿಸುವುದು.
- ಪಾಯೋಗಿಕ ಬೋಧನೆ ಮಾಡುವುದು.
- ಶಾಲೆಗಳಲ್ಲಿ ವಿಜ್ಞಾನ ಸಂಘವನ್ನು ಸ್ಥಾಪಿಸುವುದು.
- ನವೆಂಬರ್ ತಿಂಗಳಲ್ಲಿ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಮತ್ತು ಮಹಾ ವಿಜ್ಞಾನ ಮೇಳವನ್ನು ನಡೆಸುವುದು.
- ಚಳಿಗಾಲದ ಶಿಬಿರ ನಡೆಸುವುದು.
- ಎರಡನೇ ಸೆಮಿಸ್ಟರ್‌ನ ಪಾಯೋಗಿಕ ಬೋಧನೆಗೆ ವೇಳಾಪಟ್ಟಿ ತಯಾರಿಸುವುದು.
- ಬೆಂಕಿ ಆಕಸ್ಮಿಕ ಕುರಿತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಸುವುದು.
- ಮಕ್ಕಳ ದಸರಾದಲ್ಲಿ ವಿಜ್ಞಾನ ಮೇಳವನ್ನು ಮಾಡುವುದು.

### ಆ). ಪೆಟ್ಟಿಗೆಯಲ್ಲಿ ಪ್ರಯೋಗಾಲಯ:–

ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಎಂಬ ಕಾರ್ಯಕ್ರಮವು ಈಗಾಗಲೇ ಅನುಷ್ಠಾನಗೊಂಡಿದೆ. ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಎಂದರೆ ಚಿಕ್ಕ ಪೆಟ್ಟಿಗೆಯಲ್ಲಿ ವಿಜ್ಞಾನ ವಿಷಯವನ್ನು ಬೋಧಿಸಲು ಏನೆಲ್ಲಾ ಸಲಕರಣೆಗಳು ಬೇಕೋ ಆ ಎಲ್ಲಾ ಸಲಕರಣೆಗಳನ್ನು ಒಳಗೊಂಡಿರುವ ಒಂದು ಕಿರು ಸಂಪನ್ಮೂಲ ಕಿಟ್. ಒಟ್ಟು 10 ಕಿಟ್‌ಗಳನ್ನು ಒಳಗೊಂಡಿರುವ ಒಂದು ಸೆಟ್ ಇರುತ್ತದೆ.

**ಪೂರ್ವ ಯೋಜನೆಗಳು :**

- 50 ರಂತೆ 2 ಅವಧಿಗಳಲ್ಲಿ ಒಟ್ಟು 100 ಸರಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ಆಯ್ಕೆ ಮಾಡಿಕೊಂಡ ಎಲ್ಲಾ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವುದು.
- ಪ್ರತಿಯೊಂದು ಶಾಲೆಗೂ ಒಂದೊಂದು ಕಿಟ್‌ನ್ನು ನೀಡುವುದು.
- ತಿಂಗಳಿಗೆ 2–ಸಲ ಕಿಟ್‌ನ್ನು ROTATION ಮಾಡಲಾಗುವುದು.
- ಕಿಟ್ ಬಳಕೆ ಆಗುತ್ತಿರುವ ಕುರಿತು ಮೌಲ್ಯಮಾಪನ ಮಾಡುವುದು ಹಾಗೂ ಬಳಕೆ ಕುರಿತು ಮಾಹಿತಿ ನೀಡುವುದು.
- ವಿಜ್ಞಾನ ಮೇಳವನ್ನು ಹಮ್ಮಿಕೊಳ್ಳುವುದು.
- ಚಳಿಗಾಲದ ಶಿಬಿರ ಹಮ್ಮಿಕೊಳ್ಳುವುದು
- ಬೇಸಿಗೆ ಶಿಬಿರ ಹಮ್ಮಿಕೊಳ್ಳುವುದು.

**ಪೆಟ್ಟಿಗೆಯಲ್ಲಿ ಪ್ರಯೋಗಾಲಯದ ವತಿಯಿಂದ ನಡೆಸುವ ಕಾರ್ಯಕ್ರಮಗಳು:–**

- 50 ಸರಕಾರಿ ಪ್ರಾಥಮಿಕ ಶಾಲೆಗಳನ್ನು ಆಯ್ಕೆಮಾಡಿಕೊಳ್ಳುವುದು.
- ಆಯ್ಕೆ ಮಾಡಿಕೊಂಡ 50 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವುದು.
- ಪ್ರತಿಯೊಂದು ಶಾಲೆಗೂ ಒಂದೊಂದು ಕಿಟ್‌ನ್ನು ನೀಡುವುದು.
- ತಿಂಗಳಿಗೆ 2–ಸಲ ಕಿಟ್‌ನ್ನು ROTATION ಮಾಡುವುದು.
- ಕಿಟ್ ಬಳಕೆ ಆಗುತ್ತಿರುವ ಕುರಿತು ಮೌಲ್ಯಮಾಪನ ಮಾಡುವುದು.
- ಚಳಿಗಾಲದ ಶಿಬಿರ ನಡೆಸುವುದು.
- ಡಿಸೆಂಬರ್ ತಿಂಗಳಿನಲ್ಲಿ ಮತ್ತೆ 50 ಸರಕಾರಿ ಪ್ರಾಥಮಿಕ ಶಾಲೆಗಳನ್ನು ಆಯ್ಕೆಮಾಡಿಕೊಳ್ಳುವುದು.
- ಆಯ್ಕೆ ಮಾಡಿಕೊಂಡ 50 ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವುದು.
- ಆಯ್ಕೆ ಮಾಡಿಕೊಂಡ ಪ್ರತಿಯೊಂದು ಶಾಲೆಗೂ ಒಂದೊಂದು ಕಿಟ್‌ನ್ನು ನೀಡುವುದು.
- ಕಿಟ್ ಬಳಕೆ ಆಗುತ್ತಿರುವ ಕುರಿತು ಮೌಲ್ಯಮಾಪನ ಮಾಡುವುದು ಹಾಗೂ ಬಳಕೆ ಕುರಿತು ಮಾಹಿತಿ ನೀಡುವುದು.
- ವಿಜ್ಞಾನ ಮೇಳವನ್ನು ನಡೆಸುವುದು.

## 2. ನಗರ ಸೌಲಭ್ಯ ವಂಚಿತ ಮಕ್ಕಳ(ಯು.ಡಿ.ಸಿ.) ಕೇಂದ್ರಗಳ ನಿರ್ವಹಣೆ:

ಆರ್.ಟಿ.ಇ–2009 ಕಾಯ್ದೆಯು ದಿನಾಂಕ 01/04/2010 ರಿಂದ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ 2013–14ನೇ ಸಾಲಿನ ನವೆಂಬರ್ ತಿಂಗಳ ಸಮೀಕ್ಷೆಯಲ್ಲಿ ಗುರುತಿಸಿದ 6 ರಿಂದ 14 ವರ್ಷ ವಯೋಮಾನದ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು ಇಲಾಖೆಯ ಕರ್ತವ್ಯವಾಗಿದೆ.

ಆರ್.ಟಿ.ಇ. ಕಾಯ್ದೆ ಅನುಸಾರ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳ ಮಾಹಿತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಶಿಕ್ಷಣ ವಹಿ (ವಿ.ಇ.ಆರ್.) ನಗರ ಪ್ರದೇಶಗಳಲ್ಲಿ ವಾರ್ಡ್ ಶಿಕ್ಷಣ ವಹಿ (ಡಬ್ಲ್ಯೂ.ಇ.ಆರ್) ಯನ್ನು ನಿರ್ವಹಿಸುವುದು ಮತ್ತು ಆಗಿಂದಾಗ್ಗೆ ಪ್ರಸಕ್ತೀಕರಣಗೊಳಿಸುವುದು ಶಾಲಾ ಎಸ್‌ಡಿ.ಎಂ.ಸಿ. ಹಾಗೂ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಇದನ್ನು ಖಾತರಿ ಪಡಿಸುವುದು ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರ ಹಾಗೂ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಯ ಕರ್ತವ್ಯವಾಗಿದೆ.

**2014–15 ನೇ ಸಾಲಿನಲ್ಲಿ ಅಳವಡಿಸಿರುವ ಒ.ಒ.ಎಸ್.ಸಿ. ಕಾರ್ಯತಂತ್ರಗಳು:**

1. 3 ತಿಂಗಳ ವಸತಿಸಹಿತ ಮತ್ತು ವಸತಿರಹಿತ ವಿಶೇಷ ತರಬೇತಿ(3 ಆರ್.ಎಸ್.ಟಿ. ಮತ್ತು ಎನ್.ಆರ್.ಎಸ್.ಟಿ.)
2. 12 ತಿಂಗಳ ವಸತಿಯುತ ವಿಶೇಷ ತರಬೇತಿ(12 ಆರ್.ಎಸ್.ಟಿ.)
3. **ಚಿಣ್ಣರ ತಂಗುಧಾಮ ವಿಶೇಷ ತರಬೇತಿ–ಯು.ಡಿ.ಸಿ. ಕೇಂದ್ರ(12 ಆರ್.ಎಸ್.ಟಿ.)**
4. 12 ತಿಂಗಳ ವಸತಿರಹಿತ ವಿಶೇಷ ತರಬೇತಿ(12 ಎನ್.ಆರ್.ಎಸ್.ಟಿ.)
5. ಶಾಲಾಧಾರಿತ ವಿಶೇಷ ತರಬೇತಿ(ಸ್ವಯಂ ಸೇವಕ ಸಹಿತ–6 ತಿಂಗಳ ಅವಧಿಗೆ)
6. ಶಾಲಾಧಾರಿತ ವಿಶೇಷ ತರಬೇತಿ(ಸ್ವಯಂ ಸೇವಕರಿಲ್ಲದೆ–6 ತಿಂಗಳ ಅವಧಿಗೆ)
7. ಟೆಂಟ್ ಶಾಲೆ(6 ಎನ್.ಆರ್.ಎಸ್.ಟಿ.)
8. ಮದರಸ(10 ಎನ್.ಆರ್.ಎಸ್.ಟಿ.)
9. ಹಾಸ್ಟೆಲ್ ಸೌಲಭ್ಯಗಳು
10. ಗೃಹಾಧಾರಿತ ಶಿಕ್ಷಣ
11. ಶಾಲಾ ಸಿದ್ಧತಾ ಕಾರ್ಯಕ್ರಮ
12. 6 ತಿಂಗಳ ಋತುಮಾನ ವಸತಿಯುತ ಕೇಂದ್ರ (ಎಸ್.ಆರ್.ಎಸ್.ಟಿ.)

ಈ 13 ಕಾರ್ಯತಂತ್ರಗಳಲ್ಲಿ ಶಿಕ್ಷಣ ವಂಚಿತ ನಗರ ಪ್ರದೇಶದ ಮಕ್ಕಳ ಚಿಣ್ಣರ ತಂಗುಧಾಮ ಕೇಂದ್ರಗಳು ಒಂದಾಗಿದೆ.

## ಶಿಕ್ಷಣ ವಂಚಿತ ನಗರ ಪ್ರದೇಶದ ಮಕ್ಕಳ ಚಿಣ್ಣರ ತಂಗುಧಾಮ ಕೇಂದ್ರ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಕಾರ್ಯಗೊಳಿಸಲಾಗುತ್ತಿರುವ ಸರ್ವ ಶಿಕ್ಷಾ ಅಭಿಯಾನದ ಅನೇಕ ಮಧ್ಯವರ್ತನೆಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವುದು ಒಂದಾಗಿದೆ. ಮುಖ್ಯವಾಹಿನಿಗೆ ತರುವ ಕಾರ್ಯತಂತ್ರಗಳಲ್ಲಿ ಶಿಕ್ಷಣ ವಂಚಿತ ನಗರ ಪ್ರದೇಶದ ಮಕ್ಕಳ ಚಿಣ್ಣರ ತಂಗುಧಾಮವೂ ಒಂದು. ಈ ಚಿಣ್ಣರ ತಂಗುಧಾಮದ ಜವಾಬ್ದಾರಿಯನ್ನು ಸ್ವಯಂಸೇವಾ ಸಂಸ್ಥೆಗಳಿಗೆ ನೀಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಕೆಳಗಿನ 5 ಸ್ವಯಂಸೇವಾ ಸಂಸ್ಥೆಗಳು ನಿರ್ವಹಿಸುತ್ತಿರುವ ನಗರ ಸೌಲಭ್ಯ ವಂಚಿತ ಮಕ್ಕಳ(ಯು.ಡಿ.ಸಿ.) ಚಿಣ್ಣರ ತಂಗುಧಾಮಗಳ ಮೌಲ್ಯಮಾಪನದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

1) ಜನರಕ್ಷಾ ಗ್ರಾಮೀಣಾಭಿವೃದ್ಧಿ ಸಂಸ್ಥೆ,
2) ಭೀಮ್ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ,
3) ಜಾಗೃತಿ ಸ್ವಯಂಸೇವಾ ಸಂಸ್ಥೆ,
4) ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಸಂಸ್ಥೆ,
5) ಜನಜಾಗೃತಿ ಗ್ರಾಮೀಣಾಭಿವೃದ್ಧಿ ಸಂಸ್ಥೆ,

## ಇಲಾಖೆಯ ನಿಯಮಾನುಸಾರ ಕೇಂದ್ರದ ಮಕ್ಕಳಿಗೆ ಒದಗಿಸಬೇಕಾದ ಸೌಲಭ್ಯಗಳು:

**ವಸತಿ ವ್ಯವಸ್ಥೆ**–ಐವತ್ತು ಮಕ್ಕಳಿಗೆ ಆಗುವಷ್ಟು ವಿಶಾಲವಾದ ಗಾಳಿ ಬೆಳಕುಗಳುಳ್ಳ ಕೊಠಡಿಗಳು, ಭದ್ರವಾದ ಸುರಕ್ಷಿತವಾದ ವಾತಾವರಣ, ಶುದ್ಧ ಕುಡಿಯುವ ನೀರು, ಇತರೆ ಕಾರ್ಯಗಳಿಗೆ ಕೊರತೆಯಾಗದಂತೆ ನೀರಿನ ಸೌಲಭ್ಯ, ವಿದ್ಯುತ್ ವ್ಯವಸ್ಥೆ, ಶುಭ್ರವಾದ ಸುರಕ್ಷಿತವಾದ ಅಡುಗೆ ಮನೆ, ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳು, ಪ್ರತ್ಯೇಕವಾಗಿ ಮಲಗುವ ವ್ಯವಸ್ಥೆ, ಕ್ರೀಡಾ ಚಟುವಟಿಕೆ ನಡೆಸಲು ಸ್ಥಳ/ ಮೈದಾನ ಈ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ ಸ್ಥಳಗಳನ್ನು/ ಕಟ್ಟಡಗಳಲ್ಲಿ ಯು.ಡಿ.ಸಿ ಕೇಂದ್ರಗಳನ್ನು ನಡೆಸಲು ಅಗತ್ಯ ಕ್ರಮವಹಿಸಿವುದು.

**ಊಟ ತಿಂಡಿ ಸೌಲಭ್ಯ**– ಮಧ್ಯಾಹ್ನದ ಊಟವನ್ನು ಮಧ್ಯಾಹ್ನದ ಉಪಹಾರದ ಯೋಜನೆಯಡಿ ಒದಗಿಸುವುದು. ರಜೆ ದಿನಗಳಲ್ಲಿ ಮಧ್ಯಾಹ್ನ ಉಪಹಾರವನ್ನು ಮಂಜೂರಾಗಿರುವ ಅನುದಾನದಲ್ಲಿ ಭರಿಸುವುದು. ಬೆಳಗ್ಗಿನ ತಿಂಡಿಯಲ್ಲಿ ಇಡ್ಲಿ, ಸಾಂಬಾರು, ಚಿತ್ರಾನ್ನ, ಉಪ್ಪಿಟ್ಟು, ಅವಲಕ್ಕಿ, ಪುಳಿಯೋಗರೆ ಇನ್ನಿತರೆ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಊಟದಲ್ಲಿ ರಾಗಿಮುದ್ದೆ, ಚಪಾತಿ, ರೊಟ್ಟಿ, ಅನ್ನಸಾರು, ಮಜ್ಜಿಗೆಯನ್ನು ಒಳಗೊಂಡಂತೆ ಎಲ್ಲಾ ಮಕ್ಕಳಿಗೆ ಉತ್ತಮ ಗುಟ್ಟಮಟ್ಟದ ಪೌಷ್ಠಿಕ ಆಹಾರವನ್ನು ಕೊರತೆಯಾಗದಂತೆ ನೀಡುವುದು.

**ಮಕ್ಕಳಿಗೆ ಬಟ್ಟೆ, ಟವಲ್, ಟ್ರಂಕ್, ಹಾಸಿಗೆ ಇತರೆ ಸಾಮಗ್ರಿಗಳು**– ಕೇಂದ್ರದಲ್ಲಿರುವ ಪ್ರತಿಯೊಂದು ಮಗುವಿಗೆ ಈ ಎಲ್ಲಾ ಸಾಮಗ್ರಿಗಳನ್ನು ಒದಗಿಸುವುದು.

**ದೈನಂದಿನ ವಸ್ತುಗಳು**– ಕೇಂದ್ರದಲ್ಲಿರುವ ಪ್ರತಿಯೊಂದು ಮಗುವಿಗೂ ಪ್ರತ್ಯೇಕವಾಗಿ ಸ್ನಾನದ ಸೋಪು, ಬಟ್ಟೆ ತೊಳೆಯುವ ಸೋಪು, ಕೊಬ್ಬರಿ ಎಣ್ಣೆ, ಬಾಚಣಿಕೆ, ತಟ್ಟೆ ಲೋಟ, ಪೇಸ್ಟ್, ಬ್ರಷ್ ಮುಖಾಲಂಕರಣ ಇತ್ಯಾದಿ ನೀಡುವುದು.

**ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಲು ಪ್ರಯಾಣ–** ಕೇಂದ್ರಕ್ಕೆ ದಾಖಲಾಗುವ ಪ್ರತಿಯೊಂದು ಮಗುವನ್ನು ಸಂದರ್ಭಕ್ಕನುಸಾರವಾಗಿ ಸಿ.ಡಬ್ಲ್ಯೂ.ಸಿ ಮುಂದೆ ಹಾಜರುಪಡಿಸುವುದು.

**ಸಿಬ್ಬಂದಿಗೆ ವೇತನ–** ಕೇಂದ್ರದಲ್ಲಿ ಗರಿಷ್ಠ ಮಕ್ಕಳ ಸಂಖ್ಯೆ 50, ಕನಿಷ್ಟ 30 ಮಕ್ಕಳು ಇರುವುದು ಕಡ್ಡಾಯ. ಶಿಕ್ಷಕರು, ವಾರ್ಡನ್, ಕ್ಷೇತ್ರ ಕಾರ್ಯಕರ್ತರು, ಅಡಿಗೆಯವರು ಇವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ನೀಡಲಾಗಿದೆ.

**ಕಲಿಕಾ ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು–** ಮಕ್ಕಳಿಗೆ ಬರೆಯುವ ಸಾಮಗ್ರಿ, ಚಾರ್ಟ್, ಕಲರ್ ಪೇಪರ್ಸ್, ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್, ರಬ್ಬರ್, ಕ್ರಯಾನ್ಸ, ಡ್ರಾಯಿಂಗ್ ಶೀಟ್ಸ್, ಚಾಕ್ ಪೀಸ್, ವೈಟ್ ಪೇಪರ್ ಇತ್ಯಾದಿಗಳನ್ನು ಒದಗಿಸುವುದಾಗಿದೆ. ಬೋಧನಾ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಬಳಸಬಹುದಾಗಿದೆ.

ಕೌನ್ಸಿಲಿಂಗ್– ವರ್ಷದಲ್ಲಿ ಮೂರು ಬಾರಿ ಸ್ಥಳೀಯ ವೈದ್ಯರಿಂದ ಅಥವಾ ಸ್ವಯಂ ಸೇವಾ ಸಂಸ್ಥೆಗಳಿಂದ ಕೌನ್ಸಿಲಿಂಗ್ ಮಾಡಿಸುವುದು. ತಜ್ಞರಿಂದ ನಿಯಮಿತವಾಗಿ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕೀರ್ಣ ಏರ್ಪಡಿಸುವುದು.

ಜೀವನ ಕೌಶಲ್ಯ– ಎರಡು ತಿಂಗಳಿಗೆ ಒಂದರಂತೆ ಜೀವನ ಕೌಶಲ್ಯ ತರಬೇತಿಯನ್ನು ನೀಡುವುದು. ಯೋಗ, ಧ್ಯಾನ, ಪ್ರಾಣಾಯಾಮ, ಸಂಗೀತ ಇತ್ಯಾದಿ ಹಾಗೂ ಉತ್ತಮ ಪರಿಶ್ರಮವಿರುವ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ವಿವಿಧ ಕೌಶಲ್ಯಗಳ ತರಬೇತಿಯನ್ನು ನೀಡುವುದು.

**ಪ್ರವಾಸ–** ಮಕ್ಕಳಲ್ಲಿ ಪರಿಸರ ಪ್ರೇಮ, ಐತಿಹಾಸಿಕ ಸ್ಥಳಗಳ ಪ್ರಾಮುಖ್ಯತೆ ವೈಜ್ಞಾನಿಕ ಪ್ರವೃತ್ತಿಯನ್ನು ಬೆಳೆಸಲು ಪ್ರವಾಸವನ್ನು ಆಯೋಜಿಸುವುದು. ಬಾಹ್ಯ ಪ್ರಪಂಚದ ಬಗ್ಗೆ ಅನುಭವವನ್ನು ಗಳಿಸಲು ಅನುಕೂಲವಾಗಲು ಸಾಧ್ಯವಾಗುವಂತೆ ವಿವಿಧ ಕಛೇರಿ ಇತ್ಯಾದಿಗಳಿಗೆ ಭೇಟಿ ಏರ್ಪಡಿಸಿ ಆ ಕಛೇರಿಗಳ ಕಾರ್ಯನಿರ್ವಹಣೆಯನ್ನು ಪರಿಚಯಿಸುವುದು. ಇದರಿಂದ ವಿವಿಧ ವೃತ್ತಿಗಳ ಪರಿಚಯವು ಮಕ್ಕಳಿಗೆ ಆಗುತ್ತದೆ.

**ವಿದ್ಯುತ್ ಮತ್ತು ನೀರಿನ ವೆಚ್ಚ–** ಶಾಲೆಯಲ್ಲಿ ಲಭ್ಯವಿರುವ ವಿದ್ಯುತ್ ಮತ್ತು ನೀರಿನ ಸೌಲಭ್ಯವನ್ನು ಬಳಸಿಕೊಳ್ಳುವುದು. ಆಕಸ್ಮಿಕವಾಗಿ ಇಲ್ಲದಿದ್ದ ಪಕ್ಷದಲ್ಲಿ ಅಥವಾ ಅವಶ್ಯಕತೆ ಇದ್ದಲ್ಲಿ ಮಾತ್ರ ಈ ವೆಚ್ಚವನ್ನು ಬಳಸುವುದು. ಅನುದಾನವನ್ನು ವಿದ್ಯುತ್/ನೀರಿನ ಬಿಲ್ಲಿನ ಪಾವತಿಗಾಗಿ ಬಳಕೆ ಮಾಡುವುದು. ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದು.

**ವೈದ್ಯಕೀಯ ಶುಶ್ರೂಷೆ–** ವೈದ್ಯಕೀಯ ಪರೀಕ್ಷೆಗಾಗಿ ಹಾಗೂ ವೈದ್ಯರ ಸಲಹೆ ಕನಿಷ್ಠ ಮೂರು ತಿಂಗಳಿಗೊಮ್ಮೆ ಬಂದು ಸ್ಥಳದಲ್ಲಿಯೇ ಪರೀಕ್ಷೆ ನಡೆಸಿ ವರದಿ ನೀಡುವುದು. ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಗುರುತಿಸಿ, ಅದಕ್ಕೆ ಅಗತ್ಯ ಚಿಕಿತ್ಸೆಯನ್ನು ಮಾಡಿಸುವುದು. ಇಲಾಖೆಯಿಂದ ಹೆಲ್ತ್ ಕಾರ್ಡ್‌ಗಳನ್ನು ಪಡೆದು ಪ್ರತಿ ಮಗುವಿನ ಆರೋಗ್ಯ ಸ್ಥಿತಿಯನ್ನು ದಾಖಲೆ ಮಾಡುವುದು. ಇಲಾಖೆಯಿಂದ ಮಧ್ಯಾಹ್ನ ಉಪಹಾರ ಯೋಜನೆಯಡಿ ನೀಡಲಾಗುವ ವಿಟಮಿನ್ ಮಾತ್ರೆಗಳನ್ನು ಈ ಮಕ್ಕಳಿಗೂ ಪಡೆದು ವಿತರಿಸುವುದು. ಮೇಲ್ಕಾಣಿಸಿದ ಖರ್ಚು ವೆಚ್ಚಗಳ ಕಡಿತಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ ಮತ್ತು ಯುಡಿಸಿ ಕೇಂದ್ರಗಳ ನಿರ್ವಹಣೆ ಮಾಡುತ್ತಿರುವ 5 ಎನ್.ಜಿ.ಓ.ಗಳು ಅನುಷ್ಠಾನಗೊಳಿಸಿರುವ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನ, ಅದರಿಂದಾಗಿ ಮಕ್ಕಳಲ್ಲುಂಟಾಗಿರುವ ಪ್ರಗತಿ ಮತ್ತು ಕಲಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

# ಅಧ್ಯಯನ ತಂಡ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀ ಬಿ.ಕೆ ಬಸವರಾಜ, ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು(ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತ ಮಹಲ್, ಮೈಸೂರು.**

## ಸಲಹೆ ಮತ್ತು ಸಹಕಾರ

**ಶ್ರೀಮತಿ ಮಂಜುಳಾ,** ಹಿರಿಯ ಉಪನ್ಯಾಸಕರು ಮತ್ತು ರೆಮ್ಸ್ ನೋಡೆಲ್ ಅಧಿಕಾರಿಗಳು, ಡಯಟ್, ಮೈಸೂರು.

## ಅಧ್ಯಯನಕಾರರು

**ರಾಜು.ಎಂ.,** ಹಿರಿಯ ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.

**ತ್ರಿವೇಣಿ.ಕೆ,** ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.

**ಶ್ರೀಕಂಠಸ್ವಾಮಿ.ಎಂ.ಬಿ.,** ಉಪನ್ಯಾಸಕರು, ಐಫಿಕ್ ವಿಭಾಗ, ಡಯಟ್, ಮೈಸೂರು.

**ಮಮತಾ.ಎಂ.,** ಉಪನ್ಯಾಸಕರು, ಪಿ.ಎಸ್.ಟಿ.ಇ. ವಿಭಾಗ, ಡಯಟ್, ಮೈಸೂರು.

**ಪ್ರಶಾಂತ್ ಎಮ್**.ಸಿ**,** ಉಪನ್ಯಾಸಕರು, ಇ.ಟಿ. ವಿಭಾಗ, ಡಯಟ್, ಮೈಸೂರು.

## ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆಗೆ ಸಹಕಾರ ನೀಡಿದವರು

**ಶ್ರೀಮತಿ ಪುಷ್ಪಲತಾ ಕೆ.ಎಂ.,** ಉಪನ್ಯಾಸಕರು, ಜಿಲ್ಲಾ ಸಂಪನ್ಮೂಲ ಘಟಕ ವಿಭಾಗ

**ಶ್ರೀಮತಿ ಶಿವಮ್ಮ ಎಂ ಕುರುಬರ,** ಬೋಧಕರು, ಇ.ಎಲ್.ಟಿ.ಸಿ. ವಿಭಾಗ

## ಭಾಗ-1

### ಎನ್.ಜಿ.ಒ 1.

### ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ

# ಅ) ಅಗಸ್ತ್ಯ ವಿಜ್ಞಾನ ಕೇಂದ್ರ

## ಅಧ್ಯಯನದ ಉದ್ದೇಶಗಳು:

1. ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ ಅನುಷ್ಠಾನಗೊಳಿಸಿರುವ ವಿಜ್ಞಾನಕೇಂದ್ರದ ಕಾರ್ಯ ಚಟುವಟಿಕೆಗಳ ಮೌಲ್ಯಮಾಪನ ಮಾಡುವುದು.
2. ವಿಜ್ಞಾನಕೇಂದದ್ರ ಚಟುವಟಿಕೆಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ವೈಜ್ಞಾನಿಕ ಅರಿವನ್ನು ಮೂಡಿಸುವಲ್ಲಿ ಸಫಲವಾಗಿದೆಯೇ ಎನ್ನುವುದನ್ನು ತಿಳಿಯುವುದು.
3. ವಿಜ್ಞಾನಕೇಂದ್ರದ ಕಾರ್ಯ ಚಟುವಟಿಕೆಗಳು ಶಿಕ್ಷಕರ ವಿಜ್ಞಾನ ಕಲಿಕೆಯನ್ನು ಅನುಕೂಲಿಸುವಲ್ಲಿ ಬೀರಿರುವ ಪರಿಣಾಮವನ್ನು ತಿಳಿಯುವುದು.
4. ವಿಜ್ಞಾನಕೇಂದದ್ರ ಕಾರ್ಯ ಚಟುವಟಿಕೆಗಳು ಮಕ್ಕಳ ವಿಜ್ಞಾನ ಕಲಿಕೆಯ ಮೇಲೆ ಬೀರಿರುವ ಪರಿಣಾಮವನ್ನು ತಿಳಿಯುವುದು.
5. ಸರಕಾರ ಮತ್ತು ಎನ್.ಜಿ.ಓ.ಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳು ಹೇಗೆ ಅನುಷ್ಠಾನವಾಗುತ್ತಿದೆ ಎನ್ನುವುದನ್ನು ವಿಶ್ಲೇಷಿಸುವುದು.

## ವಿಜ್ಞಾನ ಕೇಂದ್ರ– ಸ್ಯಾಂಪಲ್

- ವಿಜ್ಞಾನ ಕೇಂದ್ರ ಬಳಕೆ ಮಾಡುತ್ತಿರುವ ಎಲ್ಲಾ ಶಾಲೆಗಳು –7 ಪ್ರೌಢ ಶಾಲೆಗಳು
- ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುತ್ತಿರುವ ಶಿಕ್ಷಕರು –7
- ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿರುವ ವಿದ್ಯಾರ್ಥಿಗಳು –79
- ಅನುಪಾಲನಾಧಿಕಾರಿಗಳು

## ಸಾಧನಗಳು

- ತರಗತಿ ವೀಕ್ಷಣಾ ನಮೂನೆ
- ಶಿಕ್ಷಕರಿಗಾಗಿ ಪ್ರಶ್ನಾವಳಿ
- ವಿದ್ಯಾರ್ಥಿಗಳಿಗಾಗಿ ಪ್ರಶ್ನಾವಳಿ ಮತ್ತು ವೀಕ್ಷಣಾ ನಮೂನೆ
- ಅನುಪಾಲನಾಧಿಕಾರಿಗಳಿಗಾಗಿ ಪ್ರಶ್ನಾವಳಿ
- ಅಗಸ್ತ್ಯ ಕೇಂದ್ರದವರಿಗೆ ಸಂದರ್ಶನ ನಮೂನೆ.

## ಮಾಹಿತಿ ಸಂಗ್ರಹಣೆ

- ವಿಜ್ಞಾನ ಕೇಂದ್ರಕ್ಕೆ 7 ಶಾಲೆಗಳು ಭಾಗವಹಿಸುವ ಸನ್ನಿವೇಶದಲ್ಲಿ ತರಗತಿ ವೀಕ್ಷಣೆ
- ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ಮತ್ತು ಶಿಕ್ಷಕರಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು.

**ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:** ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಶ್ಲೇಷಣೆ

# ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

## ವಿಜ್ಞಾನ ಕೇಂದ್ರದ ತರಗತಿ ವೀಕ್ಷಣಾ ನಮೂನೆಯ ವಿಶ್ಲೇಷಣೆ

**ಕೋಷ್ಟಕ 1:–**

| ಪ್ರ. ಸಂ | ಪ್ರಶ್ನೆ | ಅಭಿಪ್ರಾಯಗಳು | | |
|---|---|---|---|---|
| | | 1 | 2 | 3 |
| **1** | ವಿಜ್ಞಾನ ಕೇಂದ್ರದಲ್ಲಿ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಿರುವ ಎಲ್ಲಾ ವಿಜ್ಞಾನದ ಕಲಿಕಾ ಸಾಮಗ್ರಿಗಳು ಲಭ್ಯವಿದೆಯೇ? ಎಲ್ಲಾ ಅಗತ್ಯ ಸಾಮಗ್ರಿಗಳು–1, ಕೆಲವು ಅಗತ್ಯ ಸಾಮಗ್ರಿಗಳು–2, ಉಪಯುಕ್ತವಿಲ್ಲದ ಸಾಮಗ್ರಿಗಳು–3 | 0 | 7 | 0 |
| **2** | ಭೌತಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳಕ್ಕೆ ಸಂಬಂಧಿಸಿದ ಪರಿಕರಗಳು ಲಭ್ಯವಾಗಿದೆಯೇ? 90% ಕ್ಕಿಂತ ಹೆಚ್ಚು–1, 60ಕ್ಕಿಂತ ಹೆಚ್ಚು –2, 60% ಕ್ಕಿಂತ ಕಡಿಮೆ–3 | 0 | 7 | 0 |
| **3** | ಕೇಂದ್ರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಸಾಕಾಗುವಷ್ಟಿದೆಯೇ? ಹೌದು–1, ಇಲ್ಲ–2 | 3 | 4 | |
| **4** | ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | 2 | 5 | |
| **5** | ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗದಲ್ಲಿ ತೊಡಗಿಕೊಳ್ಳಲು ಅವಕಾಶವಿದೆಯೇ? ವೈಯಕ್ತಿಕವಾಗಿ–1, ಗುಂಪಿನಲ್ಲಿ–2, ಪ್ರಯೋಗ ಮಾಡುವುದನ್ನು ವೀಕ್ಷಣೆ ಮಾಡಲು ಮಾತ್ರ –3 | 0 | 5 | 2 |

- ವಿಜ್ಞಾನ ಕೇಂದ್ರದಲ್ಲಿ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಿರುವ ಎಲ್ಲಾ ಕಲಿಕಾ ಸಾಮಗ್ರಿಗಳು ಲಭ್ಯವಿರುವುದಿಲ್ಲ. ಆದರೆ ಕಲಿಕೆಗೆ ಪೂರಕವಾದ ಹಲವಾರು ವಿಜ್ಞಾನದ ಸಾಮಗ್ರಿಗಳು ಲಭ್ಯವಿದೆ.
- ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳಕ್ಕೆ ಸಂಬಂಧಿಸಿದಂತೆ 60%ಕ್ಕಿಂತ ಹೆಚ್ಚು ಪರಿಕರಗಳು ಲಭ್ಯವಿದೆ.
- ಕೇಂದ್ರದಲ್ಲಿ 25–30 ವಿದ್ಯಾರ್ಥಿಗಳು ಭಾಗವಹಿಸಲು ಸಾಕಷ್ಟು ಸ್ಥಳಾವಕಾಶ ಇದ್ದು, ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಯ ವಿದ್ಯಾರ್ಥಿಗಳಿಗೆ ಭಾಗವಹಿಸಲು ಸ್ಥಳಾವಕಾಶದ ಕೊರತೆ ಕಂಡು ಬರುತ್ತದೆ.
- ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜೊತೆ ವಿಜ್ಞಾನ ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶ ಕಡಿಮೆ ಇದೆ.
- ಕೇಂದ್ರಕ್ಕೆ ಭೇಟಿ ನೀಡಿದ ಮಕ್ಕಳಿಗೆ ಗುಂಪಿನಲ್ಲಿ ಪ್ರಯೋಗ ಮಾಡಲು ಅವಕಾಶ ಕಲ್ಪಿಸಲಾಗಿದೆ. ಕೆಲವೊಮ್ಮೆ ವೀಕ್ಷಣೆ ಮಾಡಲು ಮಾತ್ರ ಅವಕಾಶ ಇರುತ್ತದೆ.

**ಕೋಷ್ಟಕ 2:–**

| ಪ್ರ. ಸಂ | ಪ್ರಶ್ನೆ | ಅಭಿಪ್ರಾಯಗಳು | | |
|---|---|---|---|---|
| | | 1 | 2 | 3 |
| **6** | ಪ್ರಾತ್ಯಕ್ಷಿಕೆ ಅಥವಾ ಗುಂಪಿನಲ್ಲಿ ಪ್ರಯೋಗ ಮಾಡುವಾಗ ಎಲ್ಲರಿಗೂ ವೀಕ್ಷಣೆ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | 6 | 1 | – |
| **7** | ವಿದ್ಯಾರ್ಥಿಗಳು ಪ್ರಯೋಗ ಮಾಡುವುದಕ್ಕೆ ಮೊದಲು ನೀಡುವ ಸೂಚನೆಗಳನ್ನು ಆಲಿಸುವರೇ? ಹೌದು–1, ಇಲ್ಲ–2 | 5 | 2 | – |
| **8** | ವಿದ್ಯಾರ್ಥಿಗಳು ಪರಿಕರಗಳ ಪರಿಚಯ ಹೊಂದಿರುವರೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | 1 | 6 | 0 |
| **9** | ವಿದ್ಯಾರ್ಥಿಗಳು ಪರಿಕರಗಳನ್ನು ಬಳಸುವ ಕೌಶಲ ಹೊಂದಿರುವರೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | 1 | 6 | 0 |
| **10** | ವಿದ್ಯಾರ್ಥಿಗಳು ಪ್ರಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವರೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | 2 | 5 | 0 |

- ಪ್ರಾತ್ಯಕ್ಷಿಕೆ ಅಥವಾ ಗುಂಪಿನಲ್ಲಿ ಪ್ರಯೋಗ ಮಾಡುವಾಗ ಎಲ್ಲರಿಗೂ ವೀಕ್ಷಣೆ ಮಾಡಲು ವಿಫುಲವಾದ ಅವಕಾಶಗಳನ್ನು ಕಲ್ಪಿಸಲಾಗಿದೆ.
- 5 ಶಾಲೆಯ ವಿದ್ಯಾರ್ಥಿಗಳು ಪ್ರಯೋಗಕ್ಕೆ ಮೊದಲು ಸಂಪನ್ಮೂಲ ವ್ಯಕ್ತಿಗಳು ನೀಡುವ ಸೂಚನೆಗಳನ್ನು ಆಲಿಸುತ್ತಾರೆ. ಆದರೆ 2 ಶಾಲೆಗಳ ಶಿಕ್ಷಕರು ಕೇಂದ್ರಕ್ಕೆ ಬರುವ ಮುನ್ನವೇ ವಿದ್ಯಾರ್ಥಿಗಳ ಮಾನಸಿಕ ಸಿದ್ಧತೆಯನ್ನು ಮಾಡಬೇಕಾಗಿದೆ.
- ವಿದ್ಯಾರ್ಥಿಗಳು ವಿಜ್ಞಾನ ಕೇಂದ್ರಗಳಲ್ಲಿರುವ ಸಾಮಗ್ರಿಗಳ ಬಗ್ಗೆ ಹೊಂದಿರುವ ಪರಿಚಯವು ಮತ್ತು ಬಳಕೆಯ ಕೌಶಲವು ಸಾಧಾರಣವಾಗಿದೆ. ಇದಕ್ಕೆ ಕಾರಣ ಪ್ರತಿ ಶಾಲೆಯ ಪ್ರತಿ ತರಗತಿಯು ಕೇಂದ್ರಕ್ಕೆ ಭೇಟಿ ನೀಡುವ ಅವಕಾಶಗಳು ಬಹಳ ಕಡಿಮೆ ಇರುತ್ತದೆ. ಶಾಲೆಗಳಲ್ಲಿಯೂ ಪ್ರಯೋಗ ಮಾಡಿ ವಿಜ್ಞಾನ ಕಲಿಕೆಯನ್ನು ಅನುಕೂಲಿಸುವ ಸಂದರ್ಭಗಳು ಕಡಿಮೆ ಇದೆ. ಆದುದರಿಂದ ವಿಜ್ಞಾನ ಕಲಿಕೆಯನ್ನು ಅನ್ವೇಷಣೆ/ಪ್ರಯೋಗ/ವೀಕ್ಷಣೆ/ಅನುಭವಾತ್ಮಕವಾಗಿಯೇ ಕಲಿಯುವಂತೆ ಮಾಡುವತ್ತ ಶಿಕ್ಷಕರನ್ನು ಪ್ರೇರೇಪಿಸಬೇಕಾಗಿದೆ.
- ವಿಜ್ಞಾನ ಪ್ರಯೋಗಗಳು ಮಕ್ಕಳಲ್ಲಿ ಪ್ರಶ್ನೆಗಳ ಸರಮಾಲೆಯನ್ನೇ ಸೃಷ್ಟಿಮಾಡಬೇಕು. ಆದರೆ ವಿದ್ಯಾರ್ಥಿಗಳ ಪ್ರಶ್ನೆಗಳ ಸಂಖ್ಯೆ ಸಾಧಾರಣವಾಗಿದೆ. **(ಸ್ವಾಮಿ, ತ್ರಿವೇಣಿ, ಶ್ರೀಕಂಠ ಸ್ವಾಮಿ, ಪ್ರಶಾಂತ್–2014)** ಈ ಅಧ್ಯಯನದ ಪ್ರಕಾರ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಕೇವಲ 5.6% ಮಕ್ಕಳು ಪ್ರಶ್ನೆ ಕೇಳಿರುತ್ತಾರೆ, 8.1% ಪ್ರಶ್ನೆಗಳು ಮಕ್ಕಳಿಂದ ಬಂದಿವೆ ಮತ್ತು ಶೇ1 ರಷ್ಟು ಮಕ್ಕಳು ತರ್ಕ ಬದ್ಧವಾದ ಪ್ರಶ್ನೆಗಳನ್ನು ಕೇಳಿರುವುದು ಸ್ಪಷ್ಟವಾಗಿದೆ. ಪ್ರಶ್ನಿಸುವಿಕೆಗೆ ಸಾಕಷ್ಟು ಅವಕಾಶಗಳನ್ನು ದೈನಂದಿನ ಶಾಲಾ ಚಟುವಟಿಕೆಗಳಲ್ಲೂ ಬೆಳೆಸಬೇಕಾಗಿದೆ.

**ಕೋಷ್ಟಕ 3:–**

| ಪ್ರ. ಸಂ | ಪ್ರಶ್ನೆ | ಅಭಿಪ್ರಾಯಗಳು | | |
|---|---|---|---|---|
| | | 1 | 2 | 3 |
| **11** | ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸಬಲ್ಲರೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | 0 | 6 | 1 |
| **12** | ಪ್ರಯೋಗ/ಚಟುವಟಿಕೆಗಳ ಮೂಲಕ ಕಂಡುಕೊಂಡ ಒಳನೋಟಗಳನ್ನು ಪರಸ್ಪರ ಹಂಚಿಕೊಳ್ಳಬಲ್ಲರೇ? ಕ್ರಿಯಾಶೀಲವಾಗಿ–1, ನಿಧಾನವಾಗಿ–2, ಹಂಚಿಕೊಳ್ಳುವುದಿಲ್ಲ–3 | 0 | 1 | 6 |
| **13** | ವಿದ್ಯಾರ್ಥಿಗಳು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವರೇ? ಉತ್ತಮ–1, ಸಾಧಾರಣ –2, ಅತೃಪ್ತಿಕರ–3 | 1 | 2 | 4 |
| **14** | ಅನುಕೂಲಗಾರರು ಮಕ್ಕಳೊಂದಿಗೆ ಸ್ಪಂದಿಸುವ ರೀತಿ: ಅನುಕೂಲಿಸುತ್ತಾರೆ–1, ತಾವೇ ವಿವರಿಸುತ್ತಾರೆ–2, ಪರಿಣಾಮಕಾರಿಯಲ್ಲ3 | 2 | 4 | 1 |
| **15** | ಇಲಾಖೆಯ ಎಷ್ಟು ಅಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ/ ಮಾರ್ಗದರ್ಶನ ನೀಡಿರುತ್ತಾರೆ?(ದಾಖಲೆ ವೀಕ್ಷಿಸಿ) | ಇಬ್ಬರು (ಬಿ.ಇ.ಒ. ಮತ್ತು ಡಯಟ್ ಉಪನ್ಯಾಸಕರು) | | |

- ವಿದ್ಯಾರ್ಥಿಗಳಲ್ಲಿ ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸುವ ಸಾಮರ್ಥ್ಯ ಸಾಧಾರಣವಾಗಿದೆ. ಒಂದು ಶಾಲೆಯ ವಿದ್ಯಾರ್ಥಿಗಳಲ್ಲಿ ತೀರಾ ಅತೃಪ್ತಿಕರವಾಗಿದೆ.
- ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಗ/ಚಟುವಟಿಕೆಗಳ ಮೂಲಕ ಕಂಡುಕೊಂಡ ಒಳನೋಟಗಳನ್ನು ಪರಸ್ಪರ ಹಂಚಿಕೊಳ್ಳಲು ಅವಕಾಶ ಸಿಕ್ಕಿರುವುದಿಲ್ಲ.
- ವಿದ್ಯಾರ್ಥಿಗಳು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡಿರುವುದಿಲ್ಲ. ಕೇಂದ್ರಕ್ಕೆ ತೆರಳುವ ಮುನ್ನ ಶಿಕ್ಷಕರು ಮಕ್ಕಳನ್ನು ಸಿದ್ಧಗೊಳಿಸದಿರುವುದು ಸ್ಪಷ್ಟವಾಗಿದೆ. ಸಂಪನ್ಮೂಲ ವ್ಯಕ್ತಿಗಳು ಈ ಬಗ್ಗೆ ಸಪಷ್ಟವಾಗಿ ಸೂಚನೆ ನೀಡುವುದು ಅಗತ್ಯವಾಗಿದೆ.
- ಅಗಸ್ತ್ಯ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಕಲಿಕೆಯನ್ನು ಅನುಕೂಲಿಸುವುದಕ್ಕಿಂತ ಹೆಚ್ಚಾಗಿ ಪ್ರಯೋಗಗಳನ್ನು ಮಾಡಿ ವಿವರಿಸುವುದು ಕಂಡು ಬಂದಿದೆ.
- ಉತ್ತರ ವಲಯದ 7 ಶಾಲೆಗಳು ಕೇಂದ್ರದಲ್ಲಿ ಭಾಗವಹಿಸುತ್ತಿದ್ದು, ಇಡೀ ಶೈಕ್ಷಣಿಕ ವರ್ಷದಲ್ಲಿ ಕೇವಲ ಇಬ್ಬರು ಇಲಾಖೆಯ ಅಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿರುತ್ತಾರೆ. ಭೇಟಿ ನೀಡಿದ ಅಧಿಕಾರಿ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಡಯಟ್ ಉಪನ್ಯಾಸಕರು ಒಬ್ಬರು. ಇವರ ಭೇಟಿಯ ವರದಿಯಲ್ಲಿ ಕೇಂದ್ರವು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಉಲ್ಲೇಖಿಸಿರುವುದನ್ನು ಗಮನಿಸಲಾಗಿದೆ. ಆದರೆ ಎನ್.ಜಿ.ಒ.ಗಳ ಕಾರ್ಯನಿರ್ವಹಣೆ ಬಗ್ಗೆ ಅನುಪಾಲನಾಧಿಕಾರಿಗಳು ಮೇಲ್ವಿಚಾರಣೆ ಮಾಡಿ ಮಾರ್ಗದರ್ಶನ ನೀಡಿರುವ ಅಂಶಗಳು ಲಭ್ಯವಾಗಿರುವುದಿಲ್ಲ. ಗುಣಾತ್ಮಕತೆಯ ದೃಷ್ಟಿಯಿಂದ ಈ ಅಂಶ ಗಮನಾರ್ಹ ಸಂಗತಿಯಾಗಿದೆ.

# ಶಿಕ್ಷಕರ ಪ್ರಶ್ನಾವಳಿಯ ವಿಶ್ಲೇಷಣೆ

**ಕೋಷ್ಟಕ 4:–**

| ಪ್ರ. ಸಂ | ಪ್ರಶ್ನೆ | ಹೌದು–1 | ಇಲ್ಲ–2 |
|---|---|---|---|
| 1 | ವಿಜ್ಞಾನ ಕೇಂದ್ರದಲ್ಲಿ ಶಿಕ್ಷಕರಿಗೆ ತರಬೇತಿ ನೀಡುತ್ತಾರೆಯೇ? ಹೌದು–1, ಇಲ್ಲ–2 | 0 | 7 |
| 2 | ಒಂದು ತಿಂಗಳಲ್ಲಿ ನಿಮ್ಮ ಶಾಲೆಯ ಒಂದು ತರಗತಿಗೆ ಎಷ್ಟು ಬಾರಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶ ಸಿಗುತ್ತದೆ? (ಸಂಖ್ಯೆ ಬರೆಯಿರಿ). | 3–4 | – |
| 3 | ಒಂದು ತಿಂಗಳಲ್ಲಿ ಪ್ರತಿ ತರಗತಿಗೆ ಭೌತಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳ ವಿಷಯಕ್ಕೆ ಸಂಬಂಧಿಸಿದಂತೆ ತಲಾ ಎಷ್ಟು ಅವಧಿಗಳು ಲಭ್ಯವಾಗುತ್ತದೆ? (ಸಂಖ್ಯೆ ಬರೆಯಿರಿ). | 1–2 | – |
| 4 | ವಿಜ್ಞಾನ ಬೋಧನೆಯ ಕುರಿತಂತೆ ನಿಮ್ಮ ಅಗತ್ಯತೆಗಳನ್ನು ಆದ್ಯತೀಕರಿಸಿರುವಿರಾ? ಹೌದು–1, ಇಲ್ಲ–2 | 7 | 0 |
| 5 | ಪೂರ್ವಭಾವಿಯಾಗಿ ನಿಮ್ಮ ಅಗತ್ಯತೆಗಳ ಬಗ್ಗೆ ಕೇಂದ್ರಕ್ಕೆ ಮಾಹಿತಿ ನೀಡುವಿರಾ? ಹೌದು–1, ಇಲ್ಲ–2 | 3 | 4 |

- ವಿಜ್ಞಾನ ಕೇಂದ್ರದಲ್ಲಿ ಪ್ರಯೋಗ ಮಾಡುವ ಬಗ್ಗೆ ಶಿಕ್ಷಕರಿಗೆ ತರಬೇತಿ ನೀಡುತ್ತಿಲ್ಲ. ಶಿಕ್ಷಕರಲ್ಲಿ ಪ್ರಯೋಗಕ್ಕೆ ಸಂಬಂಧಿಸಿದಂತೆ ಕಡಿಮೆ ವೆಚ್ಚ ಮತ್ತು ವೆಚ್ಚರಹಿತ ವಿಜ್ಞಾನೋಪಕರಣ ತಯಾರಿಸುವ, ಬಳಸುವ ಮತ್ತು ಪ್ರಯೋಗ ಮಾಡುವ ಸಾಮರ್ಥ್ಯ ಕಡಿಮೆ ಇದೆ. ವಿಜ್ಞಾನ ಕೇಂದ್ರವು ಒಂದು ಬ್ಲಾಕ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಂದು ವರ್ಷದ ಅವಧಿಯಲ್ಲಿ ಶಿಕ್ಷಕರಿಗೆ ತರಬೇತಿ ನೀಡಿದಲ್ಲಿ ಗುಣಮಟ್ಟದ ಕಲಿಕೆಗೆ ಪೂರಕವಾಗಿರುತ್ತಿತ್ತು.
- ವರ್ಷದಲ್ಲಿ ಪ್ರತಿ ತರಗತಿಗೆ 3–4 ಬಾರಿ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶವಿದ್ದು, ವಿಜ್ಞಾನದ ಎಲ್ಲಾ ಶಿಸ್ತಿಗೂ 1–2 ಬಾರಿ ಅವಕಾಶ ಸಿಕ್ಕಿರುತ್ತದೆ.
- ವಿಜ್ಞಾನ ಕೇಂದ್ರದಲ್ಲಿ ಮಾಡಲಿರುವ ಪ್ರಯೋಗಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ತಮ್ಮ ಅಗತ್ಯತೆಗಳನ್ನು ಆದ್ಯತೀಕರಿಸಿದ್ದೇವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಆದರೆ ಹೆಚ್ಚಿನ ಶಿಕ್ಷಕರು ತಮ್ಮ ಅಗತ್ಯತೆಗಳ ಬಗ್ಗೆ ಕೇಂದ್ರದವರಿಗೆ ಪೂರ್ವಭಾವಿಯಾಗಿ ಯಾವುದೇ ಮಾಹಿತಿಯನ್ನು ನೀಡಿಲ್ಲವೆನ್ನುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಗುಣಾತ್ಮಕ ಶಿಕ್ಷಣಕ್ಕೆ ಈ ಒಂದು ಚಟುವಟಿಕೆಯು ಒಂದು ಪ್ರಕ್ರಿಯೆಯಾಗಿ ರೂಪುಗೊಳ್ಳದಿರುವುದು ಸ್ಪಷ್ಟವಾಗಿದೆ.

**ಕೋಷ್ಟಕ 5:–**

| ಪ್ರ. ಸಂ | ಪ್ರಶ್ನೆ | ಹೌದು–1 | ಇಲ್ಲ–2 |
|---|---|---|---|
| **6** | ನಿಮ್ಮ ಅಗತ್ಯತೆಗಳನ್ನು ಆಧರಿಸಿ ಕೇಂದ್ರದವರು ಚಟುವಟಿಕೆ/ಪ್ರಯೋಗಗಳನ್ನು ಮಾಡುತ್ತಾರೆಯೇ? ಹೌದು–1, ಇಲ್ಲ–2 | 5 | 2 |
| **7** | ಶಾಲೆಯಲ್ಲಿ ಮಾಡಲು ಅಸಾಧ್ಯವಾದ ಪ್ರಯೋಗಗಳನ್ನು ಕೇಂದ್ರದಲ್ಲಿ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | 7 | 0 |
| **8** | ಕೇಂದ್ರದಲ್ಲಿ ಮಾಡುವ ಪ್ರಯೋಗಗಳು/ಚಟುವಟಿಕೆಗಳು ಆಯಾ ತಿಂಗಳಲ್ಲಿ ನಡೆಸುವ ಪಾಠಕ್ಕೆ ಸಂಬಂಧಪಟ್ಟದ್ದಾಗಿರುತ್ತದೆಯೇ? ಎಲ್ಲಾ–1, ಕೆಲವು ಮಾತ್ರ–2, ಇಲ್ಲ–3 | 1 | 6 |
| **9** | ಕೇಂದ್ರದಲ್ಲಿರುವ ಪಾಠೋಪಕರಣಗಳು ಶಾಲೆಯಲ್ಲಿ ಲಭ್ಯವಿದೆಯೇ? ಎಲ್ಲಾ–1, ಕೆಲವು ಮಾತ್ರ–2, ಇಲ್ಲ–3 | 0 | 7 |
| **10** | ಕೇಂದ್ರದಲ್ಲಿ ಮಾಡಿರುವ ಪ್ರಯೋಗಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗಿದೆಯೇ? ಯಾವಾಗಲೂ –1, ಕೆಲವೊಮ್ಮೆ–2, ಇಲ್ಲ–3 | 1 | 6 |

- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ನಡೆಸುವ ಚಟುವಟಿಕೆ/ಪ್ರಯೋಗಗಳು ಶಾಲೆಯ ಅಗತ್ಯತೆಗಳ ಆಧಾರಿತವಾಗಿವೆ ಎಂದು ಹೆಚ್ಚಿನ ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಕೆಲವು ಶಿಕ್ಷಕರು ತಮ್ಮ ಅಗತ್ಯವನ್ನು ಆಧರಿಸಿಲ್ಲವೆಂದು ಅಭಿಪ್ರಾಯಿಸಿದ್ದಾರೆ. ಬಹುಶ: ಮಾಹೆವಾರು ಪರಿಕಲ್ಪನೆಗೆ ಪ್ರಯೋಗಗಳು ಪೂರಕವಾಗಿಲ್ಲದಿರುವುದರಿಂದ ಹೀಗಾಗಿರಬಹುದು.
- ಶಾಲೆಯಲ್ಲಿ ಮಾಡಲು ಅಸಾಧ್ಯವಾದ ಅಥವಾ ಮಾಡದೇ ಇರುವ ಪ್ರಯೋಗಗಳನ್ನು ಕೇಂದ್ರದಲ್ಲಿ ಮಾಡಲು ಅವಕಾಶವಾಗಿದೆ ಎಂಬುದನ್ನು ಎಲ್ಲಾ ಶಿಕ್ಷಕರು ಒಪ್ಪಿಕೊಂಡಿರುತ್ತಾರೆ. ಇದು ಒಂದು ಉತ್ತಮವಾದ ಮತ್ತು ಧನಾತ್ಮಕ ಅಂಶವಾಗಿದೆ.
- ಕೇಂದ್ರದಲ್ಲಿ ಮಾಡುವ ಪ್ರಯೋಗಗಳು/ಚಟುವಟಿಕೆಗಳು ಆಯಾ ತಿಂಗಳಲ್ಲಿ ನಡೆಸುವ ಪಾಠಕ್ಕೆ ಸಂಬಂಧಪಟ್ಟಿರುವುದಿಲ್ಲ ಹೆಚ್ಚಿನ ಶಿಕ್ಷಕರು ಉತ್ತರಿಸಿರುತ್ತಾರೆ. ಇದು ಈ ಕೇಂದ್ರದ ನಿರ್ವಹಣೆಯಲ್ಲಿರುವ ದೊಡ್ಡ ಕೊರತೆ ಎನ್ನುವುದನ್ನು ಅರ್ಥೈಸಿಕೊಳ್ಳಬಹುದಾಗಿದೆ. ಈ ಒಂದು ಅಂಶಕ್ಕೆ ಹೆಚ್ಚು ಮಹತ್ವ ನೀಡಿದಲ್ಲಿ ಈ ಸಂಸ್ಥೆಯು ಶೈಕ್ಷಣಿಕ ಗುಣಮಟ್ಟದ ಹೆಚ್ಚಳಕ್ಕೆ ಹೆಚ್ಚು ಕೊಡುಗೆಯನ್ನು ನೀಡಬಲ್ಲದು.
- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿರುವ ಪಾಠೋಪಕರಣಗಳು ಶಾಲೆಯಲ್ಲಿ ಲಭ್ಯವಿಲ್ಲ ಎನ್ನುವುದನ್ನು ಎಲ್ಲಾ ಶಾಲೆಯ ಶಿಕ್ಷಕರು ಒಪ್ಪಿರುತ್ತಾರೆ. ಆದರೆ ಈ ಕೇಂದ್ರ ಮತ್ತು ಕೇಂದ್ರದಲ್ಲಿರುವ ಸಾಮಗ್ರಿಗಳನ್ನು ಆಧರಿಸಿಕೊಂಡು ಶಾಲೆಯಲ್ಲಿ ಪುಟ್ಟದಾದ ಪ್ರಯೋಗಾಲಯ ನಿರ್ಮಾಣ ಮಾಡುವ ಪ್ರಯತ್ನ ಯಾವ ಶಾಲೆಯಲ್ಲೂ ಕಂಡು ಬಂದಿರುವುದಿಲ್ಲ. ಇದು ಒಂದು ನಿರಾಶಾದಾಯಕ ಸಂಗತಿಯಾಗಿದೆ ಮತ್ತು ಶಿಕ್ಷಕರು ಲಭ್ಯ ಇರುವ ಒಂದು ವಿಜ್ಞಾನ ಕೇಂದ್ರದ ಮಾದರಿಯನ್ನು ತಮ್ಮದಾಗಿಸುವ ಪ್ರಯತ್ನ ಮಾಡಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ.

- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಮಾಡಿರುವ ಪ್ರಯೋಗಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗಿಲ್ಲ ಎಂದು ಶಿಕ್ಷಕರು ಉತ್ತರಿಸಿರುತ್ತಾರೆ. ಸ್ವತಂತ್ರವಾಗಿ ನಿರ್ವಹಣೆ ಮಾಡುವ ಪ್ರಯತ್ನ ಮಾಡಿರುವುದು ಕಡಿಮೆಯಾಗಿದೆ ಎಂಬುದು ಅಧ್ಯಯನದಿಂದ ಸ್ಪಷ್ಟವಾಗಿದೆ. ವಿಜ್ಞಾನ ಕೇಂದ್ರಕ್ಕೆ ಡಯಟ್ ವತಿಯಿಂದ ಭೇಟಿ ನೀಡಲಾಗಿ ಕೇಂದ್ರದಲ್ಲಿರುವ ಸಾಮಗ್ರಿಗಳಲ್ಲಿ ಅವುಗಳ ತಯಾರಿಕೆಯಲ್ಲಿನ ಸೃಜನಶೀಲತೆ, ಉಪಯುಕ್ತತೆ, ಕಸದಿಂದ ರಸ ಮತ್ತು ವೆಚ್ಚರಹಿತತೆ ತುಂಬಾ ಚೆನ್ನಾಗಿ ಅಳವಡಿಕೆಯಾಗಿರುವುದನ್ನು ಗಮನಿಸಲಾಗಿದೆ. ವಸ್ತುಪ್ರದರ್ಶನದಲ್ಲಿ ಮಕ್ಕಳೇ ಸರಾಗವಾಗಿ ಕಲಿಕೋಪಕರಣಗಳನ್ನು ಬಳಕೆ ಮಾಡಿ ವಿವರಣೆ ನೀಡುತ್ತಿರುವುದನ್ನು ಗಮನಿಸಲಾಗಿದೆ. ಈ ಹಂತದಲ್ಲಿ ಶಿಕ್ಷಕರ ಆಸಕ್ತಿ ತುಂಬಾ ಕಡಿಮೆ ಇರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

**ಕೋಷ್ಟಕ 6:–**

| ಪ್ರ. ಸಂ | ಪ್ರಶ್ನೆ | ಹೌದು–1 | ಇಲ್ಲ–2 |
|---|---|---|---|
| **11** | ಅಗತ್ಯವಿದ್ದಲ್ಲಿ ಶಾಲೆಯಲ್ಲಿರುವ ವಿಜ್ಞಾನೋಪಕರಣಗಳನ್ನು ಬಳಸಲು ಕೇಂದ್ರದವರು ಮಾರ್ಗದರ್ಶನ ನೀಡುತ್ತಾರೆಯೇ? | 7 | 0 |
| **12** | ಕೇಂದ್ರದಲ್ಲಿರುವ ಪರಿಕರಗಳನ್ನು ಆತ್ಮ ವಿಶ್ವಾಸದಿಂದ ಬಳಸುವ, ನಿರ್ವಹಿಸುವ ಸಾಮರ್ಥ್ಯ ನಿಮ್ಮಲ್ಲಿ ಬೆಳೆದಿದೆಯೇ? | 5 | 2 |
| **13** | ಕೇಂದ್ರದವರು ನಿಮ್ಮಿಂದ ಹಿಮ್ಮಾಹಿತಿ ಪಡೆಯುತ್ತಾರೆಯೇ? ಎಲ್ಲರಿಂದ–1, ಕೆಲವರಿಂದ–2, ಇಲ್ಲ–3 | 2 | 5 |

- ಅಗತ್ಯವಿದ್ದಲ್ಲಿ ಶಾಲೆಯಲ್ಲಿರುವ ವಿಜ್ಞಾನೋಪಕರಣಗಳನ್ನು ಬಳಸಲು ಕೇಂದ್ರದವರು ಮಾರ್ಗದರ್ಶನ ನೀಡುತ್ತಿರುವುದಾಗಿ ಎಲ್ಲಾ ಶಿಕ್ಷಕರು ಧನಾತ್ಮಕವಾಗಿ ಅಭಿವ್ಯಕ್ತಪಡಿಸಿರುತ್ತಾರೆ. ಇದು ಅಗಸ್ತ್ಯ ಕೇಂದ್ರದ ಅಸ್ತಿತ್ವಕ್ಕೆ ಧನಾತ್ಮಕವಾದ ಅಂಶವಾಗಿದೆ.
- ಪ್ರಶ್ನೆ 10ರ ಪ್ರಕಾರ ಕೇಂದ್ರದಲ್ಲಿನ ಸಾಮಗ್ರಿಗಳನ್ನು ಸ್ವತಂತ್ರವಾಗಿ ಬಳಸುವ ಆತ್ಮ ವಿಶ್ವಾಸವಿಲ್ಲವೆಂದು ಶಿಕ್ಷಕರು ಪ್ರತಿಕ್ರಿಯಿಸಿರುತ್ತಾರೆ. ಆದರೆ ಪ್ರ 12 ರಲ್ಲಿ ಈ ಬಗ್ಗೆ ಆತ್ಮ ವಿಶ್ವಾಸವಿದೆ ಎಂದು ಹೇಳಿರುವುದು ಗೊಂದಲಕಾರಿಯಾಗಿದೆ.

**ಕೋಷ್ಟಕ 7:–**

| 14 | ವಿಜ್ಞಾನ ಕೇಂದ್ರಕ್ಕೆ ಭಾಗವಹಿಸುವುದಕ್ಕೆ ಪೂರ್ವಭಾವಿಯಾಗಿ ನೀವು ಮಾಡಿಕೊಳ್ಳುವ ಪೂರ್ವಸಿದ್ಧತೆಯೇನು? | ಸಂಖ್ಯೆ | ಶೇ |
|---|---|---|---|
| ಅ | ಕರೆದುಕೊಂಡು ಹೋಗಲು ಸಿದ್ಧತೆ | 1 | 14.3 |
| ಆ | ವಿಷಯಕ್ಕೆ/ಪ್ರಯೋಗಕ್ಕೆ ಪೂರಕವಾಗಿ ಸಿದ್ಧತೆ | 3 | 42.9 |
| ಇ | ಪಠ್ಯ ಪುಸ್ತಕ ಓದಲು ತಿಳಿಸುವುದು | 1 | 14.3 |
| ಈ | ಮಾನಸಿಕವಾಗಿ ಸಿದ್ಧತೆ ಮಾಡುವುದು/ ಸಂಕ್ಷಿಪ್ತ ಮಾಹಿತಿ ನೀಡುವುದು. | 1 | 14.3 |
| ಉ | ಅಸ್ಪಷ್ಟ | 1 | 14.3 |

- ಕೇಂದ್ರಕ್ಕೆ ವಿದ್ಯಾರ್ಥಿಗಳು ಕಲಿಕಾರ್ಥಿಗಳಾಗಿ ಭೇಟಿ ನೀಡುವ ಮೊದಲು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಕಲಿಕೆಗೆ ತೊಡಗಿಸುವುದು ಅತ್ಯಂತ ಮುಖ್ಯವಾದ ಅಂಶವಾಗಿರುತ್ತದೆ.
- 4 ಶಾಲೆಯ ಶಿಕ್ಷಕರು ಮಾತ್ರ ವಿವಿಧ ರೀತಿಯಲ್ಲಿ ಮಕ್ಕಳನ್ನು ಪ್ರಯೋಗಾಲಯಕ್ಕೆ ಭೇಟಿ ನೀಡಲು ಅಣಿಗೊಳಿಸಿರುತ್ತಾರೆ. ಉಳಿದವರಿಗೆ ಈ ಬಗ್ಗೆ ಅಸ್ಪಷ್ಟತೆ ಇರುವುದನ್ನು ಗಮನಿಸಲಾಗಿದೆ. ಇಲ್ಲಿ ಪೂರ್ವ ಸಿದ್ಧತೆ ಎಂದರೆ ಯಾವ ಪರಿಕಲ್ಪನೆಗೆ ಪ್ರಯೋಗಗಳನ್ನು ಮಾಡಲಾಗುವುದು, ಅದಕ್ಕೆ ಕೇಳಬಹುದಾದ ಪ್ರಶ್ನೆಗಳು, ಅದಕ್ಕೆ ಸಂಬಂಧಿಸಿದ ಮಾಹಿತಿ, ಟಿಪ್ಪಣೆ ಬರೆಯಲು ಸೂಚನೆ, ಭಾಗವಹಿಸುವಿಕೆಗೆಗೆ ಸಿದ್ಧಪಡಿಸುವುದು ಇತ್ಯಾದಿಗಳನ್ನು ಮಾಡಬೇಕಾಗಿದೆ.

**ಕೋಷ್ಟಕ 8:–**

| 15 | ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುವುದರಿಂದ ತರಗತಿಯ ಕಲಿಕೆಯನ್ನು ಅನುಕೂಲಿಸುವಲ್ಲಿ ನಿಮ್ಮಲ್ಲಾಗಿರುವ ಬದಲಾವಣೆಗಳೇನು? | ಸಂಖ್ಯೆ | ಶೇ |
|---|---|---|---|
| ಅ | ಮಕ್ಕಳ ದೃಷ್ಟಿಕೋನದಿಂದ ಅಭಿಪ್ರಾಯ ನೀಡಿರುತ್ತಾರೆ.(ಕಲಿಕೆ ಉತ್ತಮ/ ಆಸಕ್ತಿ ಹೆಚ್ಚಾಗಿದೆ/ ಸ್ಮರಣೆ ಶಕ್ತಿ ಹೆಚ್ಚಾಗಿದೆ./ಪರಯೋಗ ಮಾಡುತ್ತಾರೆ) | 4 | 57.1 |
| ಆ | ಪ್ರಯೋಗ ಮಾಡಲು ಪ್ರಯತ್ನ ಮಾಡಿದ್ದೇನೆ/ ಪ್ರಯೋಗದ ಮೂಲಕ ವಿವರಿಸುವ ಕೌಶಲ ಇತ್ಯಾದಿ) | 3 | 42.9 |

- ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುವುದರಿಂದ ತರಗತಿಯ ಕಲಿಕೆಯನ್ನು ಅನುಕೂಲಿಸುವಲ್ಲಿ ನಿಮ್ಮಲ್ಲಾಗಿರುವ ಬದಲಾವಣೆಗಳೇನು? ಇದು ಶಿಕ್ಷಕರನ್ನು ಸ್ವಾವಲೋಕನಕ್ಕೆ ಒಳಪಡಿಸುವ ಪ್ರಶ್ನೆಯಾಗಿದೆ. ತಮ್ಮ ಅನುಕೂಲಿಸುವಿಕೆಯ ಕುರಿತಂತೆ ಸ್ವಾವಲೋಕನ ಮಾಡಿಕೊಂಡಿರುವ ಶಿಕ್ಷಕರ ಸಂಖ್ಯೆ ಕಡಿಮೆ ಇದೆ. ಹೆಚ್ಚಿನ ಶಿಕ್ಷಕರು ಕೇಂದ್ರದ ಪ್ರಯೋಗಗಳು ಮಕ್ಕಳಿಗೆ ಹೇಗೆ ಉಪಯುಕ್ತವಾಗಿದೆ ಎಂದು ವಿವರಿಸಿರುತ್ತಾರೆಯೇ ವಿನ: ತಮ್ಮ ಅನುಕೂಲನಾ ಸಾಮರ್ಥ್ಯವನ್ನು ಹೇಗೆ ವಿಸ್ತರಿಸಿದೆ ಎನ್ನುವುದನ್ನು ಗುರುತಿಸಿಕೊಳ್ಳುವಲ್ಲಿ/ವ್ಯಕ್ತಪಡಿಸುವಲ್ಲಿ

ವಿಫಲರಾಗಿರುತ್ತಾರೆ. 42% ಶಿಕ್ಷಕರು ಒಂದಲ್ಲಾ ಒಂದು ರೀತಿಯಲ್ಲಾಗಿರುವ ಸುಧಾರಣೆಗಳನ್ನು ಪ್ರಸ್ತುತಪಡಿಸಿರುತ್ತಾರೆ. ಕೇಂದ್ರದ ಬಳಕೆಯ ಮುಖಾಂತರ ವಿಜ್ಞಾನ ಕಲಿಕೆಯನ್ನು ಅನುಕೂಲಿಸುವ ಕೌಶಲ ಹೆಚ್ಚಾಗುವಂತೆ ಶಿಕ್ಷಕರನ್ನು ಯಾವೆಲ್ಲಾ ರೀತಿಯಲ್ಲಿ ಚಿಂತನೆಗೆ ಒಳಪಡಿಸಬಹುದು ಎನ್ನುವುದನ್ನು ಅನುಪಾಲನಾಧಿಕಾರಿಗಳು ಗಮನಿಸಬೇಕಾಗಿದೆ.

**ಕೋಷ್ಟಕ 9:–**

| 16 | ತರಗತಿಯಲ್ಲಿ ಪಾಠದ ಕಲಿಕೆಯಾದ ನಂತರ ಅಥವಾ ಮೊದಲು ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದರೆ ಅದನ್ನು ನೀವು ತರಗತಿಯಲ್ಲಿ ಹೇಗೆ ಸರಿದೂಗಿಸುವಿರಿ? | ಸಂಖ್ಯೆ | ಶೇ |
|---|---|---|---|
| ಅ | ಪುನರ್ಬಲನ | 6 | 85.7 |
| ಆ | ಅರ್ಥವಾಗದ ಮಕ್ಕಳಿಗೆ ಹೆಚ್ಚು ಅರ್ಥೈಸಲು ಅವಕಾಶ | 1 | 14.3 |

- ತರಗತಿಯಲ್ಲಿ ವಿಜ್ಞಾನದ ಒಂದು ಪರಿಕಲ್ಪನೆಯ ಕಲಿಕೆಯಾದ ನಂತರ ಅಥವಾ ಮೊದಲು ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದರೆ ಪುನರ್ಬಲನಕ್ಕೆ ಹೆಚ್ಚು ಅವಕಾಶ ಕಲ್ಪಿಸುತ್ತೇವೆ ಎಂದು ಹೆಚ್ಚಿನ ಶಾಲೆಯ ಶಿಕ್ಷಕರು ತಿಳಿಸಿರುತ್ತಾರೆ.

**ಕೋಷ್ಟಕ 10:–**

| 17 | ಕೇಂದ್ರದಲ್ಲಿ ಭಾಗವಹಿಸಿರುವುದರಿಂದ ವಿದ್ಯಾರ್ಥಿಗಳಲ್ಲಿ ನೀವು ಗಮನಿಸಿರುವ ಬದಲಾವಣೆಗಳೇನು? | ಸಂಖ್ಯೆ | ಶೇ |
|---|---|---|---|
| ಅ | ಆಸಕ್ತಿ ಮತ್ತು ಚಟುವಟಿಕೆಯಿಂದಿರುತ್ತಾರೆ | 5 | 71.4 |
| ಆ | ಮೂಢನಂಬಿಕೆ ಕಡಿಮೆಯಾಗಿದೆ. | 1 | 14.3 |
| ಇ | ವೈಜ್ಞಾನಿಕ ಮನೋಭಾವ ಮೂಡಿದೆ. | 1 | 14.3 |
| ಈ | ಪ್ರಶ್ನಿಸುವ ಪ್ರವೃತ್ತಿ ಮೂಡಿದೆ. | 2 | 28.6 |
| ಉ | ನಾಯಕತ್ವ/ಸೃಜನಶಿಲತೆ | 1 | 14.3 |

- ಕೇಂದ್ರದಲ್ಲಿ ಭಾಗವಹಿಸಿರುವುದರಿಂದ ಒಂದಲ್ಲ ಒಂದು ರೀತಿಯಲ್ಲಿ ವಿದ್ಯಾರ್ಥಿಗಳಲ್ಲಿ ಆಗಿರುವ ಬದಲಾವಣೆಗಳನ್ನು ಶಿಕ್ಷಕರು ಗುರುತಿಸಿರುವುದು ಧನಾತ್ಮಕ ಅಂಶವಾಗಿದೆ. 71% ಶಿಕ್ಷಕರು ಮಕ್ಕಳು ಆಸಕ್ತಿ ಮತ್ತು ಚಟುವಟಿಕೆಯಿಂದಿರುತ್ತಾರೆ ಎಂದೂ, ಒಬ್ಬ ಶಿಕ್ಷಕರು ಮೂಢ ನಂಬಿಕೆಯನ್ನು ಹೋಗಲಾಡಿಸಿದೆಯೆಂದೂ, ಒಬ್ಬ ಶಿಕ್ಷಕರು ವೈಜ್ಞಾನಿಕ ಮನೋಭಾವ ಮೂಡಿಸಿದೆ ಎಂದೂ, ಇಬ್ಬರು ಶಿಕ್ಷಕರು ಪ್ರಶ್ನಿಸುವ ಪ್ರವೃತ್ತಿ ಮೂಡಿಸಿದೆ ಎಂದೂ, ಒಬ್ಬರು ನಾಯಕತ್ವ ಮತ್ತು ಸೃಜನಶೀಲತೆಯನ್ನು ಬೆಳೆಸಿದೆ ಎಂದು ಅಭಿಪ್ರಾಯ ವ್ಯಕ್ತಡಿಸಿದ್ದಾರೆ.

**ಕೋಷ್ಟಕ 11:–**

| 18 | ಮಕ್ಕಳಲ್ಲಿ ಕಲಿಕೆಯನ್ನು ಸರಳಗೊಳಿಸಲು ವಿಜ್ಞಾನ ಕೇಂದ್ರದ ಚಟುವಟಿಕೆಗಳು ನಿಮಗೆ ಹೇಗೆ ಉಪಯುಕ್ತವಾಗಿವೆ? | ಸಂಖ್ಯೆ | ಶೇ |
|---|---|---|---|
| ಅ | ಪಾಠ ಬೋಧಿಸಲು ಸಹಕಾರಿ | 2 | 28.6 |
| ಆ | ಕುತೂಹಲ/ಧನಾತ್ಮಕ ಭಾವ/ಆತ್ಮವಿಶ್ವಾಸದಿಂದ ಉತ್ತರಿಸುವುದು | 1 | 14.3 |
| ಇ | ತರಗತಿಯಲ್ಲಿ ಅಸಾಧ್ಯವಾಗಿರುವುದು ಇಲ್ಲಿ ಸಾಧ್ಯವಾಗಿದೆ. | 2 | 28.6 |
| ಈ | ಮಾದರಿ ಬಳಕೆ ಮಾಡಿ ಸರಳ ಕಲಿಕೆಗೆ ಅವಕಾಶವಾಗಿದೆ. | 2 | 28.6 |

- ವಿಜ್ಞಾನ ಕೇಂದ್ರದ ಚಟುವಟಿಕೆಗಳು ಒಂದಲ್ಲಾ ಒಂದು ರೀತಿಯಲ್ಲಿ ಮಕ್ಕಳ ಕಲಿಕೆಯನ್ನು ಅನುಕೂಲಿಸಲು ಸಹಕಾರಿಯಾಗಿದೆ ಎಂದು ತಿಳಿಸಿರುತ್ತಾರೆ.

**ಕೋಷ್ಟಕ 12:–**

| 19 | ಎಷ್ಟು ಇಲಾಖಾ ಮೇಲಧಿಕಾರಿಗಳು ಕೇಂದ್ರದಲ್ಲಿ ಭಾಗವಹಿಸುವಾಗ ವೀಕ್ಷಣೆ ಮಾಡಿ ಮಾರ್ಗದರ್ಶನ ನೀಡಿರುತ್ತಾರೆ? ಹೆಸರು ಬರೆಯಿರಿ | ಸಂಖ್ಯೆ | ಶೇ |
|---|---|---|---|
| ಅ | ಭೇಟಿ ಮಾಡಿರುವುದಿಲ್ಲ | 7 | 100 |

- ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿರುವ ಸಂದರ್ಭದಲ್ಲಿ ಇಲಾಖಾ ಅನುಪಾಲನಾಧಿಕಾರಿಗಳ ಭೇಟಿ ಶೂನ್ಯವಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಇಲಾಖೆ ಮತ್ತು ಇಲಾಖೇತರ ಸ್ವಯಂಸೇವಾ ಸಂಸ್ಥೆಗಳ ಸಹಯೋಗ ಗುಣಾತ್ಮಕ ಶಿಕ್ಷಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ಅಂಶವು ಗಮನಾರ್ಹ ಅಂಶವಾಗಿದೆ. ಬಹುಶ: ಪರಿಣಾಮಕಾರಿ ಭೇಟಿಯಾಗಿದ್ದಲ್ಲಿ ಕೆಲವೊಂದು ಲೋಪದೋಷಗಳನ್ನು ಸರಿಪಡಿಸುವ ಸಾಧ್ಯತೆಗಳಿದ್ದವು. ಇಲಾಖೆಯ ಸಹಭಾಗಿತ್ವ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಹೆಚ್ಚು ಚುರುಕುಗೊಳಿಸುವ ಸಾಧ್ಯತೆಗಳಿದ್ದವು.
- ಬ್ಲಾಕ್ ಹಂತದ ಅಧಿಕಾರಿಗಳಿಗೆ ಕೆಲಸದ ಬಾಹುಳ್ಯತೆ ಇದ್ದರೂ ಸಿ.ಆರ್.ಪಿಯವರು ಈ ರೀತಿಯಾಗಿ ಕಾರ್ಯ ನಿರ್ವಹಿಸುವಂತೆ ಮಾಡಬೇಕಾಗಿದೆ.

**ಕೋಷ್ಟಕ 13:–**

| 20 | ಅಗಸ್ತ್ಯ ವಿಜ್ಞಾನ ಕೇಂದ್ರದಿಂದ ಶಾಲೆಗಳು ಗರಿಷ್ಠ ಪ್ರಮಾಣದ ಪ್ರಯೋಜನ ಪಡೆಯುವಂತೆ ಮಾಡಲು ನಿಮ್ಮ ಸಲಹೆಗಳೇನು? | ಸಂಖ್ಯೆ | ಶೇ |
|---|---|---|---|
| ಅ | ಶಾಲಾ ವೇಳಾಪಟ್ಟಿಯಲ್ಲೆ ಅಡಕಗೊಳಿಸುವುದು | 1 | 14.3 |
| ಆ | ಹೆಚ್ಚು ಮಕ್ಕಳು ಭೇಟಿ ಮಾಡಲು ಅವಕಾಶ | 3 | 42.9 |
| ಇ | ಮಾಹೆವಾರು ಪರಿಕಲ್ಪನೆಗಳಿಗನುಗುಣವಾದ ಪ್ರಯೋಗಗಳಿಗೆ ಅವಕಾಶ ನೀಡಬೇಕು | 1 | 14.3 |
| ಈ | ಪ್ರತಿ ತರಗತಿಗೆ ತಿಂಗಳಿಗೆ ಕನಿಷ್ಟ 4 ಬಾರಿ ಅವಕಾಶ ನೀಡಬೇಕು. | 1 | 14.3 |
| ಉ | ವಸ್ತುಪ್ರದರ್ಶನಗಳನ್ನು ಏರ್ಪಡಿಸಬೇಕು | 1 | 14.3 |
| ಊ | ಎಲ್ಲಾ ವಿಜ್ಞಾನ ಶಿಕ್ಷಕರಿಗೆ 2–3 ದಿನದ ತರಬೇತಿ ನೀಡಬೇಕು | 1 | 14.3 |

- ಶಾಲೆಗಳು ಅಗಸ್ತ್ಯ ವಿಜ್ಞಾನ ಕೇಂದ್ರದಿಂದ ಗರಿಷ್ಠ ಪ್ರಮಾಣದ ಪ್ರಯೋಜನ ಪಡೆಯುವಂತೆ ಮಾಡಲು ಶಿಕ್ಷಕರು ಉತ್ತಮವಾದ ಸಲಹೆಗಳನ್ನು ನೀಡಿರುತ್ತಾರೆ. ಹೆಚ್ಚು ಶಿಕ್ಷಕರು ಒಂದು ವರ್ಷದಲ್ಲಿ ಒಂದು ಶಾಲೆಯ ಹೆಚ್ಚು ಮಕ್ಕಳಿಗೆ ಭೇಟಿ ನೀಡಲು ಅವಕಾಶ ಕಲ್ಪಿಸಬೇಕೆಂದು ತಿಳಿಸಿರುತ್ತಾರೆ.
- ಒಬ್ಬೊಬ್ಬರು ಒಂದೊಂದು ಅಭಿಪ್ರಾಯದಂತೆ ಕೇಂದ್ರದ ಚಟುವಟಿಕೆಗಳನ್ನು ಶಾಲಾ ವೇಳಾಪಟ್ಟಿಯಲ್ಲೆ ಅಡಕಗೊಳಿಸಬೇಕು, ಮಾಹೆವಾರು ಪರಿಕಲ್ಪನೆಗಳಿಗನುಗುಣವಾದ ಪ್ರಯೋಗಗಳಿಗೆ ಅವಕಾಶ ನೀಡಬೇಕು, ಪ್ರತಿ ತರಗತಿಗೆ ತಿಂಗಳಿಗೆ ಕನಿಷ್ಟ 4 ಬಾರಿ ಅವಕಾಶ ನೀಡಬೇಕು, ವಸ್ತುಪ್ರದರ್ಶನಗಳನ್ನು ಏರ್ಪಡಿಸಬೇಕು, ಎಲ್ಲಾ ವಿಜ್ಞಾನ ಶಿಕ್ಷಕರಿಗೆ 2–3 ದಿನದ ತರಬೇತಿ ನೀಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

**ಕೋಷ್ಟಕ 14:–**

| 21 | ಅಗಸ್ತ್ಯ ಕೇಂದ್ರದ ಕುರಿತು ನಿಮ್ಮ ಅಭಿಪ್ರಾಯಗಳೇನು? | ಸಂಖ್ಯೆ | ಶೇ |
|---|---|---|---|
| ಅ | ಅತ್ಯುತ್ತಮವಾದ ಕಾರ್ಯಕ್ರಮ | 6 | 85.7 |
| ಆ | ಪ್ರತಿ ತರಗತಿಗೆ ಹೆಚ್ಚು ಅವಕಾಶ ನೀಡಿದ್ದಲ್ಲಿ ತುಂಬಾ ಉತ್ತಮ | 1 | 14.3 |
| ಇ | ಸಂಪನ್ಮೂಲ ತಂಡ ಹೆಚ್ಚಾಗಬೇಕು | 1 | 14.3 |


- ಕೇಂದ್ರದ ಬಗ್ಗೆ ಎಲ್ಲಾ ಶಿಕ್ಷಕರು ಅತ್ಯುತ್ತಮವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

## ವಿದ್ಯಾರ್ಥಿಗಳಿಗಾಗಿ ಪ್ರಶ್ನಾವಳಿಯ ವಿಶ್ಲೇಷಣೆ

**ಕೋಷ್ಟಕ 15:–**

| ಪ್ರಶ್ನೆ 1 | ಈ ವರ್ಷದಲ್ಲಿ ನೀನು ಪ್ರಯೋಗಾಲಯಕ್ಕೆ ಎಷ್ಟು ಬಾರಿ ಭೇಟಿ ನೀಡಿರುವಿ? (ಸಂಖ್ಯೆ ಬರೆಯಿರಿ) | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | 1 ಬಾರಿ | 3 | 3.8 |
| ಆ | 2 ಬಾರಿ | 3 | 3.8 |
| ಇ | 3 ಬಾರಿ | 29 | 36.7 |
| ಈ | 5 ಬಾರಿ | 8 | 10.1 |
| ಉ | 8 ಬಾರಿ | 25 | 31.6 |
| ಊ | 10 ಬಾರಿ | 8 | 10.1 |
| ಋ | 13 ಬಾರಿ | 3 | 3.8 |
| | ಒಟ್ಟು | 79 | 100 |

**ಗ್ರಾಫ್1:–**





- 92% ಮಕ್ಕಳು 3ಕ್ಕಿಂತ ಹೆಚ್ಚು ಬಾರಿ ವಿಜ್ಞಾನ ಕೇಂದ್ರಗಳಿಗೆ ಭೇಟಿ ನೀಡಿರುವುದು ಸ್ಪಷ್ಟವಾಗಿದೆ. ಕೆಲವು ಮಕ್ಕಳು ಗೈರುಹಾಜರಿ ಕಾರಣದಿಂದ ಕಡಿಮೆ ಬಾರಿ ಭೇಟಿ ನೀಡಿರಬಹುದು. ಇದು ಒಂದು ಧನಾತ್ಮಕ ಅಂಶವಾಗಿರುತ್ತದೆ.

**ಕೋಷ್ಟಕ 16:–**

| ಪ್ರಶ್ನೆ 2 | ಪ್ರಯೋಗಾಲಯದಲ್ಲಿ ಗುಂಪಿನಲ್ಲಿ ಅಥವಾ ವೈಯಕ್ತಿಕವಾಗಿ ಪ್ರಯೋಗ ಮಾಡಲು ನಿನಗೆ ಎಷ್ಟು ಬಾರಿ ಅವಕಾಶ ಸಿಕ್ಕಿದೆ? | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | 1 ಬಾರಿ | 7 | 8.9 |
| ಆ | 2 ಬಾರಿ | 21 | 26.6 |
| ಇ | 3 ಬಾರಿ | 15 | 19.0 |
| ಈ | 5 ಬಾರಿ | 15 | 19.0 |
| ಉ | 6 ಬಾರಿ | 6 | 7.6 |
| ಊ | 9 ಬಾರಿ | 2 | 2.5 |
| ಋ | ಹಲವು ಬಾರಿ | 3 | 3.8 |
| ಎ | ಇಲ್ಲ | 10 | 12.7 |

**ಗ್ರಾಫ್ 2:–**





- 78.4% ರಷ್ಟು ಮಕ್ಕಳಿಗೆ ಗುಂಪಿನಲ್ಲಿ ಪ್ರಯೋಗ ಮಾಡಲು ಎರಡಕ್ಕಿಂತ ಹೆಚ್ಚು ಬಾರಿ ಅವಕಾಶ ಸಿಕ್ಕಿದೆ. ಶೇ 12% ರಷ್ಟು ಮಕ್ಕಳು ಪ್ರಯೋಗವನ್ನು ಸ್ವತ: ಮಾಡಲು ಅವಕಾಶ ಸಿಕ್ಕಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಇದು ಒಂದು ಧನಾತ್ಮಕ ಅಂಶವಾಗಿದೆ.

ಕೋಷ್ಟಕ 17:–

| ಪ್ರಶ್ನೆ 3ರ ಅಭಿಪ್ರಾಯಗಳು | ವಿಜ್ಞಾನ ಕೇಂದ್ರದಲ್ಲಿ ಕಲಿಯಲು ನೀನು ಇಷ್ಟ ಪಡುತ್ತೀಯಾ? ಹೌದಾದರೆ ಯಾಕೆ? | ಮಕ್ಕಳ ಸಂ | ಶೇ |
|---|---|---|---|
| ಅ | ಗೊತ್ತಿಲ್ಲದ ವಿಷಯ ತಿಳಿಯಲು, ಮಾಹಿತಿ ತಿಳಿಯಲು, ಹೆಚ್ಚಿನ ಜ್ಞಾನ ಪಡೆಯಲು. | 42 | 53.2 |
| ಆ | ಪ್ರಯೋಗ ಮಾಡಲು | 21 | 26.6 |
| ಇ | ಅಭ್ಯಾಸ ಪುಸ್ತಕದ ಮತ್ತು ಪಠ್ಯ ಪುಸ್ತಕದ ಎಲ್ಲಾ ಪ್ರಯೋಗ ಮಾಡುತ್ತಾರೆ. | 2 | 2.5 |
| ಈ | ಶಾಲೆಯಲ್ಲಿ ಬರೇ ಪಾಠ ಮಾಡುತ್ತಾರೆ ಆದರೆ ಇಲ್ಲಿ ಪ್ರಯೋಗ ಮಾಡುತ್ತಾರೆ. | 5 | 6.3 |
| ಉ | ಬರೆದಿಲ್ಲ | 9 | 11.4 |

ಗ್ರಾಫ್ 3:–





- 11.4% ಮಕ್ಕಳು ಈ ಪ್ರಶ್ನೆಗೆ ಸ್ಪಂದಿಸಿರುವುದಿಲ್ಲ. ಆದರೆ 88.6% ವಿದ್ಯಾರ್ಥಿಗಳು ಒಂದಲ್ಲ ಒಂದು ರೀತಿಯಲ್ಲಿ ಧನಾತ್ಮಕವಾಗಿ ಸ್ಪಂದಿಸಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ ಮತ್ತು ಅಗಸ್ತ್ಯ ಕೇಂದ್ರದ ಕಾರ್ಯ ನಿರ್ವಹಣೆಗೆ ಪುಷ್ಠಿಯನ್ನು ನೀಡುವ ಅಂಶವಾಗಿದೆ.

ಕೋಷ್ಠಕ 18:–

| ಪ್ರಶ್ನೆ 4ರ ಅಭಿಪ್ರಾಯಗಳು | ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಮೊದಲು ಶಿಕ್ಷಕರು ನಿಮಗೆ ಯಾವ ಮಾಹಿತಿ ನೀಡುತ್ತಾರೆ? | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂ | ಶೇಕಡಾ |
| ಅ | ಮಾತನಾಡಬಾರದು, ನಿಶ್ಯಬ್ದವಾಗಿರಬೇಕು, ಶಿಸ್ತು ಪಾಲಿಸಿ, ಪಾದರಕ್ಷೆಗಳನ್ನು ಹೊರಗಿಡಬೇಕು | 21 | 26.6 |
| ಆ | ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ, ಶಿಸ್ತು ಪಾಲಿಸಿ | 23 | 29.1 |
| ಇ | ಮುಖ್ಯಾಂಶಗಳನ್ನು ಬರೆದುಕೊಳ್ಳಿ | 18 | 22.8 |
| ಈ | ಪಠ್ಯಕ್ಕೆ ಸಂಬಂಧಿಸಿದ ಮಾಹಿತಿ ನೀಡುತ್ತಾರೆ. | 8 | 10.1 |
| ಉ | ಕೇಂದ್ರಕ್ಕೆ ಜೋಪಾನವಾಗಿ ಹೋಗಿ ಬನ್ನಿ | 4 | 5.1 |
| ಊ | ಬರೆದಿಲ್ಲ | 5 | 6.3 |

ಗ್ರಾಫ್ 4:–




- ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಮೊದಲು ಶಿಕ್ಷಕರು ನೀಡುವ ಸೂಚನೆಗಳು ತುಂಬಾ ಯಾಂತ್ರಿಕವಾಗಿದೆ ಮತ್ತು ರಚನಾತ್ಮಕವಾಗಿರುವುದಿಲ್ಲ. ಇದು ಶಿಕ್ಷಕರ ತೊಡಗಿಸಿಕೊಳ್ಳುವಿಕೆ ಮತ್ತು ಸಂಪನ್ಮೂಲವನ್ನು ಬಳಕೆ ಮಾಡಿಕೊಳ್ಳುವಲ್ಲಿ ಇರುವ ಆಸಕ್ತಿಯನ್ನು ಪ್ರತಿಬಿಂಬಿಸುತ್ತದೆ. ವಿಜ್ಞಾನ ಕೇಂದ್ರವು ಶಾಲೆಗಳಿಂದ 1 ಕಿಮೀ ವ್ಯಾಪ್ತಿಯಲ್ಲಿರುವುದರಿಂದ ಶೇ5 ರಷ್ಟು ಶಿಕ್ಷಕರು ಭೇಟಿ ನೀಡುವ ಮೊದಲು ಸುರಕ್ಷತೆಗಾಗಿ ಮಾತ್ರ ಸೂಚನೆ ನೀಡಿರುವುದಾಗಿ ತಿಳಿಸಿರುತ್ತಾರೆ. 6% ರಷ್ಟು ಮಕ್ಕಳು ಪ್ರತಿಕ್ರಿಯಿಸಿರುವುದಿಲ್ಲ.
- 33% ರಷ್ಟು ಮಕ್ಕಳು ಮಾತ್ರ ಶಿಕ್ಷಕರು ಟಿಪ್ಪಣೆ ಮಾಡಿಕೊಳ್ಳುವಂತೆ ಪಠ್ಯಕ್ಕೆ ಪೂರಕವಾಗಿ ಮಾಹಿತಿ ಕೊಟ್ಟಿರುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- 67% ಮಕ್ಕಳ ಅಭಿಪ್ರಾಯ ಗಮನಿಸಿದಾಗ ತಮ್ಮ ಶಿಕ್ಷಕರು ಕಲಿಕೆಗೆ ಪೂರಕವಾಗಿ ಮತ್ತೊಂದು ಸಂಪನ್ಮೂಲ ಕೇಂದ್ರವನ್ನು ಸಮಗ್ರವಾಗಿ ಬಳಕೆ ಮಾಡಬಲ್ಲ ಸೂಚನೆಗಳನ್ನು ನೀಡದಿರುವುದು ಕಂಡು ಬಂದಿದೆ ಮತ್ತು ಇದು ಒಂದು ಗಮನಾರ್ಹ ಅಂಶವಾಗಿರುತ್ತದೆ.

**ಕೋಷ್ಟಕ 19:–**


| ಪ್ರಶ್ನೆ 5ರ ಅಭಿಪ್ರಾಯಗಳು | **ವಿಜ್ಞಾನ ಕೇಂದ್ರದಲ್ಲಿ ಮಾಡುವಂತಹ ಪ್ರಯೋಗಗಳನ್ನು ಶಿಕ್ಷಕರು ತರಗತಿಯಲ್ಲಿ ಮಾಡುತ್ತಾರೆಯೇ? ಶಿಕ್ಷಕರು ಮಾಡಿರುವ ಒಂದು ಪ್ರಯೋಗದ ಹೆಸರು ಹೇಳಬಲ್ಲೆಯಾ?** | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ಇಲ್ಲಾ | 35 | 44.3 |
| ಆ | ಮಾಡ್ತಾರೆ. | 44 | 55.7 |
| ಗಾಳಿಯಲ್ಲಿ ತೂಕವಿದೆ–3, ವೃತ್ತೀಯ ಚಲನೆ–2, ಆಹಾರ ಕಲಬೆರಕೆ–2, ಲಿಟ್ಮಸ್ ಬಳಕೆ–6 ತೂಕ– ಗಾತ್ರದ ವಿಕಾಸ– 5, ನೀರಿನ ಮೇಲೆ ಸೀಮೆ ಎಣ್ಣೆ ತೇಲುತ್ತದೆ–5, ಬೆಂಕಿ ಉರಿಯಲು ಆಮ್ಲಜನಕ ಅಗತ್ಯ–1, ಬೇರ್ಪಡಿಸುವಿಕೆ–3, ಸೂರ್ಯಗ್ರಹಣ– ಚಂದ್ರಗ್ರಹಣ –3 ಮಸೂರ– ಬೆಳಕಿನ ವಕ್ರೀಭವನ–3, ಜೈವಿಕ ವಿಘಟನೆ–4, ನೀರಿನ ಕುದಿಯುವ ಬಿಂದು–4 | | | |

- ವಿಜ್ಞಾನ ಕೇಂದ್ರದಲ್ಲಿ ಮಾಡುವಂತಹ ಪ್ರಯೋಗಗಳನ್ನು ಶಿಕ್ಷಕರು ತರಗತಿಯಲ್ಲಿ ಮಾಡುತ್ತಾರೆಯೇ ಎನ್ನುವ ಪ್ರಶ್ನೆಗೆ 44.3% ಮಕ್ಕಳು ಇಲ್ಲವೆಂದು ಉತ್ತರಿಸಿರುತ್ತಾರೆ. ಇದು ಗಮನಾರ್ಹ ಅಂಶವಾಗಿದೆ.
- 55.7% ರಷ್ಟು ಮಕ್ಕಳು ಶಿಕ್ಷಕರು ಶಾಲೆಯಲ್ಲಿ ಪ್ರಯೋಗ ಮಾಡುತ್ತಾರೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಮಕ್ಕಳು ಬರೆದಿರುವ ಪ್ರಯೋಗದ ಹೆಸರುಗಳನ್ನು ಕಂಡಾಗ ಅವೆಲ್ಲವೂ ಅಗಸ್ತ್ಯ ಕೇಂದ್ರದಲ್ಲಿರುವ ಕಲಿಕೋಪಕರಣ ಮತ್ತು ಪ್ರಯೋಗಗಳ ಹೆಸರೇ ಆಗಿರುವುದನ್ನು ಗಮನಿಸಬಹುದು.
- ಅಧ್ಯಯನಕಾರರು ಶಾಲೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲೂ ಪ್ರಯೋಗಗಳನ್ನು ಮಾಡುವ ಆಕಾಂಕ್ಷೆ ಮತ್ತು ಸುಳಿವುಗಳು ಗ್ರೇಸ್ ಪ್ರೌಢ ಶಾಲೆ ಮತ್ತು ಕುಂಬಾರಕೊಪ್ಪಲು ಪ್ರಾಥಮಿಕ ಶಾಲೆಯ ಕೆಲವು ಶಿಕ್ಷಕರಲ್ಲಿ ಮಾತ್ರ ಕಂಡು ಬಂದಿರುತ್ತದೆ.
- ಒಟ್ಟಾರೆಯಾಗಿ ವಿಜ್ಞಾನ ಕೇಂದ್ರದಲ್ಲಿರುವ ಕಲಿಕೋಪಕರಣ ಮತ್ತು ವಿಜ್ಞಾನದ ಪ್ರಯೋಗಗಳನ್ನು ಹೊರತುಪಡಿಸಿದರೆ ಶಾಲೆಯಲ್ಲಿ ಶಿಕ್ಷಕರು ಮಾಡುತ್ತಿರುವ ಪ್ರಯೋಗಗಳು ಕಡಿಮೆ ಎಂದು ಹೇಳಬಹುದಾಗಿದೆ.

**ಕೋಷ್ಟಕ 20:–**

| ಪ್ರಶ್ನೆ 6ರ ಅಭಿಪ್ರಾಯಗಳು | ತರಗತಿಯಲ್ಲಿ ಪಾಠ ಮಾಡುವುದಕ್ಕೆ ಮೊದಲೇ ಕೇಂದ್ರದಲ್ಲಿ ಪ್ರಯೋಗಗಳನ್ನು ಮಾಡುತ್ತಾರೆಯೇ? ಅಥವಾ ನಂತರ? | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ನಂತರ | 44 | 55.7 |
| ಆ | ಮೊದಲು | 28 | 35.4 |
| ಇ | ಸ್ಪಷ್ಟತೆ ಇಲ್ಲಾ | 7 | 8.9 |

**ಗ್ರಾಫ್ 5:–**





- ತರಗತಿಯಲ್ಲಿ ಪಾಠ ಮಾಡುವುದಕ್ಕೆ ಮೊದಲೇ ಕೇಂದ್ರದಲ್ಲಿ ಪ್ರಯೋಗಗಳನ್ನು ಮಾಡಲಾಗುವುದು ಎಂದು 55.7% ಮಕ್ಕಳು ಅಭಿಪ್ರಾಯಪಟ್ಟಿದ್ದಾರೆ.
- 35.4% ರಷ್ಟು ವಿದ್ಯಾರ್ಥಿಗಳು ತರಗತಿಯಲ್ಲಿ ಕಲಿಯುವ ಮೊದಲೇ ಕೇಂದ್ರದಲ್ಲಿ ಪ್ರಯೋಗ ಮಾಡುತ್ತಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- 9% ಮಕ್ಕಳು ಸ್ಪಷ್ಟವಾಗಿ ಉತ್ತರಿಸಿರುವುದಿಲ್ಲ.
- ಅಗಸ್ತ್ಯ ವಿಜ್ಞಾನ ಕೇಂದ್ರದ ದೊಡ್ಡ ಕೊರತೆ ಎಂದರೆ ಕೇಂದ್ರದಲ್ಲಿ ಮಾಡಲಾಗುವ ಪ್ರಯೋಗಗಳು ಮಾಹೆವಾರು ಕಲಿಕಾಂಶಕ್ಕೆ ತಾಳೆಯಾಗದಿರುವುದು. ಇದರಲ್ಲಿ ಸುಧಾರಣೆಯಾದರೆ ಬಳಕೆ ಇನ್ನು ಹೆಚ್ಚು ಪರಿಣಾಮಕಾರಿಯಾಗಬಹುದು ಎಂದು ಹೇಳಬಹುದಾಗಿದೆ.

**ಕೋಷ್ಟಕ 21:–**

| ಪ್ರಶ್ನೆ 7ರ ಅಭಿಪ್ರಾಯಗಳು | ನೀನು ಪ್ರಯೋಗಾಲಯದಲ್ಲಿ ಬಳಸಿರುವ ಯಾವುದಾದರೂ 4 ಸಲಕರಣೆಗಳನ್ನು ಹೆಸರಿಸು. | | |
|---|---|---|---|
| ಅ | ಒಂದು ಸಲಕರಣೆ | 11 | 13.9 |
| ಆ | ಎರಡು ಸಲಕರಣೆ | 14 | 17.7 |
| ಇ | ನಾಲ್ಕು ಸಲಕರಣೆ | 38 | 48.1 |
| ಈ | ಬರೆದಿಲ್ಲ | 16 | 20.3 |

**ಗ್ರಾಫ್ 6:–**





- 16% ರಷ್ಟು ಮಕ್ಕಳು ತಾವು ಬಳಸಿರುವ ಸಾಮಗ್ರಿಗಳನ್ನು ಹೆಸರಿಸುವಲ್ಲಿ ವಿಫಲರಾಗಿರುತ್ತಾರೆ. 11% ರಷ್ಟು ಮಕ್ಕಳು ಒಂದು ಸಲಕರಣೆಯ ಹೆಸರನ್ನು ತಿಳಿಸಿರುತ್ತಾರೆ.
- 65% ರಷ್ಟು ಮಕ್ಕಳು ಎರಡಕ್ಕಿಂತ ಹೆಚ್ಚು ಸಲಕರಣೆಗಳನ್ನು ಹೆಸರಿಸಿರುತ್ತಾರೆ.

**ಕೋಷ್ಠಕ 22:–**

| ಪ್ರಶ್ನೆ 8ರ ಅಭಿಪ್ರಾಯಗಳು | ಕೇಂದ್ರದಲ್ಲಿ ನೀನು ಗುಂಪಿನಲ್ಲಿ/ ವೈಯಕ್ತಿಕವಾಗಿ ಮಾಡಿರುವ ಯಾವುದಾದರೂ 2 ಪ್ರಯೋಗಗಳನ್ನು ಹೆಸರಿಸು. | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | 1 ಪ್ರಯೋಗ | 41 | 51.9 |
| ಆ | 2 ಪ್ರಯೋಗ | 20 | 25.3 |
| ಇ | ಮಾಡಿಲ್ಲ | 13 | 16.5 |
| ಈ | ಬರೆದಿಲ್ಲ | 5 | 6.3 |

**ಗ್ರಾಫ್7:–**





- 23% ರಷ್ಟು ಮಕ್ಕಳು ತಾವು ಮಾಡಿರುವ ಪ್ರಯೋಗಗಳನ್ನು ಹೆಸರಿಸುವಲ್ಲಿ ವಿಫಲರಾಗಿರುತ್ತಾರೆ.
- 51.9% ರಷ್ಟು ಮಕ್ಕಳು ಒಂದು ಪ್ರಯೋಗದ ಹೆಸರನ್ನು ತಿಳಿಸಿರುತ್ತಾರೆ.
- 25% ರಷ್ಟು ಮಕ್ಕಳು ಎರಡಕ್ಕಿಂತ ಹೆಚ್ಚು ಪ್ರಯೋಗಳನ್ನು ಹೆಸರಿಸಿರುತ್ತಾರೆ.
- ಪ್ರಯೋಗಗಳ ಹೆಸರನ್ನು ಮಕ್ಕಳು ಮರೆತಿರಬಹುದು ಅಥವಾ ಪುನರ್ಬಲನ ಮತ್ತು ಅನ್ವಯಕ್ಕೆ ಅವಕಾಶಗಳು ಲಭ್ಯವಿಲ್ಲದಿದ್ದಾಗ ಈ ರೀತಿಯಾಗುವ ಸಾಧ್ಯತೆಗಳು ಇರುತ್ತವೆ. ಪ್ರಯೋಗದ ಬಳಿಕ ಪುನರ್ಬಲನ ಅಥವಾ ಪುನರ್‌ಪ್ರಯೋಗ ಮಾಡಲು ಶಾಲೆಗಳಲ್ಲಿ ಅವಕಾಶ ನೀಡುವುದರಿಂದ ಇದನ್ನು ಹೋಗಲಾಡಿಸಬಹುದಾಗಿದೆ.

**ಕೋಷ್ಟಕ 23:–**

| ಪ್ರಶ್ನೆ 9ರ ಅಭಿಪ್ರಾಯಗಳು | ಪ್ರಯೋಗಾಲಯದ ಚಟುವಟಿಕೆಗಳಿಂದ ಪ್ರೇರಿತರಾಗಿ ನೀನು ಮಾಡಿರುವ ಯಾವುದಾದರೂ ಪ್ರಯೋಗವನ್ನು ಹೆಸರಿಸು. | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ಒಂದು ಪ್ರಯೋಗ | 29 | 36.7 |
| ಆ | 2 ಪ್ರಯೋಗ | 5 | 6.3 |
| ಇ | ಮಾಡಿಲ್ಲ | 15 | 19.0 |
| ಈ | ಬರೆದಿಲ್ಲ | 30 | 38.0 |

**ಗ್ರಾಫ್ 8:–**





- 57% ರಷ್ಟು ಮಕ್ಕಳು ಪ್ರಯೋಗಾಲಯದಿಂದ ಪ್ರೇರಿತರಾಗಿ ತಾವೇ ಸ್ವತ: ಪ್ರಯೋಗ ಮಾಡಿರುವ ಬಗ್ಗೆ ಸ್ಪಷ್ಟವಾಗಿ ಪ್ರತಿಕ್ರಿಯಿಸಿರುವುದಿಲ್ಲ.
- 37% ರಷ್ಟು ಮಕ್ಕಳು ಪ್ರಯೋಗಾಲಯದಿಂದ ಪ್ರೇರಿತರಾಗಿ ತಾವೇ ಸ್ವತ: 1 ಪ್ರಯೋಗ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ.
- 6% ರಷ್ಟು ಮಕ್ಕಳು ಪ್ರಯೋಗಾಲಯದಿಂದ ಪ್ರೇರಿತರಾಗಿ ತಾವೇ ಸ್ವತ: 2 ಪ್ರಯೋಗ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ.
- ಹೆಚ್ಚು ಮಕ್ಕಳಲ್ಲಿ ಸೃಜನಶೀಲತೆಯನ್ನು ಹುಟ್ಟುಹಾಕುವಲ್ಲಿ ಸಫಲವಾಗದಿರುವುದನ್ನು ಗಮನಿಸಬಹುದಾಗಿದೆ. 43% ಮಕ್ಕಳು ಅನ್ವಯಿಸಿಕೊಂಡು ಪ್ರಯೋಗ ಮಾಡಿರುವುದು ಧನಾತ್ಮಕ ಅಂಶವಾಗಿದೆ.

**ಕೋಷ್ಟಕ24:–**

| ಪ್ರಶ್ನೆ 10ರ ಅಭಿಪ್ರಾಯಗಳು | ವಿಜ್ಞಾನ ಪ್ರಯೋಗಗಳಿಂದ ನಿನ್ನಲ್ಲಿರುವ ಮೂಢನಂಬಿಕೆಗಳು ಬದಲಾಗಿದ್ದರೆ ವಿವರಿಸು. | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ಬದಲಾಗಿಲ್ಲ | 30 | 38.0 |
| ಆ | ಮೂಢನಂಬಿಕೆಗಳು ಹೋಗಿವೆ– ವಿವರಿಸಿಲ್ಲ | 16 | 20.3 |
| ಇ | ದೇವರು ಮನುಷ್ಯನ ಮೈ ಮೇಲೆ ಬರುವುದನ್ನು ನಂಬುವುದಿಲ್ಲ. | 14 | 17.7 |
| ಈ | ಮಂತ್ರವಾದಿ ಉರಿಯುವ ಕರ್ಪೂರವನ್ನು ನಾಲಿಗೆಯ ಮೇಲಿಡುವುದನ್ನು ನಂಬುವುದಿಲ್ಲ. | 8 | 10.1 |
| ಉ | ಸೂರ್ಯನ ಬಗ್ಗೆ ಇರುವ ಮೂಢ ನಂಬಿಕೆ | 11 | 13.9 |

**ಗ್ರಾಫ್9:–**





- 38% ರಷ್ಟು ಮಕ್ಕಳು ಪ್ರಯೋಗಾಲಯದ ಚಟುವಟಿಕೆಗಳಿಂದ ಯಾವುದೇ ಮೂಢನಂಬಿಕೆಗಳು ದೂರವಾಗಿಲ್ಲ ಎಂದು ಪ್ರತಿಕ್ರಿಯಿಸುತ್ತಾರೆ.
- 62% ರಷ್ಟು ಮಕ್ಕಳು ಪ್ರಯೋಗಾಲಯದಿಂದ ಪ್ರೇರಿತರಾಗಿ ಒಂದಲ್ಲ ಒಂದು ರೀತಿಯ ಮೂಢನಂಬಿಕೆಯಿಂದ ದೂರವಾಗಿರುವುದು ಉತ್ತಮ ಅಂಶವಾಗಿದೆ.
- ಎನ್‌ಸಿಎಫ್–2005 ಮೂಢನಂಬಿಕೆಗಳನ್ನು ದೂರ ಮಾಡಿ ವೈಜ್ಞಾನಿಕ ಮನೋಭಾವ ಬೆಳೆಸುವ ಬಗ್ಗೆ ಉಲ್ಲೇಖಿಸುತ್ತದೆ. ಇದನ್ನು ಗಮನಿಸಿದಾಗ ಅಗಸ್ತ್ಯ ಕೇಂದ್ರವು ಇದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತಿದೆ.

**ಕೋಷ್ಟಕ 25:–**

| ಪ್ರಶ್ನೆ 11ರ ಅಭಿಪ್ರಾಯಗಳು | ಪ್ರಯೋಗ ಅಥವಾ ವಿಜ್ಞಾನದಿಂದ ಅರಿತಿರುವ ಅಂಶಗಳನ್ನು ನಿನ್ನ ಜೀವನದಲ್ಲಿ ಅಳವಡಿಸಿರುವ ಬಗ್ಗೆ ತಿಳಿಸು. | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ಇಲ್ಲ | 48 | 60.8 |
| ಆ | ಆಹಾರ ಪದಾರ್ಥ ಕೊಳ್ಳುವಾಗ ಎಫ್.ಪಿ.ಒ/ ಎ.ಜಿ. ಮಾರ್ಕ್) ಗುರುತಿಸುವುದು. | 2 | 2.5 |
| ಇ | ಮೂಢನಂಬಿಕೆ ವಿರೋಧಿಸುತ್ತೇನೆ. | 8 | 10.1 |
| ಈ | ರೋಗ ಬಾರದಂತೆ ಮುಂಜಾಗ್ರತೆ–ಕ್ರಮವಾಗಿ ಆಹಾರ ಸೇವನೆ | 5 | 6.3 |
| ಉ | ಪೌಷ್ಟಕ ಆಹಾರ ಮತ್ತು ನೀರು ಸೇವನೆ | 2 | 2.5 |
| ಊ | ಊಟ ಮಾಡುವಾಗ ಮಾತನಾಡಬಾರದು. | 4 | 5.1 |
| ಎ | ನೀರನ್ನು ವ್ಯರ್ಥ ಮಾಡಬಾರದು. | 1 | 1.3 |
| ಏ | ಪರಿಸರ ಸ್ವಚ್ಛತೆ | 9 | 11.4 |

**ಗ್ರಾಫ್10:–**





- 61% ರಷ್ಟು ಮಕ್ಕಳು ಪ್ರಯೋಗಾಲಯ/ವಿಜ್ಞಾನದಿಂದ ಅರಿತಿರುವ ಅಂಶಗಳನ್ನು ತಮ್ಮ ಜೀವನದಲ್ಲಿ ಅನ್ವಯಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಒಂದೆರಡು ಬಾರಿ ಕೇಂದ್ರಕ್ಕೆ ಭೇಟಿ ನೀಡಿದಾಕ್ಷಣ ಕಲಿಕೆ ಪಕ್ವವಾಗುವುದಿಲ್ಲ. ಶಾಲೆಯಲ್ಲಿ ಇದನ್ನು ಪೋಷಿಸುವ ವಾತಾವರಣ ಒದಗಿಸುವುದು ಅತ್ಯಂತ ಮುಖ್ಯವಾಗಿದೆ. ಬಹುಶ: ಕಲಿಕೆಯ ವಿಸ್ತರಣೆ/ಅನ್ವಯಿಕವಾಗಿ ಮಕ್ಕಳನ್ನು ಚಿಂತನೆಯಲ್ಲಿ ಹಚ್ಚುವುದರಲ್ಲಿ ವಿಫಲವಾಗಿರಬಹುದು ಎಂದು ತಿಳಿಯಬಹುದಾಗಿದೆ.
- 31% ಮಕ್ಕಳು ಕಲಿಕೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿರುವುದಾಗಿ ತಿಳಿಸಿರುತ್ತಾರೆ ಮತ್ತು ಅವು ಯಾವುದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಇದು ಉತ್ತಮ ಅಂಶವಾಗಿದೆ.
- ಒಂದು ಬಾರಿ ಮಾಡಿರುವ ಪ್ರಯೋಗಗಳನ್ನು ನೆನಪಿಸುವುದು, ಮಾದರಿ ತಯಾರಿಸಲು ಪ್ರೇರೇಪಿಸುವುದು, ಶಾಲೆಯಲ್ಲಿಯೂ ಇದೇ ಕಲಿಕಾ ವಾತಾವರಣವನ್ನು ಒದಗಿಸುವುದು, ಅನ್ವಯಿಕವಾಗಿ ಚರ್ಚಿಸುವುದು, ಗೃಹಪಾಠ ನೀಡುವುದು ಇತ್ಯಾದಿಗಳು ಕಲಿಕೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಇದನ್ನು ಶಿಕ್ಷಕರು ಪೂರೈಸುವಲ್ಲಿ ವಿಫಲರಾಗಿರುತ್ತಾರೆ ಎಂದು ಹೇಳಬಹುದಾಗಿದೆ.

**ಕೋಷ್ಟಕ 26:–**

| ಪ್ರಶ್ನೆ 12ರ ಅಭಿಪ್ರಾಯಗಳು | ಶಿಕ್ಷಕರು ಶಾಲೆಯಲ್ಲಿ ವಾರದ ಯಾವ ದಿನದಲ್ಲಿ ಶಾಲಾ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಿ ತೋರಿಸುತ್ತಾರೆ?(ವಾರದ ಹೆಸರು ಬರೆಯಿರಿ) | | |
|---|---|---|---|
| | ಅಭಿಪ್ರಾಯಗಳು | ಮಕ್ಕಳ ಸಂಖ್ಯೆ | ಶೇಕಡಾ |
| ಅ | ಸೋಮವಾರ | 10 | 12.7 |
| ಆ | ಮಂಗಳವಾರ | 6 | 7.6 |
| ಇ | ಬುಧವಾರ | 13 | 16.5 |
| ಈ | ಗುರುವಾರ | 5 | 6.3 |
| ಉ | ಶುಕ್ರವಾರ | 12 | 15.2 |
| ಊ | ಶನಿವಾರ | 5 | 6.3 |
| ಎ | ಇಲ್ಲ | 28 | 35.4 |

**ಗ್ರಾಫ್ 11:–**





- 35.4% ರಷ್ಟು ಮಕ್ಕಳು ಶಿಕ್ಷಕರು ವಾರದ ಯಾವ ದಿನದಲ್ಲೂ ಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಿ ತೋರಿಸುತ್ತಿಲ್ಲ ಎಂದು ತಿಳಿಸಿರುತ್ತಾರೆ.
- 65% ಮಕ್ಕಳು ವಾರದಲ್ಲೊಂದು ದಿನ ಶಾಲೆಯಲ್ಲಿ ಪ್ರಯೋಗ ಮಾಡುವುದಾಗಿ ತಿಳಿಸಿರುತ್ತಾರೆ.
- ವಿಜ್ಞಾನ ಕೇಂದ್ರವು 10 ಅಂಶದ ಕಾರ್ಯಕ್ರಮದ ವಾರಕ್ಕೊಂದು ಪ್ರಯೋಗ ಅನುಷ್ಠಾನದಲ್ಲಿ ಉತ್ತಮವಾಗಿ ಪರಿಣಾಮ ಬೀರಿರುವುದು ಸ್ಪಷ್ಟವಾಗುತ್ತದೆ.

**ಕೋಷ್ಟಕ 27:–**

| 13 | ವಿಜ್ಞಾನ ಕೇಂದ್ರದಿಂದ ನಿನಗೇನು ಪ್ರಯೋಜನವಾಗಿದೆ? | | |
|---|---|---|---|
| ಅ | ಓದು ಬರೆಹ ಇಷ್ಟವಾಗಿದೆ. | 4 | 5.1 |
| ಆ | ಪ್ರಯೋಗ ಮಾಡುವುದು. | 35 | 44.3 |
| ಇ | ಹೆಚ್ಚಿನ ವಿಷಯ ತಿಳಿದಿದೆ. | 3 | 3.8 |
| ಈ | ತಿಳಿದಿಲ್ಲದ ವಿಷಯ ಹೇಳಿಕೊಡುವುದರಿಂದ ಆಸಕ್ತಿ ಕುತೂಹಲ ಹೆಚ್ಚಾಗಿದೆ. | 17 | 21.5 |
| ಉ | ಹೆಚ್ಚು ಅರ್ಥವಾಗುತ್ತದೆ. | 4 | 5.1 |
| ಊ | ಪಾಠದ ಪ್ರಶ್ನೆಗಳು ಅರ್ಥವಾಗುತ್ತದೆ. | 3 | 3.8 |
| ಎ | ಮೂಢ ನಂಬಿಕೆಗಳು ಹೋಗಿವೆ. | 1 | 1.3 |
| ಏ | ಮಾನವ–ಪ್ರಾಣಿ ಅಂಗಾಂಗದ ಬಗ್ಗೆ ತಿಳಿದಿದೆ. | 10 | 12.7 |
| ಐ | ಶಾಲೆಯಲ್ಲಿ ಮಾಡದಿರುವ ಪ್ರಯೋಗಗಳನ್ನು ಇಲ್ಲಿ ಮಾಡುತ್ತಾರೆ. | 2 | 2.5 |

**ಗ್ರಾಫ್12:–**




- ವಿಜ್ಞಾನ ಕೇಂದ್ರದಿಂದ ವಿವಿಧ ರೀತಿಯ ಪ್ರಯೋಜನಗಳಾಗಿವೆ ಎಂದು ಮಕ್ಕಳು ಅಭಿಪ್ರಾಯಪಟ್ಟಿರುತ್ತಾರೆ.

## ಅನುಪಾಲನಾಧಿಕಾರಿಗಳ ಸಂದರ್ಶನ ನಮೂನೆಯ ವಿಶ್ಲೇಷಣೆ

1. ಅಗಸ್ತ್ಯ ವಿಜ್ಞಾನ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ನಿಮಗೆ ಪರಿಚಯವಿದೆಯೇ? ಹೌದು/ ಇಲ್ಲ
   - ಹೌದು
2. ಅಗಸ್ತ್ಯ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುತ್ತಿರುವ ಶಿಕ್ಷಕರ ವಿಜ್ಞಾನ ತರಗತಿ ವೀಕ್ಷಣೆ ಮಾಡಿರುವಿರಾ? ಹೌದು/ ಇಲ್ಲ. ಎಷ್ಟು.. .. .. ..
   - ವೀಕ್ಷಣೆ ಮಾಡಿದ್ದೇವೆ, ಆದರೆ ದಾಖಲಿಸಿರುವುದಿಲ್ಲ.
3. ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಎಷ್ಟು ಶಿಕ್ಷಕರಲ್ಲಿ ವಿಜ್ಞಾನ ಕಲಿಕೆಯನ್ನು ಪರಿಣಾಮಕಾರಿಯಾಗಿ ಅನುಕೂಲಿಸುವ ಸಾಮರ್ಥ್ಯ ಇದೆ?.. .. .. ..
   - ಕೆಲವೇ ಶಿಕ್ಷಕರು ಮಾತ್ರ.
4. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ವಿಜ್ಞಾನ ಕೇಂದ್ರ ಸಹಕಾರಿಯಾಗಿದೆಯೇ? ಹೌದು/ ಇಲ್ಲ
   - ಹೌದು
5. 10 ಅಂಶಗಳ ಕಾರ್ಯಕ್ರಮದಲ್ಲಿ ವಿಜ್ಞಾನ ಕೇಂದ್ರದ ಸಂಪನ್ಮೂಲವನ್ನು ಯಾವ ರೀತಿ ಬಳಕೆ ಮಾಡಿರುತ್ತಾರೆ?
   - ವಾರದ ವಿಜ್ಞಾನ ಪ್ರಯೋಗ ಕಾರ್ಯಕ್ರಮದಲ್ಲಿ ಉತ್ತಮವಾಗಿ ಬಳಕೆಯಾಗುತ್ತಿದೆ.
6. ಮಕ್ಕಳಲ್ಲಿ ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುತ್ತಿರುವುದರಿಂದ ಆಗಿರುವ ಬದಲಾವಣೆಗಳೇನು?
   - ಮಕ್ಕಳ ಕುತೂಹಲ ಹೆಚ್ಚಾಗಿದೆ.
   - ಪ್ರಶ್ನಿಸುವ ಮತ್ತು ವೀಕ್ಷಣೆ ಮಾಡುವ ಕೌಶಲ ಹೆಚ್ಚಾಗಿದೆ.
   - ಕೇಂದ್ರದಲ್ಲಿ ಮಾಡುವ ಪ್ರಯೋಗಗಳ ಕಲಿಕೆಯನ್ನು ಶಿಕ್ಷಕರು ತರಗತಿಯಲ್ಲಿ ಮುಂದುವರಿಸಿಕೊಂಡು ಹೋಗದಿರುವ ಶಾಲೆಗಳಲ್ಲಿ ಬದಲಾವಣೆ ತುಂಬಾ ಕಡಿಮೆ ಇದೆ.
7. ವಿಜ್ಞಾನ ಕೇಂದ್ರದ ನಿರ್ವಹಣೆಯಲ್ಲಿ ನೀವು ಗಮನಿಸಿರುವ ಧನಾತ್ಮಕ ಅಂಶಗಳಾವುವು?
   - ಶಾಲೆಯಲ್ಲಿ ಮಾಡಲು ಲಭ್ಯವಿಲ್ಲದಿರುವ ಪ್ರಯೋಗ ಸಾಮಗ್ರಿಗಳು/ಕಲಿಕಾ ಸಾಮಗ್ರಿಗಳು ಇಲ್ಲಿ ಲಭ್ಯವಿದೆ.
   - ಸಾಮಗ್ರಿ ಬಳಕೆ ಮಾಡಲು ಅಗಸ್ತ್ಯ ಸಿಬ್ಬಂದಿಗಳಿದ್ದಾರೆ.
   - ಪ್ರಯೋಗಗಳಿಗೆ ಹೆಚ್ಚು ಅವಕಾಶವಿದೆ.
   - ಮಕ್ಕಳ ಭಾಗವಹಿಸುವಿಕೆಗೆ ಹೆಚ್ಚು ಅವಕಾಶವಿದೆ.
   - ಮಕ್ಕಳಿಗೆ ಕಲಿಕೆಯನ್ನು ಅನುಕೂಲಿಸಲು ಶಿಕ್ಷಕರಿಗೆ ಅನುಕೂಲವಾಗಿದೆ.
8. ವಿಜ್ಞಾನ ಕೇಂದ್ರದ ಕಾರ್ಯಕ್ರಮದಲ್ಲಿ ನೀವು ಗಮನಿಸಿರುವ ಕೊರತೆಗಳೇನು?
   - ಕೇಂದ್ರಕ್ಕೆ ಭೇಟಿ ಕಡಿಮೆ ನೀಡಲಾಗಿದೆ. ಪ್ರಯೋಗಗಳನ್ನು ಮಾಡುವಾಗ ಭೇಟಿ ನೀಡಿರುವುದಿಲ್ಲ.
   - ಕೇಂದ್ರದಲ್ಲಿ ಹೆಚ್ಚು ಮಕ್ಕಳಿರುವ ಶಾಲೆಯ ವಿದ್ಯಾರ್ಥಿಗಳಿಗೆ ಭಾಗವಹಿಸಲು ಸ್ಥಳಾವಕಾಶ ಕಡಿಮೆ ಇದೆ.
   - ಮಕ್ಕಳು ಶಾಲೆಯಿಂದ ಕೇಂದ್ರಕ್ಕೆ ಭೇಟಿ ನೀಡುವುದು ಸಮಸ್ಯೆ.

9. ವಿಜ್ಞಾನ ಕೇಂದ್ರದ ಭೇಟಿಯಿಂದ ಪ್ರೇರೇಪಿತರಾಗಿ ಯಾವುದಾದರೂ ಶಿಕ್ಷಕರು ಶಾಲೆಯಲ್ಲಿ ತಮ್ಮದೇ ಆದ ಪ್ರಯೋಗಾಲಯ ಅಥವಾ ವಿಜ್ಞಾನ ಕಲಿಕಾ ಸಾಮಗ್ರಿ ಸಿದ್ಧಗೊಳಿಸಿರುವರೇ?
   - ಇಲ್ಲ
10. ವಿಜ್ಞಾನ ಕೇಂದ್ರದ ಸದ್ಬಳಕೆಗೆ ನೀವು ಶಿಕ್ಷಕರಿಗೆ ಯಾವ ರೀತಿಯ ಮಾರ್ಗದರ್ಶನವನ್ನು ನೀಡಿರುವಿರಿ?
    - ಪ್ರಯೋಗಗಳ ಬಳಕೆ ಮಾಡಲು ತಿಳಿಸಿದೆ.
11. ವಿಜ್ಞಾನ ಕೇಂದ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು?
    - ಉತ್ತಮ ಕಲಿಕಾ ಕೇಂದ್ರವಾಗಿದೆ.
    - ಕಲಿಕೆಗೆ ಬೇಕಾದ ಸಾಮಗ್ರಿಗಳ ಲಭ್ಯತೆ ಇದೆ.

**ಅರ್ಥೈಸುವಿಕೆ:-**

- ಕೇಂದ್ರ ನಿರ್ವಹಣೆಯ ಸಂದರ್ಭದಲ್ಲಿ ಅನುಪಾಲನಾಧಿಕಾರಿಗಳ ಭೇಟಿ ಕಡಿಮೆಯಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ.
- ಅನುಪಾಲನಾಧಿಕಾರಿಗಳು ಕೇಂದ್ರ ಬಳಕೆ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿರುತ್ತಾರೆ.

## ಅಗಸ್ತ್ಯ ಕೇಂದ್ರದವರಿಗೆ ಸಂದರ್ಶನ ನಮೂನೆಯ ವಿಶ್ಲೇಷಣೆ

| **ಕಾರ್ಯನಿರ್ವಾಹಕರ ಹೆಸರು:** | **ವಿದ್ಯಾರ್ಹತೆ:** | **ಸೇವಾನುಭವ:** |
|---|---|---|
| 1. ಬಸವರಾಜು, | ಎಂ.ಎಸ್.ಸಿ, | ಒಂದುವರೆ ವರ್ಷ |
| 2. ರಾಘವೇಂದ್ರ, | ಎಂ.ಎ, | 4 ವರ್ಷ |

ಒಟ್ಟು ಸಿಬ್ಬಂದಿ ವರ್ಗ: 5 ಜನ

1) ವೇಳಾಪಟ್ಟಿಗನುಗುಣವಾಗಿ ಶಾಲೆಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೇಂದ್ರಕ್ಕೆ ಭೇಟಿ ನೀಡುತ್ತಾರೆಯೇ?
   - ಹೌದು
2) ಮಕ್ಕಳು ಪ್ರಯೋಗಗಳಲ್ಲಿ ಹೇಗೆ ಭಾಗವಹಿಸುತ್ತಾರೆ?
   - ಮಕ್ಕಳು ಆಸಕ್ತಿಯಿಂದ ಭಾಗವಹಿಸುತ್ತಾರೆ.
3) ಶಿಕ್ಷಕರು ಪ್ರಯೋಗ ಮಾಡಲು ಅವಕಾಶವಿದೆಯೇ?
   - ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶವಿರುವುದಿಲ್ಲ.
4) ಶಿಕ್ಷಕರು ಹೇಗೆ ಸ್ಪಂದಿಸುತ್ತಿದ್ದಾರೆ?
   - ಕೆಲವೇ ಕೆಲವು ಶಾಲೆಯ ಶಿಕ್ಷಕರು ಉತ್ತಮವಾಗಿ ಸ್ಪಂದಿಸುತ್ತಾರೆ.
5) ಇಲಾಖೆಯು ನೀಡುತ್ತಿರುವ ತರಬೇತಿಯ ಪರಿಚಯ ನಿಮಗಿದೆಯೆ? ಕಲಿಕೆಯ ಕುರಿತ ಹೊಸ ಪರಿಕಲ್ಪನೆಗಳ ಪರಿಚಯವಿದೆಯೇ? ಇದ್ದರೆ ಬಳಕೆ ಮಾಡುವ ಪ್ರಯತ್ನ ಮಾಡಿರುವಿರಾ?
   - ಇಲ್ಲ, ಹೊಸ ಪರಿಕಲ್ಪನೆಗಳ ಪರಿಚಯವಿಲ್ಲ. ಆದುದರಿಂದ ಬಳಕೆ ಸಾಧ್ಯವಿಲ್ಲ. ಪ್ರಯೋಗ ಮಾಡಿ ವಿವರಣೆ ನೀಡುತ್ತೇವೆ.
6) ಕೇಂದ್ರದಲ್ಲಿ ನೀವು ಮಾಡುತ್ತಿರುವ ಪ್ರಯೋಗಗಳಿಗೂ ಆಯಾ ತಿಂಗಳ ಪಾಠ ವಿಷಯಗಳಿಗೂ ಹೊಂದಿಕೆಯಾಗುತ್ತಿದೆಯೇ?
   - ಕೇಂದ್ರದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮಾಹೆವಾರು ಪಾಠ ಹಂಚಿಕೆಗನುಗುನವಾಗಿ ಪ್ರಯೋಗಗಳನ್ನು ಮಾಡುತ್ತೇವೆ.
   - ಶಿಕ್ಷಕರಿಂದ ಅವರ ಶಾಲೆಯ ಅಗತ್ಯಗಳನ್ನು ಪಡೆದುಕೊಂಡು ಪ್ರಯೋಗಗಳನ್ನು ನಿರ್ವಹಿಸುತ್ತೇವೆ.
   - ಕೆಲವೊಮ್ಮೆ ಶಿಕ್ಷಕರು ತಾವಾಗಿಯೇ ಪ್ರಯೋಗಗಳನ್ನು ಕೇಳಿದಾಗ ಅದಕ್ಕೆ ಆದ್ಯತೆಯನ್ನು ನೀಡುತ್ತೇವೆ.
7) ರಜಾ ದಿನಗಳಲ್ಲಿ ಶಿಕ್ಷಕರು ಕೇಂದ್ರಕ್ಕೆ ಭೇಟಿ ನೀಡುತ್ತಾರೆಯೇ?
   - ಉತ್ತರ ಮತ್ತು ದಕ್ಷಿಣ ವಲಯದ ಕೆಲವೇ ಕೆಲವು ಶಿಕ್ಷಕರು ಮಾತ್ರ ಭೇಟಿ ನೀಡಿರುತ್ತಾರೆ.
   - ನಗರ ವಲಯದ ಶಿಕ್ಷಕರಿಗೆ ಆಸಕ್ತಿ ಕಡಿಮೆ ಇದೆ.
   - ಈಗ ತಾಲ್ಲೂಕು ವಲಯದ ಶಿಕ್ಷಕರಿಗೆ ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಅವರು ಸಾಕಷ್ಟು ಪ್ರಶ್ನೆಗಳನ್ನು ಕೇಳುತ್ತಾರೆ. ಸ್ವಲ್ಪ ಅವಧಿಯಲ್ಲೇ ಕೆಲವು ಶಿಕ್ಷಕರು ಈಗಾಗಲೇ ಭೇಟಿಯನ್ನು ನೀಡಿರುತ್ತಾರೆ.

8) ಮಕ್ಕಳು ಕೇಂದ್ರದಲ್ಲಿ ಭಾಗವಹಿಸುವಾಗ ಅನುಪಾಲನಾಧಿಕಾರಿಗಳು ಭೇಟಿ ನೀಡುತ್ತಾರೆಯೇ?

- ಕೇಂದ್ರಕ್ಕೆ ಭೇಟಿ ಮತ್ತು ಅನುಪಾಲನೆ ಕಡಿಮೆ ಇದೆ.
- ಅಧಿಕಾರಿಗಳು ಭೇಟಿ ನೀಡಿದರ ನಮಗೂ ಧೈರ್ಯ, ಹಿಮ್ಮಾಹಿತಿ ಸಿಗುತ್ತದೆ ಮತ್ತು ಶಿಕ್ಷಕರಿಗೂ ಪ್ರೇರೇಪಣೆ ಸಿಗುತ್ತದೆ.

9) ಸಮಾಲೋಚನಾ ಸಭೆಗಳಲ್ಲಿ ನೀವು ಭಾಗವಹಿಸುವಿರಾ?

- 6–8 ನೇ ತರಗತಿ ವಿಜ್ಞಾನ ಬೋಧಿಸುವ ಶಿಕ್ಷಕರ ಸಮಾಲೋಚನಾ ಸಭೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದೇವೆ.

10) ನೀವು ಎದುರಿಸುತ್ತಿರುವ ಸಮಸ್ಯೆಗಳೇನು?

- ಶಿಕ್ಷಕರು ಆಸಕ್ತಿಯಿಂದ ಲಿಬ್ ಮತ್ತು ಕೇಂದ್ರವನ್ನು ಉಪಯೋಗಿಸುವಂತೆ ಪ್ರೇರೇಪಿಸುವುದು.
- ಶಿಕ್ಷಕರಲ್ಲಿ ಆಸಕ್ತಿ ಕಡಿಮೆ ಇರುವುದು.
- ಸಮಸ್ಯೆಗಳನ್ನು ಕೇಳದಿರುವುದು.

11) ಇಲಾಖೆಯ ಅಧಿಕಾರಿಗಳು ಯಾವ ರೀತಿ ನಿಮಗೆ ಸ್ಪಂದಿಸುತ್ತಾರೆ?

- ಉತ್ತಮವಾಗಿ ಸ್ಪಂದಿಸುತ್ತಾರೆ.

12) ಕೇಂದ್ರದಿಂದ ಮಾಡುವ ಇತರ ಕಾರ್ಯಕ್ರಮಗಳಾವುವು?

- ವಸ್ತುಪ್ರದರ್ಶನ.
- ದಸರಾ ರಜೆಯಲ್ಲಿ ತುರ್ತು ಚಿಕಿತ್ಸಾ ವಾಹನ ಪರಿಚಯ.
- ಬೇಸಿಗೆಯ ಶಿಬಿರ.

13) ವಸ್ತುಪ್ರದರ್ಶನದಲ್ಲಿ ಭಾಗವಹಿಸಿರುವ ಶಿಕ್ಷಕರು, ಮಕ್ಕಳು ಮತ್ತು ಸಾರ್ವಜನಿಕರ ಸಂಖ್ಯೆ ಎಷ್ಟು?

- 14 ಶಾಲೆ
- 3500 ಮಕ್ಕಳು
- 100 ಜನ ಶಿಕ್ಷಕರು

14) ಶಿಕ್ಷಕರು ಕೇಳುವ ಮುಖ್ಯ ಪ್ರಶ್ನೆಗಳು ಯಾವುವು?

- ರಸಾಯನ ಶಾಸ್ತ್ರದ ಬಗ್ಗೆ
- ಬದಲಾದ ವಿಜ್ಞಾನದ ಸಿಲಬಸ್‌ನಲ್ಲಿರುವ ಪ್ರಯೋಗಗಳ ಬಗ್ಗೆ

15) ಲಿಬ್ ಮತ್ತು ವಿಜ್ಞಾನ ಕೇಂದ್ರದ ಬಳಕೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

- ಎಲ್ಲಾ ಶಾಲೆಗಳಿಗೆ ಈ ವ್ಯವಸ್ಥೆಯನ್ನು ಒದಗಿಸಬೇಕು.
- ಕೆಮಿಕಲ್ಸ್ ಬಳಸಲು ತುಂಬಾ ಹಿಂಜರಿಯುತ್ತಿದ್ದ ಶಿಕ್ಷಕರು ಈಗ ಆತ್ಮವಿಶ್ವಾಸ ಬೆಳೆಸಿಕೊಂಡಿದ್ದಾರೆ.
- ವಿಜ್ಞಾನ ತರಗತಿಯಲ್ಲಿ ಮಕ್ಕಳ ಭಾಗವಹಿಸುವಿಕೆ ಉತ್ತಮವಾಗಿದೆ.

**ಅಭಿಪ್ರಾಯ/ಸಲಹೆ:**

- ಅಗಸ್ತ್ಯ ಕೇಂದ್ರದ ನಿರ್ವಹಣೆ ಮಾಡುವ ಸಿಬ್ಬಂದಿಗಳಲ್ಲಿ ವಿಜ್ಞಾನ ಮತ್ತು ಕಲಾ ವಿಭಾಗ ಎರಡು ಶಿಸ್ತಿನಲ್ಲೂ ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರಿದ್ದಾರೆ.
- ವಿಜ್ಞಾನದಲ್ಲಿ ತೊಡಗಿಸಿಕೊಳ್ಳುವ ಆಸಕ್ತಿ ಇರುವುದು ಸ್ಪಷ್ಟವಾಗುತ್ತಿದೆ.
- ಇಲಾಖೆಯ ಯಾವುದೇ ತರಬೇತಿ ಅಗಸ್ತ್ಯ ಸಿಬ್ಬಂದಿಗಳಿಗೆ ಆಗಿರುವುದಿಲ್ಲ.
- ಪ್ರಯೋಗಗಳನ್ನು ಮಾಡಿ ತೋರಿಸುತ್ತಾರೆ. ಕಲಿಕೆಯನ್ನು ಅನುಕೂಲಿಸಲು ಸಾಧ್ಯವಾಗುತ್ತಿಲ್ಲ.
- ಶಿಕ್ಷಕರ ಭಾಗವಹಿಸುವಿಕೆಯ ಬಗ್ಗೆ ತೃಪ್ತಿಕರ ಭಾವನೆ ಹೊಂದಿರುವುದಿಲ್ಲ.
- ನಗರ ವಲಯಲಕ್ಕಿಂತ ಗ್ರಾಮಾಂತರ ವಲಯದ ಶಿಕ್ಷಕರು ಉತ್ತಮವಾಗಿ ಸ್ಪಂದಿಸುವುದು ಸ್ಪಷ್ಟವಾಗಿದೆ.
- ಇಲಾಖೆಯ ಬಗ್ಗೆ ಉತ್ತಮ ಅಭಿಪ್ರಾಯ ಹೊಂದಿರುತ್ತಾರೆ.

*******************************

# ಅಧ್ಯಯನದ ಒಳನೋಟಗಳು

- 5 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಹಲವಾರು ವಿಜ್ಞಾನದ ಸಾಮಗ್ರಿಗಳು ವಿಜ್ಞಾನ ಕೇಂದ್ರದಲ್ಲಿ ಲಭ್ಯವಿರುತ್ತದೆ.
- ಭೌತಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳಕ್ಕೆ ಸಂಬಂಧಿಸಿದಂತೆ 60%ಕ್ಕಿಂತ ಹೆಚ್ಚು ಪರಿಕರಗಳು ಲಭ್ಯವಿದೆ.
- ಕೇಂದ್ರದಲ್ಲಿ 300ರಷ್ಟು ಸಾಮಗ್ರಿಗಳನ್ನು ಜೋಡಿಸಲಾಗಿದೆ. ಕೇಂದ್ರದಲ್ಲಿ ಏಕಕಾಲದಲ್ಲಿ 25–30 ವಿದ್ಯಾರ್ಥಿಗಳು ಭಾಗವಹಿಸಲು ಸ್ಥಳಾವಕಾಶ ಇದ್ದು, ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಯ ವಿದ್ಯಾರ್ಥಿಗಳು ಆಗಮಿಸಿದಾಗ ಸ್ಥಳಾವಕಾಶದ ಕೊರತೆ ಉಂಟಾಗುತ್ತದೆ.
- ವಿದ್ಯಾರ್ಥಿಗಳ ಜೊತೆ ವಿಜ್ಞಾನ ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶ ಇರುವುದಿಲ್ಲ. ವೀಕ್ಷಣೆಗೆ ಮಾತ್ರ ಅವಕಾಶವಿದೆ.
- ಕೇಂದ್ರಕ್ಕೆ ಭೇಟಿ ನೀಡಿದ ಮಕ್ಕಳಿಗೆ ಗುಂಪಿನಲ್ಲಿ ಪ್ರಯೋಗ ಮಾಡಲು ಅವಕಾಶ ಕಲ್ಪಿಸಲಾಗಿದೆ. ಕೆಲವೊಮ್ಮೆ ಸಂಪನ್ಮೂಲ ವ್ಯಕ್ತಿಗಳು ಮಾಡುವ ಪ್ರಾತ್ಯಕ್ಷಿಕೆಗಳನ್ನು ವೀಕ್ಷಣೆ ಮಾಡಲು ಮಾತ್ರ ಅವಕಾಶ ಇರುತ್ತದೆ.
- ವಿದ್ಯಾರ್ಥಿಗಳು ವಿಜ್ಞಾನ ಕೇಂದ್ರಗಳಲ್ಲಿರುವ ಸಾಮಗ್ರಿಗಳ ಬಗ್ಗೆ ಹೊಂದಿರುವ ಪರಿಚಯ ಮತ್ತು ಬಳಕೆಯ ಕೌಶಲವು ಸಾಧಾರಣವಾಗಿದೆ. ಇದಕ್ಕೆ ಕಾರಣ ಪ್ರತಿ ಶಾಲೆಯ ಪ್ರತಿ ತರಗತಿಯು ಕೇಂದ್ರಕ್ಕೆ ಭೇಟಿ ನೀಡುವ ಅವಕಾಶಗಳು ಬಹಳ ಕಡಿಮೆ ಇರುತ್ತದೆ. ಶಾಲೆಗಳಲ್ಲಿಯೂ ಪ್ರಯೋಗ ಮಾಡಿ ವಿಜ್ಞಾನ ಕಲಿಕೆಯನ್ನು ಅನುಕೂಲಿಸುವ ಸಂದರ್ಭಗಳು ಕಡಿಮೆ ಇದೆ. ಇದು ವಿಜ್ಞಾನ ಕಲಿಕೆಯು ಅನ್ವೇಷಣೆ/ಪ್ರಯೋಗ/ವೀಕ್ಷಣೆ/ಅನುಭವಾತ್ಮಕವಾಗಿ ಆಗದಿರುವುದನ್ನು ಪ್ರತಿಬಿಂಬಿಸುತ್ತದೆ.
- ವಿಜ್ಞಾನ ಪ್ರಯೋಗಗಳು ಮಕ್ಕಳಲ್ಲಿ ಪ್ರಶ್ನೆಗಳ ಸರಮಾಲೆಯನ್ನೇ ಸೃಷ್ಟಿಮಾಡಬೇಕು. ಆದರೆ ವಿದ್ಯಾರ್ಥಿಗಳ ಪ್ರಶ್ನೆಗಳ ಸಂಖ್ಯೆ ಸಾಧಾರಣವಾಗಿದೆ. ಪ್ರಶ್ನಿಸುವಿಕೆಗೆ ಸಾಕಷ್ಟು ಅವಕಾಶಗಳನ್ನು ದೈನಂದಿನ ಶಾಲಾ ಚಟುವಟಿಕೆಗಳಲ್ಲೂ ಬೆಳೆಸಬೇಕಾಗಿದೆ.
- ವಿದ್ಯಾರ್ಥಿಗಳಲ್ಲಿ ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸುವ ಸಾಮರ್ಥ್ಯ ಸಾಧಾರಣವಾಗಿದೆ.
- ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಗ/ಚಟುವಟಿಕೆಗಳ ಮೂಲಕ ಕಂಡುಕೊಂಡ ಒಳನೋಟಗಳನ್ನು ಪರಸ್ಪರ ಹಂಚಿಕೊಳ್ಳಲು ಕಡಿಮೆ ಅವಕಾಶ ಸಿಕ್ಕಿರುತ್ತದೆ.
- ವಿದ್ಯಾರ್ಥಿಗಳು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಂಡಿರುವುದಿಲ್ಲ. ಕೇಂದ್ರಕ್ಕೆ ತೆರಳುವ ಮುನ್ನ ಶಿಕ್ಷಕರು ಮಕ್ಕಳನ್ನು ಸಿದ್ಧಗೊಳಿಸದಿರುವುದು ಸ್ಪಷ್ಟವಾಗಿದೆ. ಸಂಪನ್ಮೂಲ ವ್ಯಕ್ತಿಗಳು ಈ ಬಗ್ಗೆ ಸ್ಪಷ್ಟವಾಗಿ ಸೂಚನೆ ನೀಡುವುದು ಅಗತ್ಯವಾಗಿದೆ.
- ಅಗಸ್ತ್ಯ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಕಲಿಕೆಯನ್ನು ಅನುಕೂಲಿಸುವುದಕ್ಕಿಂತ ಹೆಚ್ಚಾಗಿ ಪ್ರಯೋಗಗಳನ್ನು ಮಾಡಿ ವಿವರಿಸುತ್ತಾರೆ. ರಚನಾ ತತ್ವವನ್ನು ಅಳವಡಿಸುವಂತೆ ಸಲಹೆ ನೀಡಬಹುದು.

- ಉತ್ತರ ವಲಯದ 7 ಶಾಲೆಗಳು ಕೇಂದ್ರದಲ್ಲಿ ಭಾಗವಹಿಸುತ್ತಿದ್ದು, ಇಡೀ ಶೈಕ್ಷಣಿಕ ವರ್ಷದಲ್ಲಿ ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿರುವ ಸಂದರ್ಭದಲ್ಲಿ ಕೇವಲ ಇಬ್ಬರು ಇಲಾಖೆಯ ಅಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿರುತ್ತಾರೆ. ಅನುಪಾಲನೆ ಪರಿಣಾಮಕಾರಿಯಾಗಿಲ್ಲ. ಗುಣಾತ್ಮಕತೆಯ ದೃಷ್ಟಿಯಿಂದ ಈ ಅಂಶ ಗಮನಾರ್ಹ ಸಂಗತಿಯಾಗಿದೆ.
- ವರ್ಷದಲ್ಲಿ ಪ್ರತಿ ತರಗತಿಗೆ 3–4 ಬಾರಿ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶವಿದ್ದು, ವಿಜ್ಞಾನದ ಎಲ್ಲಾ ಶಿಸ್ತಿನಲ್ಲೂ(ಸಿ.ಬಿ.ಝಡ್) 1–2 ಪ್ರಯೋಗ ಮಾಡಲು ಅವಕಾಶ ಸಿಕ್ಕಿರುತ್ತದೆ.
- ವಿಜ್ಞಾನ ಕೇಂದ್ರದಲ್ಲಿ ಮಾಡಲಿರುವ ಪ್ರಯೋಗಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ತಮ್ಮ ಅಗತ್ಯತೆಗಳನ್ನು ಆದ್ಯತೀಕರಿಸಿರುತ್ತಾರೆ. ಆದರೆ ಹೆಚ್ಚಿನ ಶಿಕ್ಷಕರು ತಮ್ಮ ಅಗತ್ಯತೆಗಳ ಬಗ್ಗೆ ಕೇಂದ್ರದವರಿಗೆ ಪೂರ್ವಭಾವಿಯಾಗಿ ಯಾವುದೇ ಮಾಹಿತಿಯನ್ನು ನೀಡಿಲ್ಲವೆನ್ನುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಗುಣಾತ್ಮಕತೆಗೆ ಪೂರಕವಾಗಿ ಈ ಒಂದು ಚಟುವಟಿಕೆಯು ಒಂದು ಪ್ರಕ್ರಿಯೆಯಾಗಿ ರೂಪುಗೊಳ್ಳದಿರುವುದು ಸ್ಪಷ್ಟವಾಗಿದೆ.
- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ನಡೆಸುವ ಹೆಚ್ಚಿನ ಚಟುವಟಿಕೆ/ಪ್ರಯೋಗಗಳು ಶಾಲೆಯ ಅಗತ್ಯಾಧಾರಿತವಾಗಿವೆ. ಕೆಲವು ಪ್ರಯೋಗಗಳು ಮಾತ್ರ ಮಕ್ಕಳ ಅಗತ್ಯತೆಯನ್ನು ಅವಲಂಬಿಸಿರುವುದಿಲ್ಲ.
- ಶಾಲೆಯಲ್ಲಿ ಮಾಡಲು ಅಸಾಧ್ಯವಾದ ಅಥವಾ ಮಾಡದೇ ಇರುವ ಪ್ರಯೋಗಗಳನ್ನು ಕೇಂದ್ರದಲ್ಲಿ ಮಾಡಲು ಅವಕಾಶವಾಗಿದೆ. ಇದು ಒಂದು ಉತ್ತಮವಾದ ಮತ್ತು ಧನಾತ್ಮಕ ಅಂಶವಾಗಿದೆ.
- ಕೇಂದ್ರದಲ್ಲಿ ಮಾಡುವ ಪ್ರಯೋಗಗಳು/ಚಟುವಟಿಕೆಗಳು ಆಯಾ ತಿಂಗಳಲ್ಲಿ ನಡೆಸುವ ಪಾಠಕ್ಕೆ ಸಂಬಂಧಪಟ್ಟಿರುವುದಿಲ್ಲ. ಇದು ಈ ಕೇಂದ್ರದ ನಿರ್ವಹಣೆಯಲ್ಲಿರುವ ದೊಡ್ಡ ಕೊರತೆ ಎನ್ನುವುದನ್ನು ಅರ್ಥೈಸಿಕೊಳ್ಳಬಹುದಾಗಿದೆ. ಈ ಒಂದು ಅಂಶಕ್ಕೆ ಹೆಚ್ಚು ಮಹತ್ವ ನೀಡಿದಲ್ಲಿ ಈ ಸಂಸ್ಥೆಯು ಶೈಕ್ಷಣಿಕ ಗುಣಮಟ್ಟದ ಹೆಚ್ಚಳಕ್ಕೆ ಹೆಚ್ಚು ಕೊಡುಗೆಯನ್ನು ನೀಡಬಲ್ಲದು.
- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿರುವ ಪಾಠೋಪಕರಣಗಳು ಶಾಲೆಯಲ್ಲಿ ಲಭ್ಯವಿರುವುದಿಲ್ಲ. ಆದರೆ ಈ ಕೇಂದ್ರ ಮತ್ತು ಕೇಂದ್ರದಲ್ಲಿರುವ ಸಾಮಗ್ರಿಗಳನ್ನು ಮಾದರಿಯಾಗಿಟ್ಟುಕೊಂಡು ಶಾಲೆಯಲ್ಲಿ ಪುಟ್ಟದಾದ ಪ್ರಯೋಗಾಲಯ ನಿರ್ಮಾಣ ಮಾಡುವ ಪ್ರಯತ್ನಗಳು ಯಾವ ಶಾಲೆಗಳಲ್ಲೂ ಕಂಡು ಬಂದಿರುವುದಿಲ್ಲ. ಇದು ಒಂದು ನಿರಾಶಾದಾಯಕ ಸಂಗತಿಯಾಗಿದೆ ಮತ್ತು ಶಿಕ್ಷಕರು ಲಭ್ಯ ಇರುವ ಒಂದು ವಿಜ್ಞಾನ ಕೇಂದ್ರದ ಮಾದರಿಯನ್ನು ತಮ್ಮದಾಗಿಸುವ ಪ್ರಯತ್ನ ಮಾಡಿರುವುದಿಲ್ಲ.
- ಹೆಚ್ಚಿನ ಶಿಕ್ಷಕರು ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಮಾಡಿರುವ ಪ್ರಯೋಗಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಪ್ರಯತ್ನ ಮಾಡಿರುವುದಿಲ್ಲ. ವಿಜ್ಞಾನ ಕೇಂದ್ರಕ್ಕೆ ಡಯಟ್ ವತಿಯಿಂದ ಭೇಟಿ ನೀಡಲಾಗಿ ಕೇಂದ್ರದಲ್ಲಿರುವ ಸಾಮಗ್ರಿಗಳಲ್ಲಿ ಅವುಗಳ ತಯಾರಿಕೆಯಲ್ಲಿನ ಸೃಜನಶೀಲತೆ, ಉಪಯುಕ್ತತೆ, ಕಸದಿಂದ ರಸ ಮತ್ತು ವೆಚ್ಚರಹಿತತೆ ತುಂಬಾ ಚೆನ್ನಾಗಿ ಅಳವಡಿಕೆಯಾಗಿರುವುದನ್ನು ಗಮನಿಸಲಾಗಿದೆ. ವಸ್ತುಪ್ರದರ್ಶನದಲ್ಲಿ ಮಕ್ಕಳೇ ಸರಾಗವಾಗಿ ಕಲಿಕೋಪಕರಣಗಳನ್ನು ಬಳಕೆ ಮಾಡಿ ವಿವರಣೆ ನೀಡುತ್ತಿರುವುದನ್ನು ಗಮನಿಸಲಾಗಿದೆ. ಮಕ್ಕಳಿಗೆ ಸಾಧ್ಯವಾಗಿರುವುದು ಶಿಕ್ಷಕರಿಗೆ ಅಸಾಧ್ಯ ಎನ್ನುವುದನ್ನು ವಿಶ್ಲೇಷಿಸಿದಾಗ ವೃತ್ತಿಪರತೆಯ ಕೊರತೆ ಇರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

- ಶಾಲೆಯಲ್ಲಿರುವ ವಿಜ್ಞಾನೋಪಕರಣಗಳನ್ನು ಬಳಸುವಾಗ ಸಮಸ್ಯೆ ಬಂದಾಗಲೂ ಕೇಂದ್ರದವರು ಮಾರ್ಗದರ್ಶನ ನೀಡಿರುವುದು ಸ್ಪಷ್ಟವಾಗಿದೆ.
- ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಮೊದಲು ಹೆಚ್ಚಿನ ಶಿಕ್ಷಕರು ಮಕ್ಕಳಿಗೆ ನೀಡುವ ಸೂಚನೆಗಳು ತುಂಬಾ ಯಾಂತ್ರಿಕವಾಗಿದೆ ಮತ್ತು ರಚನಾತ್ಮಕವಾಗಿಲ್ಲ. ಕೇಂದ್ರಕ್ಕೆ ವಿದ್ಯಾರ್ಥಿಗಳು ಕಲಿಕಾರ್ಥಿಗಳಾಗಿ ಭೇಟಿ ನೀಡುವ ಮೊದಲು ಶಿಕ್ಷಕರು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಕಲಿಕೆಗೆ ಅಣಿಗೊಳಿಸದಿರುವುದು ಸ್ಪಷ್ಟವಾಗಿದೆ. ಪೂರ್ವ ಸಿದ್ಧತೆ ಎಂದರೆ ಯಾವ ಪರಿಕಲ್ಪನೆಗೆ ಪ್ರಯೋಗಗಳನ್ನು ಮಾಡಲಾಗುವುದು, ಅದಕ್ಕೆ ಕೇಳಬಹುದಾದ ಪ್ರಶ್ನೆಗಳು, ಅದಕ್ಕೆ ಸಂಬಂಧಿಸಿದ ಮಾಹಿತಿ, ಟಿಪ್ಪಣೆ ಬರೆಯಲು ಸೂಚನೆ, ಭಾಗವಹಿಸುವಿಕೆಗೆಗೆ ಸಿದ್ಧಪಡಿಸುವುದು ಇತ್ಯಾದಿಗಳಲ್ಲಿ ಕೊರತೆ ಕಂಡು ಬಂದಿದೆ.
- ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುವುದರಿಂದ ತರಗತಿಯ ಕಲಿಕೆಯನ್ನು ಅನುಕೂಲಿಸುವಲ್ಲಿ ನಿಮ್ಮಲ್ಲಾಗಿರುವ ಬದಲಾವಣೆಗಳೇನು? ಇದು ಶಿಕ್ಷಕರನ್ನು ಸ್ವಾವಲೋಕನಕ್ಕೆ ಒಳಪಡಿಸುವ ಪ್ರಶ್ನೆಯಾಗಿದೆ. ತಮ್ಮ ಅನುಕೂಲಿಸುವಿಕೆಯ ಕುರಿತಂತೆ ರಿಫ್ಲೆಕ್ಟ್ ಮಾಡಿಕೊಂಡಿರುವ ಶಿಕ್ಷಕರ ಸಂಖ್ಯೆ ತುಂಬಾ ಕಡಿಮೆ ಇದೆ. ಹೆಚ್ಚಿನ ಶಿಕ್ಷಕರು ಕೇಂದ್ರದ ಪ್ರಯೋಗಗಳು ಮಕ್ಕಳಿಗೆ ಹೇಗೆ ಉಪಯುಕ್ತವಾಗಿದೆ ಎಂದು ವಿವರಿಸಿರುತ್ತಾರೆಯೇ ವಿನ: ತಮ್ಮ ಅನುಕೂಲನಾ ಸಾಮರ್ಥ್ಯವನ್ನು ಹೇಗೆ ವಿಸ್ತರಿಸಿದೆ ಎನ್ನುವುದನ್ನು ಗುರುತಿಸಿಕೊಳ್ಳುವಲ್ಲಿ/ವ್ಯಕ್ತಪಡಿಸುವಲ್ಲಿ ವಿಫಲರಾಗಿರುತ್ತಾರೆ.
- ಹೆಚ್ಚಿನ ಮಕ್ಕಳು ವಿಜ್ಞಾನ ಕೇಂದ್ರದಲ್ಲಿ ಕಲಿಯಲು ಆಸಕ್ತರಾಗಿದ್ದಾರೆ. ಕೇಂದ್ರವು ಮಕ್ಕಳನ್ನು ತಮ್ಮತ್ತ ಸೆಳೆಯುವಲ್ಲಿ ಸಫಲವಾಗಿದೆ.
- 55.7% ರಷ್ಟು ಮಕ್ಕಳು ಶಿಕ್ಷಕರು ಶಾಲೆಯಲ್ಲಿ ಪ್ರಯೋಗ ಮಾಡುತ್ತಾರೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಮಕ್ಕಳು ಬರೆದಿರುವ ಪ್ರಯೋಗದ ಹೆಸರುಗಳನ್ನು ಕಂಡಾಗ ಅವೆಲ್ಲವೂ ಅಗಸ್ತ್ಯ ಕೆಂದ್ರದಲ್ಲಿರುವ ಕಲಿಕೋಪಕರಣ ಮತ್ತು ಪ್ರಯೋಗಗಳ ಹೆಸರೇ ಆಗಿರುವುದನ್ನು ಗಮನಿಸಬಹುದು. ಅಧ್ಯಯನಕಾರರು ಶಾಲೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲೂ ಪ್ರಯೋಗಗಳನ್ನು ಮಾಡುವ ಆಕಾಂಕ್ಷೆ ಮತ್ತು ಸುಳಿವುಗಳು ಗ್ರೇಸ್ ಪ್ರೌಢ ಶಾಲೆ ಮತ್ತು ಕುಂಬಾರಕೊಪ್ಪಲು ಪ್ರಾಥಮಿಕ ಶಾಲೆಯ ಕೆಲವು ಶಿಕ್ಷಕರನ್ನು ಹೊರತುಪಡಿಸಿ ಉಳಿದ ಶಿಕ್ಷಕರಲ್ಲಿ ಕಂಡುಬಂದಿರುವುದಿಲ್ಲ.
- ಅಗಸ್ತ್ಯ ವಿಜ್ಞಾನ ಕೇಂದ್ರದ ದೊಡ್ಡ ಕೊರತೆ ಎಂದರೆ ಕೇಂದ್ರದಲ್ಲಿ ಮಾಡಲಾಗುವ ಕೆಲವು ಪ್ರಯೋಗಗಳು ಮಾಹೆವಾರು ಕಲಿಕಾಂಶಕ್ಕೆ ತಾಳೆಯಾಗದಿರುವುದು ಅಥವಾ ಅಗತ್ಯತೆಯನ್ನು ಆಧರಿಸಿ ಇಲ್ಲದಿರುವುದು. ಇದರಲ್ಲಿ ಸುಧಾರಣೆಯಾದರೆ ಬಳಕೆ ಇನ್ನು ಹೆಚ್ಚು ಪರಿಣಾಮಕಾರಿಯಾಗಬಹುದು.
- 48% ಮಕ್ಕಳು ತಾವು ಬಳಸಿರುವ 4 ವಿಜ್ಞಾನದ ಸಲಕರಣೆ ಮತ್ತು 25% ಮಕ್ಕಳು 2 ಪ್ರಯೋಗಗಳ ಹೆಸರನ್ನು ಹೆಸರಿಸಿರುತ್ತಾರೆ. ಇದರಿಂದ ಕೇಂದ್ರದಲ್ಲಿ ಒಮ್ಮೆ ಮಾಡಿರುವ ಪ್ರಯೋಗಗಳ ಪುನರ್ಬಲನ ಮತ್ತು ಅನ್ವಯಗಳಿಗೆ ಕಡಿಮೆ ಅವಕಾಶ ಇರುವುದು ಸ್ಪಷ್ಟವಾಗುತ್ತದೆ. ಇದು ಅಗಸ್ತ್ಯ ಸಂಸ್ಥೆಯವರಿಂದ ಸಾಧ್ಯವಿಲ್ಲ. ಇದನ್ನು ಶಿಕ್ಷಕರೇ ಮಾಡಬೇಕಾಗಿದ್ದು, ಶಿಕ್ಷಕರು ಈ ನಿಟ್ಟಿನಲ್ಲಿ ವಿಫಲರಾಗಿರುವುದನ್ನು ಗಮನಿಸಬಹುದಾಗಿದೆ.

- 10 ಅಂಶದ ಕಾರ್ಯಕ್ರಮದ ವಾರಕ್ಕೊಂದು ಪ್ರಯೋಗ ಅನುಷ್ಠಾನದಲ್ಲಿ ವಿಜ್ಞಾನ ಕೇಂದ್ರವು ಉತ್ತಮವಾಗಿ ಪರಿಣಾಮ ಬೀರಿರುವುದು ಸ್ಪಷ್ಟವಾಗುತ್ತದೆ.
- ವಿಜ್ಞಾನ ಕೇಂದ್ರದ ಎಲ್ಲಾ ಚಟುವಟಿಕೆಗಳು ಉಪಯುಕ್ತವಾಗಿದೆ ಎಂದು ಅಧ್ಯಯನವು ಸ್ಪಷ್ಟಪಡಿಸುತ್ತದೆ.

**********************************

# ಶೈಕ್ಷಣಿಕ ನಿಹಿತಾರ್ಥಗಳು

- ವಿದ್ಯಾರ್ಥಿಗಳಲ್ಲಿ ಪ್ರಯೋಗಗಳನ್ನು ಮಾಡುವ, ವೀಕ್ಷಣೆ ಮಾಡುವ, ದಾಖಲಿಸುವ, ಚರ್ಚಿಸುವ, ವಸ್ತುನಿಷ್ಠವಾಗಿ ನೋಡುವ, ತೀರ್ಮಾನಗಳನ್ನು ತೆಗೆದುಕೊಳ್ಳುವ, ವಿಶ್ಲೇಷಿಸುವ, ವೈಜ್ಞಾನಿಕವಾಗಿ ಯೋಚಿಸುವ, ಪರಿಕಲ್ಪನೆಗಳನ್ನು ವಿವರಿಸುವ, ಉದಾಹರಿಸುವ ಮತ್ತು ಅನ್ವಯಿಸಲು ಪ್ರೇರಕವಾಗುವಂತೆ ಪ್ರಯೋಗಗಳನ್ನು ಮಾಡಬೇಕಾಗಿದೆ.
- ಮಕ್ಕಳಿಗೆ ಟಿಪ್ಪಣಿ ಮಾಡಿಕೊಳ್ಳಲು ಅವಕಾಶ ನೀಡಬೇಕು.
- ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶ ನೀಡಿದರೆ ಉತ್ತಮ.
- ಕೇಂದ್ರದ ಚಟುವಟಿಕೆಗಳನ್ನು ಪ್ರಕ್ರಿಯೆಯಾಗಿ ಪರಿವರ್ತಿಸಬೇಕು. ಶಿಕ್ಷಕರು ಕೇಂದ್ರದ ಭೇಟಿಯ ಅವಧಿಯಲ್ಲಿ ಕಲಿಯಬೇಕಾದ ಕಲಿಕಾಂಶಗಳಿಗೆ ಪೂರಕವಾದ ಪ್ರಯೋಗ ಅಥವಾ ಅಗತ್ಯತೆಗಳನ್ನು ಪಟ್ಟಿ ಮಾಡಿ ಆದ್ಯತೀಕರಣ ಮಾಡುವುದು, ಭೇಟಿಗೆ ಮುನ್ನ ಮಕ್ಕಳನ್ನು ಪೂರ್ವಭಾವಿಯಾಗಿ ಪ್ರೇರೇಪಿಸಿ ಕಲಿಕೆಗೆ ಅಣಿಗೊಳಿಸುವುದು, ಹಿಮ್ಮಾಹಿತಿ ಪಡೆದುಕೊಳ್ಳುವುದು, ಕೇಂದ್ರದಲ್ಲಿ ಶಿಕ್ಷಕರು ಮತ್ತು ಮಕ್ಕಳು ಪ್ರಯೋಗಗಳನ್ನು ಮಾಡುವುದು, ಪ್ರಯೋಗಗಳ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸುವುದು, ಪೂರಕವಾಗಿ ಸರಳ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸುವಂತೆ ಪ್ರೇರೇಪಿಸುವುದು, ಶಾಲೆಯಲ್ಲಿ ವೆಚ್ಚರಹಿತ ಪ್ರಯೋಗ ಸಾಮಗ್ರಿಗಳನ್ನು ಸಿದ್ಧಗೊಳಿಸುವಂತೆ ಪ್ರೇರೇಪಿಸುವುದು, ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು, ಶಾಲೆಯಲ್ಲಿಯೇ ತಯಾರಿಸಿದ ಸರಳ ಸಾಮಗ್ರಿಗಳನ್ನು ಬಳಸಿ ವಸ್ತುಪ್ರದರ್ಶನ ಏರ್ಪಡಿಸುವುದು ಇತ್ಯಾದಿಗಳನ್ನು ಮಾಡುವುದರ ಮೂಲಕ ಕಾರ್ಯಕ್ರಮದ ಗುಣಮಟ್ಟವನ್ನು ಹೆಚ್ಚಿಸಬಹುದಾಗಿದೆ.
- ಸಂಪನ್ಮೂಲ ವ್ಯಕ್ತಿಗಳು ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಮೂಲ ಪರಿಕಲ್ಪನೆ ಮತ್ತು ಜ್ಞಾನ ರಚನೆ ಮಾಡಿಕೊಳ್ಳುವಂತೆ ಹೆಚ್ಚು ರಚನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಬೇಕಾಗಿದೆ.
- ವಿಜ್ಞಾನ ಶಿಕ್ಷಕರು ಹೆಚ್ಚು ಹೆಚ್ಚು ಪ್ರಯೋಗಗಳನ್ನು ಮಾಡುವಂತೆ ಕ್ರಮಕೈಗೊಳ್ಳಬೇಕು. ಯಾಕೆಂದರೆ ವರ್ಷದಲ್ಲಿ 2–3 ಬಾರಿ ಕೇಂದ್ರಕ್ಕೆ ಭೇಟಿ ನೀಡಿ ಪ್ರಯೋಗ ಮಾಡಿದರೆ ಮಕ್ಕಳಲ್ಲಿ ಅನ್ವೇಷಣಾ ಭಾವ ಮತ್ತು ಪ್ರಯೋಗಶೀಲತೆ ಬಾರದು. ಇದು ಬೆಳೆಯಬೇಕೆಂದರೆ ತರಗತಿ ಶಿಕ್ಷಕರೇ ನಿರಂತರವಾಗಿ ತರಗತಿಗಳಲ್ಲಿ ಪ್ರಯೋಗಗಳಿಗೆ ಅವಕಾಶ ನೀಡಬೇಕಾಗುತ್ತದೆ, ಕೇಂದ್ರದಲ್ಲಿ ಪ್ರಯೋಗ ಮಾಡಿದ್ದರೂ ಶಿಕ್ಷಕರು ಅದರ ಪುನರ್ಬಲನ, ಅನ್ವಯ ಮತ್ತು ವಿಶ್ಲೇಷಣೆಗೆ ಹೆಚ್ಚು ಅವಕಾಶ ನೀಡಬೇಕಾಗುತ್ತದೆ. ಇಲಾಖೆ ನೀಡುವ ರಚನಾ ತರಬೇತಿಯು ಇದನ್ನೇ ಪ್ರೋತ್ಸಾಹಿಸುತ್ತದೆ. ಇದು ಇಲಾಖಾ ಅಧಿಕಾರಿಗಳಿಂದ ಮಾತ್ರ ಸಾಧ್ಯ.
- ಅಗಸ್ತ್ಯ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿರುವ ಹೆಚ್ಚಿನ ಶಾಲೆಗಳ ಶಿಕ್ಷಕರು ಕೇಂದ್ರದಲ್ಲಿರುವ ಕಡಿಮೆ ವೆಚ್ಚದ ಕಲಿಕಾ ಸಾಮಗ್ರಿಗಳನ್ನು ಆಧರಿಸಿ ಶಾಲೆಗಳಲ್ಲಿ ಸಾಮಗ್ರಿಗಳನ್ನು ಸಿದ್ಧಪಡಿಸುವಂತೆ ಮತ್ತು ಶಾಲೆಗಳಲ್ಲಿ ಪ್ರಯೋಗಾಲಯವನ್ನು ನಿರ್ಮಿಸುವಂತೆ ಪ್ರೋತ್ಸಾಹಿಸಬೇಕು.
- ಅಗಸ್ತ್ಯ ವಿಜ್ಞಾನ ಕೇಂದ್ರಕ್ಕೆ ಬ್ಲಾಕ್ ಮತ್ತು ಜಿಲ್ಲಾ ಅನುಪಾಲನಾಧಿಕಾರಿಗಳ ಭೇಟಿ, ಮಾರ್ಗದರ್ಶನ ಮತ್ತು ಅನುಪಾಲನೆ ಕ್ರಮಬದ್ಧವಾಗಿ ನಡೆಯಬೇಕು.

- ವಿಜ್ಞಾನ ಕೇಂದ್ರದಲ್ಲಿರುವ ಸಿಬ್ಬಂದಿಗಳಿಗೆ ರಚನಾ ತರಬೇತಿಯ ಪರಿಚಯವಾಗಬೇಕು. ಹೀಗೆ ಮಾಡುವುದರಿಂದ ಕೇಂದ್ರದ ಸಿಬ್ಬಂದಿಗಳಲ್ಲಿ ಕೇಂದ್ರದಲ್ಲಿ ಪ್ರಯೋಗಗಳನ್ನು ಮಾಡುವಾಗಲೇ ಕಲಿಕೆಯನ್ನು ಅನುಕೂಲಿಸುವ ಮತ್ತು ರೂಪಿಸುವ ಸಾಮರ್ಥ್ಯ ಬೆಳೆಯುತ್ತದೆ.

******************************************

# ಉಪಸಂಹಾರ

ವಿಜ್ಞಾನ ಎಂದರೆ ಬದುಕುವ ಕ್ರಮ, ಮಾತ್ರವಲ್ಲದೆ ಕ್ರಮಬದ್ಧವಾಗಿ, ವೈಜ್ಞಾನಿಕವಾಗಿ ಮಾಡುವ ಚಿಂತನೆಯಾಗಿದೆ ಎಂದು ಹೇಳಬಹುದು. ಈ ವಿಶ್ವದಲ್ಲಿ ಶಾಂತವಾಗಿ ಮತ್ತು ಇರುವ ಸಂಪನ್ಮೂಲಗಳನ್ನು ಕ್ರಮಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಬಳಸುತ್ತಾ, ವೈಜ್ಞಾನಿಕವಾಗಿ ಬದುಕಬೇಕಾದರೆ ಅರ್ಥಪೂರ್ಣವಾದ ವಿಜ್ಞಾನ ಕಲಿಕೆ ಶಾಲೆಗಳಲ್ಲಿ ಸಾಗಬೇಕಾಗಿದೆ. ಶಾಲೆಗಳು ಮಕ್ಕಳಿಗೆ ಈ ಪ್ರಪಂಚದಲ್ಲಿನ ಅದ್ಭುತಗಳನ್ನು, ವಿಸ್ಮಯಗಳನ್ನು, ಸಂಪನ್ಮೂಲಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬೇಕು. ಇದಕ್ಕೆ ವಿಜ್ಞಾನ ಕೇಂದ್ರವು ಪೂರಕವಾಗಿದೆ ಎಂದು ಹೇಳಬಹುದು. ಶಾಲೆಗಳಿಗೆ ವಿಜ್ಞಾನ ಕೇಂದ್ರ ಬಹುಮುಖ್ಯವಾದ, ಉತ್ತಮವಾದ ಮತ್ತು ಅಗತ್ಯವಾದ ಭೌತಿಕ ಸೌಲಭ್ಯವಾಗಿದೆ. ಇವು ಮಕ್ಕಳಲ್ಲಿ ವೈಚಾರಿಕತೆಗೆ ಸಂಬಂಧಿಸಿದ ವೈಜ್ಞಾನಿಕ ಮನೋಭಾವ, ವಸ್ತುನಿಷ್ಠತೆ, ವಿಶ್ಲೇಷಣಾ ಮನೋಭಾವ, ಭಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಥಿತಿಗಳ ಭಾವನೆಗಳ ಬೆಳೆವಣಿಗೆಗೆ ಸಹಾಯ ಮಾಡಬೇಕು. ಸ್ವಂತ ಅನುಭವಗಳು ಮತ್ತು ಸ್ಥಳೀಯ ಜ್ಞಾನವನ್ನು ವಿಜ್ಞಾನದ ನಿಯಮಗಳು ಮತ್ತು ತತ್ವಗಳೊಂದಿಗೆ ತಾಳೆ ನೋಡುವಲ್ಲಿ ಮಕ್ಕಳನ್ನು ಆಸಕ್ತಿ ಮತ್ತು ಕುತೂಹಲವನ್ನು ಕೆರಳಿಸಬೇಕು ಮತ್ತು ಪೋಷಿಸಬೇಕು. ಆರೋಗ್ಯದ ಜೊತೆಯಲ್ಲಿ ವೈಯಕ್ತಿಕ, ಪರಿಸರದ ಮತ್ತು ವಿಶ್ವದ ಕುರಿತ ಕಾಳಜಿಗಳನ್ನು ಬೆಳೆಸಬೇಕು.

ಈ ನಿಟ್ಟಿನಲ್ಲಿ ಅಗಸ್ತ್ಯ ಅಂತರಾಷ್ಟ್ರೀಯ ಪ್ರತಿಷ್ಠಾನವು ಮೈಸೂರು ನಗರ ವಲಯಲ್ಲಿ ಕುಂಬಾರಕೊಪ್ಪಲು ಶಾಲೆಯ ಸುತ್ತುಮುತ್ತಲಿನ 7 ಶಾಲೆಗಳಿಗೆ ಒಂದು ವಿಜ್ಞಾನ ಕೇಂದ್ರದ ಸೌಲಭ್ಯವನ್ನು ಒದಗಿಸಿದೆ. ಮಕ್ಕಳಲ್ಲಿ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ಕೂಡಾ. ಅಧ್ಯಯನವು ಅಗಸ್ತ್ಯ ವಿಜ್ಞಾನ ಕೇಂದ್ರದ ಕಾರ್ಯನಿರ್ವಹಣೆ, ಮಕ್ಕಳ ಕಲಿಕೆಯ ಮೇಲೆ ಪರಿಣಾಮ, ಇಲಾಖೆಯ ಸಹಯೋಗ ಮತ್ತು ಅನುಪಾಲನೆಯ ಕುರಿತು ಸಾಕಷ್ಟು ಒಳನೋಟಗಳನ್ನು ನೀಡಿದೆ. ಅಧ್ಯಯನದ ಒಳನೋಟಗಳನ್ನು ಆಧರಿಸಿಕೊಂಡು ಸುಧಾರಣೆಗೆ ಕ್ರಮ ಕೈಗೊಂಡಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಈ ಚಟುವಟಿಕೆ ಧನಾತ್ಮಕವಾಗಿ ಕಾರ್ಯನಿರ್ವಹಿಸುವಲ್ಲಿ ಸಂದೇಹವಿಲ್ಲ.

************************************

# ಅನುಬಂಧಗಳು

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು

### ವಿಜ್ಞಾನ ಕೇಂದ್ರದ ಮೌಲ್ಯಮಾಪನ ಅಧ್ಯಯನ

### ಶಿಕ್ಷಕರ ಪ್ರಶ್ನಾವಳಿ

ಶಾಲೆಯ ಹೆಸರು ಮತ್ತು ವಿಳಾಸ:

ವಿಜ್ಞಾನ ಶಿಕ್ಷಕರ ಹೆಸರು: ಬೋಧಿಸುತ್ತಿರುವ ತರಗತಿ ಮತ್ತು ವಿಷಯ:

ವಿಜ್ಞಾನ ವಿಷಯಾಧಾರಿತವಾಗಿ ಪಡೆದಿರುವ ತರಬೇತಿ:

**ಸೂಚನೆ:** ಈ ಕೆಳಗಿನ ಪ್ರಶ್ನೆಗಳಿಗೆ ಅವುಗಳ ಮುಂದೆ ನೀಡಲಾದ ಆಯ್ಕೆಗಳಲ್ಲಿ ನಿಮ್ಮ ಸೂಕ್ತ ಆಯ್ಕೆಯ ಮುಂದಿರುವ ಸಂಖ್ಯೆಯನ್ನು ವಸ್ತುನಿಷ್ಠವಾಗಿ ಮುಂದಿರುವ ಖಾಲಿ ಜಾಗದಲ್ಲಿ ದಾಖಲಿಸಿ.. ಕ್ರಮ ಸಂಖ್ಯೆ 14ರ ನಂತರದ ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರಿಸಿ

| ಕ್ರ ಸ | ಪ್ರಶ್ನೆ | ಆಯ್ಕೆ |
|---|---|---|
| 1 | ವಿಜ್ಞಾನ ಕೇಂದ್ರದಲ್ಲಿ ಶಿಕ್ಷಕರಿಗೆ ತರಬೇತಿ ನೀಡುತ್ತಾರೆಯೇ? ಹೌದು–1, ಇಲ್ಲ–2 | |
| 2 | ಒಂದು ತಿಂಗಳಲ್ಲಿ ನಿಮ್ಮ ಶಾಲೆಯ ಒಂದು ತರಗತಿಗೆ ಎಷ್ಟು ಬಾರಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಲು ಅವಕಾಶ ಸಿಗುತ್ತದೆ? (ಸಂಖ್ಯೆ ಬರೆಯಿರಿ). | |
| 3 | ಒಂದು ತಿಂಗಳಲ್ಲಿ ಪ್ರತಿ ತರಗತಿಗೆ ಭೌತಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳ ವಿಷಯಕ್ಕೆ ಸಂಬಂಧಿಸಿದಂತೆ ತಲಾ ಎಷ್ಟು ಅವಧಿಗಳು ಲಭ್ಯವಾಗುತ್ತದೆ? (ಸಂಖ್ಯೆ ಬರೆಯಿರಿ). | |
| 4 | ವಿಜ್ಞಾನ ಬೋಧನೆಯ ಕುರಿತಂತೆ ನಿಮ್ಮ ಅಗತ್ಯತೆಗಳನ್ನು ಆದ್ಯತೀಕರಿಸಿರುವಿರಾ? ಹೌದು–1, ಇಲ್ಲ–2 | |
| 5 | ಪೂರ್ವಭಾವಿಯಾಗಿ ನಿಮ್ಮ ಅಗತ್ಯತೆಗಳ ಬಗ್ಗೆ ಕೇಂದ್ರಕ್ಕೆ ಮಾಹಿತಿ ನೀಡುವಿರಾ? ಹೌದು–1, ಇಲ್ಲ–2 | |
| 6 | ನಿಮ್ಮ ಅಗತ್ಯತೆಗಳನ್ನು ಆಧರಿಸಿ ಕೇಂದ್ರದವರು ಚಟುವಟಿಕೆ/ಪ್ರಯೋಗಗಳನ್ನು ಮಾಡುತ್ತಾರೆಯೇ? ಹೌದು–1, ಇಲ್ಲ–2 | |
| 7 | ಶಾಲೆಯಲ್ಲಿ ಮಾಡಲು ಅಸಾಧ್ಯವಾದ ಪ್ರಯೋಗಗಳನ್ನು ಕೇಂದ್ರದಲ್ಲಿ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | |
| 8 | ಕೇಂದ್ರದಲ್ಲಿ ಮಾಡುವ ಪ್ರಯೋಗಗಳು/ಚಟುವಟಿಕೆಗಳು ಆಯಾ ತಿಂಗಳಲ್ಲಿ ನಡೆಸುವ ಪಾಠಕ್ಕೆ ಸಂಬಂಧಪಟ್ಟದ್ದಾಗಿರುತ್ತದೆಯೇ? ಎಲ್ಲಾ–1, ಕೆಲವು ಮಾತ್ರ–2, ಇಲ್ಲ–3 | |
| 9 | ಕೇಂದ್ರದಲ್ಲಿರುವ ಪಾಠೋಪಕರಣಗಳು ಶಾಲೆಯಲ್ಲಿ ಲಭ್ಯವಿದೆಯೇ? ಎಲ್ಲಾ–1, ಕೆಲವು ಮಾತ್ರ–2, ಇಲ್ಲ–3 | |
| 10 | ಕೇಂದ್ರದಲ್ಲಿ ಮಾಡಿರುವ ಪ್ರಯೋಗಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯವಾಗಿದೆಯೇ? ಯಾವಾಗಲೂ –1, ಕೆಲವೊಮ್ಮೆ–2, ಇಲ್ಲ–3 | |
| 11 | ಅಗತ್ಯವಿದ್ದಲ್ಲಿ ಶಾಲೆಯಲ್ಲಿರುವ ವಿಜ್ಞಾನೋಪಕರಣಗಳನ್ನು ಬಳಸಲು ಕೇಂದ್ರದವರು ಮಾರ್ಗದರ್ಶನ ನೀಡುತ್ತಾರೆಯೇ? | |
| 12 | ಕೇಂದ್ರದಲ್ಲಿರುವ ಪರಿಕರಗಳನ್ನು ಆತ್ಮ ವಿಶ್ವಾಸದಿಂದ ಬಳಸುವ, ನಿರ್ವಹಿಸುವ ಸಾಮರ್ಥ್ಯ ನಿಮ್ಮಲ್ಲಿ ಬೆಳೆದಿದೆಯೇ? | |
| 13 | ಕೇಂದ್ರದವರು ನಿಮ್ಮಿಂದ ಹಿಮ್ಮಾಹಿತಿ ಪಡೆಯುತ್ತಾರೆಯೇ? ಎಲ್ಲರಿಂದ–1, ಕೆಲವರಿಂದ–2, ಇಲ್ಲ–3 | |

14. ವಿಜ್ಞಾನ ಕೇಂದ್ರಕ್ಕೆ ಭಾಗವಹಿಸುವುದಕ್ಕೆ ಪೂರ್ವಭಾವಿಯಾಗಿ ನೀವು ಮಾಡಿಕೊಳ್ಳುವ ಪೂರ್ವಸಿದ್ಧತೆಯೇನು?

15. ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುವುದರಿಂದ ತರಗತಿಯ ಕಲಿಕೆಯನ್ನು ಅನುಕೂಲಿಸುವಲ್ಲಿ ನಿಮ್ಮಲ್ಲಾಗಿರುವ ಬದಲಾವಣೆಗಳೇನು?

16. ತರಗತಿಯಲ್ಲಿ ಪಾಠದ ಕಲಿಕೆಯಾದ ನಂತರ ಅಥವಾ ಮೊದಲು ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದರೆ ಅದನ್ನು ನೀವು ತರಗತಿಯಲ್ಲಿ ಹೇಗೆ ಸರಿದೂಗಿಸುವಿರಿ?

17. ಕೇಂದ್ರದಲ್ಲಿ ಭಾಗವಹಿಸಿರುವುದರಿಂದ ವಿದ್ಯಾರ್ಥಿಗಳಲ್ಲಿ ನೀವು ಗಮನಿಸಿರುವ ಬದಲಾವಣೆಗಳೇನು?

18. ಮಕ್ಕಳಲ್ಲಿ ಕಲಿಕೆಯನ್ನು ಸರಳಗೊಳಿಸಲು ವಿಜ್ಞಾನ ಕೇಂದ್ರದ ಚಟುವಟಿಕೆಗಳು ನಿಮಗೆ ಹೇಗೆ ಉಪಯುಕ್ತವಾಗಿವೆ?

19.ಎಷ್ಟು ಇಲಾಖಾ ಮೇಲಧಿಕಾರಿಗಳು ಕೇಂದ್ರದಲ್ಲಿ ಭಾಗವಹಿಸುವಾಗ ವೀಕ್ಷಣೆ ಮಾಡಿ ಮಾರ್ಗದರ್ಶನ ನೀಡಿರುತ್ತಾರೆ? ಹೆಸರು ಬರೆಯಿರಿ.

20 ಅಗಸ್ತ್ಯ ವಿಜ್ಞಾನ ಕೇಂದ್ರದಿಂದ ಶಾಲೆಗಳು ಗರಿಷ್ಠ ಪ್ರಮಾಣದ ಪ್ರಯೋಜನ ಪಡೆಯುವಂತೆ ಮಾಡಲು ನಿಮ್ಮ ಸಲಹೆಗಳೇನು?

21. ಅಗಸ್ತ್ಯ ಕೇಂದ್ರದ ಕುರಿತು ನಿಮ್ಮ ಅಭಿಪ್ರಾಯಗಳೇನು?

# ವಿಜ್ಞಾನ ಕೇಂದ್ರದ ಮೌಲ್ಯಮಾಪನ ಅಧ್ಯಯನ

ವೀಕ್ಷಣಾ ನಮೂನೆ

ವಿಜ್ಞಾನ ಕೇಂದ್ರವಿರುವ ಶಾಲೆಯ ಹೆಸರು:

ಕೇಂದ್ರದಲ್ಲಿ ಭಾಗವಹಿಸಿದ ಶಾಲೆಯ ಹೆಸರು ಮತ್ತು ವಿಳಾಸ:

ಚಟುವಟಿಕೆ ಮಾಡಿದ ಅಗಸ್ತ್ಯ ಸಂಸ್ಥೆಯ ಶಿಕ್ಷಕರ ಹೆಸರು: ಅವರ ವಿದ್ಯಾರ್ಹತೆ

ಭಾಗವಹಿಸಿದ ತರಗತಿ: ವಿದ್ಯಾರ್ಥಿಗಳ ಸಂಖ್ಯೆ:

**ಸೂಚನೆ:** ವೀಕ್ಷಕರು ವಿಜ್ಞಾನ ಕೇಂದ್ರದಲ್ಲಿರುವ ವಿಜ್ಞಾನ ಪರಿಕರ ಮತ್ತು ಮಕ್ಕಳ ಭಾಗವಹಿಸುವಿಕೆಯನ್ನು ಗಮನಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಅವುಗಳ ಮುಂದೆ ನೀಡಲಾದ ಆಯ್ಕೆಗಳಲ್ಲಿ ಸೂಕ್ತವಾದ ಆಯ್ಕೆಯ ಮುಂದಿರುವ ಸಂಖ್ಯೆಯನ್ನು ಖಾಲಿ ಜಾಗದಲ್ಲಿ ಭರ್ತಿಮಾಡಿ

| ಕ್ರ ಸ | ಪ್ರಶ್ನೆ | ಆಯ್ಕೆ |
|---|---|---|
| 1 | ವಿಜ್ಞಾನ ಕೇಂದ್ರದಲ್ಲಿ 5 ರಿಂದ 10ನೇ ತರಗತಿ ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಿರುವ ಎಲ್ಲಾ ವಿಜ್ಞಾನದ ಕಲಿಕಾ ಸಾಮಗ್ರಿಗಳು ಅಭ್ಯವಿದೆಯೇ? ಎಲ್ಲಾ ಅಗತ್ಯ ಸಾಮಗ್ರಿಗಳು–1, ಕೆಲವು ಅಗತ್ಯ ಸಾಮಗ್ರಿಗಳು–2, ತಮಗೆ ಅಗತ್ಯವಿಲ್ಲದ ಸಾಮಗ್ರಿಗಳು–3 | |
| 2 | ಭೌತಶಾಸ್ತ್ರ, ಜೀವ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಭೂಗೋಳಕ್ಕೆ ಸಂಬಂಧಿಸಿದ ಪರಿಕರಗಳು ಲಭ್ಯವಾಗಿದೆಯೇ? 90% ಕ್ಕಿಂತ ಹೆಚ್ಚು–1, 60ಕ್ಕಿಂತ ಹೆಚ್ಚು –2, 60% ಕ್ಕಿಂತ ಕಡಿಮೆ–3 | |
| 3 | ಕೇಂದ್ರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಸಾಕಾಗುವಷ್ಟಿದೆಯೇ? ಹೌದು–1, ಇಲ್ಲ–2 | |
| 4 | ಶಿಕ್ಷಕರಿಗೆ ಪ್ರಯೋಗ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | |
| 5 | ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗದಲ್ಲಿ ತೊಡಗಿಕೊಳ್ಳಲು ಅವಕಾಶವಿದೆಯೇ? ವೈಯಕ್ತಿಕವಾಗಿ–1, ಗುಂಪಿನಲ್ಲಿ–2, ಪ್ರಯೋಗ ಮಾಡುವುದನ್ನು ವೀಕ್ಷಣೆ ಮಾಡಲು ಮಾತ್ರ –3 | |
| 6 | ಪ್ರಾತ್ಯಕ್ಷಿಕೆ ಅಥವಾ ಗುಂಪಿನಲ್ಲಿ ಪ್ರಯೋಗ ಮಾಡುವಾಗ ಎಲ್ಲರಿಗೂ ವೀಕ್ಷಣೆ ಮಾಡಲು ಅವಕಾಶವಿದೆಯೇ? ಹೌದು–1, ಇಲ್ಲ–2 | |
| 7 | ವಿದ್ಯಾರ್ಥಿಗಳು ಪ್ರಯೋಗ ಮಾಡುವುದಕ್ಕೆ ಮೊದಲು ನೀಡುವ ಸೂಚನೆಗಳನ್ನು ಆಲಿಸುವರೇ? ಹೌದು–1, ಇಲ್ಲ–2 | |
| 8 | ವಿದ್ಯಾರ್ಥಿಗಳು ಪರಿಕರಗಳ ಪರಿಚಯ ಹೊಂದಿರುವರೇ? ಉತ್ತಮ–1, ಸಾದಾರಣ–2, ಅತೃಪ್ತಿಕರ–3 | |
| 9 | ವಿದ್ಯಾರ್ಥಿಗಳು ಪರಿಕರಗಳನ್ನು ಬಳಸುವ ಕೌಶಲ ಹೊಂದಿರುವಿರೇ? ಉತ್ತಮ–1, ಸಾದಾರಣ–2, ಅತೃಪ್ತಿಕರ–3 | |
| 10 | ವಿದ್ಯಾರ್ಥಿಗಳು ಪ್ರಯೋಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವರೇ? ಉತ್ತಮ–1, ಸಾದಾರಣ–2, ಅತೃಪ್ತಿಕರ–3 | |
| 11 | ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸಬಲ್ಲರೇ? ಉತ್ತಮ–1, ಸಾದಾರಣ–2, ಅತೃಪ್ತಿಕರ–3 | |
| 12 | ಪ್ರಯೋಗ/ಚಟುವಟಿಕೆಗಳ ಮೂಲಕ ಕಂಡುಕೊಂಡ ಒಳನೋಟಗಳನ್ನು ಪರಸ್ಪರ ಹಂಚಿಕೊಳ್ಳಬಲ್ಲರೇ? ಕ್ರಿಯಾಶೀಲವಾಗಿ–1, ನಿಧಾನವಾಗಿ–2, ಹಂಚಿಕೊಳ್ಳುವುದಿಲ್ಲ–3 | |
| 13 | ವಿದ್ಯಾರ್ಥಿಗಳು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವರೇ? ಉತ್ತಮ–1, ಸಾದಾರಣ–2, ಅತೃಪ್ತಿಕರ–3 | |
| 14 | ಅನುಕೂಲಗಾರರು ಮಕ್ಕಳೊಂದಿಗೆ ಸ್ಪಂದಿಸುವ ರೀತಿ: ಅನುಕೂಲಿಸುತ್ತಾರೆ–1, ತಾವೇ ವಿವರಿಸುತ್ತಾರೆ–2, ಪರಿಣಾಮಕಾರಿಯಲ್ಲ3 | |
| 15 | ಇಲಾಖೆಯ ಎಷ್ಟು ಅಧಿಕಾರಿಗಳು ಕೇಂದ್ರಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ/ ಮಾರ್ಗದರ್ಶನ ನೀಡಿರುತ್ತಾರೆ?(ದಾಖಲೆ ವೀಕ್ಷಿಸಿ) | |

# ವಿಜ್ಞಾನ ಕೇಂದ್ರದ ಮೌಲ್ಯಮಾಪನ ಅಧ್ಯಯನ

## ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗಾಗಿ ಪ್ರಶ್ನಾವಳಿ

**ಶಾಲೆಯ ಹೆಸರು ಮತ್ತು ವಿಳಾಸ:**

**ವಿದ್ಯಾರ್ಥಿಯ ಹೆಸರು:**

**ತರಗತಿ**

1) ಈ ವರ್ಷದಲ್ಲಿ ನೀನು ಪ್ರಯೋಗಾಲಯಕ್ಕೆ ಎಷ್ಟು ಬಾರಿ ಭೇಟಿ ನೀಡಿರುವಿರಿ? (ಸಂಖ್ಯೆ ಬರೆಯಿರಿ)
2) ಪ್ರಯೋಗಾಲಯದಲ್ಲಿ ಗುಂಪಿನಲ್ಲಿ ಅಥವಾ ವೈಯಕ್ತಿಕವಾಗಿ ಪ್ರಯೋಗ ಮಾಡಲು ನಿನಗೆ ಎಷ್ಟು ಬಾರಿ ಅವಕಾಶ ಸಿಕ್ಕಿದೆ?
3) ವಿಜ್ಞಾನ ಕೇಂದ್ರದಲ್ಲಿ ಕಲಿಯಲು ನೀನು ಇಷ್ಟ ಪಡುತ್ತೀಯಾ? ಹೌದಾದರೆ ಯಾಕೆ?
4) ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಮೊದಲು ಶಿಕ್ಷಕರು ನಿಮಗೆ ಯಾವ ಮಾಹಿತಿ ನೀಡುತ್ತಾರೆ?
5) ವಿಜ್ಞಾನ ಕೇಂದ್ರದಲ್ಲಿ ಮಾಡುವಂತಹ ಪ್ರಯೋಗಗಳನ್ನು ಶಿಕ್ಷಕರು ತರಗತಿಯಲ್ಲಿ ಮಾಡುತ್ತಾರೆಯೇ? ಶಿಕ್ಷಕರು ಮಾಡಿ–ರುವ ಒಂದು ಪ್ರಯೋಗದ ಹೆಸರು ಹೇಳಬಲ್ಲೆಯಾ?
6) ತರಗತಿಯಲ್ಲಿ ಪಾಠ ಮಾಡುವುದಕ್ಕೆ ಮೊದಲೇ ಕೇಂದ್ರದಲ್ಲಿ ಪ್ರಯೋಗಗಳನ್ನು ಮಾಡುತ್ತಾರೆಯೇ? ಅಥವಾ ನಂತರ?
7) ನೀನು ಪ್ರಯೋಗಾಲಯದಲ್ಲಿ ಬಳಸಿರುವ ಯಾವುದಾದರೂ 4 ಸಲಕರಣೆಗಳನ್ನು ಹೆಸರಿಸು.
8) ಕೇಂದ್ರದಲ್ಲಿ ನೀನು ಗುಂಪಿನಲ್ಲಿ/ ವೈಯಕ್ತಿಕವಾಗಿ ಮಾಡಿರುವ ಯಾವುದಾದರೂ 2 ಪ್ರಯೋಗಗಳನ್ನು ಹೆಸರಿಸು.
9) ಪ್ರಯೋಗಾಲಯದ ಚಟುವಟಿಕೆಗಳಿಂದ ಪ್ರೇರಿತರಾಗಿ ನೀನು ಮಾಡಿರುವ ಯಾವುದಾದರೂ ಪ್ರಯೋಗವನ್ನು ಹೆಸರಿಸು.
10) ವಿಜ್ಞಾನ ಪ್ರಯೋಗಗಳಿಂದ ನಿನ್ನಲ್ಲಿರುವ ಮೂಡನಂಬಿಕೆಗಳು ಬದಲಾಗಿದ್ದರೆ ವಿವರಿಸು.
11) ಪ್ರಯೋಗ ಅಥವಾ ವಿಜ್ಞಾನದಿಂದ ಅರಿತಿರುವ ಅಂಶಗಳನ್ನು ನಿನ್ನ ಜೀವನದಲ್ಲಿ ಅಳವಡಿಸಿರುವ ಬಗ್ಗೆ ತಿಳಿಸು.
12) ಶಿಕ್ಷಕರು ಶಾಲೆಯಲ್ಲಿ ವಾರದ ಯಾವ ದಿನದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಿ ತೋರಿಸುತ್ತಾರೆ?(ವಾರದ ಹೆಸರು ಬರೆಯಿರಿ)
13) ವಿಜ್ಞಾನ ಕೇಂದ್ರದಿಂದ ನಿನಗೇನು ಪ್ರಯೋಜನವಾಗಿದೆ?

# ಅಗಸ್ತ್ಯ ವಿಜ್ಞಾನ ಕೇಂದ್ರ– ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನ

## ಅನುಪಾಲನಾಧಿಕಾರಿಗಳಿಗಾಗಿ ಪ್ರಶ್ನಾವಳಿ

12. ಅಗಸ್ತ್ಯ ವಿಜ್ಞಾನ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ನಿಮಗೆ ಪರಿಚಯವಿದೆಯೇ? ಹೌದು/ ಇಲ್ಲ
13. ಅಗಸ್ತ್ಯ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುತ್ತಿರುವ ಶಿಕ್ಷಕರ ವಿಜ್ಞಾನ ತರಗತಿ ವೀಕ್ಷಣೆ ಮಾಡಿರುವಿರಾ? ಹೌದು/ ಇಲ್ಲ. ಎಷ್ಟು.. .. .. ..
14. ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವ ಎಷ್ಟು ಶಿಕ್ಷಕರಲ್ಲಿ ವಿಜ್ಞಾನ ಕಲಿಕೆಯನ್ನು ಪರಿಣಾಮಕಾರಿಯಾಗಿ ಅನುಕೂಲಿಸುವ ಸಾಮರ್ಥ್ಯ ಇದೆ?.. .. .. ..
15. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ವಿಜ್ಞಾನ ಕೇಂದ್ರ ಸಹಕಾರಿಯಾಗಿದೆಯೇ? ಹೌದು/ ಇಲ್ಲ
16. 10 ಅಂಶಗಳ ಕಾರ್ಯಕ್ರಮದಲ್ಲಿ ವಿಜ್ಞಾನ ಕೇಂದ್ರದ ಸಂಪನ್ಮೂಲವನ್ನು ಯಾವ ರೀತಿ ಬಳಕೆ ಮಾಡಿರುತ್ತಾರೆ?
17. ಮಕ್ಕಳಲ್ಲಿ ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸುತ್ತಿರುವುದರಿಂದ ಆಗಿರುವ ಬದಲಾವಣೆಗಳೇನು?
18. ವಿಜ್ಞಾನ ಕೇಂದ್ರದ ನಿರ್ವಹಣೆಯಲ್ಲಿ ನೀವು ಗಮನಿಸಿರುವ ಧನಾತ್ಮಕ ಅಂಶಗಳಾವುವು
19. ವಿಜ್ಞಾನ ಕೇಂದ್ರ ಕಾರ್ಯಕ್ರಮದಲ್ಲಿ ನೀವು ಗಮನಿಸಿರುವ ಕೊರತೆಗಳೇನು?
20. ವಿಜ್ಞಾನ ಕೇಂದ್ರದ ಭೇಟಿಯಿಂದ ಪ್ರೇರೇಪಿತರಾಗಿ ಶಿಕ್ಷಕರು ಶಾಲೆಯಲ್ಲಿ ತಮ್ಮದೇ ಆದ ಪ್ರಯೋಗಾಲಯ ಅಥವಾ ವಿಜ್ಞಾನ ಕಲಿಕಾ ಸಾಮಗ್ರಿ ಸಿದ್ಧಗೊಳಿಸಿರುವರೇ?
21. ವಿಜ್ಞಾನ ಕೇಂದ್ರದ ಸದ್ಬಳಕೆಗೆ ನೀವು ಶಿಕ್ಷಕರಿಗೆ ಯಾವ ರೀತಿಯ ಮಾರ್ಗದರ್ಶನವನ್ನು ನೀಡಿರುವಿರಿ?
22. ವಿಜ್ಞಾನ ಕೇಂದ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

## ಅಗಸ್ತ್ಯ ವಿಜ್ಞಾನ ಕೇಂದ್ರ– ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನ

### ಅಗಸ್ತ್ಯ ಕೇಂದ್ರದವರಿಗೆ ಸಂದರ್ಶನ ನಮೂನೆ:

ಕಾರ್ಯನಿರ್ವಾಹಕರ ಹೆಸರು: ವಿದ್ಯಾರ್ಹತೆ:

ಸೇವಾನುಭವ:

ಒಟ್ಟು ಸಿಬ್ಬಂದಿ ವರ್ಗ

1) ವೇಳಾಪಟ್ಟಿಗನುಗುಣವಾಗಿ ಶಾಲೆಯಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೇಂದ್ರಕ್ಕೆ ಭೇಟಿ ನೀಡುತ್ತಾರೆಯೇ?
2) ಮಕ್ಕಳು ಪ್ರಯೋಗಗಳಲ್ಲಿ ಹೇಗೆ ಭಾಗವಹಿಸುತ್ತಾರೆ?
3) ಶಿಕ್ಷಕರು ಪ್ರಯೋಗ ಮಾಡಲು ಅವಕಾಶವಿದೆಯೇ?
4) ಇಲಾಖೆಯು ನೀಡುತ್ತಿರುವ ತರಬೇತಿಯ ಪರಿಚಯ ನಿಮಗಿದೆಯೆ?
5) ಕೇಂದ್ರದಲ್ಲಿ ನೀವು ಮಾಡುತ್ತಿರುವ ಪ್ರಯೋಗಗಳಿಗೂ ಆಯಾ ತಿಂಗಳ ಪಾಠ ವಿಷಯಗಳಿಗೂ ಹೊಂದಿಕೆಯಾಗುತ್ತಿದೆಯೇ?
6) ರಜಾ ದಿನಗಳಲ್ಲಿ ಶಿಕ್ಷಕರು ಕೇಂದ್ರಕ್ಕೆ ಭೇಟಿ ನೀಡುತ್ತಾರೆಯೇ?
7) ಮಕ್ಕಳು ಕೇಂದ್ರದಲ್ಲಿ ಭಾಗವಹಿಸುವಾಗ ಅನುಪಾಲನಾಧಿಕಾರಿಗಳು ಭೇಟಿ ನೀಡುತ್ತಾರೆಯೇ?
8) ಸಮಾಲೋಚನಾ ಸಭೆಗಳಲ್ಲಿ ನೀವು ಭಾಗವಹಿಸುವಿರಾ?
9) ನೀವು ಎದುರಿಸುತ್ತಿರುವ ಸಮಸ್ಯೆಗಳೇನು?
10) ಇಲಾಖೆಯ ಅಧಿಕಾರಿಗಳು ಯಾವ ರೀತಿ ನಿಮಗೆ ಸ್ಪಂದಿಸುತ್ತಾರೆ?
11) ಕೇಂದ್ರದಿಂದ ಮಾಡುವ ಇತರ ಕಾರ್ಯಕ್ರಮಗಳಾವುವು?
12) ವಸ್ತುಪ್ರದರ್ಶನದಲ್ಲಿ ಭಾಗವಹಿಸಿರುವ ಶಿಕ್ಷಕರು, ಮಕ್ಕಳು ಮತ್ತು ಸಾರ್ವಜನಿಕರ ಸಂಖ್ಯೆ ಎಷ್ಟು?

### ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಭಾಗವಹಿಸಿರುವ ಶಾಲೆಗಳ ಪಟ್ಟಿ

| Sl. No | Name of the Schools |
|---|---|
| 1 | GHPS Kumbarakoppalu |
| 2 | Grace Higher Primary School Kumbarakoppalu |
| 3 | Sri Mahadeshwara Higher Primary |
| 4 | GHS Ningayyanakere Kumbarakoppalu |
| 5 | Grace High School Kumbarakoppalu |
| 6 | Sri Mahadeshwara High School Kumbarakoppalu |
| 7 | Sri Puttaswamy High School Kumbarakoppalu |

# ಭಾಗ –2

ಎನ್.ಜಿ.ಒ –1

ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ, ಮೈಸೂರು

# ಅ). ಪೆಟ್ಟಿಗೆಯಲ್ಲಿ ಪ್ರಯೋಗಾಲಯ

**ಅಧ್ಯಯನದ ಉದ್ದೇಶಗಳು:**

1) ಅಗಸ್ತ್ಯ ಅಂತರರಾಷ್ಟ್ರೀಯ ಪ್ರತಿಷ್ಠಾನ ಅನುಷ್ಠಾನಗೊಳಿಸಿರುವ ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಕಾರ್ಯ ಚಟುವಟಿಕೆಗಳ ಮೌಲ್ಯಮಾಪನ ಮಾಡುವುದು.
2) ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಚಟುವಟಿಕೆಗಳು ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ವೈಜ್ಞಾನಿಕ ಅರಿವನ್ನು ಮೂಡಿಸುವಲ್ಲಿ ಸಫಲವಾಗಿದೆಯೇ ಎನ್ನುವುದನ್ನು ತಿಳಿಯುವುದು.
3) ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಕಾರ್ಯ ಚಟುವಟಿಕೆಗಳು ಶಿಕ್ಷಕರ ವಿಜ್ಞಾನ ಕಲಿಕೆಯನ್ನು ಅನುಕೂಲಿಸುವಲ್ಲಿ ಬೀರಿರುವ ಪರಿಣಾಮವನ್ನು ತಿಳಿಯುವುದು.
4) ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಕಾರ್ಯ ಚಟುವಟಿಕೆಗಳು ಮಕ್ಕಳ ವಿಜ್ಞಾನ ಕಲಿಕೆಯ ಮೇಲೆ ಬೀರಿರುವ ಪರಿಣಾಮವನ್ನು ತಿಳಿಯುವುದು.
5) ಇಲಾಖೆ ಮತ್ತು ಎನ್.ಜಿ.ಒ.ಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳು ಹೇಗೆ ಅನುಷ್ಠಾನವಾಗುತ್ತಿದೆ ಎನ್ನುವುದನ್ನು ವಿಶ್ಲೇಷಿಸುವುದು.

**ಪೆಟ್ಟಿಗೆಯಲ್ಲಿರುವ ಪ್ರಯೋಗಾಲಯ –ಸ್ಯಾಂಪಲ್**

- ಸರಳ ಯಾದೃಚ್ಛಿಕ ವಿಧಾನದ ಮೂಲಕ ಲಿಬ್ ಬಳಕೆ ಮಾಡುತ್ತಿರುವ ಮೈಸೂರು ಉತ್ತರ ಮತ್ತು ದಕ್ಷಿಣ ವಲಯದ ಒಟ್ಟು 50 ಶಾಲೆಗಳಲ್ಲಿ 25 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.
- ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಬಳಕೆ ಮಾಡುತ್ತಿರುವ ಶಿಕ್ಷಕರು–23
- ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಬಳಕೆ ಮಾಡುತ್ತಿರುವ ತರಗತಿಯ 325 ವಿದ್ಯಾರ್ಥಿಗಳು

**ಸಾಧನಗಳು**

- ತರಗತಿ ವೀಕ್ಷಣಾ ನಮೂನೆ
- ಶಿಕ್ಷಕರಿಗಾಗಿ ಪ್ರಶ್ನಾವಳಿ
- ವಿದ್ಯಾರ್ಥಿಗಳ ವೀಕ್ಷಣಾ ನಮೂನೆ
- ವಿದ್ಯಾರ್ಥಿಗಳಿಗಾಗಿ ಪ್ರಶ್ನಾವಳಿ

**ಮಾಹಿತಿ ಸಂಗ್ರಹಣೆ**

- ಶಾಲೆಗಳಿಗೆ ಭೇಟಿ ನೀಡಿ ಪೆಟ್ಟಿಗೆಯಲ್ಲಿ ಪ್ರಯೋಗಾಲಯ ಕಾರ್ಯಕ್ರಮದ ಕುರಿತು ತರಬೇತಿ ಪಡೆದಿರುವ ಶಿಕ್ಷಕರ ಲಿಬ್ ನಿರ್ವಹಣೆಯನ್ನು ವೀಕ್ಷಣೆ ಮಾಡುವುದು. ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹಿಸುವುದು ಮತ್ತು ವಿದ್ಯಾರ್ಥಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸುವುದು.

**ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:** ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಶ್ಲೇಷಣೆ


# ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

## ಶಿಕ್ಷಕರ ತರಗತಿ ವೀಕ್ಷಣಾ ನಮೂನೆಯ ವಿಶ್ಲೇಷಣೆ

**ಕೋಷ್ಟಕ 28:–**

| ಕ್ರ.ಸಂ | ಪ್ರಶ್ನೆ | ಉತ್ತಮ | | ಸಾಧಾರಣ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 1 | LIB ನಲ್ಲಿರುವ ಪರಿಕರಗಳ ಬಗ್ಗೆ ಶಿಕ್ಷಕರು ಹೊಂದಿರುವ ಪರಿಚಯ: | 16 | 64.0 | 7 | 28.0 | 2 | 8.0 |
| 2 | ಶಿಕ್ಷಕರು ಹೊಂದಿರುವ ಸಾಮಗ್ರಿ ನಿರ್ವಹಿಸುವ ಕೌಶಲ: | 11 | 44.0 | 13 | 52.0 | 1 | 4.0 |
| 3 | ತರಗತಿಯಲ್ಲಿ ಶಿಕ್ಷಕರ ಪಾತ್ರ: ಅನುಕೂಲಿಸುತ್ತಾರೆ–1, ತಾವೇ ವಿವರಿಸುತ್ತಾರೆ–2, ಪರಿಣಾಮಕಾರಿಯಾಗಿಲ್ಲ–3 | 9 | 36.0 | 13 | 52.0 | 3 | 12.0 |
| 4 | ತರಗತಿಯಲ್ಲಿ LIB ನಲ್ಲಿರುವ ಸಾಮಗ್ರಿಗಳನ್ನು ಮಕ್ಕಳು ಸ್ವತ: ಬಳಸುವ ರೀತಿ: | 7 | 28.0 | 15 | 60.0 | 3 | 12.0 |
| 5 | ವಿದ್ಯಾರ್ಥಿಗಳು ಸಕ್ರಿಯವಾಗಿ ತರಗತಿಯಲ್ಲಿ ಭಾಗವಹಿಸುತ್ತಾರೆಯೇ? ಎಲ್ಲರು–1, ಕೆಲವರು–2, ಭಾಗವಹಿಸುವುದಿಲ್ಲ–3 | 11 | 44.0 | 13 | 52.0 | 1 | 4.0 |
| 6 | ಪ್ರಯೋಗ/ಚಟುವಟಿಕೆ ನಿರ್ವಹಿಸಿದ ಬಗ್ಗೆ ದಾಖಲೆಯ ನಿರ್ವಹಣೆ: | 6 | 24.0 | 12 | 48.0 | 7 | 28.0 |

**ಗ್ರಾಫ್13:–**





- ಅಧ್ಯಯನಕಾರರು ತರಗತಿ ವೀಕ್ಷಣೆ ಮಾಡಿರುವ ಸಂದರ್ಭದಲ್ಲಿ 64% ರಷ್ಟು ಶಿಕ್ಷಕರು ಉತ್ತಮವಾಗಿ ಲಿಬ್‌ನಲ್ಲಿರುವ ಪರಿಕರಗಳ ಪರಿಚಯ ಹೊಂದಿರುವುದನ್ನು ಗಮನಿಸಿರುತ್ತಾರೆ. ಉಳಿದಂತೆ 36% ಶಿಕ್ಷಕರಿಗೆ ಪರಿಕರಗಳ ಬಗ್ಗೆ ಇರುವ ಪರಿಚಯ ತೃಪ್ತಿಕರವಾಗಿಲ್ಲ.
- 44% ಶಿಕ್ಷಕರು ಉತ್ತಮವಾಗಿ ಸಾಮಗ್ರಿ ನಿರ್ವಹಿಸುವ ಕೌಶಲ ಹೊಂದಿರುತ್ತಾರೆ. 56% ಶಿಕ್ಷಕರಲ್ಲಿ ಸಾಮಗ್ರಿ ನಿರ್ವಹಿಸುವ ಕೌಶಲ ಅಷ್ಟೊಂದು ಉತ್ತಮವಾಗಿರುವುದಿಲ್ಲ.

- ಕೇವಲ 36% ಶಿಕ್ಷಕರು ಮಾತ್ರ ವಿಜ್ಞಾನ ಕಲಿಕೆಯನ್ನು ಅನುಕೂಲಿಸುತ್ತಾರೆ. ಉಳಿದ ಶಿಕ್ಷಕರಲ್ಲಿ ಅನುಕೂಲನಾ ಸಾಮರ್ಥ್ಯ ಅಷ್ಟೊಂದು ತೃಪ್ತಿಕರವಾಗಿರುವುದಿಲ್ಲ.
- ಕೇವಲ 28% ವಿದ್ಯಾರ್ಥಿಗಳು ಮಾತ್ರ ಸ್ವತ: ಲಿಬ್ ಕಲಿಕಾ ಸಾಮಗ್ರಿ ಬಳಸುವ ಕೌಶಲ ಹೊಂದಿರುತ್ತಾರೆ. ಉಳಿದ ವಿದ್ಯಾರ್ಥಿಗಳಲ್ಲಿ ಲಿಬ್ ಕಲಿಕಾ ಸಾಮಗ್ರಿ ಬಳಸುವ ಕೌಶಲ ಅಷ್ಟೊಂದು ತೃಪ್ತಿಕರವಾಗಿರುವುದಿಲ್ಲ.
- ಕೇವಲ 44% ವಿದ್ಯಾರ್ಥಿಗಳು ಮಾತ್ರ ತರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. ಉಳಿದ ವಿದ್ಯಾರ್ಥಿಗಳ ಭಾಗವಹಿಸುವಿಕೆ ಅಷ್ಟೊಂದು ತೃಪ್ತಿಕರವಾಗಿರುವುದಿಲ್ಲ.
- ಶಾಲೆಯ ಬಾಗಿಲಿಗೆ ನಿರಾಯಾಸವಾಗಿ ಸರಬರಾಜಾಗುತ್ತಿರುವ ಸಿದ್ಧ ಕಲಿಕಾ ಸಾಮಗ್ರಿಗಳ ಸದ್ಬಳಕೆ ಮಾಡುವಲ್ಲಿ ಹೆಚ್ಚಿನ ಶಿಕ್ಷಕರು ತಮ್ಮನ್ನು ತೊಡಗಿಸಿಕೊಳ್ಳದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಅದಕ್ಕೆ ಪೂರಕವಾಗಿ ಮಕ್ಕಳಲ್ಲಿಯೂ ಕಲಿಕೋಪಕರಣಗಳ ಬಳಕೆಯಿಂದ ಬೆಳೆಯಬೇಕಾದ ಕೌಶಲಗಳಾದ ಸಾಮಗ್ರಿ ಬಳಕೆ, ಭಾಗವಹಿಸುವಿಕೆ ಇತ್ಯಾದಿಗಳು ಕಡಿಮೆ ಇರುವುದು ಸ್ಪಷ್ಟವಾಗಿದೆ.

**ಕೋಷ್ಟಕ 29:–**

| ಕ್ರ.ಸಂ | ಪ್ರಶ್ನೆ | ಉತ್ತಮ | | ಸಾಧಾರಣ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 7 | ನಿಮ್ಮ ಶಾಲೆಯಲ್ಲಿ ವಿಜ್ಞಾನ ಪ್ರಯೋಗಾಲಯವಿದೆಯೇ? ಹೌದು–1 ಇಲ್ಲ–2 | 7 | 28.0 | 18 | 72.0 | 0 | 0.0 |
| 8 | ಪ್ರಯೋಗಾಲಯದಲ್ಲಿ ಪಠ್ಯಕ್ಕೆ ಪೂರಕವಾದ ಸಾಮಗ್ರಿ/ಪರಿಕರಗಳು ಲಭ್ಯವಿದೆಯೇ? ಹೆಚ್ಚಿನವು–1, ಕೆಲವು–2, ಇಲ್ಲ–3 | 4 | 16.0 | 17 | 68.0 | 4 | 16.0 |
| 9 | ಪೆಟ್ಟಿಗೆಯಲ್ಲಿ ಪ್ರಯೋಗಾಲಯ (LIB) ಕಾರ್ಯಕ್ರಮದ ಪರಿಚಯ ನಿಮಗಿದೆಯೇ? ಸ್ಪಷ್ಟ–1, ಸ್ವಲ್ಪ ಮಟ್ಟಿಗೆ–2, ಅಸ್ಪಷ್ಟ–3 | 8 | 32.0 | 17 | 68.0 | 0 | 0.0 |
| 10 | LIB ನಲ್ಲಿರುವ ಪ್ರತಿಯೊಂದು ಪರಿಕರದ ಪರಿಚಯ ನಿಮಗಿದೆಯೇ? ಸ್ಪಷ್ಟ–1, ಸ್ವಲ್ಪ ಮಟ್ಟಿಗೆ–2, ಅಸ್ಪಷ್ಟ–3 | 6 | 24.0 | 19 | 76.0 | 0 | 0.0 |

ಗ್ರಾಫ್14:–





- 28% ಶಿಕ್ಷಕರು ತಮ್ಮ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲವಿದೆ ಎನ್ನುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಶಿಕ್ಷಕರು ಧನಾತ್ಮಕವಾಗಿ ಅಭಿಪ್ರಾಯ ನೀಡಿದ್ದರೂ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯದ ಅಸ್ತಿತ್ವ ತೃಪ್ತಿಕರವಾಗಿರುವುದಿಲ್ಲ. 72% ಶಾಲೆಗಳಲ್ಲಿ ಪ್ರಯೋಗಾಲಯದ ಅಸ್ತತ್ವವು ನಿರಾಶಾದಾಯಕವಾಗಿರುವುದನ್ನು ಗಮನಿಸಲಾಗಿದೆ.
- 16% ಶಿಕ್ಷಕರು ತಮ್ಮ ಶಾಲೆಗಳಲ್ಲಿರುವ ವಿಜ್ಞಾನ ಪ್ರಯೋಗಾಲಯದಲ್ಲಿ ಪಠ್ಯಕ್ಕೆ ಪೂರಕವಾದ ಸಾಮಗ್ರಿ/ಪರಿಕರಗಳು ಲಭ್ಯವಿದೆ ಎಂದೂ, 86% ಶಿಕ್ಷಕರು ಕೆಲವೇ ಕೆಲವು ಸಾಮಗ್ರಿಗಳಿರುವುದಾಗಿ ತಿಳಿಸಿರುತ್ತಾರೆ.
- ಲಿಬ್‌ನಲ್ಲಿರುವ ಪ್ರತಿಯೊಂದು ಪರಿಕರದ ಪರಿಚಯವಿರುವ ಶಿಕ್ಷಕರ ಸಂಖ್ಯೆ ಶೇ 24 ಮಾತ್ರ. 76% ಶಿಕ್ಷಕರು ಸ್ವಲ್ಪ ಮಟ್ಟದ ಪರಿಚಯವನ್ನು ಹೊಂದಿರುತ್ತಾರೆ. ಇದಕ್ಕೆ ಶಿಕ್ಷಕರಲ್ಲಿನ ಆಸಕ್ತಿಯ ಕೊರತೆ ಕಾರಣವೇ ಅಥವಾ ಅಗಸ್ತ್ಯ ಸಂಸ್ಥೆಯವರು ನೀಡುತ್ತಿರುವ ತರಬೇತಿಯ ಕೊರತೆ ಕಾರಣವೇ ಎನ್ನುವುದನ್ನು ಗುರುತಿಸಬೇಕಾಗಿದೆ.
- ಶಾಲೆಗಳಲ್ಲಿ ಮಕ್ಕಳು ವಿಜ್ಞಾನವನ್ನು ಅನ್ವೇಷಿಸುವುದರ ಮೂಲಕವೇ ಕಲಿಯಬೇಕಾಗಿದೆ. ಪ್ರಯೋಗಾಲಯಕ್ಕೆ ಸುಸಜ್ಜಿತವಾದ ಕೊಠಡಿ ಲಭ್ಯ ಇಲ್ಲದಿದ್ದರೂ ಕಡಿಮೆ ವೆಚ್ಚ ಮತ್ತು ವೆಚ್ಚರಹಿತ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಈ ಆಸಕ್ತಿಯು ಶಾಲೆಗಳಲ್ಲಿ ಕಂಡುಬಂದಿರುವುದಿಲ್ಲ.
- ಕುವೆಂಪುನಗರ ಮತ್ತು ಅಶೋಕಪುರಂನಂತಹ ಶಾಲೆಗಳಲ್ಲಿ ವಿಜ್ಞಾನದಲ್ಲಿ ಆಸಕ್ತಿ ಇರುವ ವಿಜ್ಞಾನ ಶಿಕ್ಷಕರಿರುವಲ್ಲಿ ಇದರ ಸಿದ್ಧತೆ, ಬಳಕೆ ಮತ್ತು ಪರಿಣಾಮ ಉತ್ತಮವಾಗಿರುತ್ತದೆ.
- ಶಿಕ್ಷಕರಿಗೆ ಥರೋ ತರಬೇತಿ ನೀಡುವ ಅಗತ್ಯವಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

**ಕೋಷ್ಟಕ 30:–**

| ಕ್ರ.ಸಂ | ಪ್ರಶ್ನೆ | ಉತ್ತಮ | | ಸಾಧಾರಣ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 11 | LIB ಬಳಕೆಯ ಬಗ್ಗೆ ನಿಮಗೆ ಸಂಸ್ಥೆಯವರು ನೀಡಿರುವ ತರಬೇತಿ ನಿಮಗೆ ಪಟ್ಟಿಗೆಯಲ್ಲಿರುವ ಎಲ್ಲಾ ಪ್ರಯೋಗಗಳನ್ನು ನಿರ್ವಹಿಸಲು ಸಹಾಯಕವಾಗಿದೆಯೇ? ಎಲ್ಲವನ್ನೂ–1, ಕೆಲವನ್ನು–2, ಸಹಾಯಕವಾಗಿಲ್ಲ–3 | 3 | 12.0 | 19 | 76.0 | 3 | 12.0 |
| 12 | ಪಟ್ಟಿಗೆಯಲ್ಲಿರುವ ಮಾರ್ಗದರ್ಶಿ ಸಹಾಯದಿಂದ ನೀವೇ ಸ್ವತ: ಪ್ರಯೋಗಗಳನ್ನು ಕೈಗೊಳ್ಳಬಹುದೇ? ಎಲ್ಲವನ್ನೂ–1, ಕೆಲವನ್ನು–2, ಸಹಾಯಕವಾಗಿಲ್ಲ–3 | 6 | 24.0 | 19 | 76.0 | 0 | 0.0 |
| 13 | LIB ನಲ್ಲಿರುವ ಎಲ್ಲಾ ಸಾಮಗ್ರಿಗಳನ್ನು ಬಳಸಲಾಗುತ್ತಿದೆಯೇ? ಎಲ್ಲವನ್ನೂ–1, ಕೆಲವನ್ನು–2, ಬಳಸುತ್ತಿಲ್ಲ–3 | 9 | 36.0 | 16 | 64.0 | 0 | 0.0 |
| 14 | LIB ಅನಗತ್ಯ ಸಾಮಗ್ರಿಗಳನ್ನು ಒಳಗೊಂಡಿದೆಯೇ? ಕೆಲವು –1, ಹೆಚ್ಚಿನವು –2, ಎಲ್ಲಾ–3 | 22 | 88.0 | 2 | 8.0 | 1 | 4.0 |
| 15 | LIB ನಲ್ಲಿರುವ ಸಾಮಗ್ರಿಗಳು ಮಕ್ಕಳ ಸಂಖ್ಯೆಗನುಗುಣವಾಗಿದೆಯೇ? ವ್ಯಯಕ್ತಿಕವಾಗಿ ಮಾಡಲು–1, ಗುಂಪಿನಲ್ಲಿ ಮಾಡಲು–2, ಪ್ರಾತ್ಯಕ್ಷಿಕೆ ಮಾಡಲು ಮಾತ್ರ–3 | 2 | 8.0 | 19 | 76.0 | 4 | 16.0 |

**ಗ್ರಾಫ್15:–**




- LIB ಬಳಕೆಯ ಬಗ್ಗೆ ಶಿಕ್ಷಕರಿಗೆ ಸಂಸ್ಥೆಯವರು ನೀಡಿರುವ ತರಬೇತಿಯು ಪಟ್ಟಿಗೆಯಲ್ಲಿರುವ ಎಲ್ಲಾ ಪ್ರಯೋಗಗಳನ್ನು ನಿರ್ವಹಿಸಲು ಸಹಾಯಕವಾಗಿದೆ ಎಂದು 12% ಶಿಕ್ಷಕರು ತಿಳಿಸಿರುತ್ತಾರೆ. 76% ಶಿಕ್ಷಕರು ಕೆಲವು ಸಾಮಗ್ರಿಗಳನ್ನು ಬಳಸಲು ಸಹಾಯಕವಾಗಿದೆ ಎಂದೂ, 12% ಶಿಕ್ಷಕರು ಸಹಾಯಕವಾಗಿಲ್ಲ ಎಂದು ಪ್ರತಿಕ್ರಿಯಿಸಿರುತ್ತಾರೆ.
- ಮ್ಯಾನುವಲ್ ಬಳಸಿ ಸ್ವತ; ಎಲ್ಲಾ ಪ್ರಯೋಗಗಳನ್ನು ಕೈಗೊಳ್ಳುವ ಆತ್ಮ ವಿಶ್ವಾಸವನ್ನು ಹೆಚ್ಚಿನ ಶಿಕ್ಷಕರು ಹೊಂದಿರುವುದಿಲ್ಲ. ಸಾಮಗ್ರಿ ಬಳಕೆ ಬಗ್ಗೆ ಕೆಲವು ಶಿಕ್ಷಕರು ಹಿಂಜರಿಯುತ್ತಿರುವುದನ್ನು ವೀಕ್ಷಣೆಯ ಅವಧಿಯಲ್ಲಿ


ಗಮನಿಸಲಾಗಿದೆ. 36% ಶಿಕ್ಷಕರು ಮಾತ್ರ ಎಲ್ಲಾ ಕಲಿಕೋಪಕರಣಗಳನ್ನು ಬಳಸುವ ಆತ್ಮವಿಶ್ವಾಸ ಹೊಂದಿರುತ್ತಾರೆ. 64% ಶಿಕ್ಷಕರಲ್ಲಿ ಆತ್ಮವಿಶ್ವಾಸ ಬೆಳೆಯದಿರುವುದನ್ನು ಕಾಣಬಹುದಾಗಿದೆ.

- ಕಲಿಕೆಗೆ ಸಂಬಂಧಿಸಿದಂತೆ ಹೆಚ್ಚಿನ ಕಲಿಕಾ ಸಾಮಗ್ರಿಗಳು ಕಲಿಕಾಂಶಕ್ಕೆ ಪೂರಕವಾಗಿವೆ ಎಂದು ಹೆಚ್ಚಿನ ಶಿಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

**ಕೋಷ್ಟಕ 31:–**

| ಕ್ರ.ಸಂ | ಪ್ರಶ್ನೆ | ಉತ್ತಮ/ಹೌದು | | ಸಾಧಾರಣ/ಇಲ್ಲ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 16 | LIB ನಲ್ಲಿ ವಿಜ್ಞಾನದ ಎಲ್ಲಾ ವಿಭಾಗಗಳಿಗೂ (ಭೌತ, ರಾಸಾಯನಿಕ, ಜೀವ ಶಾಸ್ತ್ರ, ಭೂಗೋಳ) ಸಂಬಂಧಿಸಿದ ಸಾಮಗ್ರಿಗಳು ಲಭ್ಯವಿದೆಯೇ? ಹೆಚ್ಚಿನವು–1, ಕೆಲವು–2, ಇಲ್ಲ –3 | 11 | 44.0 | 14 | 56.0 | 0 | 0.0 |
| 17 | LIB ಸರಬರಾಜಾದ 10 ದಿನಗಳ ಕಾಲಾವಕಾಶದೊಳಗೆ ಎಲ್ಲಾ ಸಾಮಗ್ರಿಗಳ ಬಳಕೆ ಸಾಧ್ಯವೇ? ಹೌದು–1 ಇಲ್ಲ–2 | 10 | 40.0 | 15 | 60.0 | 0 | 0.0 |
| 18 | LIB ನ್ನು ಸಮರ್ಪಕವಾಗಿ ಶಾಲಾವಧಿಯಲ್ಲಿ ಬಳಸಲು ಸಾಧ್ಯವಾಗುತ್ತಿದೆಯೇ? ಹೌದು–1 ಇಲ್ಲ–2 | 20 | 80.0 | 5 | 20.0 | 0 | 0.0 |
| 19 | LIB ತಿಂಗಳ ಪಾಠ ಹಂಚಿಕೆಗೆ ಅನುಗುಣವಾಗಿ ಲಭ್ಯವಿದೆಯೇ? ಹೌದು–1 ಇಲ್ಲ–2 | 2 | 8.0 | 23 | 92.0 | 0 | 0.0 |
| 20 | LIB ಶಾಲಾ ಪ್ರಯೋಗಾಲಯದಲ್ಲಿ ಇಲ್ಲದ ಪರಿಕರಗಳನ್ನು ಒಳಗೊಂಡಿದೆಯೇ? ಹೆಚ್ಚಿನವು–1, ಕೆಲವು–2, ಇಲ್ಲ–3 | 9 | 36.0 | 12 | 48.0 | 4 | 16.0 |

**ಗ್ರಾಫ್16:–**





- LIB ನಲ್ಲಿ ವಿಜ್ಞಾನದ ಎಲ್ಲಾ ವಿಭಾಗಗಳಿಗೂ (ಭೌತ, ರಾಸಾಯನಿಕ, ಜೀವ ಶಾಸ್ತ್ರ, ಭೂಗೋಳ) ಸಂಬಂಧಿಸಿದ ಸಾಕಷ್ಟು ಸಾಮಗ್ರಿಗಳಿವೆ ಎಂದು ಹೆಚ್ಚಿನ ಶಿಕ್ಷಕರು ಅಭಿಪ್ರಾಯಪಟ್ಟಿರುತ್ತಾರೆ. ಹೆಚ್ಚಿನ ಶಿಕ್ಷಕರು ಕೆಲವು ಸಾಮಗ್ರಿಗಳಿವೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ. ಇಲ್ಲಿ ಎರಡು ಅಂಶಗಳನ್ನು ಗಮನಿಸಬಹುದು. ಒಂದು ಲಿಬ್‌ನಲ್ಲಿ ಇನ್ನಷ್ಟು ಅಗತ್ಯ ಸಾಮಗ್ರಿಗಳನ್ನು ಸೇರ್ಪಡೆ ಮಾಡುವುದು. ಇಲ್ಲವೆ ಲಭ್ಯ ಸಾಮಗ್ರಿಗಳಿದ್ದರೂ ಅದನ್ನು ಪರಿಕಲ್ಪನೆಗೆ ಪೂರಕವಾಗಿ ಬಳಸುವ ಬಗ್ಗೆ ಶಿಕ್ಷಕರಿಗಿರುವ ಅರಿವಿನ ಕೊರತೆಯನ್ನು ನೀಗಿಸಬೇಕಾಗಿದೆ.

- ಒಂದು ಶಾಲೆಗೆ ಲಿಬ್ ಬಳಕೆ ಮಾಡಲು ನೀಡಿರುವ 10 ದಿನಗಳ ಕಾಲಾವಕಾಶವು ಶಿಕ್ಷಕರಿಗೆ ಸಾಕಾಗುತ್ತಿಲ್ಲ. ಈ ಅವಧಿಯನ್ನು ವಿಸ್ತರಿಸಬೇಕಾಗಿದೆ ಎನ್ನುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- LIB ನ್ನು ಸಮರ್ಪಕವಾಗಿ ಶಾಲಾವಧಿಯಲ್ಲಿ ಬಳಸಲು ಸಾಧ್ಯವಾಗುತ್ತಿದೆ ಎಂದು 80% ಶೇಕಡಾ ಶಿಕ್ಷಕರು ಅಭಿಪ್ರಾಯ ನೀಡಿರುತ್ತಾರೆ. ಆದರೆ ವಾಸ್ತವವಾಗಿ ಕೆಲವೇ ಕೆಲವು ಶಿಕ್ಷಕರನ್ನು ಹೊರತುಪಡಿಸಿದರೆ ಉಳಿದ ಶಾಲೆಗಳಲ್ಲಿ ಇದು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿಲ್ಲ.
- LIB ತಿಂಗಳ ಪಾಠ ಹಂಚಿಕೆಗೆ ಅನುಗುಣವಾಗಿಲ್ಲ ಎನ್ನುವುದನ್ನು 92% ಶಿಕ್ಷಕರು ಒಪ್ಪಿರುತ್ತಾರೆ. ತಿಂಗಳ ಪಾಠಕ್ಕನುಗುಣವಾಗಿ ಲಿಬ್‌ಅನ್ನು ಅಣಿಗೊಳಿಸಬೇಕಾದ ಅಗತ್ಯತೆ ಇದೆ.
- LIB ಶಾಲಾ ಪ್ರಯೋಗಾಲಯದಲ್ಲಿ ಇಲ್ಲದ ಪರಿಕರಗಳನ್ನು ಒಳಗೊಂಡಿರುವುದನ್ನು ಶಿಕ್ಷಕರು ಮನಗಂಡಿರುತ್ತಾರೆ.

**ಕೋಷ್ಟಕ 32:–**

| ಕ್ರ.ಸಂ | ಪ್ರಶ್ನೆ | ಉತ್ತಮ | | ಸಾಧಾರಣ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 21 | LIB ಚಟುವಟಿಕೆಗಳು ಪಠ್ಯಕ್ಕೆ ಪೂರಕವಾಗಿದೆಯೇ? ಎಲ್ಲಾ–1, ಹೆಚ್ಚಿನವು –2, ಕೆಲವು–3 | 9 | 36.0 | 13 | 52.0 | 3 | 12.0 |
| 22 | LIB ಸ್ವಕಲಿಕೆ ಹಾಗೂ ಸಂತಸದಾಯಕ ಕಲಿಕೆಯನ್ನುಂಟುಮಾಡುತ್ತಿದೆಯೇ? ಹೌದು–1 ಇಲ್ಲ–2 | 25 | 100.0 | 0 | 0.0 | 0 | 0.0 |
| 23 | LIB ವಿಜ್ಞಾನ ಕಲಿಕೆಗೆ ಅನುಕೂಲಿಸಿ, ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತಿದೆಯೇ? ಹೌದು–1 ಇಲ್ಲ–2 | 25 | 100.0 | 0 | 0.0 | 0 | 0.0 |
| 24 | ಮಕ್ಕಳು ಪ್ರಯೋಗಗಳನ್ನು ವೀಕ್ಷಿಸಿ ಪ್ರಶ್ನಿಸುವ ಕೌಶಲ್ಯ ಹೆಚ್ಚಾಗಿದೆಯೇ? ಹೌದು–1, ಸ್ವಲ್ಪ ಮಟ್ಟಿಗೆ–2, ಇಲ್ಲ–3 | 18 | 72.0 | 7 | 28.0 | 0 | 0.0 |
| 25 | LIB ಬಳಕೆಯ ಬಗ್ಗೆ ಸಂಸ್ಥೆಯವರಿಂದ ಸೂಕ್ತ ಮಾರ್ಗದರ್ಶನ ದೊರಕುತ್ತಿದೆಯೇ? ಅಗತ್ಯವಿದ್ದಷ್ಟು–1, ಪರಿಚಯಾತ್ಮಕ–2, ತರಬೇತಿಯೇ ಇಲ್ಲ–3 | 9 | 36.0 | 13 | 52.0 | 3 | 12.0 |

**ಗ್ರಾಫ್17:–**




- LIB ನಲ್ಲಿರುವ ಹೆಚ್ಚಿನ ಚಟುವಟಿಕೆಗಳು ಪಠ್ಯಕ್ಕೆ ಪೂರಕವಾಗಿದೆ ಎಂದು ಹೆಚ್ಚಿನ ಶಿಕ್ಷಕರು ತಿಳಿಸಿರುತ್ತಾರೆ.
- LIB ಸ್ವಕಲಿಕೆ ಹಾಗೂ ಸಂತಸದಾಯಕ ಕಲಿಕೆಯನ್ನುಂಟುಮಾಡುತ್ತಿದೆ ಎಂದೂ, LIB ವಿಜ್ಞಾನ ಕಲಿಕೆಯನ್ನು ಅನುಕೂಲಿಸಿ, ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತಿದೆ ಎಂದು ಎಲ್ಲಾ ಶಿಕ್ಷಕರು ಪ್ರತಿಕ್ರಿಯಿಸಿರುತ್ತಾರೆ. ಇದು ಒಂದು ಧನಾತ್ಮಕವಾದ ಅಂಶವಾಗಿದೆ.
- ಮಕ್ಕಳು ಪ್ರಯೋಗಗಳನ್ನು ವೀಕ್ಷಿಸಿ ಪ್ರಶ್ನಿಸುವ ಕೌಶಲ್ಯ ಹೆಚ್ಚಾಗಿದೆ ಎಂದು ಕೆಲವು ಶಿಕ್ಷಕರು ಅಭಿಪ್ರಾಯ ನೀಡಿರುತ್ತಾರೆ.
- LIB ಬಳಕೆಯ ಬಗ್ಗೆ ಸಂಸ್ಥೆಯವರಿಂದ ಇನ್ನೂ ಹೆಚ್ಚಿನ ಮಾರ್ಗದರ್ಶನವನ್ನು ಶೀಕ್ಷಕರು ಅಪೇಕ್ಷೆ ಪಡುತ್ತಿದ್ದಾರೆ. ಸಾಂಪ್ರದಾಯಿಕ ಬೋಧನೆಗೆ ಒಗ್ಗಿರುವ ಮತ್ತು ವಿಜ್ಞಾನದ ಕಲಿಕಾ ಸಾಮಗ್ರಿಗಳ ಕುರಿತ ಫೋಬಿಯಾ ಹೊಂದಿರುವ ಶಿಕ್ಷಕರಲ್ಲಿ ಸಾಮಗ್ರಿ ಬಳಕೆಯ ಬಗ್ಗೆ ನುರಿತ ತರಬೇತಿಯನ್ನು ನೀಡಬೇಕು ಎಂದು ಅಧ್ಯಯನದಿಂದ ತಿಳಿದು ಬಂದಿದೆ.

**ಕೋಷ್ಟಕ 33:–**

| ಕ್ರ.ಸಂ | ಪ್ರಶ್ನೆ | ಉತ್ತಮ | | ಸಾಧಾರಣ | | ಅತೃಪ್ತಿಕರ | |
|---|---|---|---|---|---|---|---|
| | | ಸಂ | ಶೇ | ಸಂ | ಶೇ | ಸಂ | ಶೇ |
| 26 | ಪೆಟ್ಟಿಗೆಯಲ್ಲಿನ ಪ್ರಯೋಗಗಳನ್ನು ಕಳೆದ ಸಾಲಿನಲ್ಲಿ ಮಾಡಿರುವಿರಾ? ಹೆಚ್ಚಿನವು–1, ಕೆಲವು–2, ಇಲ್ಲ–3 | 1 | 4.0 | 16 | 64.0 | 8 | 32.0 |
| 27 | ಪೆಟ್ಟಿಗೆಯಲ್ಲಿನ ಪರಿಕರಗಳು ಹೊಡೆದುಹೋದರೆ/ಹಾಳಾದರೆ ಸಂಸ್ಥೆಯವರು ಕ್ರಮ ಕೈಗೊಳ್ಳುವರೇ? ಹೌದು–1 ಇಲ್ಲ–2 | 4 | 16.0 | 21 | 84.0 | 0 | 0.0 |
| 28 | ಶಾಲೆಯಲ್ಲಿ ವಿಜ್ಞಾನ ಬೋಧಿಸುವ ಶಿಕ್ಷಕರಿಗೆಲ್ಲಾ LIB ತರಬೇತಿ ಆಗಿದೆಯೇ? ಹೌದು–1 ಇಲ್ಲ–2 | 12 | 48.0 | 13 | 52.0 | 0 | 0.0 |
| 29 | ಇತರ ವಿಜ್ಞಾನ ಬೋಧಿಸುವ ಶಿಕ್ಷಕರು LIB ಬಳಸುತ್ತಾರೆಯೇ? ಹೌದು–1 ಇಲ್ಲ–2 | 16 | 64.0 | 9 | 36.0 | 0 | 0.0 |
| 30 | ವಿಜ್ಞಾನ ಬೋಧಿಸುವ ಇತರ ಶಿಕ್ಷಕರೊಂದಿಗೆ ನೀವು ವಿಚಾರ ವಿನಿಮಯ ಮಾಡಿಕೊಂಡಿರುವಿರಾ? ಹೌದು–1 ಇಲ್ಲ–2 | 23 | 92.0 | 1 | 4.0 | 1 | 4.0 |
| 31 | LIB ನ ಬಗ್ಗೆ ಹಿಮ್ಮಾಹಿತಿಯನ್ನು ಹೇಗೆ ನೀಡುತ್ತಿರುವಿರಿ? 10 ದಿನಗಳಿಗೊಮ್ಮೆ–1, ತಿಂಗಳಿಗೊಮ್ಮೆ–2, ನೀಡುತ್ತಿಲ್ಲ–3 | 19 | 76.0 | 3 | 12.0 | 3 | 12.0 |
| 32 | ಹತ್ತು ಅಂಶದ ಕಾರ್ಯಕ್ರಮದಲ್ಲಿರುವ ಸರಳ ಪ್ರಯೋಗದ ಚಟುವಟಿಕೆಗಳಿಗೆ ಪೆಟ್ಟಿಗೆಯಲ್ಲಿನ ಪ್ರಯೋಗಗಳನ್ನು ಬಳಸಿರುವಿರಾ? ವಾರಕ್ಕೊಮ್ಮೆ ಎಲ್ಲಾ ಮಕ್ಕಳಿಗೂ ವೀಕ್ಷಣೆಗೆ ಅವಕಾಶ–1, ವಿಜ್ಞಾನ ತರಗತಿಯಲ್ಲಿ ಮಾತ್ರ–2, ಮಾಡುತ್ತಿಲ್ಲ–3 | 19 | 76.0 | 5 | 20.0 | 1 | 4.0 |

**ಗ್ರಾಫ್18:–**




- ಕೆಲವೇ ಕೆಲವು ಶಿಕ್ಷಕರು ಮಾತ್ರ ಹಿಂದಿನ ಸಾಲಿನಲ್ಲಿ ಅಂದರೆ ಲಿಬ್ ಸರಬರಾಜಾಗದೆ ಇರುವಾಗಲೂ ಲಿಬ್‌ನಲ್ಲಿನ ಪ್ರಯೋಗಗಳನ್ನು ಮಾಡಿದ್ದೇವೆ ಎಂದು ತಿಳಿಸಿರುತ್ತಾರೆ. ಹೆಚ್ಚಿನ ಶಿಕ್ಷಕರು ಕೆಲವೇ ಕೆಲವು ಪ್ರಯೋಗಗಳನ್ನು ಮಾಡಿರುವುದಾಗಿ ತಿಳಿಸಿರುತ್ತಾರೆ.
- ಪೆಟ್ಟಿಗೆಯಲ್ಲಿನ ಪರಿಕರಗಳು ಒಡೆದುಹೋದರೆ/ಹಾಳಾದರೆ ಸಂಸ್ಥೆಯವರು ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ ಎಂದು ಹೆಚ್ಚಿನ ಶಿಕ್ಷಕರು ಸೂಚಿಸಿದ್ದಾರೆ. ಕೆಲವು ಶಿಕ್ಷಕರು ಮಾತ್ರ ಹೌದು ಎಂದು ಒಪ್ಪಿರುತ್ತಾರೆ. ಬಹುಶ: ಸಾಮಗ್ರಿಗಳು ತೀರಾ ಹಾಳಾಗಿರುವ ಸಂದರ್ಭದಲ್ಲಿ ಸಂಸ್ಥೆಯವರು ಹಿಮ್ಮಾಹಿತಿ ನೀಡಿರಬಹುದು. ಈ ಅಂಶವನ್ನು ಸಾಧನ ಸಾಮಗ್ರಿ ತಯಾರಿಸುವ ಸಂದರ್ಭದಲ್ಲಿ ಶಿಕ್ಷಕರು ವ್ಯಕ್ತಪಡಿಸಿರುತ್ತಾರೆ. ಸಾಮಗ್ರಿ ಹಾಳಾಗಿದ್ದರೆ ಸಾಮಗ್ರಿ ಮೇಲೆ ಯಾವುದೇ ಫೈನ್ ತೆಗೆದುಕೊಂಡಿರುವುದಿಲ್ಲ. ಈ ಸಂಬಂಧ ಶಿಕ್ಷಕರು ಯಾವುದೇ ಭಯವನ್ನು ಹೊಂದದೆ ಮುಕ್ತವಾಗಿ ಬಳಸುತ್ತಿರುವುದನ್ನು ಕಾಣಬಹುದಾಗಿದೆ.
- ಶಾಲೆಯಲ್ಲಿ ವಿಜ್ಞಾನ ಬೋಧಿಸುವ ಶಿಕ್ಷಕರಿಗೆಲ್ಲಾ LIB ತರಬೇತಿ ಆಗಿದೆ, ಆದರೆ ಅದು ಪರಿಪೂರ್ಣವಾಗಿ ಆಗಿರುವುದಿಲ್ಲ.
- ಇತರ ವಿಜ್ಞಾನ ಬೋಧಿಸುವ ಶಿಕ್ಷಕರು LIB ಬಳಸುತ್ತಾರೆ ಮತ್ತು ತರಬೇತಿಯಾಗಿರುವ ಶಿಕ್ಷಕರು ವಿಜ್ಞಾನ ಬೋಧಿಸುವ ಇತರ ಶಿಕ್ಷಕರೊಂದಿಗೆ ವಿಚಾರ ವಿನಿಮಯ ಮಾಡಿರುವುದಾಗಿ ತಿಳಿಸಿರುತ್ತಾರೆ. ಇದು ಒಂದು ಧನಾತ್ಮಕ ಅಂಶ ಎಂದು ಹೇಳಬಹುದು.
- LIB ನ ಬಗ್ಗೆ ಹಿಮ್ಮಾಹಿತಿಯನ್ನು 10 ರಿಂದ 30 ದಿನಗಳಿಗೊಮ್ಮೆ ಶಿಕ್ಷಕರು ನೀಡುತ್ತಿದ್ದಾರೆ.
- ಹತ್ತು ಅಂಶದ ಕಾರ್ಯಕ್ರಮದಲ್ಲಿರುವ ಸರಳ ಪ್ರಯೋಗದ ಚಟುವಟಿಕೆಗಳಿಗೆ ಪೆಟ್ಟಿಗೆಯಲ್ಲಿನ ಪ್ರಯೋಗಗಳನ್ನು ಉತ್ತಮವಾಗಿ ಬಳಕೆ ಮಾಡಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

**ಪ್ರಶ್ನೆ 33:**

**ಕೋಷ್ಠಕ 34:–**

| 33 | ಪರಿಕಲ್ಪನೆಯ ಕಲಿಕೆ ಮುಗಿದ ನಂತರ ಸಂಬಂಧಿಸಿದ LIB ಸರಬರಾಜಾದರೆ ಹೇಗೆ ಬಳಸಿಕೊಳ್ಳುವಿರಿ? | ಸಂ | ಶೇ |
|---|---|---|---|
| ಅ | ಪುನರ್ಬಲನ ಚಟುವಟಿಕೆಯಾಗಿ | 13 | 48.1 |
| ಆ | ಪ್ರಯೋಗ ಮಾಡುತ್ತೇವೆ/ಬಿಡುವಿನ ವೇಳೆಯಲ್ಲಿ ಬಳಕೆ/ಸಾಮಗ್ರಿ ಸ್ಪರ್ಷಕ್ಕೆ ಅವಕಾಶ/ವಾರಕ್ಕೊಂದು ಪ್ರಯೋಗ–ಒಂದೊಂದು ರೀತಿಯಲ್ಲಿ ಬಳಕೆ | 8 | 29.6 |
| ಇ | ಅಸಮರ್ಪಕ ಉತ್ತರ | 6 | 22.2 |

- ವಿಜ್ಞಾನ ಪಾಠದಲ್ಲಿನ ಪರಿಕಲ್ಪನೆಯ ಕಲಿಕೆ ಮುಗಿದ ನಂತರ ಸಂಬಂಧಿಸಿದ LIB ಸರಬರಾಜಾದರೆ ಶಿಕ್ಷಕರು ಪುನರ್ಬಲನಕ್ಕಾಗಿ ಬಳಸುವುದಾಗಿಯೂ ಮತ್ತು ಒಂದಲ್ಲ ಒಂದು ರೀತಿಯಲ್ಲಿ ಮಕ್ಕಳ ಕಲಿಕೆಗಾಗಿ ಬಳಸುವುದಾಗಿ ತಿಳಿಸಿರುತ್ತಾರೆ. ಕೆಲವರಿಗೆ ಅಸ್ಪಷ್ಟತೆ ಇದೆ. ಇಂತಹ ಸಂದರ್ಭದಲ್ಲಿ ಸಂಪನ್ಮೂಲ ವ್ಯರ್ಥವಾಗುತ್ತದೆ. ಈ ಅಂಶವನ್ನು ಸಂಸ್ಥೆಯವರು ಗುಣಾತ್ಮಕ ಹಿಮ್ಮಾಹಿತಿಯಾಗಿ ಸ್ವೀಕರಿಸಿ ಈ ನಿಟ್ಟಿನಲ್ಲಿ ಸುಧಾರಣೆಯನ್ನು ಮಾಡಬೇಕಾಗಿದೆ.

**ಪ್ರಶ್ನೆ 34:**

**ಕೋಷ್ಠಕ 35:–**

| 34 | ಪರಿಕಲ್ಪನೆ ಕಲಿಕೆಗೆ ಮೊದಲೇ LIB ಸರಬರಾಜಾದರೆ ಹೇಗೆ ಬಳಸಿಕೊಳ್ಳುವಿರಿ? | ಸಂ | ಶೇ |
|---|---|---|---|
| ಅ | ಪೆಟ್ಟಿಗೆ ಸರಬರಾಜಾದಾಗ ಪ್ರಯೋಗ ಮಾಡಿ ಪರಿಕಲ್ಪನೆ ಬಂದಾಗ ಪುನರ್ಮನನ. | 14 | 53.8 |
| ಆ | ಒಂದೊಂದು ರೀತಿಯಲ್ಲಿ ಬಳಕೆ | 4 | 15.4 |
| ಇ | ಅಸಮರ್ಪಕ ಉತ್ತರ | 8 | 30.8 |

- ಪರಿಕಲ್ಪನೆ ಕಲಿಕೆಗೆ ಮೊದಲೇ LIB ಸರಬರಾಜಾದರೆ ಆ ಸಂರ್ಭದಲ್ಲಿ ಪ್ರಯೋಗ ಮಾಡಿ ಪಾಠದ ಸಂದರ್ಭದಲ್ಲಿ ಪುನರ್ಮನನ ಮಾಡುತ್ತಿದ್ದಾರೆ. 30% ಶಿಕ್ಷಕರು ಈ ಬಗ್ಗೆ ಸ್ಪಷ್ಟತೆ ಹೊಂದಿಲ್ಲ. ಇಲ್ಲಿಯೂ ಸಂಪನ್ಮೂಲ ವ್ಯರ್ಥವಾಗುತ್ತಿರುವುದು ಸ್ಪಷ್ಟವಾಗುತ್ತದೆ.

**ಪ್ರಶ್ನೆ 35:**

**ಕೋಷ್ಟಕ 36:–**

| 35 | LIB ಬಳಕೆಯಿಂದ ನಿಮ್ಮ ತರಗತಿ ಅನುಕೂಲಿಸುವಿಕೆಯಲ್ಲಿ ಆಗಿರುವ ಬದಲಾವಣೆಗಳೇನು? | ಸಂ | ಶೇ |
|---|---|---|---|
| ಅ | ವಿಜ್ಞಾನದಲ್ಲಿ ಆಸಕ್ತಿ/ಕುತೂಹಲ/ಸ್ವತ: ಪ್ರಯೋಗ ಮಾಡುವುದು/ | 10 | 29.4 |
| ಆ | ಸ್ಮರಣಾ ಶಕ್ತಿ ಹೆಚ್ಚಾಗಿದೆ/ಮೂಢನಂಬಿಕೆ ಕಡಿಮೆಯಾಗಿದೆ/ಪ್ರಶ್ನಿಸುವಿಕೆ ಹೆಚ್ಚಾಗಿದೆ. | 6 | 17.6 |
| ಇ | ಸ್ವತ: ಪ್ರಯೋಗ ಮಾಡುತ್ತಾರೆ. | 6 | 17.6 |
| ಈ | ಇತರೆ ಪೂರಕ ಉತ್ತರ | 9 | 26.5 |
| ಉ | ಅಸಮರ್ಪಕ ಉತ್ತರ | 3 | 8.8 |

- LIB ಬಳಕೆಯಿಂದ ನಿಮ್ಮ ತರಗತಿ ಅನುಕೂಲಿಸುವಿಕೆಯಲ್ಲಿ ಆಗಿರುವ ಅಂದರೆ ತಮ್ಮಲ್ಲಾಗಿರುವ ಬದಲಾವಣೆಗಳನ್ನು ಶಿಕ್ಷಕರು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಅಂದರೆ ಸ್ವಾವಲೋಕನ ಮಾಡುವ ಅಭ್ಯಾಸ ತುಂಬಾ ಕಡಿಮೆ ಇರುವುದನ್ನು ಗಮನಿಸಬಹುದು.
- ಶಿಕ್ಷಕರು ಲಿಬ್ ಬಳಕೆಯ ಪರಿಣಾಮವನ್ನು ಮಕ್ಕಳಲ್ಲಾಗಿರುವ ಬದಲಾವಣೆಯ ದೃಷ್ಟಿಕೋನದಿಂದ ವಿವರಿಸಿರುವುದು ಮೇಲಿನ ಕೋಷ್ಠಕದಿಂದ ಸ್ಪಷ್ಟವಾಗುತ್ತದೆ

**ಪ್ರಶ್ನೆ 36:**

**ಕೋಷ್ಟಕ 37:–**

| 36 | LIB ಬಳಕೆಯಿಂದ ವಿದ್ಯಾರ್ಥಿಗಳಲ್ಲಾಗಿರುವ ಬದಲಾವಣೆಗಳೇನು? | ಸಂ | ಶೇ |
|---|---|---|---|
| ಅ | ವೈಜ್ಞಾನಿಕ ಮನೋಭಾವ | 6 | 15.4 |
| ಆ | ಆಸಕ್ತಿ/ಕುತೂಹಲ | 10 | 25.6 |
| ಇ | ಕಲಿತಿರುವುದನ್ನು ನೆನಪಿನಲ್ಲಿಡುವ ಕೌಶಲ | 5 | 12.8 |
| ಈ | ಸ್ವಕಲಿಕೆ/ ಸಂತಸ ಕಲಿಕೆ/ ಆಸಕ್ತಿ ಹೆಚ್ಚಾಗಿದೆ. | 10 | 25.6 |
| ಉ | ವಿವಿಧ ರೀತಿ ಪರಿಣಾಮ(ಮಾತನಾಡುವ ಕೌಶಲ/ ಪ್ರಶ್ನಿಸುವ ಕೌಶಲ/ವಿವರಣಾ ಕೌಶಲ/ಗೈರುಹಾಜರಿ ಕಡಿಮೆ/ ಚಟುವಟಿಕೆಯಿಂದಿರುತ್ತಾರೆ) ಇತ್ಯಾದಿ | 8 | 20.5 |

- LIB ಬಳಕೆಯು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ಕಲಿತಿರುವುದನ್ನು ನೆನಪಿನಲ್ಲಿಡುವ ಕೌಶಲ, ಸ್ವಕಲಿಕೆ/ ಸಂತಸ ಕಲಿಕೆ/ ಆಸಕ್ತಿ, ಮಾತನಾಡುವ ಕೌಶಲ, ಪ್ರಶ್ನಿಸುವ ಕೌಶಲ, ವಿವರಣಾ ಕೌಶಲ ಹೆಚ್ಚಾಗಿರುವುದು, ಗೈರುಹಾಜರಿ ಕಡಿಮೆ, ಮಕ್ಕಳು ಹೆಚ್ಚು ಚಟುವಟಿಕೆಯಿಂದಿರುತ್ತಾರೆ ಎಂದು ಶಿಕ್ಷಕರು ತಿಳಿಸಿರುತ್ತಾರೆ. ಆದರೆ ಇದು ಎಷ್ಟು ಆಳವಾಗಿ ಪಕ್ವವಾಗಿ ಬೆಳೆದಿದೆ ಎನ್ನುವುದನ್ನು ತಿಳಿಯುವುದು ಅತ್ಯಗತ್ಯವಾಗಿದೆ. ಇದು ಒಂದು ಧನಾತ್ಮಕ ಅಂಶವಾಗಿದೆ.

**ಪ್ರಶ್ನೆ 37:**

**ಕೋಷ್ಟಕ 38:–**

| 37 | ಎಷ್ಟು ಇಲಾಖಾ ಮೇಲಧಿಕಾರಿಗಳು LIB ಬಳಕೆ ಕುರಿತಂತೆ ನಿಮ್ಮ ತರಗತಿ ವೀಕ್ಷಣೆ ಮಾಡಿ ಹಿಮ್ಮಾಹಿತಿ ನೀಡಿರುತ್ತಾರೆ? ಅಧಿಕಾರಿಗಳ ಹೆಸರು ಬರೆಯಿರಿ | ಸಂ | ಶೇ |
|---|---|---|---|
| ಅ | ಬಿ.ಇ.ಒ. | 2 | 8.0 |
| ಆ | ಬಿ.ಆರ್.ಸಿ. | 2 | 8.0 |
| ಇ | ಎ.ಪಿ.ಸಿ. | 1 | 4.0 |
| ಈ | ಬಿ.ಆರ್.ಪಿ. | 4 | 16.0 |
| ಉ | ಸಿ.ಆರ್.ಪಿ | 4 | 16.0 |
| ಊ | ಯಾರೂ ಭೇಟಿ ನೀಡಿಲ್ಲ. | 20 | 80.0 |

- ಅಧ್ಯಯನ ಕೈಗೊಂಡಿರುವ 23 ಶಾಲೆಗಳಿಗೆ ಅನುಪಾಲನಾಧಿಕಾರಿಗಳು ನೀಡಿರುವ ಭೇಟಿ ತುಂಬಾ ಕಡಿಮೆ ಇರುವುದು ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಲಿಬ್ ಬಳಕೆ ಮಾಡುತ್ತಿರುವ ತರಗತಿ ವೀಕ್ಷಣೆ ಮಾಡಿ ಲಿಬ್ ಸಂಪನ್ಮೂಲ ಬಳಕೆ ಬಗ್ಗೆ, ಶಿಕ್ಷಕರ ನಿರ್ವಹಣೆ ಬಗ್ಗೆ, ಸಂಸ್ಥೆಯವರಿಗೆ ಹಿಮ್ಮಾಹಿತಿ ನೀಡಿರುವ ಯಾವುದೇ ಗುಣಾತ್ಮಕ ಪುರಾವೆಗಳು ಶಾಲೆಗಳಲ್ಲಿ ಲಭ್ಯವಿರುವುದಿಲ್ಲ.
- ವ್ಯವಸ್ಥೆಗೆ ಗರಿಷ್ಟ ಪ್ರಮಾಣದ ಉಪಯೋಗವಾಗುವ ರೀತಿಯಲ್ಲಿ ಒಂದು ಕಾರ್ಯಕ್ರಮದ ಅನುಷ್ಠಾನವು ಇಲಾಖೆ ಮತ್ತು ಎನ್‌ಜಿಒ ಸಹಭಾಗಿತ್ವದಲ್ಲಿ ಎಷ್ಟು ದುರ್ಬಲವಾಗಿ ಮುನ್ನಡೆಯುತ್ತಿದೆ ಎನ್ನುವ ಅಂಶವು ಇಲ್ಲಿ ಸ್ಪಷ್ಟವಾಗುತ್ತಿದೆ. ಪರಸ್ಪರ ಚರ್ಚೆ, ಹಿಮ್ಮಾಹಿತಿ, ವಿಚಾರ ವಿನಿಮಯ, ಭಾಗೀದಾರಿಕೆಯ ಅಗತ್ಯತೆ ಇವು ಗುಣಮಟ್ಟದ ಸುಧಾರಣೆಗೆ ಪೂರಕವಾದ ಅಂಶವಾಗಿದ್ದು, ಈ ಅಂಶದ ಕೊರತೆಯನ್ನು ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಕಾಣಬಹದಾಗಿದೆ.

**ಕೋಷ್ಟಕ 39:–**

| 38 | ಪ್ರತಿ ಪೆಟ್ಟಿಗೆ ಸರಬರಾಜಾದಾಗ ನಿಮಗೆ ಸಂಸ್ಥೆಯಿಂದ ಯಾವ ರೀತಿಯ ಮಾರ್ಗದರ್ಶನ ಬೇಕು? | ಸಂ | ಶೇ |
|---|---|---|---|
| ಅ | ಕಲಿಕೋಪಕರಣಗಳ ಬಳಕೆ ಬಗ್ಗೆ ಮಾರ್ಗದರ್ಶನ ಬೇಕು. | 20 | 76.9 |
| ಆ | ಮ್ಯಾನ್ಯುವಲ್ ಲಭ್ಯವಿಲ್ಲ. | 1 | 3.8 |
| ಇ | ಶಾಲೆಗೆ ಬಂದು ಕ್ಲಿಷ್ಟಕರವಾದ ಪ್ರಯೋಗ ಮಾಡಿ ತೋರಿಸಬೇಕು. | 2 | 7.7 |
| ಈ | ಕೈಪಿಡಿಯೊಂದಿಗೆ ಸಹಾಯ ಬೇಕು. | 2 | 7.7 |
| ಉ | ಮಾರ್ಗದರ್ಶನ ನೀಡುತ್ತಿದ್ದಾರೆ. | 1 | 3.8 |

- ಶಿಕ್ಷಕರಿಗೆ ಲಿಬ್ ಬಳಕೆ ಬಗ್ಗೆ ಆಳವಾದ ಮತ್ತು ನುರಿತ ಕೌಶಲಗಳನ್ನು ಬೆಳೆಸುವ ತರಬೇತಿ ಅಗತ್ಯವಿದೆ. ಪ್ರತಿ ಪೆಟ್ಟಿಗೆ ಸರಬರಾಜಾದಾಗಲೂ ಅಗತ್ಯತೆಯನ್ನು ಆಧರಿಸಿ ಶಿಕ್ಷಕರಿಗೆ ತರಬೇತಿ ನೀಡುವುದು, ಸಮಾಲೋಚನಾ ಸಭೆಗಳಲ್ಲಿ ವಿಚಾರವಿನಿಮಯ ಮಾಡಿಕೊಳ್ಳುವುದು, ಲಿಬ್ ಶಿಕ್ಷಕರಿಗೆ ಸಮಾಲೋಚಿಸಲು ಅವಕಾಶ ಇತ್ಯಾದಿಗಳನ್ನು ಮಾಡಬೇಕಾದ ಅಗತ್ಯತೆಯನ್ನು ಅಧ್ಯಯನ ಒತ್ತಿ ಹೇಳುತ್ತಿದೆ.

**ಕೋಷ್ಟಕ 40:–**

| **39** | **ಪೆಟ್ಟಿಗೆಗಳನ್ನು ಸಮರ್ಪಕವಾಗಿ ಬಳಸುವಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳಾವುವು?** | **ಸಂ** | **ಶೇ** |
|---|---|---|---|
| ಅ | ಎಸ್.ಎಸ್.ಎಲ್.ಸಿ./ಟಿ.ಸಿ.ಎಚ್. ಆಗಿರುವುದರಿಂದ ಸಮಸ್ಯೆ | 3 | 10.3 |
| ಆ | ಬಳಕೆ ಮಾಡಲು ಗೊತ್ತಾಗುತ್ತಿಲ್ಲ. | 12 | 41.4 |
| ಇ | ಆಯಾ ತಿಂಗಳ ಕಲಿಕಾಂಶಕ್ಕೆ ಪೂರಕವಾಗಿರದಿರುವುದರಿಂದ ಬಳಕೆ ಕಷ್ಟ | 5 | 17.2 |
| ಈ | ಇತರೆ ಸಮಸ್ಯೆಗಳು | 9 | 31.0 |

- ವಾಸ್ತವವಾಗಿ ಲಿಬ್ ಬಳಕೆಯಲ್ಲಿ ಶಿಕ್ಷಕರು ತಾವು ವಿಜ್ಞಾನ ವಿಷಯವನ್ನು ಪದವಿ ಪೂರ್ವ/ಪದವಿ ತರಗತಿಗಳಲ್ಲಿ ಓದದಿರುವುದು, ಶಿಕ್ಷಕರಿಗೆ ಸಾಮಗ್ರಿ ಬಳಕೆ ಬಗ್ಗೆ ಆಸಕ್ತಿ ಮತ್ತು ತಿಳುವಳಿಕೆ ಇಲ್ಲದಿರುವುದು ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅವರ ಅಗತ್ಯಕ್ಕನುಗುಣವಾಗಿ ತರಬೇತಿಯನ್ನು ನೀಡುವುದು ಅಗತ್ಯವಾಗಿದೆ.

**ಕೋಷ್ಠಕ 41:–**

| 40 | LIB ಕಾರ್ಯಕ್ರಮದ ಬಗ್ಗೆ ನಿಮ್ಮ ಒಟ್ಟಾರೆ ಅಭಿಪ್ರಾಯವೇನು? | ಸಂ | ಶೇ |
|---|---|---|---|
| ಅ | ಅತ್ಯುತ್ತಮ ಕಾರ್ಯಕ್ರಮ | 23 | 53.5 |
| ಆ | ವಿಜ್ಞಾನದಲ್ಲಿ ಆಸಕ್ತಿ ಮೂಡಿದೆ. | 4 | 9.3 |
| ಇ | ಸಮಗ್ರ ತರಬೇತಿ/ ಮಾರ್ಗದರ್ಶನ ಬೇಕು. | 4 | 9.3 |
| ಈ | ಅನುಕೂಲಿಸುವಿಕೆ ಸುಲಭ | 3 | 7.0 |
| ಉ | ಶಾಲೆಯಲ್ಲಿಯೇ ಲಿಬ್ ಇರಲಿ | 4 | 9.3 |
| ಊ | ಆಯಾಯ ತಿಂಗಳ ಸಾಮರ್ಥ್ಯಕ್ಕನುಗುಣವಾಗಿರಲಿ. | 4 | 9.3 |
| ಎ | 10 ಅಂಶದ ಕಾರ್ಯಕ್ರಮಕ್ಕೆ ಪೂರಕ | 1 | 2.3 |

- ಎಲ್ಲಾ ಶಿಕ್ಷಕರು LIB ಕಾರ್ಯಕ್ರಮದ ಬಗ್ಗೆ ಅತ್ಯುತ್ತಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಇದು ಉತ್ತಮ ಅಂಶವಾಗಿದೆ. ಶಿಕ್ಷಕರಿಗೆ ಲಿಬ್ ಬಳಕೆ ಬಗ್ಗೆ ತರಬೇತಿ ನೀಡುವುದು ಮತ್ತು ಪಾಠಹಂಚಿಕೆಗನುಗುಣವಾಗಿ ಲಿಬ್‌ನಲ್ಲಿ ಕಲಿಕೋಪಕರಣಗಳ ಜೋಡಣೆ ಮಾಡಿ ವಿತರಿಸಿದರೆ ಈ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಬಹುದು ಎಂದು ಅಧ್ಯಯನದಿಂದ ಸ್ಪಷ್ಟವಾಗಿದೆ.


# ಮಕ್ಕಳ ವೀಕ್ಷಣಾ ನಮೂನೆಯ ವಿಶ್ಲೇಷಣೆ

**1. ವಿದ್ಯಾರ್ಥಿಯು LIB ನಲ್ಲಿರುವ ಪರಿಕರಗಳ ಪರಿಚಯ ಹೊಂದಿರುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3**

**ಕೋಷ್ಟಕ 42:–**

| ಪ್ರಶ್ನೆ 1 | ವಿದ್ಯಾರ್ಥಿಗಳ ಸಂ | ಶೇಕಡಾ |
|---|---|---|
| ಉತ್ತಮ | 187 | 57.5 |
| ಸಾಧಾರಣ | 93 | 28.6 |
| ಅತೃಪ್ತಿಕರ | 45 | 13.8 |
| ಒಟ್ಟು | 325 | |

**ಗ್ರಾಫ್19:–**





- 58% ರಷ್ಟು ವಿದ್ಯಾರ್ಥಿಗಳು ಲಿಬ್‌ನಲ್ಲಿರುವ ಸರಳವಾದ ಪರಿಕರಗಳ ಬಗ್ಗೆ ಪರಿಚಯ ಹೊಂದಿರುತ್ತಾರೆಂದು ಅಧ್ಯಯನಕಾರರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
- ಶೇ 43 ರಷ್ಟು ವಿದ್ಯಾರ್ಥಿಗಳಿಗೆ ಲಿಬ್‌ನಲ್ಲಿರುವ ಪರಿಕರಗಳ ಬಗ್ಗೆ ಪರಿಚಯ ಹೊಂದಿಲ್ಲದಿರುವುದರಿಂದ ತರಗತಿಯಲ್ಲಿ ಲಿಬ್ ಬಳಕೆ ಅಷ್ಟೊಂದು ಪರಿಣಾಮಕಾರಿಯಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ.

**2. ವಿದ್ಯಾರ್ಥಿಯು ಪರಿಕರಗಳನ್ನು ಬಳಸುವ ಕೌಶಲ ಹೊಂದಿರುವನೇ/ಳೇ?**

**ಕೋಷ್ಟಕ 43:–**

| ಆಯ್ಕೆ | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| ಉತ್ತಮ | 126 | 39 |
| ಸಾಧಾರಣ | 148 | 46 |
| ಅತೃಪ್ತಿಕರ | 51 | 15 |

**ಗ್ರಾಫ್20:–**




- ಹೆಚ್ಚಿನ ಮಕ್ಕಳು ಲಿಬ್‌ನಲ್ಲಿರುವ ಕಲಿಕಾ ಸಾಮಗ್ರಿಗಳ ಬಗ್ಗೆ ಪರಿಚಯ ಹೊಂದಿದ್ದರೂ ಬಳಸುವ ಕೌಶಲ ಕಡಿಮೆಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಸಾಮಗ್ರಿಗಳನ್ನು ಬಳಕೆ ಮಾಡುವ ಪ್ರಮಾಣ ಮತ್ತು ಗುಣಮಟ್ಟ ಕಾರಣವಾಗಿರಬಹುದು.


- ಲಿಬ್‌ನಲ್ಲಿರುವ ಹೆಚ್ಚಿನ ಸಾಮಗ್ರಿಗಳು ದಿನಬಳಕೆಯ ಸಾಮಗ್ರಿಗಳನ್ನೇ ಹೊಂದಿದೆ. ಅಪರಿಚಿತ ಸಾಮಗ್ರಿಗಳನ್ನು ಹೊಂದಿದ್ದರೂ ಮಕ್ಕಳು ಹೊಸ ಸಾಮಗ್ರಿಗಳನ್ನು ವೀಕ್ಷಿಸಲು, ಬಳಸಲು ಮತ್ತು ಅನ್ವೇಷಿಸಲು ಆಸೆಪಡುತ್ತಾರೆ. ಆದರೆ ಮೇಲಿನ ದತ್ತಾಂಶವನ್ನು ಗಮನಿಸಿದಾಗ ಮಕ್ಕಳ ಸಹಜ ಸ್ವಭಾವಕ್ಕೂ ಕೌಶಲಾಭಿವೃದ್ಧಿಗೂ ತಾಳೆಯಾಗದಿರುವುದು ಸ್ಪಷ್ಟವಾಗುತ್ತಿದೆ.
- ತರಗತಿಯಲ್ಲಿ ಸಾಮಗ್ರಿಗಳನ್ನು ಅರ್ಥಪೂರ್ಣವಾಗಿ ಬಳಕೆ ಮಾಡುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ. ಈ ಬಗ್ಗೆ ಇಲಾಖೆಯು ಸೂಕ್ತವಾದ ತರಬೇತಿಯನ್ನು ಆಯೋಜಿಸುವುದು ಅಗತ್ಯವಾಗಿದೆ.

3. **ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸಬಲ್ಲನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3**

**ಕೋಷ್ಟಕ 44:–**

| ಪ್ರಶ್ನೆ 3 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| ಉತ್ತಮ | 24 | 7.4 |
| ಸಾಧಾರಣ | 167 | 51.4 |
| ಅತೃಪ್ತಿಕರ | 134 | 41.2 |

**ಗ್ರಾಫ್ 21:–**





- ವಿಶೇಷ ಆಸಕ್ತ ವಿಜ್ಞಾನ ಶಿಕ್ಷಕರಿರುವ ಶಾಲೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲಾ ಶಾಲೆಗಳ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಪರಿಕಲ್ಪನೆಯನ್ನು ವಿವರಿಸುವ ಸಾಮರ್ಥ್ಯ ಬೆಳೆದಿರುವುದಿಲ್ಲ. ಇದು ಗಂಭೀರವಾಗಿ ಪರಿಗಣಿಸಬೇಕಾದ ಅಂಶವಾಗಿರುತ್ತದೆ.
- ವಿಜ್ಞಾನದ ಪರಿಕಲ್ಪನೆಯನ್ನು ಮೂಡಿಸುವಲ್ಲಿ ಈ ಸಾಮಗ್ರಿಗಳು ನೇರವಾಗಿ ಸಹಾಯ ಮಾಡಿದ್ರೂ ಅದರ ಫಲವು ತರಗತಿಯಲ್ಲಿ ಪ್ರತಿಫಲಿಸದಿರಲು ಕಾರಣಗಳನ್ನು ಪತ್ತೆ ಹಚ್ಚಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಯಾಕೆಂದರೆ ಕೆಲವು ಲೋಪದೋಷಗಳನ್ನು ಹೊರತುಪಡಿಸಿದರೆ ಇದೊಂದು ಉತ್ತಮ ಶೈಕ್ಷಣಿಕ ಕಾರ್ಯಕ್ರಮವಾಗಬಲ್ಲದು.

4. ವಿದ್ಯಾರ್ಥಿಯು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3

**ಕೋಷ್ಟಕ 45:–**

| ಪ್ರಶ್ನೆ 4 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| ಉತ್ತಮ | 37 | 11.4 |
| ಸಾಧಾರಣ | 148 | 45.5 |
| ಅತೃಪ್ತಿಕರ | 140 | 43.1 |

**ಗ್ರಾಫ್ 22:–**





- ಪ್ರಯೋಗಗಳನ್ನು ನೋಡುತ್ತಲೇ ಅಥವಾ ಮಾಡುತ್ತಲೇ ಅನ್ವೇಷಿಸಿರುವ ಹೊಸ ಅಂಶಗಳನ್ನು ದಾಖಲಿಸಿಕೊಳ್ಳುವುದು ಉನ್ನತ ಹಂತದ ಅಭ್ಯಾಸವಾಗಿದೆ. ಲಿಬ್ ಬಳಕೆ ಮಾಡುತ್ತಿರುವ ಶಾಲೆಗಳ ಹೆಚ್ಚು ವಿದ್ಯಾರ್ಥಿಗಳಲ್ಲಿ ಮಾಡಿರುವ ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸ ಬೆಳೆದಿಲ್ಲ.

5. ವಿದ್ಯಾರ್ಥಿಯು ಚಟುವಟಿಕೆಯನ್ನು ಆಸಕ್ತಿಯಿಂದ ನಿರ್ವಹಿಸುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3

**ಕೋಷ್ಟಕ 46:–**

| ಪ್ರಶ್ನೆ 5 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| ಉತ್ತಮ | 163 | 50.2 |
| ಸಾಧಾರಣ | 102 | 31.4 |
| ಅತೃಪ್ತಿಕರ | 60 | 18.5 |

**ಗ್ರಾಫ್ 23:–**





- ಮೇಲಿನ ಕೋಷ್ಟಕದಲ್ಲಿನ ದತ್ತಾಂಶವನ್ನು ವಿಶ್ಲೇಷಿಸಿದಾಗ ಹೆಚ್ಚಿನ ಮಕ್ಕಳು ಚಟುವಟಿಕೆಗಳನ್ನು ಆಸಕ್ತಿಯಿಂದ ನಿರ್ವಹಿಸಿರುವುದು ಸ್ಪಷ್ಟವಾಗುತ್ತದೆ. ಇದು ಮಕ್ಕಳ ಸಹಜಗುಣ. ಮಕ್ಕಳಲ್ಲಿರುವ ಈ ಸಹಜ ಗುಣಗಳನ್ನು ಈ ಲಿಬ್ ಸಾಮಗ್ರಿಗಳು ಪೋಷಣೆ ಮಾಡುತ್ತಿವೆ. ಆದರೆ ಪರಿಕಲ್ಪನೆಗಳು ಸ್ಪಷ್ಟವಾಗಿಲ್ಲ ಎನ್ನುವುದನ್ನು ಪ್ರಶ್ನೆ 3 ಸ್ಪಷ್ಟಪಡಿಸಿರುವುದು ಇದಕ್ಕೆ ವಿರುದ್ಧವಾಗಿದೆ.
- ಮಕ್ಕಳಿಗೆ ಲಿಬ್ ಅಂದರೆ ಇಷ್ಟ. ಮಕ್ಕಳು ಚಟುವಟಿಕೆಯಿಂದ ಇರುತ್ತಾರೆ. ಪರಿಕರಗಳ ಪರಿಚಯ ಉತ್ತಮ. ಬಳಕೆಯ ಸಾಮರ್ಥ್ಯ ಕಡಿಮೆ ಇದೆ ಮತ್ತು ಪರಿಕಲ್ಪನೆಯನ್ನು ವಿವರಿಸುವ ಸಾಮರ್ಥ್ಯ ಕಡಿಮೆ ಇದೆ ಎಂಬುದನ್ನು ವಿಶ್ಲೇಷಿಸಿದಾಗ ಇದಕ್ಕೆ ಕಾರಣ ಸಾಮಗ್ರಿಗಳಿಗೂ ಮಕ್ಕಳಿಗೂ ನಡುವೆ ಅರ್ಥ ಕಟ್ಟಿಕೊಳ್ಳಲು ಸಹಾಯ ಮಾಡುವ ಮಧ್ಯವರ್ತಿಗಳು ಎನ್ನುವುದು ಅರ್ಥವಾಗುತ್ತದೆ. ಅಂದರೆ ಶಿಕ್ಷಕರು ಸಾಮಗ್ರಿ ಬಳಕೆ ಮಾಡಿ ಕಲಿಕೆಯನ್ನು ಉತ್ತಮವಾಗಿ ಅನುಕೂಲುಸುವಲ್ಲಿ ವಿಫಲರಾಗಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

**ಕೋಷ್ಟಕ 47:–**

| ಪ್ರಶ್ನೆ 6 | ಶಿಕ್ಷಕರು ಶಾಲೆಯಲ್ಲಿ ವಾರದ ಯಾವ ದಿನದಲ್ಲಿ ಶಾಲಾ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಿ ತೋರಿಸುತ್ತಾರೆ?(ವಾರದ ಹೆಸರು ಬರೆಯಿರಿ) | | |
|---|---|---|---|
| | ಅಭಿಪ್ರಾಯಗಳು | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
| ಅ | ವಾರದ ಯಾವುದಾದರೊಂದು ದಿನ | 198 | 60.9 |
| ಆ | ವಾರಕ್ಕೆ ನಾಲ್ಕು ದಿನ ದಿನ | 1 | 0.3 |
| ಇ | ಪಾಠಕ್ಕೆ ಪೂರಕವಾಗಿ | 41 | 12.6 |
| ಈ | ಎಲ್ಲಾ ದಿನ | 19 | 5.8 |
| ಉ | ಇಲ್ಲ | 6 | 1.8 |
| ಊ | ಉತ್ತರಿಸಿಲ್ಲ | 60 | 18.5 |

**ಗ್ರಾಫ್ 24:–**





- 60.9% ರಷ್ಟು ಮಕ್ಕಳು ಪ್ರಯೋಗಕ್ಕೆ ವಾರದಲ್ಲಿ ಒಂದು ದಿನವನ್ನು ಸೀಮಿತಗೊಳಿಸಿರುವುದನ್ನು ಗುರುತಿಸಲಾಗಿದೆ. ಇದು 10 ಅಂಶದ ಇಲಾಖಾ ಕಾರ್ಯಕ್ರಮಕ್ಕೋಸ್ಕರ ಮಾಡುತ್ತಿರುವ ಪ್ರಯೋಗವಾಗಿದೆ.
- ಹೆಚ್ಚಿನ ಶಿಕ್ಷಕರು ಈ ಪ್ರಯೋಗಗಳನ್ನು ಸಂದರ್ಭಕ್ಕನುಗುಣವಾಗಿ ಪಠ್ಯವಿಷಯದಲ್ಲಿ ಪರಿಕಲ್ಪನೆಗಳನ್ನು ಮೂಡಿಸಲು ಬಳಸದಿರುವುದನ್ನು ಗುರುತಿಸಲಾಗಿದೆ.
- ಕುವೆಂಪು ನಗರ ಶಾಲೆಯಲ್ಲಿ 19 ವಿದ್ಯಾರ್ಥಿಗಳು ಎಲ್ಲಾ ದಿನ ಪ್ರಯೋಗ ಮಾಡಿರುವುದಾಗಿ ತಿಳಿಸಿರುತ್ತಾರೆ. ಭಾರತೀ ಸ್ತ್ರೀ ಸಮಾಜ ಶಾಲೆಯಲ್ಲಿ 12 ವಿದ್ಯಾರ್ಥಿಗಳು ಶಿಕ್ಷಕರು ಪಠ್ಯಕ್ಕೆ ಪೂರಕವಾಗಿ ಪ್ರಯೋಗ ಮಾಡುವುದಾಗಿ ತಿಳಿಸಿರುತ್ತಾರೆ. ಗ್ರೇಸ್ ವಿದ್ಯಾ ಸಂಸ್ಥೆಯಲ್ಲಿಯೂ ಇದೇ ಬೆಳವಣಿಗೆಯನ್ನು ಕಾಣಬಹುದಾಗಿದೆ. ಇದಕ್ಕೆ ಕಾರಣವೇನೆಂದರೆ ಈ ಮೂರೂ ಶಾಲೆಗಳ ಶಿಕ್ಷಕರು ಸದಾ ವಿಜ್ಞಾನ ಪಾಠದ ಸಂದರ್ಭಗಳಲ್ಲಿ ಪ್ರಯೋಗಗಳನ್ನು ಮಾಡಿಸುತ್ತಾ ಕಲಿಕೆಯನ್ನು ಅನುಕೂಲಿಸುವ ಪ್ರವೃತ್ತಿಯುಳ್ಳವರಾಗಿರುತ್ತಾರೆಂದು ಭೇಟಿ ಸಂದರ್ಭದಲ್ಲಿ ಸ್ಪಷ್ಟವಾಗಿರುತ್ತದೆ. ಈ ಕಾರ್ಯಕ್ರಮವು ಅವರಿಗೆ ಹೆಚ್ಚಿನ ಪ್ರೇರೇಪಣೆಯನ್ನು ನೀಡಿರುವುದನ್ನು ಗಮನಿಸಬಹುದಾಗಿದೆ.
- ಈ ಪ್ರಯೋಗಗಳು ಮಕ್ಕಳ ಕಲಿಕೆಯ ಭಾಗವಾಗುವಂತೆ ಮಾಡುವ ನಿಟ್ಟಿನಲ್ಲಿ ಕ್ರಮವನ್ನು ಕೈಗೊಳ್ಳಬೇಕಾಗಿದೆ.

6. ನೀನು **LIB** ನಲ್ಲಿರುವ ಯಾವುದಾದರೂ 4 ಸಲಕರಣೆಗಳನ್ನು ಹೆಸರಿಸು.

**ಕೋಷ್ಟಕ 48:–**

| ಪ್ರಶ್ನೆ 7 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| **4 ಉಪಕರಣ** | 148 | 45.5 |
| **2/3 ಉಪಕರಣ** | 61 | 18.8 |
| **ಸ್ಪಷ್ಟತೆ ಇಲ್ಲದಿರುವುದು** | 116 | 35.7 |

**ಗ್ರಾಫ್25:–**





- ಶೇ45.5 ರಷ್ಟು ಮಕ್ಕಳು ಕತ್ತರಿ, ಮಧ್ಯಸಾರ ದೀಪ, ಬೀಕರ್, ಪ್ರನಾಳ ಈ ರೀತಿಯ ಉಪಕರಣಗಳ ಹೆಸರನ್ನು ಮಾತ್ರ ಪುನರಾವರ್ತಿಸಿದ್ದು ವಿದ್ಯಾರ್ಥಿಗಳ ಉತ್ತರದಲ್ಲಿ ವೈವಿಧ್ಯತೆ ಇಲ್ಲದಿರುವುದು ಕಂಡು ಬಂದಿದೆ.
- 5, 6, 7 ತರಗತಿಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಬಹುತೇಕ ವಿದ್ಯಾರ್ಥಿಗಳು ಒಂದೇ ರೀತಿಯ ಉಪಕರಣಗಳನ್ನು ಹೆಸರಿಸಿರುತ್ತಾರೆ. ಮಾತೃ ಮಂಡಳಿ ಮತ್ತು ಗಾಯಿತ್ರಿ ಶಾಲೆ ಖಾಸಗಿ ಶಾಲೆಯಾದರೂ ಈ ಶಾಲೆಗಳಲ್ಲಿನ 17 ಮಕ್ಕಳಲ್ಲಿ ಒಂದು ಮಗುವೂ ಪರಿಕರಗಳನ್ನು ಗುರುತಿಸುವಲ್ಲಿ ವಿಫಲವಾಗಿರುವುದನ್ನು ಗಮನಿಸಬಹುದಾಗಿದೆ. ಇದೇ ಪರಿಸ್ಥಿತಿ ಮಂಜುನಾಥಪುರ ಸರಕಾರಿ ಶಾಲೆಯಲ್ಲಿಯೂ ಮುಂದುವರಿದಿರುತ್ತದೆ.

**8. LIB ಬಳಸಿ ನೀನು ಗುಂಪಿನಲ್ಲಿ/ ವೈಯಕ್ತಿಕವಾಗಿ ಮಾಡಿರುವ ಯಾವುದಾದರೂ 2 ಪ್ರಯೋಗಗಳನ್ನು ಹೆಸರಿಸು.**

**ಕೋಷ್ಟಕ 49:–**

| ಪ್ರಶ್ನೆ 8 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| 2 ಪ್ರಯೋಗ | 49 | 15.1 |
| 1 ಪ್ರಯೋಗ | 68 | 20.9 |
| ಮಾಡಿಲ್ಲ | 32 | 9.8 |
| ಸ್ಪಷ್ಟತೆ ಇಲ್ಲದಿರುವುದು | 176 | 54.2 |

**ಗ್ರಾಫ್ 26:–**





- 15% ವಿದ್ಯಾರ್ಥಿಗಳು 2 ಪ್ರಯೋಗಗಳನ್ನು ಹೆಸರಿಸಿರುತ್ತಾರೆ 21% ವಿದ್ಯಾರ್ಥಿಗಳು ಒಂದು ಪ್ರಯೋಗವನ್ನು ಹೆಸರಿಸಿದ್ದು, 10% ವಿದ್ಯಾರ್ಥಿಗಳು ಯಾವುದೇ ಪ್ರಯೋಗಗಳನ್ನು ಮಾಡಿಲ್ಲವೆಂದು ಬರೆದಿರುತ್ತಾರೆ. ಇದರಲ್ಲು ತೊಣಚಿಕೊಪ್ಪಲು ಶಾಲೆಯ 23 ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ತಾವು ಯಾವುದೇ ಪ್ರಯೋಗವನ್ನು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದು ಗಮನಾರ್ಹವಾದ ಅಂಶವಾಗಿದೆ. 54% ವಿದ್ಯಾರ್ಥಿಗಳು ಈ ಬಗ್ಗೆ ಸ್ಪಷ್ಟತೆ ಇಲ್ಲದಿರುವುದಾಗಿ ತಿಳಿಸಿರುತ್ತಾರೆ.
- ವಿಜ್ಞಾನ ಜ್ಞಾನದ ಸೃಷ್ಟಿ ಮತ್ತು ಅದನ್ನು ಪರೀಕ್ಷಿಸುವ ಕೌಶಲವನ್ನು ಹೆಚ್ಚಿನ ವಿದ್ಯಾರ್ಥಿಗಳು ಹೊಂದದೇ ಇರುವುದು ಅವರು ಹೆಸರಿಸಿರುವ ಪ್ರಯೋಗದಿಂದ ತಿಳಿದು ಬರುತ್ತದೆ. 176 ಮಕ್ಕಳು ಹೆಸರಿಸಿರುವ ಪ್ರಯೋಗದಲ್ಲಿ ಸ್ಪಷ್ಟತೆ ಇಲ್ಲದಿರುವುದು, ಪ್ರಯೋಗವು ಮನದಟ್ಟಾಗದಿರುವುದನ್ನು ಸೂಚಿಸುತ್ತದೆ ಮತ್ತು ಸಹಜ ಕುತೂಹಲವನ್ನು ಬೆಳೆಸುವಲ್ಲಿ ಶಿಕ್ಷಕರ ವಿಫಲತೆಯನ್ನು ಸೂಚಿಸುತ್ತದೆ.

**9. LIB ನಲ್ಲಿನ ಚಟುವಟಿಕೆಗಳಿಂದ ಪ್ರೇರಿತರಾಗಿ ನೀನು ಮಾಡಿರುವ ಯಾವುದಾದರೂ ಚಟುವಟಿಕೆ/ಪ್ರಯೋಗವನ್ನು ಹೆಸರಿಸು.**

**ಕೋಷ್ಟಕ 50:–**

| ಪ್ರಶ್ನೆ 9 | ವಿದ್ಯಾರ್ಥಿಗಳ ಸಂಖ್ಯೆ | ಶೇಕಡಾ |
|---|---|---|
| ಪ್ರಯೋಗ ಹೆಸರಿಸಿರುವವರು | 72 | 22.2 |
| ಸ್ಪಷ್ಟತೆ ಇಲ್ಲದಿರುವುದು | 83 | 25.5 |
| ಬರೆದಿಲ್ಲ | 170 | 52.3 |

**ಗ್ರಾಫ್27:–**




- ತರಗತಿಯಲ್ಲಿ ಮಾಡಿರುವ ಪಠ್ಯಪುಸ್ತಕದಲ್ಲಿನ ಚಟುವಟಿಕೆಗಳ ಹೆಸರುಗಳನ್ನೇ 22.2 % ರಷ್ಟು ವಿದ್ಯಾರ್ಥಿಗಳು ಬರೆದಿರುತ್ತಾರೆ. ಇದು ಉತ್ತಮ ಅಂಶವೇ ಆಗಿದೆ.
- ಆದರೆ ಸೃಜನಾತ್ಮಕವಾಗಿ ಹಾಗೂ ನಾವೀನ್ಯಯುತವಾಗಿ, ಕುತೂಹಲ ಪ್ರೇರಿತರಾಗಿ ಚಟುವಟಿಕೆಗಳನ್ನು ಮಾಡದಿರುವುದನ್ನು ಗಮನಿಸಲಾಗಿದೆ. ಬಹುಶ: ಇದು ಆಧಾರ ಪರಿಕಲ್ಪನೆಗೆ ಪೂರಕವಾಗಿ ಪ್ರಯೋಗವು ನಡೆಯದಿರುವುದರಿಂದ ಹೀಗಾಗಿದೆ ಎಂಬುದನ್ನು ಮನಗಾಣಬಹುದಾಗಿದೆ.
- ಕುವೆಂಪುನಗರ ಶಾಲೆ ಮತ್ತು ಆದರ್ಶ ವಿದ್ಯಾ ಶಾಲೆಯ ವಿದ್ಯಾರ್ಥಿಗಳು ಹೆಚ್ಚು ಅರ್ಥಗರ್ಭಿತವಾಗಿ ಈ ಪ್ರಶ್ನೆಗಳಿಗೆ ಉತ್ತರಿಸಿರುವುದನ್ನು ಗಮನಿಸಿದಾಗ ಸಂಪನ್ಮೂಲದ ಬಳಕೆಯಲ್ಲಿ ಶಿಕ್ಷಕರ ತೊಡಗಿಸಿಕೊಳ್ಳುವಿಕೆಯು ಉತ್ತಮವಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ಸ್ವಂತ ಅನುಭವಗಳು ಮತ್ತು ಸ್ಥಳೀಯ ಜ್ಞಾನವನ್ನು ವಿಜ್ಞಾನದ ನಿಯಮಗಳು ಮತ್ತು ತತ್ವಗಳೊಂದಿಗೆ ತಾಳೆ ನೋಡುವಲ್ಲಿ ಈ ಎರಡು ಶಾಲೆಗಳನ್ನು ಹೊರತುಪಡಿಸಿ ಉಳಿದ ಶಾಲೆಗಳು ವಿಫಲವಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗಿರುತ್ತದೆ.
- ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳು ಆಯಾ ತರಗತಿಗೆ ಅನುಗುಣವಾಗಿ ಮಾಡಿರುವ ಚಟುವಟಿಕೆ ಅಥವಾ ಪ್ರಯೋಗವನ್ನು ಹೆಸರಿಸದಿರುವುದನ್ನು ಕಾಣಬಹುದಾಗಿದೆ.

**10. ವಿಜ್ಞಾನ ಪ್ರಯೋಗಗಳಿಂದ ನಿನ್ನಲ್ಲಿರುವ ಮೂಢನಂಬಿಕೆಗಳು ಬದಲಾಗಿದ್ದರೆ ವಿವರಿಸು.**

- ಹುಣಸೆ ಮರದ ಕೆಳಗೆ ನಿಂತುಕೊಳ್ಳಬಾರದು, ದೆವ್ವ, ಬೆಕ್ಕು ಅಡ್ಡ ಬಂದರೆ, ಮಾಟಮಂತ್ರ, ಇಂತಹ ಕೆಲವು ಸಾಮಾನ್ಯ ಮೂಢನಂಬಿಕೆಗಳು ಬದಲಾಗಿರುವುದಾಗಿ ಹೆಚ್ಚಿನ ವಿದ್ಯಾರ್ಥಿಗಳು ತಿಳಿಸಿರುತ್ತಾರೆ ಮತ್ತು ಇದು ಒಂದು ಧನಾತ್ಮಕ ಅಂಶವಾಗಿರುತ್ತದೆ.
- ಆದರೆ ಈ ಪ್ರಯೋಗಾಲಯದಿಂದ ಇವುಗಳನ್ನು ಮೀರಿದ ವೈಜ್ಞಾನಿಕ ಮನೋಭಾವ, ವಸ್ತುನಿಷ್ಠತೆ, ವಿಶ್ಲೇಷಣಾ ಮನೋಭಾವ, ಭಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಥಿತಿಗಳ ಭಾವನೆಗಳ ಬೆಳೆವಣಿಗೆಯಾಗದಿರುವುದನ್ನು ಕಾಣಬಹುದಾಗಿದೆ.

**11. ಪ್ರಯೋಗ ಅಥವಾ ವಿಜ್ಞಾನದಿಂದ ಅರಿತಿರುವ ಅಂಶಗಳನ್ನು ನಿನ್ನ ಜೀವನದಲ್ಲಿ ಅಳವಡಿಸಿರುವ ಬಗ್ಗೆ ತಿಳಿಸು.**

- ನೀರನ್ನು ಪೋಲು ಮಾಡಬಾರದು, ಸ್ವಚ್ಛತೆಯಿಂದಿರಬೇಕು, ಸಮತೋಲನ ಆಹಾರ, ಮಾಲಿನ್ಯ, ಬೀದಿಯಲ್ಲಿ ಮಾರುವ ತಿಂಡಿಯನ್ನು ತಿನ್ನಬಾರದು ಇತ್ಯಾದಿ ಅಂಶಗಳನ್ನು 20% ರಷ್ಟು ಮಕ್ಕಳು ತಿಳಿಸಿದ್ದು ಇದು ಪರಿಸರ ರಕ್ಷಣೆ ಮತ್ತು ವೈಯಕ್ತಿಕ ಸ್ವಚ್ಛತೆ– ಕಾಳಜಿ ಬಗ್ಗೆ ಬದಲಾಗಿರುವ ಮನೋಭಾವಗಳನ್ನು ತೋರಿಸುತ್ತದೆ.
- 38% ರಷ್ಟು ವಿದ್ಯಾರ್ಥಿಗಳು ನಿತ್ಯ ಜೀವನದಲ್ಲಿ ಅಳವಡಿಸಿರುವ ಬಗ್ಗೆ ಬರೆಯದಿರುವುದು, ಹೊರಬದುಕಿನ ಅನುಭವಗಳು ಕಲಿಕಾ ಪ್ರಕ್ರಿಯೆಯಲ್ಲಿ ಬಳಕೆಯಾಗದಿರುವುದನ್ನು ತೋರಿಸುತ್ತದೆ.
- 5, 6, 7 ನೇ ತರಗತಿಗಳಲ್ಲಿ ಒಂದೇ ತೆರನಾಗಿ ಉತ್ತರಿಸಿರುವುದು ಪ್ರಯೋಗಗಳಲ್ಲಿ ಒಳ ನೋಟದ ಹರಿವು ತರಗತಿಯಿಂದ ತರಗತಿಗೆ ಹೆಚ್ಚಾಗದಿರುವುದು ಸ್ಪಷ್ಟಪಡಿಸುತ್ತದೆ.

**12. LIB ನಿಂದ ನಿನಗೆ ವಿಜ್ಞಾನ ಕಲಿಕೆ ಹೇಗೆ ಸುಲಭವಾಗಿದೆ?**

- 78% ರಷ್ಟು ವಿದ್ಯಾರ್ಥಿಗಳು ವಿಜ್ಞಾನ ಕಲಿಕೆ ಸುಲಭವಾಗಿದೆ ಎಂದು ತಿಳಿಸಿದ್ದು ಹೇಗೆ ಎಂಬುದನ್ನು ತಿಳಿಸಿರುವುದಿಲ್ಲ. ಇದು ಮಕ್ಕಳು ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವಲ್ಲಿ ವಿಫಲತೆ ಹೊಂದಿರುವುದು ಅಥವಾ ಪರಿಕಲ್ಪನೆಗೆ ಪೂರಕವಾಗಿ ಪ್ರಯೋಗಗಳು ನಡೆಯದಿರುವುದರಿಂದ ಪ್ರಯೋಗಗಳು ಪ್ರಯೋಗಗಳಿಗಷ್ಟೇ ಸೀಮಿತವಾಗಿರುವುದನ್ನು ಸ್ಪಷ್ಟ ಪಡಿಸುತ್ತದೆ.

## ಅಗಸ್ತ್ಯ ಕೇಂದ್ರದವರಿಗೆ ಸಂದರ್ಶನ ನಮೂನೆಯ ವಿಶ್ಲೇಷಣೆ

| ಕಾರ್ಯನಿರ್ವಾಹಕರ ಹೆಸರು: | ವಿದ್ಯಾರ್ಹತೆ: | ಸೇವಾನುಭವ: |
|---|---|---|
| 1. ಬಸವರಾಜು, | ಎಂ.ಎಸ್.ಸಿ, | ಒಂದುವರೆ ವರ್ಷ |
| 2. ರಾಘವೇಂದ್ರ, | ಎಂ.ಎ, | 4 ವರ್ಷ |

ಒಟ್ಟು ಸಿಬ್ಬಂದಿ ವರ್ಗ: 5 ಜನ

1) ಸಾಮಗ್ರಿಗಳು ಒಡೆದು ಹೋದರೆ/ ಹಾಳಾದರೆ ರಿಪ್ಲೇಸ್ ಮಾಡುತ್ತೀರಾ?

- ಹೌದು

2) ಲಿಬ್ ಕಾರ್ಯ ಕ್ರಮಕ್ಕೆ ಶಿಕ್ಷಕರು ಹೇಗೆ ಸ್ಪಂದಿಸುತ್ತಾರೆ?

- ಕೆಲವೇ ಕೆಲವು ಶಿಕ್ಷಕರು ಉತ್ತಮವಾಗಿ ಸ್ಪಂದಿಸುತ್ತಾರೆ.
- ನಗರ ವಲಯದಲ್ಲಿ ಆಸಕ್ತಿ ಕಡಿಮೆ, ಆದರೆ ಈಗ ತಾಲ್ಲೂಕು ವಲಯದಲ್ಲಿ ಪೆಟ್ಟಿಗೆಗಳು ಸರಬರಾಜಾಗುತ್ತಿದ್ದು, ಅತ್ಯುತ್ತಮ ಪ್ರತಿಕ್ರಿಯೆ ಕಂಡು ಬಂದಿದೆ.
- ಹೆಚ್ಚು ಹೆಚ್ಚು ವಿದ್ಯಾರ್ಹತೆ ಇರುವ ಶಿಕ್ಷಕರಿದ್ದು, ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ.

3) ಶಿಕ್ಷಕರಿಗೆ ನೀವು ಹೇಗೆ ಬೆಂಬಲ ನೀಡುತ್ತೀರಿ?

- ಸಾಮಗ್ರಿಗಳನ್ನು ಸರಬರಾಜು ಮಾಡುವುದು.
- ಶಿಕ್ಷಕರ ಪ್ರಶ್ನೆಗಳಿಗೆ ಉತ್ತರ ನೀಡುವುದು.
- ಪ್ರಯೋಗಗಳನ್ನು ಮಾಡಿ ತೋರಿಸುವುದು.

4) ಕಲಾ ಶಿಕ್ಷಕರು ಲಿಬ್ ಬಳಕೆ ಮಾಡುತ್ತಿದ್ದಲ್ಲಿ ಹೇಗೆ ಸ್ಪಂದಿಸುತ್ತಾರೆ?

- ಕೆಲವು ಕೆಲವು ಕಲಾ ಶಿಕ್ಷಕರು ಉತ್ತಮವಾಗಿ ಸ್ಪಂದಿಸಿರುತ್ತಾರೆ.
- ಇಲ್ಲಿ ಶಿಕ್ಷಕರಿಗಿರುವ ಆಸಕ್ತಿ ಮುಖ್ಯ ಪಾತ್ರ ವಹಿಸುತ್ತದೆ.

5) ಲಿಬ್ ಸರಬರಾಜು ಮಾಡುವಾಗ ಶಿಕ್ಷಕರು ಮಾಹಿತಿ/ ಪ್ರಶ್ನೆ ಕೇಳುತ್ತಾರೆಯೇ?

- ಕೆಲವು ಶಿಕ್ಷಕರು ಮಾತ್ರ ಪ್ರಶ್ನೆ ಕೇಳುತ್ತಾರೆ. ಉದಾ ದೊಡ್ಡ ಪೇಟೆ ಶಿಕ್ಷಕರು ಖುದ್ದಾಗಿ ಕರೆಸಿ ಮಾಹಿತಿ/ವಿವರ ಕೇಳಿರುತ್ತಾರೆ. ಎನ್.ಆರ್ ಮೊಹಲ್ಲಾದ ಶಿಕ್ಷಕರಿಗೆ ಆಸಕ್ತಿಯೇ ಇಲ್ಲ. ಪ್ರಾಯೋಗಿಕ ನಜರಬಾದ್ ಶಾಲೆಯ ಶಿಕ್ಷಕರ ಸ್ಪಂದಿಸುವಿಕೆ ಸಾಧಾರಣವಾಗಿದೆ.

6) ಲಿಬ್ ಬಗ್ಗೆ ಶಿಕ್ಷಕರ ಅಭಿಪ್ರಾಯವೇನು?

- ಉತ್ತಮ ಅಭಿಪ್ರಾಯ ಹೊಂದಿರುತ್ತಾರೆ. ಬಳಕೆ ಮಾಡಲು ಆಸಕ್ತಿ ಕಡಿಮೆ, ಹಿಂಜರಿಕೆ ಹೆಚ್ಚು.

7) ಶಿಕ್ಷಕರು ಯಾವ ವಿಷಯದ ಬಗ್ಗೆ ಹೆಚ್ಚು ಪ್ರಶ್ನೆ ಕೇಳುತ್ತಾರೆ?

- 50 ಶಾಲೆಗಳಲ್ಲಿ ಕೇವಲ 5–6 ಶಾಲೆಗಳ ಶಿಕ್ಷಕರು ಮತ್ರ ಪ್ರಶ್ನೆ ಕೇಳುತ್ತಾರೆ.
- ರಾಸಯನ ಶಾಸ್ತ್ರ, ಕೆಮಿಕಲ್ಸ್ ಬಳಕೆ ಬಗ್ಗೆ.
- ಬದಲಾದ ಸಿಲಬಸ್‌ನಲ್ಲಿರುವ ಪ್ರಯೋಗಗಳ ಬಗ್ಗೆ.

8) ಶಿಕ್ಷಕರು ತಮಗೆ ತರಬೇತಿ ಕಡಿಮೆ ಇದೆ ಎಂದು ಹೇಳುತ್ತಾರೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

- ಎರಡು ದಿನದ ತರಬೇತಿ ನೀಡಲಾಗಿದೆ. ಭೇಟಿ ನೀಡಿದಾಗ ಸಮಸ್ಯಗಳಿದ್ದಲ್ಲಿ ಪರಿಹಾರ ನೀಡುತ್ತೇವೆ ದೂರವಾಣಿ ಮೂಲಕ ಪ್ರಶ್ನಿಸಿದರೆ ಉತ್ತರಿಸುತ್ತೇವೆ.

9) ಲಿಬ್ ಬಳಕೆ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

- ಉತ್ತಮ ಕಾರ್ಯಕ್ರಮ ಆದರೆ ಶಿಕ್ಷಕರು ಆಸಕ್ತಿಯಿಂದ ಬಳಸಬೇಕು.
- ಮಕ್ಕಳು ಪ್ರಯೋಗಗಳನ್ನು ಇಷ್ಟಪಡುತ್ತಾರೆ.
- ಮೈಸೂರು ಗ್ರಾಮಾಂತರ ವಲಯದಲ್ಲಿ ಅತ್ಯುತ್ತಮವಾಗಿ ಅನುಷ್ಠಾನಗೊಳ್ಳುತ್ತಿದೆ.

10) ಲಿಬ್ ಕಾರ್ಯಕ್ರಮದಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳೇನು?

- ಶಿಕ್ಷಕರಲ್ಲಿ ಆಸಕ್ತಿ ಇಲ್ಲದಿರುವುದು.
- ವರದಿಯನ್ನು ರಾಜ್ಯಮಟ್ಟಕ್ಕೆ ರವಾನಿಸುವುದು ತಡವಾಗುವುದು.

# ಅಧ್ಯಯನದ ಒಳನೋಟಗಳು

**ಶಿಕ್ಷಕರು:–**

- ಶಾಲೆಗಳಲ್ಲಿ ಮಕ್ಕಳು ವಿಜ್ಞಾನವನ್ನು ಅನ್ವೇಷಿಸುವುದರ ಮೂಲಕವೇ ಕಲಿಯಬೇಕಾಗಿದ್ದು, ಇದಕ್ಕೆ ವಿಜ್ಞಾನ ಪ್ರಯೋಗಾಲಯವು ಪೂರಕವಾಗಿದೆ. ಹೆಚ್ಚಿನ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಲಭ್ಯವಿರುವುದಿಲ್ಲ. ಇದ್ದರೂ ಅವುಗಳ ಅಸ್ತಿತ್ವ ತೃಪ್ತಿಕರವಾಗಿರುವುದಿಲ್ಲ. ಪ್ರಯೋಗಾಲಯಕ್ಕೆ ಸುಸಜ್ಜಿತವಾದ ಕೊಠಡಿ ಲಭ್ಯ ಇಲ್ಲದಿದ್ದಲ್ಲೂ ಕಡಿಮೆ ವೆಚ್ಚ ಮತ್ತು ವೆಚ್ಚರಹಿತ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವಲ್ಲಿ ಶಿಕ್ಷಕರು ವಿಫಲರಾಗಿದ್ದಾರೆ.
- ಹೆಚ್ಚಿನ ಶಿಕ್ಷಕರು ಪೆಟ್ಟಿಗೆ–ಪ್ರಯೋಗಾಲಯದಲ್ಲಿರುವ ಪರಿಕರಗಳ ಬಗ್ಗೆ ಪರಿಚಯ ಹೊಂದಿದ್ದಾರೆ.
- ವಿಜ್ಞಾನ ಕಲಿಕೆಯ ಅಥವಾ ಲಿಬ್‌ನ ಮೂಲ ಉದ್ದೇಶವೇ ಶಿಕ್ಷಕರಲ್ಲಿ ಮತ್ತು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ, ವಸ್ತುನಿಷ್ಠತೆ, ವಿಶ್ಲೇಷಣಾ ಮನೋಭಾವ, ಭಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಥಿತಿಗಳ ಭಾವನೆಗಳನ್ನು ಬೆಳೆಸುವುದಾಗಿದ್ದರೂ, ಹೆಚ್ಚಿನ ಶಿಕ್ಷಕರಿಗೆ ಈ ಮೂಲ ಉದ್ದೇಶದ ಸ್ಪಷ್ಟತೆ ಇಲ್ಲದಿರುವುದು ಅಧ್ಯಯನದಿಂದ ಕಂಡು ಬಂದಿದೆ. ಆದುದರಿಂದ ಪ್ರಯೋಗಕ್ಕಾಗಿ ಪ್ರಯೋಗ ಮಾಡುವ ಸ್ಥಿತಿಯಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸಿರುತ್ತಾರೆ.
- ಶಿಕ್ಷಕರಲ್ಲಿರುವ ವಿಜ್ಞಾನ ಕಲಿಕಾ ಸಾಮಗ್ರಿಗಳ ನಿರ್ವಹಣಾ ಕೌಶಲ ಮತ್ತು ಸಾಮಗ್ರಿ ಬಳಸಿಕೊಂಡು ಜ್ಞಾನ ರಚನೆಗೆ ಅನುಕೂಲಿಸುವ ಸಾಮರ್ಥ್ಯ ತೃಪ್ತಿಕರವಾಗಿಲ್ಲ.
- ಹೆಚ್ಚಿನ ಶಿಕ್ಷಕರು ಶಾಲೆಯ ಬಾಗಿಲಿಗೆ ನಿರಾಯಾಸವಾಗಿ ಸರಬರಾಜಾಗುತ್ತಿರುವ ಸಿದ್ಧ ಕಲಿಕಾ ಸಾಮಗ್ರಿಗಳ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಿಲ್ಲ. ಅದಕ್ಕೆ ಪೂರಕವಾಗಿ ಮಕ್ಕಳಲ್ಲಿಯೂ ಕಲಿಕೋಪಕರಣಗಳ ಬಳಕೆಯಿಂದ ಬೆಳೆಯಬೇಕಾದ ಕೌಶಲಗಳಾದ ಸಾಮಗ್ರಿ ಬಳಕೆ, ಭಾಗವಹಿಸುವಿಕೆ ಇತ್ಯಾದಿಗಳು ಕಡಿಮೆ ಇರುವುದು ಸ್ಪಷ್ಟವಾಗಿದೆ.
- ಒಂದು ಬ್ಲಾಕ್‌ನಲ್ಲಿ ಅಗಸ್ತ್ಯ ಕೇಂದ್ರವು ಕಾರ್ಯ ನಿರ್ವಹಿಸಿ ಮುಂದಿನ ವರ್ಷ ಮತ್ತೊಂದು ಬ್ಲಾಕ್‌ಗೆ ಚಲಿಸುತ್ತದೆ. ಸಾಮಗ್ರಿಗಳು ಶಾಲೆಗೆ ಸರಬರಾಜಾದ ಸಂದರ್ಭದಲ್ಲಿ ಅದನ್ನು ಹೋಲುವ ಕಲಿಕೋಪಕರಣಗಳನ್ನು ಸಿದ್ಧಪಡಿಸಲು ಇದು ಒಂದು ಸುವರ್ಣಾವಕಾಶವಾಗಿದೆ. ಆದರೆ ಅಗಸ್ತ್ಯ ವಿಜ್ಞಾನ ಪೆಟ್ಟಿಗೆ ಸರಬರಾಜಾಗಿರುವ ಎಲ್ಲಾ ಶಾಲೆಗಳ ಶಿಕ್ಷಕರು ಲಿಬ್‌ನಲ್ಲಿರುವ ಉಪಕರಣಗಳನ್ನು ಹೋಲುವಂತಹ ಯಾವುದೇ ಕಡಿಮೆ ವೆಚ್ಚದ ಕಲಿಕಾ ಸಾಮಗ್ರಿಗಳನ್ನು ಸಾಮಗ್ರಿಗಳನ್ನು ಸಿದ್ಧಪಡಿಸಿರುವುದಿಲ್ಲ ಮತ್ತು ಶಾಲೆಗಳಲ್ಲಿ ಪ್ರಯೋಗಾಲಯವನ್ನು ನಿರ್ಮಿಸಿರುವುದಿಲ್ಲ. ಇದು ಶಿಕ್ಷಕರಿಗಿರುವ ಆಸಕ್ತಿ ಮತ್ತು ಶ್ರದ್ಧೆಯ ಕೊರತೆಯನ್ನು ಪ್ರತಿಬಿಂಬಿಸುತ್ತದೆ. ಕಲಿಯಲು ಇಂತಹ ಒಂದು ಉತ್ತಮ ಅವಕಾಶವು ಈ ಬ್ಲಾಕಿನ ಶಾಲೆಗಳ ಶಿಕ್ಷಕರಿಗೆ ಮತ್ತೊಮ್ಮೆ ಸಿಗುವುದು ಕಷ್ಟ ಸಾಧ್ಯವಾಗಿದೆ.
- ಲಿಬ್‌ನಲ್ಲಿರುವ ಪ್ರತಿಯೊಂದು ಪರಿಕರದ ಪರಿಚಯವಿರುವ ಶಿಕ್ಷಕರ ಪರಿಮಾಣ ಶೇ 24 ಮತ್ತು 76% ಶಿಕ್ಷಕರು ಸ್ವಲ್ಪ ಮಟ್ಟದ ಪರಿಚಯವನ್ನು ಹೊಂದಿರುತ್ತಾರೆ. ಇದಕ್ಕೆ ಶಿಕ್ಷಕರಲ್ಲಿನ ಶ್ರದ್ಧೆ, ಆಸಕ್ತಿಯ ಕೊರತೆ ದೊಡ್ಡ ಕಾರಣ ಮತ್ತು ಅಗಸ್ತ್ಯ ಸಂಸ್ಥೆಯವರು ನೀಡುತ್ತಿರುವ ತರಬೇತಿಯ ಕೊರತೆ ಚಿಕ್ಕ ಕಾರಣವಾಗಿರಬಹುದು.

- ಶಿಕ್ಷಕರು ಪೆಟ್ಟಿಗೆಯ ಪ್ರಯೋಗಗಳನ್ನು ಹೊರತುಪಡಿಸಿ ಇತರೆ ಸರಳ ಪ್ರಯೋಗ ಮಾಡುವ ಬಗ್ಗೆ ಕಡಿಮೆ ಪ್ರಯತ್ನ ಮಾಡಿರುತ್ತಾರೆ.
- LIB ಬಳಕೆಯಿಂದ ತರಗತಿ ಅನುಕೂಲಿಸುವಿಕೆಯಲ್ಲಿ ತಮ್ಮಲ್ಲಾಗಿರುವ ಬದಲಾವಣೆಗಳನ್ನು ಶಿಕ್ಷಕರು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಅದರ ಬದಲಾಗಿ ಶಿಕ್ಷಕರು LIB ಬಳಕೆಯ ಪರಿಣಾಮವನ್ನು ಮಕ್ಕಳಲ್ಲಾಗಿರುವ ಬದಲಾವಣೆಯ ದೃಷ್ಟಿಕೋನದಿಂದ ವಿವರಿಸಿರುತ್ತಾರೆ. ಅಂದರೆ ಸ್ವಾವಲೋಕನ ಮಾಡುವ ಅಭ್ಯಾಸ ತುಂಬಾ ಕಡಿಮೆ ಇರುವುದನ್ನು ಗಮನಿಸಬಹುದು.
- ಹೆಚ್ಚಿನ ಶಿಕ್ಷಕರು ಸರಬರಾಜಾಗಿರುವ ಲಿಬ್ ಸಾಮಗ್ರಿಗಳನ್ನು ಯಾಂತ್ರಿಕವಾಗಿ ಪಾಠಬೋಧನೆಯಲ್ಲಿ ಬಳಕೆ ಮಾಡಿದ್ದಾರೆಯೇ ವಿನ: ಅದನ್ನು ಜ್ಞಾನ ರಚನೆಗೆ ಅನುಕೂಲಿಸುವಲ್ಲಿ ವಿಫಲರಾಗಿರುತ್ತಾರೆ. ಇಲಾಖೆ ನೀಡಿರುವ ತರಬೇತಿಯ ವಿಸ್ತರಣೆಗೆ ಇದು ಒಂದು ಉತ್ತಮ ಅವಕಾಶವಾಗಿತ್ತು. ಇಲಾಖೆಯ ಮೂಲಕ ನೀಡುವ ಸಮಾಲೋಚನಾ ಸಭೆಗಳಲ್ಲೂ ಇದನ್ನು ಪುನರ್ಬಲನ ಮಾಡುವ ಅವಕಾಶ ಸಿಕ್ಕಿರುವುದಿಲ್ಲ. ಇಲಾಖೆಯ ತರಬೇತಿ ಮತ್ತು ಅಗಸ್ತ್ಯ ಸಂಸ್ಥೆಯವರು ನೀಡಿರುವ ತರಬೇತಿಗಳನ್ನು ಸಮ್ಮಿಳಿತಗೊಳಿಸಿ ಅನುಷ್ಠಾನಗೊಳಿಸಲು ಅವಕಾಶ ಮಾಡಿಕೊಂಡಿರುವುದಿಲ್ಲ.
- ವಿಜ್ಞಾನ ಪರಿಕಲ್ಪನೆಯ ಕಲಿಕೆಯಾದ ನಂತರ ಪೆಟ್ಟಿಗೆ ಸರಬರಾಜಾದ ಸಂದರ್ಭದಲ್ಲಿ ಈ ಸಾಮಗ್ರಿಗಳನ್ನು ಹೇಗೆ ಬಳಕೆ ಮಾಡಬೇಕೆನ್ನುವ ಬಗ್ಗೆ ಶಿಕ್ಷಕರಿಗೆ ಗೊಂದಲವಿದೆ. ಪರಿಕಲ್ಪನೆಗಳ ಕಲಿಕೆಯ ಮೊದಲು ವಿಜ್ಞಾನ ಪೆಟ್ಟಿಗೆ ಸರಬರಾಜಾದರೂ ಬಳಕೆ ಮಾಡುವ ಬಗ್ಗೆ ಶಿಕ್ಷಕರಿಗೆ ಗೊಂದಲವಿದೆ.

**ಲಿಬ್–ಪೆಟ್ಟಿಗೆಯಲ್ಲಿ ಪ್ರಯೋಗಾಲಯದ ಬಗ್ಗೆ:**

- LIB ಶಾಲಾ ಪ್ರಯೋಗಾಲಯದಲ್ಲಿ ಇಲ್ಲದ ಪರಿಕರಗಳನ್ನು ಒಳಗೊಂಡಿದೆ.
- LIB ನಲ್ಲಿ ವಿಜ್ಞಾನದ ಎಲ್ಲಾ ವಿಭಾಗಗಳಿಗೂ (ಭೌತ, ರಾಸಾಯನಿಕ, ಜೀವ ಶಾಸ್ತ್ರ, ಭೂಗೋಳ) ಸಂಬಂಧಿಸಿದ ಸಾಕಷ್ಟು ಸಾಮಗ್ರಿಗಳಿವೆ ಮತ್ತು ಲಿಬ್‌ನಲ್ಲಿರುವ ಹೆಚ್ಚಿನ ಕಲಿಕಾ ಸಾಮಗ್ರಿಗಳು ಕಲಿಕಾಂಶಕ್ಕೆ ಪೂರಕವಾಗಿವೆ ಎನ್ನುವುದನ್ನು ಶಿಕ್ಷಕರು ಒಪ್ಪಿರುತ್ತಾರೆ.
- LIB ಸ್ವಕಲಿಕೆ ಹಾಗೂ ಸಂತಸದಾಯಕ ಕಲಿಕೆಯನ್ನುಂಟುಮಾಡುತ್ತಿದೆ ಎಂದೂ, LIB ವಿಜ್ಞಾನ ಕಲಿಕೆಯನ್ನು ಅನುಕೂಲಿಸಿ, ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತಿದೆ ಎಂದು ಎಲ್ಲಾ ಶಿಕ್ಷಕರು ಪ್ರತಿಕ್ರಿಯಿಸಿರುತ್ತಾರೆ.
- ಒಂದು ಶಾಲೆಗೆ ಒಂದು LIB ಬಳಕೆ ಮಾಡಲು 10 ದಿನಗಳ ಕಾಲಾವಕಾಶವನ್ನು ನೀಡಿದ್ದು, ಶಿಕ್ಷಕರಿಗೆ ಈ ಕಾಲಾವಕಾಶವು ಸಾಕಾಗುತ್ತಿಲ್ಲ. ಈ ಅವಧಿಯನ್ನು ವಿಸ್ತರಿಸುವುದು ಅಗತ್ಯವಾಗಿದೆ.
- ಮಾಹೆವಾರು ಕಲಿಯಬೇಕಾದ ವಿಜ್ಞಾನ ಪರಿಕಲ್ಪನೆಗಳಿಗೆ ಸಂಬಂಧಿಸಿದ ಸಾಮಗ್ರಿಗಳು ವಿಜ್ಞಾನ ಪಟ್ಟಿಗೆಯಲ್ಲಿ ವಿತರಣೆಯಾಗುತ್ತಿಲ್ಲ. ತಿಂಗಳ ಪಾಠಕ್ಕನುಗುಣವಾಗಿ LIB ಅನ್ನು ಅಣಿಗೊಳಿಸಬೇಕಾದ ಅಗತ್ಯತೆ ಇದೆ. ಮಾಹೆವಾರು ಪಾಠ ಹಂಚಿಕೆಗೂ ವಿತರಣೆಯಾಗುವ ಪೆಟ್ಟಿಗೆಯ ವಿಜ್ಞಾನೋಪಕರಣಗಳಿಗೂ ತಾಳೆಯಾಗದಿರುವುದರಿಂದ ಪೆಟ್ಟಿಗೆಯ ನಿರ್ವಹಣೆಯಲ್ಲಿ ಶಿಕ್ಷಕರಿಗೆ ಗೊಂದಲವಾಗುತ್ತಿದೆ.

- LIB ಬಳಕೆಗೆ ಮ್ಯಾನುವಲ್ ನೀಡಿದ್ದು, ಅದನ್ನು ಬಳಸಿ ಸ್ವತ; ಎಲ್ಲಾ ಪ್ರಯೋಗಗಳನ್ನು ಕೈಗೊಳ್ಳುವ ಆತ್ಮ ವಿಶ್ವಾಸವನ್ನು ಹೆಚ್ಚಿನ ಶಿಕ್ಷಕರು ಹೊಂದಿರುವುದಿಲ್ಲ.
- LIB ಬಳಕೆಯ ಬಗ್ಗೆ ಸಂಸ್ಥೆಯವರಿಂದ ಇನ್ನೂ ಹೆಚ್ಚಿನ ಮಾರ್ಗದರ್ಶನವನ್ನು ಶಿಕ್ಷಕರು ಅಪೇಕ್ಷೆ ಪಡುತ್ತಿದ್ದಾರೆ. ಸಾಂಪ್ರದಾಯಿಕ ಬೋಧನೆಗೆ ಒಗ್ಗಿರುವ ಮತ್ತು ವಿಜ್ಞಾನದ ಕಲಿಕಾ ಸಾಮಗ್ರಿಗಳ ಕುರಿತ ಫೋಬಿಯಾ ಹೊಂದಿರುವ ಶಿಕ್ಷಕರಲ್ಲಿ ಸಾಮಗ್ರಿ ಬಳಕೆಯ ಬಗ್ಗೆ ಆತ್ಮವಿಶ್ವಾಸ ಬೆಳೆಸುವಂತೆ ತರಬೇತಿಯನ್ನು ನೀಡಬೇಕು.
- ಕೆಲವು ಶಿಕ್ಷಕರು ವಿಜ್ಞಾನ ಪಾಠದ ಕಲಿಕೆ ಮುಗಿದ ನಂತರ ಸಂಬಂಧಿಸಿದ LIB ಸರಬರಾಜಾದರೆ ಪುನರ್ಬಲನಕ್ಕಾಗಿ ಬಳಸುತ್ತಿದ್ದಾರೆ ಮತ್ತು ಕೆಲವು ಶಿಕ್ಷಕರು ಒಂದಲ್ಲ ಒಂದು ರೀತಿಯಲ್ಲಿ ಮಕ್ಕಳ ಕಲಿಕೆಗಾಗಿ ಬಳಸಿರುತ್ತಾರೆ. ಆದರೆ ಈಬಗ್ಗೆ ಕೆಲವರಿಗೆ ಅಸ್ಪಷ್ಟತೆ ಇದೆ. ಇಂತಹ ಸಂದರ್ಭದಲ್ಲಿ ಸಂಪನ್ಮೂಲ ವ್ಯರ್ಥವಾಗುವ ಸಂಭವ ಹೆಚ್ಚು. ಈ ಅಂಶವನ್ನು ಸಂಸ್ಥೆಯವರು ಗುಣಾತ್ಮಕ ಹಿಮ್ಮಾಹಿತಿಯಾಗಿ ಸ್ವೀಕರಿಸಿ ಈ ನಿಟ್ಟಿನಲ್ಲಿ ಸುಧಾರಣೆಯನ್ನು ಮಾಡಬೇಕಾಗಿದೆ.

**ವಿದ್ಯಾರ್ಥಿಗಳು:**

- ಪೆಟ್ಟಿಗೆ– ಪ್ರಯೋಗಾಲಯದಲ್ಲಿ ಸರಬರಾಜು ಮಾಡಿರುವ ವಿಜ್ಞಾನ ಸಾಮಗ್ರಿಗಳು ವಿದ್ಯಾರ್ಥಿಗಳ ವಿಜ್ಞಾನ ಕಲಿಕೆಗೆ ಉಪಯುಕ್ತವಾಗಿದೆ.
- ಆಸಕ್ತ ವಿಜ್ಞಾನ ಶಿಕ್ಷಕರಿರುವ ಕೆಲವು ಶಾಲೆಗಳ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕಲಿಕೆ ಮತ್ತು ಪ್ರಯೋಗ ಮಾಡುವ ಕೌಶಲ ಸ್ವಲ್ಪ ಮಟ್ಟಿಗೆ ವೃದ್ಧಿಯಾಗಿವೆ.
- ಲಿಬ್ ಬಳಕೆ ಮಾಡುತ್ತಿರುವ ಶಾಲೆಗಳ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಸಾಮಗ್ರಿಗಳ ಪರಿಚಯ ಉತ್ತಮವಾಗಿದೆ ಆದರೆ ಲಿಬ್ ಕಲಿಕಾ ಸಾಮಗ್ರಿ ಬಳಸುವ ಕೌಶಲ ತೃಪ್ತಿಕರವಾಗಿಲ್ಲ.
- ವಿಜ್ಞಾನ ತರಗತಿಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳ ಭಾಗವಹಿಸುವಿಕೆ ತೃಪ್ತಿಕರವಾಗಿರುವುದಿಲ್ಲ.
- ಹೆಚ್ಚಿನ ಮಕ್ಕಳು ಲಿಬ್‌ನಲ್ಲಿರುವ ಕಲಿಕಾ ಸಾಮಗ್ರಿಗಳ ಬಗ್ಗೆ ಪರಿಚಯ ಹೊಂದಿದ್ದರೂ ಬಳಸುವ ಕೌಶಲ ಕಡಿಮೆಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಸಾಮಗ್ರಿಗಳನ್ನು ಬಳಕೆ ಮಾಡುವ ಪ್ರಮಾಣ ಮತ್ತು ಗುಣಮಟ್ಟ ಕಾರಣವಾಗಿರಬಹುದು.
- ಶಿಕ್ಷಕರು ತರಗತಿಯಲ್ಲಿ ಲಿಬ್ ಸಾಮಗ್ರಿಗಳನ್ನು ಅರ್ಥಪೂರ್ಣವಾಗಿ ಬಳಕೆ ಮಾಡುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಬಗ್ಗೆ ಇಲಾಖೆಯು ಸೂಕ್ತವಾದ ತರಬೇತಿಯನ್ನು ಆಯೋಜಿಸುವುದು ಅಥವಾ ಇಲಾಖೆಯ ತರಬೇತಿಯಲ್ಲೇ ಇದನ್ನು ಸಮನ್ವಯಗೊಳಿಸುವುದು ಅಗತ್ಯವಾಗಿದೆ.
- ವಿಶೇಷ ಆಸಕ್ತ ವಿಜ್ಞಾನ ಶಿಕ್ಷಕರಿರುವ ಶಾಲೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲಾ ಶಾಲೆಗಳ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಪರಿಕಲ್ಪನೆಯನ್ನು ವಿವರಿಸುವ ಸಾಮರ್ಥ್ಯ ಬೆಳೆದಿರುವುದಿಲ್ಲ. ಇದು ಗಂಭೀರವಾಗಿ ಪರಿಗಣಿಸಬೇಕಾದ ಅಂಶವಾಗಿರುತ್ತದೆ.

- ಲಿಬ್ ಬಳಕೆ ಮಾಡುತ್ತಿರುವ ಶಾಲೆಗಳ ಹೆಚ್ಚು ವಿದ್ಯಾರ್ಥಿಗಳಲ್ಲಿ ಮಾಡಿರುವ ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವ ಅಭ್ಯಾಸ ಬೆಳೆದಿಲ್ಲ. ಪ್ರಯೋಗಕ್ಕಾಗಿ ಪ್ರಯೋಗ ಅಥವಾ ಪ್ರಯೋಗವು ಪ್ರಕ್ರಿಯೆಯ ಭಾಗವಾಗದಿರುವುದರಿಂದ ಈ ಸಮಸ್ಯೆ ಉಂಟಾಗಿರಬಹುದು,
- ಮಕ್ಕಳ ಪ್ರಶ್ನಾವಳಿ ವಿಶ್ಲೇಷಿಸಿದಾಗ ಮಕ್ಕಳಿಗೆ ಲಿಬ್ ಅಂದರೆ ಇಷ್ಟ. ವೀಕ್ಷಣಾ ಹಾಳೆಯನ್ನು ವಿಶ್ಲೇಷಿಸಿದಾಗ ಶಾಲೆಯಲ್ಲಿರುವ ಮಕ್ಕಳು ಚಟುವಟಿಕೆಯಿಂದಿರುವ ಪ್ರವೃತ್ತಿಯುಳ್ಳವರಾಗಿದ್ದಾರೆ. ಅವರಿಗೆ ವಿಜ್ಞಾನ ಪರಿಕರಗಳ ಪರಿಚಯ ಉತ್ತಮವಾಗಿದೆ. ಆದರೆ ಬಳಕೆಯ ಸಾಮರ್ಥ್ಯ ಮತ್ತು ಪರಿಕಲ್ಪನೆಯನ್ನು ವಿವರಿಸುವ ಸಾಮರ್ಥ್ಯ ಕಡಿಮೆ ಇದೆ ಎಂಬುದನ್ನು ವಿಶ್ಲೇಷಿಸಿದಾಗ ಇದಕ್ಕೆ ಕಾರಣ ಪ್ರಯೊಗ ಸಾಮಗ್ರಿಗಳಿಗೂ– ಮಕ್ಕಳಿಗೂ ನಡುವೆ ಅರ್ಥ ಕಟ್ಟಿಕೊಳ್ಳಲು ಸಹಾಯ ಮಾಡುವ ಮಧ್ಯವರ್ತಿಗಳು ಎನ್ನುವುದು ಅರ್ಥವಾಗುತ್ತದೆ. ಶಿಕ್ಷಕರು ಪ್ರಯೋಗ ಮಾಡುತ್ತಿಲ್ಲ ಎಂದಲ್ಲ. ಶಿಕ್ಷಕರು ಸಾಮಗ್ರಿ ಬಳಕೆ ಮಾಡಿ ಕಲಿಕೆಯನ್ನು ಉತ್ತಮವಾಗಿ ಅನುಕೂಲಿಸುವಲ್ಲಿ ವಿಫಲರಾಗಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.
- ವಾರದಲ್ಲಿ ಒಂದು ದಿನವನ್ನು ಎಲ್ಲಾ ಶಾಲೆಗಳಲ್ಲಿ ಪ್ರಯೋಗಕ್ಕೆ ಸೀಮಿತಗೊಳಿಸಿರುವುದರಿಂದ 10 ಅಂಶದ ಕಾರ್ಯಕ್ರಮದ ಅನುಷ್ಠಾನದಲ್ಲಿ ವಾರಕ್ಕೊಂದು ಪ್ರಯೋಗ ಕಾರ್ಯಕ್ರಮವು ಉತ್ತಮವಾಗಿ ಅನುಷ್ಠಾನಗೊಂಡಿದೆ ಎಂದು ಭಾವಿಸಬಹುದು. ಆದರೆ ಇದು 10 ಅಂಶದ ಇಲಾಖಾ ಕಾರ್ಯಕ್ರಮಕ್ಕೋಸ್ಕರ ಮಾಡುತ್ತಿರುವ ಪ್ರಯೋಗವಾಗಿದೆ ಎಂದು ಹೇಳಬಹುದು.
- ವಿಜ್ಞಾನ ಜ್ಞಾನದ ಸೃಷ್ಟಿ ಮತ್ತು ಅದನ್ನು ಪರೀಕ್ಷಿಸುವ ಕೌಶಲವನ್ನು ಹೆಚ್ಚಿನ ವಿದ್ಯಾರ್ಥಿಗಳು ಹೊಂದದೇ ಇರುವುದು ಅವರು ಹೆಸರಿಸಿರುವ ಪ್ರಯೋಗದಿಂದ ತಿಳಿದು ಬರುತ್ತದೆ. 176 ಮಕ್ಕಳು ಹೆಸರಿಸಿರುವ ಪ್ರಯೋಗದಲ್ಲಿ ಸ್ಪಷ್ಟತೆ ಇಲ್ಲದಿರುವುದು, ಪ್ರಯೋಗವು ಮನದಟ್ಟಾಗದಿರುವುದನ್ನು ಸೂಚಿಸುತ್ತದೆ ಮತ್ತು ಸಹಜ ಕುತೂಹಲವನ್ನು ಬೆಳೆಸುವಲ್ಲಿ ಶಿಕ್ಷಕರ ವಿಫಲತೆಯನ್ನು ಸೂಚಿಸುತ್ತದೆ.
- ಕುವೆಂಪುನಗರ ಶಾಲೆ ಮತ್ತು ಆದರ್ಶ ವಿದ್ಯಾ ಶಾಲೆಯ ವಿದ್ಯಾರ್ಥಿಗಳು ಹೆಚ್ಚು ಅರ್ಥಗರ್ಭಿತವಾಗಿ ಈ ಪ್ರಶ್ನೆಗಳಿಗೆ ಉತ್ತರಿಸಿರುವುದನ್ನು ಗಮನಿಸಿದಾಗ ಸಂಪನ್ಮೂಲದ ಬಳಕೆಯಲ್ಲಿ ಶಿಕ್ಷಕರ ತೊಡಗಿಸಿಕೊಳ್ಳುವಿಕೆಯು ಉತ್ತಮವಾಗಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ಸ್ವಂತ ಅನುಭವಗಳು ಮತ್ತು ಸ್ಥಳೀಯ ಜ್ಞಾನವನ್ನು ವಿಜ್ಞಾನದ ನಿಯಮಗಳು ಮತ್ತು ತತ್ವಗಳೊಂದಿಗೆ ತಾಳೆ ನೋಡುವಲ್ಲಿ ಈ ಎರಡು ಶಾಲೆಗಳನ್ನು ಹೊರತುಪಡಿಸಿ ಉಳಿದ ಶಾಲೆಗಳು ವಿಫಲವಾಗಿರುತ್ತದೆ.
- ಹುಣಸೆ ಮರದ ಕೆಳಗೆ ನಿಂತುಕೊಳ್ಳಬಾರದು, ದೆವ್ವ, ಬೆಕ್ಕು ಅಡ್ಡ ಬಂದರೆ, ಮಾಟಮಂತ್ರ, ಇಂತಹ ಕೆಲವು ಸಾಮಾನ್ಯ ಮೂಢನಂಬಿಕೆಗಳು ಬದಲಾಗಿರುವುದಾಗಿ ಹೆಚ್ಚಿನ ವಿದ್ಯಾರ್ಥಿಗಳು ತಿಳಿಸಿರುತ್ತಾರೆ ಮತ್ತು ಇದು ಒಂದು ಧನಾತ್ಮಕ ಅಂಶವಾಗಿರುತ್ತದೆ.
- ಆದರೆ ಈ ಪ್ರಯೋಗಾಲಯದಿಂದ ಇವುಗಳನ್ನು ಮೀರಿದ ವೈಚಾರಿಕತೆಗೆ ಸಂಬಂಧಿಸಿದ ವೈಜ್ಞಾನಿಕ ಮನೋಭಾವ, ವಸ್ತುನಿಷ್ಠತೆ, ವಿಶ್ಲೇಷಣಾ ಮನೋಭಾವ, ಭಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಥಿತಿಗಳ ಭಾವನೆಗಳ ಬೆಳೆವಣಿಗೆಯಾಗದಿರುವುದನ್ನು ಕಾಣಬಹುದಾಗಿದೆ.

- ನೀರನ್ನು ಪೋಲು ಮಾಡಬಾರದು, ಸ್ವಚ್ಛತೆಯಿಂದಿರಬೇಕು, ಸಮತೋಲನ ಆಹಾರ, ಮಾಲಿನ್ಯ, ಬೀದಿಯಲ್ಲಿ ಮಾರುವ ತಿಂಡಿಯನ್ನು ತಿನ್ನಬಾರದು ಇತ್ಯಾದಿ ಅಂಶಗಳನ್ನು 20% ರಷ್ಟು ಮಕ್ಕಳು ತಿಳಿಸಿದ್ದು ಇದು ಪರಿಸರ ರಕ್ಷಣೆ ಮತ್ತು ವೈಯಕ್ತಿಕ ಸ್ವಚ್ಛತೆ- ಕಾಳಜಿ ಬಗ್ಗೆ ಬದಲಾಗಿರುವ ಮನೋಭಾವಗಳನ್ನು ತೋರಿಸುತ್ತದೆ.
- 78% ರಷ್ಟು ವಿದ್ಯಾರ್ಥಿಗಳು ವಿಜ್ಞಾನ ಕಲಿಕೆ ಸುಲಭವಾಗಿದೆ ಎಂದು ತಿಳಿಸಿದ್ದು ಹೇಗೆ ಎಂಬುದನ್ನು ತಿಳಿಸಿರುವುದಿಲ್ಲ. ಇದು ಮಕ್ಕಳು ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವಲ್ಲಿ ವಿಫಲತೆ ಹೊಂದಿರುವುದು ಅಥವಾ ಪರಿಕಲ್ಪನೆಗೆ ಪೂರಕವಾಗಿ ಪ್ರಯೋಗಗಳು ನಡೆಯದಿರುವುದರಿಂದ ಪ್ರಯೋಗಗಳು ಪ್ರಯೋಗಗಳಿಗಷ್ಟೇ ಸೀಮಿತವಾಗಿರುವುದನ್ನು ಸ್ಪಷ್ಟ ಪಡಿಸುತ್ತದೆ.
- ಪೆಟ್ಟಿಗೆಯಲ್ಲಿನ ಪರಿಕರಗಳು ಒಡೆದುಹೋದರೆ/ಹಾಳಾದರೆ ಸಂಸ್ಥೆಯವರು ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ.
- LIB ನ ಬಗ್ಗೆ ಹಿಮ್ಮಾಹಿತಿಯನ್ನು 10 ರಿಂದ 30 ದಿನಗಳಿಗೊಮ್ಮೆ ಶಿಕ್ಷಕರು ಸಂಸ್ಥೆಗೆ ನೀಡುತ್ತಿದ್ದಾರೆ.
- ಬ್ಲಾಕ್ ಹಂತದಲ್ಲಿ ವಿಜ್ಞಾನ ಕೇಂದ್ರವು ಹಮ್ಮಿಕೊಂಡಿರುವ ವಿಜ್ಞಾನ ಮೇಳವು ಮಕ್ಕಳಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸುವ, ಪ್ರಯೋಗಗಳನ್ನು ಮಾಡುವ, ವಿವರಿಸುವ, ಪರಿಲ್ಪನೆಗಳನ್ನು ಅರ್ಥೈಸುವ, ಶಿಸ್ತಿನಿಂದ ವರ್ತಿಸುವ ಮತ್ತು ಸಾರ್ವಜನಿಕರನ್ನು ಎದುರಿಸುವ ಕೌಶಲಗಳನ್ನು ಬೆಳೆಸುವಲ್ಲಿ ಸಫಲವಾಗಿತ್ತು.

**ಅನುಪಾಲನೆ:**

- ಹೆಚ್ಚಿನ ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಅನುಪಾಲನಾಧಿಕಾರಿಗಳಿಗೆ ಲಿಬ್ ಉದ್ದೇಶಗಳೇನು?, ಗುಣಾತ್ಮಕ ಶಿಕ್ಷಣದಲ್ಲಿ ಎನ್‌ಜಿಓಗಳು ಯಾಕೆ ಪಾತ್ರ ವಹಿಸಬೇಕು?, ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಅನುಪಾಲಕರಾಗಿ ತನ್ನ ಪಾತ್ರವೇನು ಮತ್ತು ಅನುಷ್ಠಾನದ ಗುಣಾತ್ಮಕತೆಯನ್ನು ಹೆಚ್ಚಿಸುವಲ್ಲಿ ತಾನೇನು ಕೊಡುಗೆಯನ್ನು ನೀಡಬಹುದು ಎನ್ನುವ ಬಗ್ಗೆ ಸ್ಪಷ್ಟತೆ ಇರದಿರುವುದನ್ನು ಗಮನಿಸಲಾಗಿದೆ.
- ಅಧ್ಯಯನ ಕೈಗೊಂಡಿರುವ 23 ಶಾಲೆಗಳಿಗೆ ಅನುಪಾಲನಾಧಿಕಾರಿಗಳು ನೀಡಿರುವ ಭೇಟಿ ಸಂಖ್ಯೆ ತುಂಬಾ ಕಡಿಮೆ ಇದೆ. ಲಿಬ್ ಬಳಕೆ ಮಾಡುತ್ತಿರುವ ಶಿಕ್ಷಕರ ತರಗತಿ ವೀಕ್ಷಣೆ ಮಾಡಿ ಲಿಬ್ ಸಂಪನ್ಮೂಲ ಬಳಕೆ ಬಗ್ಗೆ, ಶಿಕ್ಷಕರ ನಿರ್ವಹಣೆ ಬಗ್ಗೆ, ಸಂಸ್ಥೆಯವರಿಗೆ ಹಿಮ್ಮಾಹಿತಿ ನೀಡಿರುವ ಬಗ್ಗೆ ಯಾವುದೇ ಗುಣಾತ್ಮಕ ಪುರಾವೆಗಳು ಶಾಲೆಗಳಲ್ಲಿ ಲಭ್ಯವಿರುವುದಿಲ್ಲ.
- ವ್ಯವಸ್ಥೆಗೆ ಗರಿಷ್ಠ ಪ್ರಮಾಣದಲ್ಲಿ ಉಪಯುಕ್ತವಾಗುವಂತೆ ಒಂದು ಕಾರ್ಯಕ್ರಮದ ಅನುಷ್ಠಾನವು ಇಲಾಖೆ ಮತ್ತು ಎನ್‌ಜಿಓ ಸಹಭಾಗಿತ್ವದಲ್ಲಿ ಎಷ್ಟು ದುರ್ಬಲವಾಗಿ ಮುನ್ನಡೆಯುತ್ತಿದೆ ಎನ್ನುವ ಅಂಶವು ಇಲ್ಲಿ ಸ್ಪಷ್ಟವಾಗುತ್ತಿದೆ.
- ಲಿಬ್ ಬಳಕೆ ಮಾಡುತ್ತಿರುವ ಶಿಕ್ಷಕರಿಗೆ ತಿಂಗಳಿಗೊಮ್ಮೆ ಪರಸ್ಪರ ಚರ್ಚೆಗೆ ಅವಕಾಶ ಕಲ್ಪಿಸುವುದು, ಹಿಮ್ಮಾಹಿತಿ ಪಡೆಯುವುದು ಮತ್ತು ಹಿಮ್ಮಾಹಿತಿ ನೀಡುವುದು, ವಿಚಾರ ವಿನಿಮಯ ಮಾಡುವುದು, ಯಶೋಗಾಥೆಗಳಿದ್ದಲ್ಲಿ ಹಂಚಿಕೆ ಮಾಡಿಕೊಳ್ಳುವುದು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಸಮಾಲೋಚನಾ ಸಭೆಗಳಲ್ಲಿ ವಿಜ್ಞಾನ ಶಿಕ್ಷಕರಿಗೆ ಈ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವುದು, ಇಲಾಖಾ ತರಬೇತಿ(6-8ನೇ ತರಗತಿ ವಿಜ್ಞಾನ ಶಿಕ್ಷಕರ ತರಬೇತಿ)ಯಲ್ಲಿ ಸಮನ್ವಯಗೊಳಿಸುವುದು, ಭಾಗೀದಾರಿಕೆಯ ಅಗತ್ಯತೆ ಇವು ಗುಣಮಟ್ಟದ ಸುಧಾರಣೆಗೆ

ಪೂರಕವಾದ ಅಂಶವಾಗಿದ್ದು ಈ ಅಂಶದ ಕೊರತೆಯನ್ನು ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಕಾಣಬಹದಾಗಿದೆ.

**ತರಬೇತಿ**

- ವಿಜ್ಞಾನ ವಿಷಯವನ್ನು ಪದವಿ ಪೂರ್ವ/ಪದವಿ ತರಗತಿಗಳಲ್ಲಿ ಓದದಿರುವುದು, ಶಿಕ್ಷಕರಿಗೆ ಸಾಮಗ್ರಿ ಬಳಕೆ ಬಗ್ಗೆ ಆಸಕ್ತಿ ಮತ್ತು ತಿಳುವಳಿಕೆ ಇಲ್ಲದಿರುವುದು ಲಿಬ್ ಬಳಕೆಯಲ್ಲಿ ಶಿಕ್ಷಕರು ಎದುರಿಸುತ್ತಿರುವ ವಾಸ್ತವ ಸಮಸ್ಯೆಗಳಾಗಿವೆ.
- ಲಿಬ್ ಬಳಕೆ ಬಗ್ಗೆ ಶಿಕ್ಷಕರಲ್ಲಿ ಆಳವಾದ ಮತ್ತು ನುರಿತ ಕೌಶಲಗಳನ್ನು ಬೆಳೆಸುವ ತರಬೇತಿ ಅಗತ್ಯವಿದೆ. ಪ್ರತಿ ಪೆಟ್ಟಿಗೆ ಸರಬರಾಜಾದಾಗಲೂ ಅಗತ್ಯತೆಯನ್ನು ಆಧರಿಸಿ ಶಿಕ್ಷಕರಿಗೆ ತರಬೇತಿ ನೀಡುವುದು, ಸಮಾಲೋಚನಾ ಸಭೆಗಳಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳುವುದು, ಲಿಬ್ ಬಗ್ಗೆ ಶಿಕ್ಷಕರಿಗೆ ಸಮಾಲೋಚಿಸಲು ಅವಕಾಶ ಒದಗಿಸುವುದು ಇತ್ಯಾದಿಗಳ ಅಗತ್ಯತೆಯನ್ನು ಅಧ್ಯಯನ ಒತ್ತಿ ಹೇಳುತ್ತಿದೆ.

**ಲಿಬ್ ಕಾರ್ಯಕ್ರಮದ ಬಗ್ಗೆ ಅಭಿಪ್ರಾಯ**

- LIB ಕಾರ್ಯಕ್ರಮದ ಬಗ್ಗೆ ಎಲ್ಲಾ ಮಕ್ಕಳು, ಶಿಕ್ಷಕರು ಮತ್ತು ಅಧಿಕಾರಿಗಳು ಅತ್ಯುತ್ತಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ವಿದ್ಯಾರ್ಥಿಗಳು ಮತ್ತು ಅನುಪಾಲನಾಧಿಕಾರಿಗಳು ಸಹ ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಇಲಾಖೆ ಪರಿಣಾಮಕಾರಿಯಾಗಿ ಅನುಪಾಲನೆ ಮಾಡಿ ಪ್ರಕ್ರಿಯೆಯ ಸುಧಾರಣೆಗೆ ಹಿಮ್ಮಾಹಿತಿ ನೀಡುವುದು, ಅಗಸ್ತ್ಯ ಸಂಸ್ಥೆಯು ಲಿಬ್ ಬಳಕೆ ಬಗ್ಗೆ ಶಿಕ್ಷಕರ ಅಗತ್ಯತೆಗನುಗುಣವಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ತರಬೇತಿ ನೀಡುವುದು ಮತ್ತು ಪಾಠಹಂಚಿಕೆಗನುಗುಣವಾಗಿ ಲಿಬ್‌ನಲ್ಲಿ ಕಲಿಕೋಪಕರಣಗಳ ಜೋಡಣೆ ಮಾಡಿ ವಿತರಿಸಿದರೆ ಈ ಕಾರ್ಯಕ್ರಮ ಹೆಚ್ಚು ಪರಿಣಾಮಕಾರಿಯಾಗಬಹುದು ಎಂದು ಅಧ್ಯಯನದಿಂದ ಸ್ಪಷ್ಟವಾಗಿದೆ.

**************************

# ಶೈಕ್ಷಣಿಕ ನಿಹಿತಾರ್ಥಗಳು

- ಮಾಹೆವಾರು ಪಾಠ ಅಥವಾ ಪರಿಕಲ್ಪನೆಗಳಿಗೆ ಅನುಗುಣವಾಗಿ ಲಿಬ್ ಪುನರ್‌ಜೋಡಣೆ ಮಾಡಿ ವಿತರಿಸುವುದು.
- ಲಿಬ್ ಸರಬರಾಜಾದ ಸಂದರ್ಭದಲ್ಲಿ ಶಿಕ್ಷಕರಿಗೆ ಪ್ರಾಯೋಗಿಕವಾಗಿ ತರಬೇತಿ ನೀಡುವುದು. ಸಮಾಲೋಚನಾ ಸಭೆಗಳಲ್ಲಿ ಈ ಶಿಕ್ಷಕರಿಗೆ ಒಟ್ಟಾಗಿ ಲಿಬ್ ಬಗ್ಗೆ ಚಚಿಸಲು, ಅಗಸ್ತ್ಯ ಸಂಸ್ಥೆಯವರು ತರಬೇತಿ ನೀಡಲು ಅವಕಾಶ ಕಲ್ಪಿಸುವುದು
- ಲಿಬ್ ಬಳಕೆ ಮಾಡುತ್ತಿರುವ ಶಿಕ್ಷಕರಿಗೆ ತಿಂಗಳಿಗೊಮ್ಮೆ ಪರಸ್ಪರ ಚರ್ಚೆಗೆ ಅವಕಾಶ ಕಲ್ಪಿಸುವುದು, ಹಿಮ್ಮಾಹಿತಿ ಪಡೆಯುವುದು ಮತ್ತು ಹಿಮ್ಮಾಹಿತಿ ನೀಡುವುದು, ವಿಚಾರ ವಿನಿಮಯ ಮಾಡುವುದು, ಯಶೋಗಾಥೆಗಳಿದ್ದಲ್ಲಿ ಹಂಚಿಕೆ ಮಾಡಿಕೊಳ್ಳುವುದು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಸಮಾಲೋಚನಾ ಸಭೆಗಳಲ್ಲಿ ವಿಜ್ಞಾನ ಶಿಕ್ಷಕರಿಗೆ ಈ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವುದು, ಇಲಾಖಾ ತರಬೇತಿ(6–8ನೇ ತರಗತಿ ವಿಜ್ಞಾನ ಶಿಕ್ಷಕರ ತರಬೇತಿ)ಯಲ್ಲಿ ಸಮನ್ವಯಗೊಳಿಸುವುದು, ಭಾಗೀದಾರಿಕೆಯ ಅಗತ್ಯತೆ ಇವು ಗುಣಮಟ್ಟದ ಸುಧಾರಣೆಗೆ ಪೂರಕವಾದ ಅಂಶವಾಗಿರುವುದರಿಂದ ಇವುಗಳನ್ನು ಜಾರಿಗೊಳಿಸುವಂತೆ ಕ್ರಮಕೈಗೊಳ್ಳುವುದು.
- ಎನ್‌ಸಿಎಫ್–2005, ಮತ್ತು ರಚನಾ ತತ್ವಗಳನ್ನು ಅಳವಡಿಸಿಕೊಂಡು ಅನುಕೂಲಿಸುವ ಸಾಮರ್ಥ್ಯಗಳನ್ನು ಶಿಕ್ಷಕರಲ್ಲಿ ಬಲಗೊಳಿಸುವ ಅಗತ್ಯತೆ ತುಂಬಾ ಇದೆ.
- ಶಿಕ್ಷಕರು ಲಿಬ್‌ನಲ್ಲಿರುವ ಸಾಮಗ್ರಿಗಳನ್ನು ಬಳಸಿ ಮಕ್ಕಳು ತಾವೇ ಪ್ರಯೋಗಗಳನ್ನು ಮಾಡಲು ಅನುವು ಮಾಡಿ–ಕೊಡುವುದು.
- ಪೂರ್ವಜ್ಞಾನದ ಅನುಭವದಿಂದ ವಿಜ್ಞಾನದ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಪ್ರಯೋಗಗಳನ್ನು ಮಾಡುವುದು ಅತ್ಯಗತ್ಯವಾಗಿದೆ.
- ದೈನಂದಿನ ಅನುಭವಗಳನ್ನು ಸ್ವತ: ಪರಿಶೀಲಿಸಿ ವಿಶ್ಲೇಷಿಸಿ, ಚಿಂತನಾಶೀಲ ವಿಧಾನಗಳನ್ನು ಬೆಳೆಸಿಕೊಳ್ಳುವ ರೀತಿಯಲ್ಲಿ ಪ್ರಯೋಗಗಳನ್ನು ಮಾಡಿ, ಮಕ್ಕಳ ಕುತೂಹಲ ಹೆಚ್ಚಿಸಿ ಸೃಜನಶೀಲತೆಯ ಬೆಳೆವಣಿಗೆಗೆ ನೆರವಾಗುವುದು ಅತ್ಯಗತ್ಯವಾಗಿದೆ.
- ಮಕ್ಕಳು ತಮ್ಮ ಸುತ್ತಮುತ್ತಲಿನ ಪ್ರಪಂಚದ ಸಂಗತಿಗಳು, ಆಗುಹೋಗುಗಳು ಹಾಗೂ ಅದ್ಭುತಗಳನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.
- ಶೈಕ್ಷಣಿಕ ಚಟುವಟಿಕೆಗಳನ್ನು ಎನ್.ಜಿ.ಓ. ಮತ್ತು ಸರಕಾರಿ ಇಲಾಖೆಗಳ ಉತ್ತಮ ಸಹಯೋಗದಲ್ಲಿ ಅನುಷ್ಠಾನ ಮಾಡಬೇಕಾಗಿದೆ. ಅನುಪಾಲಕರು ಇಲಾಖೆಯ ಕಾರ್ಯಕ್ರಮವೆನ್ನುವಂತೆ ಉತ್ತಮ ರೀತಿಯಲ್ಲಿ ಶಾಲಾ ಭೇಟಿ ಮಾಡಿ ಉತ್ತೇಜನ ನೀಡಬೇಕಾಗಿದೆ.
- ಶಿಕ್ಷಕರು ಈ ಅವಕಾಶವನ್ನು ಉತ್ತಮ ವರವೆಂದು ಭಾವಿಸಿ ಭವಿಷ್ಯತ್ತಿಗೆ ಇದೇ ಮಾದರಿಗಳನ್ನು ಹೋಲುವ ಅಥವಾ ಅದಕ್ಕೆ ಮೀರಿದ ವಿಜ್ಞಾನ ಕಲಿಕೋಪಕರಣಗಳನ್ನು ತಯಾರಿಸುವಂತೆ ಮಾಡಬೇಕಾಗಿದೆ.
- ಶಿಕ್ಷಕರಿಗೆ ತಮ್ಮ ಕಾರ್ಯದ ಬಗ್ಗೆ ಸ್ವಾವಲೋಕನ ಮಾಡಲು ಅವಕಾಶ ಕಲ್ಪಿಸುವುದು.

************************

# ಉಪಸಂಹಾರ

ವಿಜ್ಞಾನ ಎಂದರೆ ಬದುಕುವ ಕ್ರಮ, ಮಾತ್ರವಲ್ಲದೆ ಕ್ರಮಬದ್ಧವಾಗಿ, ವೈಜ್ಞಾನಿಕವಾಗಿ ಮಾಡುವ ಚಿಂತನೆಯಾಗಿದೆ ಎಂದು ಹೇಳಬಹುದು. ಈ ವಿಶ್ವದಲ್ಲಿ ಶಾಂತವಾಗಿ ಮತ್ತು ಇರುವ ಸಂಪನ್ಮೂಲಗಳನ್ನು ಕ್ರಮಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಬಳಸುತ್ತಾ, ವೈಜ್ಞಾನಿಕವಾಗಿ ಬದುಕಬೇಕಾದರೆ ಅರ್ಥಪೂರ್ಣವಾದ ವಿಜ್ಞಾನ ಕಲಿಕೆ ಶಾಲೆಗಳಲ್ಲಿ ಸಾಗಬೇಕಾಗಿದೆ. ಶಾಲೆಗಳು ಮಕ್ಕಳಿಗೆ ಈ ಪ್ರಪಂಚದಲ್ಲಿನ ಅದ್ಭುತಗಳನ್ನು, ವಿಸ್ಮಯಗಳನ್ನು, ಸಂಪನ್ಮೂಲಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬೇಕು. ಇದಕ್ಕೆ ವಿಜ್ಞಾನ ಪ್ರಯೋಗಾಲಯವು ಪೂರಕವಾಗಿದೆ ಎಂದು ಹೇಳಬಹುದು. ಶಾಲೆಗಳಿಗೆ ಪ್ರಯೋಗಾಲಯವು ಬಹುಮುಖ್ಯವಾದ, ಉತ್ತಮವಾದ ಮತ್ತು ಅಗತ್ಯವಾದ ಭೌತಿಕ ಸೌಲಭ್ಯವಾಗಿದೆ. ಇವು ಮಕ್ಕಳಲ್ಲಿ ವೈಚಾರಿಕತೆಗೆ ಸಂಬಂಧಿಸಿದ ವೈಜ್ಞಾನಿಕ ಮನೋಭಾವ, ವಸ್ತುನಿಷ್ಠತೆ, ವಿಶ್ಲೇಷಣಾ ಮನೋಭಾವ, ಭಯ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಮನಸ್ಥಿತಿಗಳ ಭಾವನೆಗಳ ಬೆಳೆವಣಿಗೆಗೆ ಸಹಾಯ ಮಾಡಬೇಕು. ಸ್ವಂತ ಅನುಭವಗಳು ಮತ್ತು ಸ್ಥಳೀಯ ಜ್ಞಾನವನ್ನು ವಿಜ್ಞಾನದ ನಿಯಮಗಳು ಮತ್ತು ತತ್ವಗಳೊಂದಿಗೆ ತಾಳೆ ನೋಡುವಲ್ಲಿ ಮಕ್ಕಳನ್ನು ಆಸಕ್ತಿ ಮತ್ತು ಕುತೂಹಲವನ್ನು ಕೆರಳಿಸಬೇಕು ಮತ್ತು ಪೋಷಿಸಬೇಕು. ಆರೋಗ್ಯದ ಜೊತೆಯಲ್ಲಿ ವೈಯಕ್ತಿಕ, ಪರಿಸರದ ಮತ್ತು ವಿಶ್ವದ ಕುರಿತ ಕಾಳಜಿಗಳನ್ನು ಬೆಳೆಸಬೇಕು.

ಈ ನಿಟ್ಟಿನಲ್ಲಿ ಅಗಸ್ತ್ಯ ಅಂತರಾಷ್ಟ್ರೀಯ ಪ್ರತಿಷ್ಠಾನವು ಮೈಸೂರು ನಗರ ವಲಯದ 50 ಶಾಲೆಗಳಿಗೆ ವಿಜ್ಞಾನಕ್ಕೆ ಸಂಬಂಧಿಸಿದ ಕಡಿಮೆ ವೆಚ್ಚ ಮತ್ತು ವೆಚ್ಚ ರಹಿತ ವಿಜ್ಞಾನ ಕಲಿಕಾ ಸಾಮಗ್ರಿಗಳನನು ಪೆಟ್ಟಿಗೆಗಳಲ್ಲಿ ವ್ಯವಸ್ಥೆಗೊಳಿಸಿ ವಿಜ್ಞಾನ ಕಲಿಕೆಯನ್ನು ಅರ್ಥಪೂರ್ಣವಾಗಿಸುವ ಪ್ರಯತ್ನ ಮಾಡಿದೆ. ಇವು ಮಕ್ಕಳಲ್ಲಿ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ ಕೂಡಾ. ಈ ಅಧ್ಯಯನವು ಅಗಸ್ತ್ಯ ವಿಜ್ಞಾನ ಪೆಟ್ಟಿಗೆಯಲ್ಲಿ ಪ್ರಯೋಗಾಲಯಗಳ ಕಾರ್ಯನಿರ್ವಹಣೆ, ಕಲಿಕೆಯ ಮೇಲೆ ಅವುಗಳ ಪರಿಣಾಮ, ಇಲಾಖೆಯ ಸಹಯೋಗ ಮತ್ತು ಅನುಪಾಲನೆಯ ಕುರಿತು ಸಾಕಷ್ಟು ಒಳನೋಟಗಳನ್ನು ನೀಡಿದೆ. ಅಧ್ಯಯನದ ಒಳನೋಟಗಳನ್ನು ಆಧರಿಸಿಕೊಂಡು ಸುಧಾರಣೆಗೆ ಕ್ರಮ ಕೈಗೊಂಡಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಈ ಚಟುವಟಿಕೆ ಧನಾತ್ಮಕವಾಗಿ ಕಾರ್ಯನಿರ್ವಹಿಸುವಲ್ಲಿ ಸಂದೇಹವಿಲ್ಲ.

***********************************

# ಅನುಬಂಧಗಳು

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು

ಪೆಟ್ಟಿಗೆಯಲ್ಲಿ ಪ್ರಯೋಗಾಲಯ(LIB) ಕುರಿತಂತೆ ವಿದ್ಯಾರ್ಥಿಗಳ ವೀಕ್ಷಣಾ ನಮೂನೆ ಮತ್ತು ಪ್ರಶ್ನಾವಳಿ

ಶಾಲೆಯ ಹೆಸರು ಮತ್ತು ವಿಳಾಸ:

ವಿದ್ಯಾರ್ಥಿಯ ಹೆಸರು: ತರಗತಿ

**ಸೂಚನೆ:** ವೀಕ್ಷಕರು ವಿದ್ಯಾರ್ಥಿಗಳಿಗೆ ಪೆಟ್ಟಿಗೆಯಲ್ಲಿರುವ ಸಾಮಗ್ರಿಗಳನ್ನು ಬಳಸಿ ಯಾವುದಾದರೊಂದು ಪ್ರಯೋಗ/ಚಟುವಟಿಕೆ ಮಾಡಲು ತಿಳಿಸಿ ಮೊದಲ 4 ಪ್ರಶ್ನೆಗಳಿಗೆ ವೀಕ್ಷಣೆ ಮಾಡಿ ದರ್ಜಾ ಮಾಪನಿಯಲ್ಲಿ ಸೂಕ್ತವಾದ ಅಂಶಗಳನ್ನು ಗುರುತಿಸಿ. ಉಳಿದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಉತ್ತರಿಸಲಿ

| ಕ್ರ ಸ | ಪ್ರಶ್ನೆ | ಆಯ್ಕೆ |
|---|---|---|
| 1 | ವಿದ್ಯಾರ್ಥಿಯು LIB ನಲ್ಲಿರುವ ಪರಿಕರಗಳ ಪರಿಚಯ ಹೊಂದಿರುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 2 | ವಿದ್ಯಾರ್ಥಿಯು ಪರಿಕರಗಳನ್ನು ಬಳಸುವ ಕೌಶಲ ಹೊಂದಿರುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 3 | ಪ್ರಯೋಗದ ಮೂಲಕ ವಿಜ್ಞಾನದ ಸರಳ ಪರಿಕಲ್ಪನೆಗಳನ್ನು ವಿವರಿಸಬಲ್ಲನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 4 | ವಿದ್ಯಾರ್ಥಿಯು ಪ್ರಯೋಗಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 5 | ವಿದ್ಯಾರ್ಥಿಯು ಚಟುವಟಿಕೆಯನ್ನು ಆಸಕ್ತಿಯಿಂದ ನಿರ್ವಹಿಸುವನೇ/ಳೇ? ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 6 | ಶಿಕ್ಷಕರು ಶಾಲೆಯಲ್ಲಿ ವಾರದ ಯಾವ ದಿನದಲ್ಲಿ ಶಾಲಾ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಿ ತೋರಿಸುತ್ತಾರೆ?(ವಾರದ ಹೆಸರು ಬರೆಯಿರಿ) | |
| 7 | ನೀನು LIB ನಲ್ಲಿರುವ ಯಾವುದಾದರೂ 4 ಸಲಕರಣೆಗಳನ್ನು ಹೆಸರಿಸು. | |
| 8 | LIB ಬಳಸಿ ನೀನು ಗುಂಪಿನಲ್ಲಿ/ ವೈಯಕ್ತಿಕವಾಗಿ ಮಾಡಿರುವ ಯಾವುದಾದರೂ 2 ಪ್ರಯೋಗಗಳನ್ನು ಹೆಸರಿಸು. | |
| 9 | LIB ನಲ್ಲಿನ ಚಟುವಟಿಕೆಗಳಿಂದ ಪ್ರೇರಿತರಾಗಿ ನೀನು ಮಾಡಿರುವ ಯಾವುದಾದರೂ ಚಟುವಟಿಕೆ/ಪ್ರಯೋಗವನ್ನು ಹೆಸರಿಸು. | |
| 10 | ವಿಜ್ಞಾನ ಪ್ರಯೋಗಗಳಿಂದ ನಿನ್ನಲ್ಲಿರುವ ಮೂಢನಂಬಿಕೆಗಳು ಬದಲಾಗಿದ್ದರೆ ವಿವರಿಸು. | |
| 11 | ಪ್ರಯೋಗ ಅಥವಾ ವಿಜ್ಞಾನದಿಂದ ಅರಿತಿರುವ ಅಂಶಗಳನ್ನು ನಿನ್ನ ಜೀವನದಲ್ಲಿ ಅಳವಡಿಸಿರುವ ಬಗ್ಗೆ ತಿಳಿಸು. | |
| 12 | LIB ನಿಂದ ನಿನಗೆ ವಿಜ್ಞಾನ ಕಲಿಕೆ ಹೇಗೆ ಸುಲಭವಾಗಿದೆ? | |

**ಪೆಟ್ಟಿಗೆಯಲ್ಲಿ ಪ್ರಯೋಗಾಲಯ (LIB) ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನ**

(**LIB**) ತರಬೇತಿಯಾಗಿರುವ ಶಿಕ್ಷಕರಿಗಾಗಿ ವೀಕ್ಷಣಾ ನಮೂನೆ ಮತ್ತು ಪ್ರಶ್ನಾವಳಿ

ಶಾಲೆಯ ಹೆಸರು ಮತ್ತು ವಿಳಾಸ:

ವಿಜ್ಞಾನ ಶಿಕ್ಷಕರ ಹೆಸರು:

ಬೋಧಿಸುತ್ತಿರುವ ತರಗತಿ ಮತ್ತು ವಿಷಯ:

ವಿಜ್ಞಾನ ವಿಷಯಾಧಾರಿತವಾಗಿ ಪಡೆದಿರುವ ತರಬೇತಿ:

**ಸೂಚನೆ:** ವೀಕ್ಷಕರು ಶಿಕ್ಷಕರಿಗೆ ಪೆಟ್ಟಿಗೆಯಲ್ಲಿರುವ ಸಾಮಗ್ರಿಗಳನ್ನು ಬಳಸಿ ಯಾವುದಾದರೊಂದು ಪ್ರಯೋಗ/ಚಟುವಟಿಕೆ ಮೂಲಕ ಪರಿಕಲ್ಪನೆ ಕಲಿಯಲು ಅನುಕೂಲಿಸುವಂತೆ ತಿಳಿಸಿ. ಮೊದಲ 6 ಪ್ರಶ್ನೆಗಳಿಗೆ ಚಟುವಟಿಕೆ ವೀಕ್ಷಣೆ ಮಾಡಿ ದರ್ಜಾ ಮಾಪನಿಯಲ್ಲಿ ಸೂಕ್ತವಾದ ಅಂಶಗಳನ್ನು ಗುರುತಿಸಿ. ಉಳಿದ ಪ್ರಶ್ನೆಗಳನ್ನು ಐಖಃ ತರಬೇತಿಯಾಗಿರುವ ಶಿಕ್ಷಕರು ಉತ್ತರಿಸಲಿ

| ಕ್ರ ಸ | ಪ್ರಶ್ನೆ | ಆಯ್ಕೆ |
|---|---|---|
| 1 | LIB ನಲ್ಲಿರುವ ಪರಿಕರಗಳ ಬಗ್ಗೆ ಶಿಕ್ಷಕರು ಹೊಂದಿರುವ ಪರಿಚಯ: ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 2 | ಶಿಕ್ಷಕರು ಹೊಂದಿರುವ ಸಾಮಗ್ರಿ ನಿರ್ವಹಿಸುವ ಕೌಶಲ: ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 3 | ತರಗತಿಯಲ್ಲಿ ಶಿಕ್ಷಕರ ಪಾತ್ರ: ಅನುಕೂಲಿಸುತ್ತಾರೆ–1, ತಾವೇ ವಿವರಿಸುತ್ತಾರೆ–2, ಪರಿಣಾಮಕಾರಿಯಾಗಿಲ್ಲ–3 | |
| 4 | ತರಗತಿಯಲ್ಲಿ LIB ನಲ್ಲಿರುವ ಸಾಮಗ್ರಿಗಳನ್ನು ಮಕ್ಕಳು ಸ್ವತ: ಬಳಸುವ ರೀತಿ: ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| 5 | ವಿದ್ಯಾರ್ಥಿಗಳು ಸಕ್ರಿಯವಾಗಿ ತರಗತಿಯಲ್ಲಿ ಭಾಗವಹಿಸುತ್ತಾರೆಯೇ? ಎಲ್ಲರು–1, ಕೆಲವರು–2, ಭಾಗವಹಿಸುವುದಿಲ್ಲ–3 | |
| 6 | ಪ್ರಯೋಗ/ಚಟುವಟಿಕೆ ನಿರ್ವಹಿಸಿದ ಬಗ್ಗೆ ದಾಖಲೆಯ ನಿರ್ವಹಣೆ: ಉತ್ತಮ–1, ಸಾಧಾರಣ–2, ಅತೃಪ್ತಿಕರ–3 | |
| | ಈ ಕೆಳಗಿನ ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರಿಸಿ. ಒಂದು ಕಾರ್ಯಕ್ರಮದ ಗುಣಾತ್ಮಕ ದೇಷ್ಟಿಕೋನದಿಂದ ಅಧ್ಯಯನವನ್ನು ಕೈಗೊಂಡಿರುವುದರಿಂದ ವಸ್ತುನಿಷ್ಠವಾದ ಅಭಿಪ್ರಾಯ ತಿಳಿಸುವುದು. ಅಗತ್ಯವಿದ್ದಲ್ಲಿ ವೀಕ್ಷಕರಿಗೆ ದಾಖಲೆಯನ್ನು ತೋರಿಸುವುದು. | |
| 7 | ನಿಮ್ಮ ಶಾಲೆಯಲ್ಲಿ ವಿಜ್ಞಾನ ಪ್ರಯೋಗಾಲಯವಿದೆಯೇ? ಹೌದು–1 ಇಲ್ಲ–2 | |
| 8 | ಪ್ರಯೋಗಾಲಯದಲ್ಲಿ ಪಠ್ಯಕ್ಕೆ ಪೂರಕವಾದ ಸಾಮಗ್ರಿ/ಪರಿಕರಗಳು ಲಭ್ಯವಿದೆಯೇ? ಹೆಚ್ಚಿನವು–1, ಕೆಲವು–2, ಇಲ್ಲ–3 | |
| 9 | ಪೆಟ್ಟಿಗೆಯಲ್ಲಿ ಪ್ರಯೋಗಾಲಯ (LIB) ಕಾರ್ಯಕ್ರಮದ ಪರಿಚಯ ನಿಮಗಿದೆಯೇ? ಸ್ಪಷ್ಟ–1, ಸ್ವಲ್ಪ ಮಟ್ಟಿಗೆ–2, ಅಸ್ಪಷ್ಟ–3 | |
| 10 | LIB ನಲ್ಲಿರುವ ಪ್ರತಿಯೊಂದು ಪರಿಕರದ ಪರಿಚಯ ನಿಮಗಿದೆಯೇ? ಸ್ಪಷ್ಟ–1, ಸ್ವಲ್ಪ ಮಟ್ಟಿಗೆ–2, ಅಸ್ಪಷ್ಟ–3 | |
| 11 | LIB ಬಳಕೆಯ ಬಗ್ಗೆ ನಿಮಗೆ ಸಂಸ್ಥೆಯವರು ನೀಡಿರುವ ತರಬೇತಿ ನಿಮಗೆ ಪೆಟ್ಟಿಗೆಯಲ್ಲಿರುವ ಎಲ್ಲಾ ಪ್ರಯೋಗಗಳನ್ನು ನಿರ್ವಹಿಸಲು ಸಹಾಯಕವಾಗಿದೆಯೇ? ಎಲ್ಲವನ್ನೂ–1, ಕೆಲವನ್ನು–2, ಸಹಾಯಕವಾಗಿಲ್ಲ–3 | |
| 12 | ಪಟ್ಟಿಗೆಯಲ್ಲಿರುವ ಮಾರ್ಗದರ್ಶಿ ಸಹಾಯದಿಂದ ನೀವೇ ಸ್ವತ: ಪ್ರಯೋಗಗಳನ್ನು ಕೈಗೊಳ್ಳಬಹುದೇ? | |

| | | |
|---|---|---|
| | ಎಲ್ಲವನ್ನೂ–1, ಕೆಲವನ್ನು–2, ಸಹಾಯಕವಾಗಿಲ್ಲ–3 | |
| 13 | LIB ನಲ್ಲಿರುವ ಎಲ್ಲಾ ಸಾಮಗ್ರಿಗಳನ್ನು ಬಳಸಲಾಗುತ್ತಿದೆಯೇ? ಎಲ್ಲವನ್ನೂ–1, ಕೆಲವನ್ನು–2, ಬಳಸುತ್ತಿಲ್ಲ–3 | |
| 14 | LIB ಅನಗತ್ಯ ಸಾಮಗ್ರಿಗಳನ್ನು ಒಳಗೊಂಡಿದೆಯೇ? ಕೆಲವು –1, ಹೆಚ್ಚಿನವು –2, ಎಲ್ಲಾ–3 | |
| 15 | LIB ನಲ್ಲಿರುವ ಸಾಮಗ್ರಿಗಳು ಮಕ್ಕಳ ಸಂಖ್ಯೆಗನುಗುಣವಾಗಿದೆಯೇ? ವ್ಯಯಕ್ತಿಕವಾಗಿ ಮಾಡಲು–1, ಗುಂಪಿನಲ್ಲಿ ಮಾಡಲು–2, ಪ್ರಾತ್ಯಕ್ಷಿಕೆ ಮಾಡಲು ಮಾತ್ರ–3 | |
| 16 | LIB ನಲ್ಲಿ ವಿಜ್ಞಾನದ ಎಲ್ಲಾ ವಿಭಾಗಗಳಿಗೂ (ಭೌತ, ರಾಸಾಯನಿಕ, ಜೀವ ಶಾಸ್ತ್ರ, ಭೂಗೋಳ) ಸಂಬಂಧಿಸಿದ ಸಾಮಗ್ರಿಗಳು ಲಭ್ಯವಿದೆಯೇ? ಹೆಚ್ಚಿನವು–1, ಕೆಲವು–2, ಕೆಲವು –3 | |
| 17 | LIB ಸರಬರಾಜಾದ 10 ದಿನಗಳ ಕಾಲಾವಕಾಶದೊಳಗೆ ಎಲ್ಲಾ ಸಾಮಗ್ರಿಗಳ ಬಳಕೆ ಸಾಧ್ಯವೇ? ಹೌದು–1 ಇಲ್ಲ–2 | |
| 18 | LIB ನ್ನು ಸಮರ್ಪಕವಾಗಿ ಶಾಲಾವಧಿಯಲ್ಲಿ ಬಳಸಲು ಸಾಧ್ಯವಾಗುತ್ತಿದೆಯೇ? ಹೌದು–1 ಇಲ್ಲ–2 | |
| 19 | LIB ತಿಂಗಳ ಪಾಠ ಹಂಚಿಕೆಗೆ ಅನುಗುಣವಾಗಿ ಲಭ್ಯವಿದೆಯೇ? ಹೌದು–1 ಇಲ್ಲ–2 | |
| 20 | LIB ಶಾಲಾ ಪ್ರಯೋಗಾಲಯದಲ್ಲಿ ಇಲ್ಲದ ಪರಿಕರಗಳನ್ನು ಒಳಗೊಂಡಿದೆಯೇ? ಹೆಚ್ಚಿನವು–1, ಕೆಲವು–2, ಇಲ್ಲ–3 | |
| 21 | LIB ಚಟುವಟಿಕೆಗಳು ಪಠ್ಯಕ್ಕೆ ಪೂರಕವಾಗಿದೆಯೇ? ಎಲ್ಲಾ–1, ಹೆಚ್ಚಿನವು –2, ಕೆಲವು–3 | |
| 22 | LIB ಸ್ವಕಲಿಕೆ ಹಾಗೂ ಸಂತಸದಾಯಕ ಕಲಿಕೆಯನ್ನುಂಟುಮಾಡುತ್ತಿದೆಯೇ? ಹೌದು–1 ಇಲ್ಲ–2 | |
| 23 | LIB ವಿಜ್ಞಾನ ಕಲಿಕೆಗೆ ಅನುಕೂಲಿಸಿ, ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತಿದೆಯೇ? ಹೌದು–1 ಇಲ್ಲ–2 | |
| 24 | ಮಕ್ಕಳು ಪ್ರಯೋಗಗಳನ್ನು ವೀಕ್ಷಿಸಿ ಪ್ರಶ್ನಿಸುವ ಕೌಶಲ್ಯ ಹೆಚ್ಚಾಗಿದೆಯೇ? ಹೌದು–1, ಸ್ವಲ್ಪ ಮಟ್ಟಿಗೆ–2, ಇಲ್ಲ–3 | |
| 25 | LIB ಬಳಕೆಯ ಬಗ್ಗೆ ಸಂಸ್ಥೆಯವರಿಂದ ಸೂಕ್ತ ಮಾರ್ಗದರ್ಶನ ದೊರಕುತ್ತಿದೆಯೇ? ಅಗತ್ಯವಿದ್ದಷ್ಟು–1, ಪರಿಚಯಾತ್ಮಕ–2, ತರಬೇತಿಯೇ ಇಲ್ಲ–3 | |
| 26 | ಪೆಟ್ಟಿಗೆಯಲ್ಲಿನ ಪ್ರಯೋಗಗಳನ್ನು ಕಳೆದ ಸಾಲಿನಲ್ಲಿ ಮಾಡಿರುವಿರಾ? ಹೆಚ್ಚಿನವು–1, ಕೆಲವು–2, ಇಲ್ಲ–3 | |
| 27 | ಪೆಟ್ಟಿಗೆಯಲ್ಲಿನ ಪರಿಕರಗಳು ಹೊಡೆದುಹೋದರೆ/ಹಾಳಾದರೆ ಸಂಸ್ಥೆಯವರು ಕ್ರಮ ಕೈಗೊಳ್ಳುವರೇ? ಹೌದು–1 ಇಲ್ಲ–2 | |
| 28 | ಶಾಲೆಯಲ್ಲಿ ವಿಜ್ಞಾನ ಬೋಧಿಸುವ ಶಿಕ್ಷಕರಿಗೆಲ್ಲಾ LIB ತರಬೇತಿ ಆಗಿದೆಯೇ? ಹೌದು–1 ಇಲ್ಲ–2 | |
| 29 | ಇತರ ವಿಜ್ಞಾನ ಬೋಧಿಸುವ ಶಿಕ್ಷಕರು LIB ಬಳಸುತ್ತಾರೆಯೇ? ಹೌದು–1 ಇಲ್ಲ–2 | |
| 30 | ವಿಜ್ಞಾನ ಬೋಧಿಸುವ ಇತರ ಶಿಕ್ಷಕರೊಂದಿಗೆ ನೀವು ವಿಚಾರ ವಿನಿಮಯ ಮಾಡಿಕೊಂಡಿರುವಿರಾ? ಹೌದು–1 ಇಲ್ಲ–2 | |
| 31 | LIB ನ ಬಗ್ಗೆ ಹಿಮ್ಮಾಹಿತಿಯನ್ನು ಹೇಗೆ ನೀಡುತ್ತಿರುವಿರಿ? 10 ದಿನಗಳಿಗೊಮ್ಮೆ–1, ತಿಂಗಳಿಗೊಮ್ಮೆ–2, ನೀಡುತ್ತಿಲ್ಲ–3 | |
| 32 | ಹತ್ತು ಅಂಶದ ಕಾರ್ಯಕ್ರಮದಲ್ಲಿರುವ ಸರಳ ಪ್ರಯೋಗದ ಚಟುವಟಿಕೆಗಳಿಗೆ ಪೆಟ್ಟಿಗೆಯಲ್ಲಿನ ಪ್ರಯೋಗಗಳನ್ನು ಬಳಸಿರುವಿರಾ? ವಾರಕ್ಕೊಮ್ಮೆ ಎಲ್ಲಾ ಮಕ್ಕಳಿಗೂ ವೀಕ್ಷಣೆಗೆ ಅವಕಾಶ–1, ವಿಜ್ಞಾನ ತರಗತಿಯಲ್ಲಿ ಮಾತ್ರ–2, ಮಾಡುತ್ತಿಲ್ಲ–3 | |
| 33 | ಪರಿಕಲ್ಪನೆಯ ಕಲಿಕೆ ಮುಗಿದ ನಂತರ ಸಂಬಂಧಿಸಿದ LIB ಸರಬರಾಜಾದರೆ ಹೇಗೆ ಬಳಸಿಕೊಳ್ಳುವಿರಿ? | |
| 34 | ಪರಿಕಲ್ಪನೆ ಕಲಿಕೆಗೆ ಮೊದಲೇ LIB ಸರಬರಾಜಾದರೆ ಹೇಗೆ ಬಳಸಿಕೊಳ್ಳುವಿರಿ? | |
| 35 | LIB ಬಳಕೆಯಿಂದ ನಿಮ್ಮ ತರಗತಿ ಅನುಕೂಲಿಸುವಿಕೆಯಲ್ಲಿ ಆಗಿರುವ ಬದಲಾವಣೆಗಳೇನು? | |

| | | |
|---|---|---|
| 36 | LIB ಬಳಕೆಯಿಂದ ವಿದ್ಯಾರ್ಥಿಗಳಲ್ಲಾಗಿರುವ ಬದಲಾವಣೆಗಳೇನು? | |
| 37 | ಎಷ್ಟು ಇಲಾಖಾ ಮೇಲಧಿಕಾರಿಗಳು LIB ಬಳಕೆ ಕುರಿತಂತೆ ನಿಮ್ಮ ತರಗತಿ ವೀಕ್ಷಣೆ ಮಾಡಿ ಹಿಮ್ಮಾಹಿತಿ ನೀಡಿರುತ್ತಾರೆ? ಅಧಿಕಾರಿಗಳ ಹೆಸರು ಬರೆಯಿರಿ | |
| 38 | ಪ್ರತಿ ಪೆಟ್ಟಿಗೆ ಸರಬರಾಜಾದಾಗ ನಿಮಗೆ ಸಂಸ್ಥೆಯಿಂದ ಯಾವ ರೀತಿಯ ಮಾರ್ಗದರ್ಶನ ಬೇಕು? | |
| 39 | ಪೆಟ್ಟಿಗೆಗಳನ್ನು ಸಮರ್ಪಕವಾಗಿ ಬಳಸುವಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳಾವುವು? | |
| 40 | LIB ಕಾರ್ಯಕ್ರಮದ ಬಗ್ಗೆ ನಿಮ್ಮ ಒಟ್ಟಾರೆ ಅಭಿಪ್ರಾಯವೇನು? | |

## ಅಗಸ್ತ್ಯ ಪೆಟ್ಟಿಗೆಯಲ್ಲಿ ಪ್ರಯೋಗಾಲಯ (LIB) ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನ

## ಅನುಪಾಲನಾಧಿಕಾರಿಗಳಿಗಾಗಿ ಪ್ರಶ್ನಾವಳಿ

1. ಅಗಸ್ತ್ಯ ಕೇಂದ್ರದವರು ನಡೆಸುತ್ತಿರುವ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ನಿಮಗೆ ಪರಿಚಯವಿದೆಯೇ? ಹೌದು/ ಇಲ್ಲ
2. ಲಿಬ್ ತರಬೇತಿಯಾಗಿರುವ ಶಿಕ್ಷಕರ ವಿಜ್ಞಾನ ತರಗತಿ ವೀಕ್ಷಣೆ ಮಾಡಿರುವಿರಾ? ಹೌದು/ ಇಲ್ಲ ಎಷ್ಟು.. ..
3. ನಿಮ್ಮ ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿ ಎಷ್ಟು ಶಿಕ್ಷಕರು ಲಿಬ್‌ನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ?
4. ಎಷ್ಟು ಶಿಕ್ಷಕರಲ್ಲಿ ಲಿಬ್ ಬಳಸಿ ವಿಜ್ಞಾನ ಕಲಿಕೆಯನ್ನು ಪರಿಣಾಮಕಾರಿಯಾಗಿ ಅನುಕೂಲಿಸುವ ಸಾಮರ್ಥ್ಯ ಇದೆ?.. .
5. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಲಿಬ್ ಸಹಕಾರಿಯಾಗಿದೆಯೇ? ಹೌದು/ ಇಲ್ಲ
6. 10 ಅಂಶಗಳ ಕಾರ್ಯಕ್ರಮದಲ್ಲಿ ಲಿಬ್‌ನ್ನು ಯಾವ ರೀತಿ ಬಳಕೆ ಮಾಡಿರುತ್ತಾರೆ?
7. ಮಕ್ಕಳಲ್ಲಿ ಲಿಬ್ ಬಳಕೆಯ ನಂತರ ಆಗಿರುವ ಬದಲಾವಣೆಗಳೇನು?
8. ಲಿಬ್ ಬಗ್ಗೆ ನೀವು ಗಮನಿಸಿರುವ ಧನಾತ್ಮಕ ಅಂಶಗಳಾವುವು?
9. ಲಿಬ್ ಕಾರ್ಯಕ್ರಮದಲ್ಲಿ ನೀವು ಗಮನಿಸಿರುವ ಕೊರತೆಗಳೇನು?
10. ಲಿಬ್‌ನಿಂದ ಪ್ರೇರೇಪಿತರಾಗಿ ಯಾವುದಾದರೂ ಶಿಕ್ಷಕರು ಶಾಲೆಯಲ್ಲಿ ತಮ್ಮದೇ ಆದ ಪ್ರಯೋಗಾಲಯ ಅಥವಾ ವಿಜ್ಞಾನ ಕಲಿಕಾ ಸಾಮಗ್ರಿ ಸಿದ್ಧಗೊಳಿಸಿರುವರೇ?ಹೌದಾದಲ್ಲಿ ಹೆಸರಿಸಿ
11. ಶಾಲೆಯ ಬಾಗಿಲಿಗೆ ತಲುಪಿಸುವ ಲಿಬ್ ಉಪಕರಣಗಳನ್ನು ಶಿಕ್ಷಕರು ಬಳಸಲು ನೀವು ಯಾವ ರೀತಿಯ ಮಾರ್ಗದರ್ಶನವನ್ನು ನೀಡಿರುವಿರಿ?
12. ಲಿಬ್ ಬಗ್ಗೆ ನಿಮ್ಮ ಅಭಿಪ್ರಾಯವೇನು?

## ಪೆಟ್ಟಿಗೆಯಲ್ಲಿ ಪ್ರಯೋಗಾಲಯ– ಕಾರ್ಯಕ್ರಮದ ಮೌಲ್ಯಮಾಪನ ಅಧ್ಯಯನ

## ಅಗಸ್ತ್ಯ ಕೇಂದ್ರದವರಿಗೆ ಸಂದರ್ಶನ ನಮೂನೆ:

ಕಾರ್ಯನಿರ್ವಾಹಕರ ಹೆಸರು: ವಿದ್ಯಾರ್ಹತೆ:

ಸೇವಾನುಭವ:

ಒಟ್ಟು ಸಿಬ್ಬಂದಿ ವರ್ಗ

1. ಸಾಮಗ್ರಿಗಳು ಒಡೆದು ಹೋದರೆ/ ಹಾಳಾದರೆ ರಿಪ್ಲೇಸ್ ಮಾಡುತ್ತೀರಾ?
2. ಲಿಬ್ ಕಾರ್ಯ ಕ್ರಮಕ್ಕೆ ಶಿಕ್ಷಕರು ಹೇಗೆ ಸ್ಪಂದಿಸುತ್ತಾರೆ?
3. ಶಿಕ್ಷಕರಿಗೆ ನೀವು ಹೇಗೆ ಬೆಂಬಲ ನೀಡುತ್ತೀರಿ?
4. ಕಲಾ ಶಿಕ್ಷಕರು ಲಿಬ್ ಬಳಕೆ ಮಾಡುತ್ತಿದ್ದಲ್ಲಿ ಹೇಗೆ ಸ್ಪಂದಿಸುತ್ತಾರೆ.
5. ಲಿಬ್ ಸರಬರಾಜು ಮಾಡುವಾಗ ಶಿಕ್ಷಕರು ಮಾಹಿತಿ/ ಪ್ರಶ್ನೆ ಕೇಳುತ್ತಾರೆಯೇ?
6. ಲಿಬ್ ಬಗ್ಗೆ ಶಿಕ್ಷಕರ ಅಭಿಪ್ರಾಯವೇನು?
7. ಶಿಕ್ಷಕರು ಯಾವ ವಿಷಯದ ಬಗ್ಗೆ ಹೆಚ್ಚು ಪ್ರಶ್ನೆ ಕೇಳುತ್ತಾರೆ?
8. ಶಿಕ್ಷಕರು ತಮಗೆ ತರಬೇತಿ ಕಡಿಮೆ ಇದೆ ಎಂದು ಹೇಳುತ್ತಾರೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?
9. ಲಿಬ್ ಬಳಕೆ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?
10. ಲಿಬ್ ಕಾರ್ಯಕ್ರಮದಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳೇನು?

## ಪೆಟ್ಟಿಗೆಯಲ್ಲಿ ಪ್ರಯೋಗಾಲಯ–ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳ ಪಟ್ಟಿ

| Mysore North Range | |
|---|---|
| Sl.No | Name of the School |
| 1 | GHPS V V MOHALLA |
| 2 | BHARATI STRI SAMAJA HPS YADAVAGIRI |
| 3 | GHPS YADAVAGIRI |
| 4 | MATRU MANDALI H PS V V MOHALLA |
| 5 | GHPS MAJUNATH PURA |
| 6 | GHPS MEDAR'S BLOCK |
| 7 | GAYATRI SCHOOL TILAK NAGAR |
| 8 | GHPS M P UGRAPPA |
| 9 | GRACE H P S TILAK NAGAR |
| 10 | GHPS 3RD INFENTRY |
| 11 | GOVT RESIDENCIAL SCHOOL NAZARABAD |
| 12 | GHPS H.H.M.O.I JALAPURI |
| 13 | GHPS M.C.C COLONY |
| **MYSORE SOUTH RANGE** | |
| 14 | SHRI KRISHNARAJ GHPS B B GARDEN |
| 15 | GOVT SHARADA VILAS H P S KANAKAGIRI |
| 16 | GHPS 13TH CROSS ASHOK PURAM |
| 17 | GHPS RAILWAY WORK SHOP |
| 18 | GHPS K G KOPPALU |
| 19 | GHPS PAILVAN BASAYYA NAGAR, JAYANAGAR |
| 20 | GHPS KUVEMPUNAGAR |
| 21 | ADARSHA VIDYALAYA AND GHPS HALE KRISHNA-MURTHY PURAM |
| 22 | GHPS TONACHIKOPPALU |
| 23 | GHOS VASANT NAGAR |

********************************

# ಭಾಗ–3

ಎನ್.ಜಿ.ಒ–(ಒಟ್ಟು 5)

# ನಗರ ಸೌಲಭ್ಯ ವಂಚಿತ ಚಿಣ್ಣರ ತಂಗುಧಾಮ(ಯುಡಿಸಿ)ಗಳ ನಿರ್ವಹಣೆ

**ಉದ್ದೇಶಗಳು:**

1) ನಗರ ವಂಚಿತ ಮಕ್ಕಳ ಕೇಂದ್ರಗಳ ನಿರ್ವಹಣೆಯ ಮೌಲ್ಯಮಾಪನ ಮಾಡುವುದು.
2) ಯುಡಿಸಿ ಕೇಂದ್ರಗಳಲ್ಲಿ ನಗರ ವಂಚಿತ ಮಕ್ಕಳಿಗೆ ಸರಕಾರ ನಿಗದಿಪಡಿಸಿರುವ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳುವುದು.
3) ಯುಡಿಸಿ ಕೇಂದ್ರದಲ್ಲಿರುವ ಮಕ್ಕಳಿಗೆ ಸುರಕ್ಷತೆಯನ್ನು ಒದಗಿಸಲಾಗಿದೆಯೇ ಎನ್ನುವುದನ್ನು ತಿಳಿಯುವುದು.
4) ಯುಡಿಸಿ ಕೇಂದ್ರದಲ್ಲಿರುವ ಮಕ್ಕಳ ಶೈಕ್ಷಣಿಕ ಗುಣಮಟ್ಟವನ್ನು ಅರಿಯುವುದು
5) ಸರಕಾರ ಮತ್ತು ಎನ್.ಜಿ.ಒ.ಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮಗಳು ಹೇಗೆ ಅನುಷ್ಠಾನವಾಗುತ್ತಿದೆ ಎನ್ನುವುದನ್ನು ವಿಶ್ಲೇಷಿಸುವುದು.

**ಸ್ಯಾಂಪಲ್:**

- 6 ಯುಡಿಸಿ ಕೇಂದ್ರದಲ್ಲಿರುವ ವಿದ್ಯಾರ್ಥಿಗಳು–56
- ಸ್ವಯಂಸೇವಕರು–5
- ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು–5
- ಅನುಪಾಲನಾಧಿಕಾರಿಗಳು–ಬಿ.ಆರ್.ಸಿ, ಬಿ.ಆರ್.ಪಿ, ಸಿ.ಆರ್.ಪಿ

**ಸಾಧನಗಳು**

- ವೀಕ್ಷಣಾ ನಮೂನೆ
- ಮಕ್ಕಳಿಗೆ ಪ್ರಶ್ನಾವಳಿ
- ಸ್ವಯಂ ಸೇವಕರಿಗಾಗಿ ಪ್ರಶ್ನಾವಳಿ
- ಆಪ್ತ ಸಮಾಲೋಚಕರಿಗಾಗಿ ಪ್ರಶ್ನಾವಳಿ
- ಕೇಂದ್ರ ಶಾಲೆಯ ಮುಖ್ಯಶಿಕ್ಷಕರಿಗಾಗಿ ಪ್ರಶ್ನಾವಳಿ
- ಅನುಪಾಲಕರಿಗಾಗಿ ಸಂದರ್ಶನ ನಮೂನೆ

**ಮಾಹಿತಿ ಸಂಗ್ರಹಣೆ**

- ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಲಾಗುವುದು.

**ಮಾಹಿತಿ ವಿಶ್ಲೇಷಣೆ ಮತ್ತು ಅರ್ಥೈಸುವಿಕೆ:**

- ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಶ್ಲೇಷಣೆ

# ವಿಶ್ಲೇಷಣೆ ಮತ್ತು ಅರ್ಥೈಸುವಿಕೆ

**ದಾಖಲಾತಿ ಮತ್ತು ಹಾಜರಾತಿ ವಿವರ**

**ಕೋಷ್ಟಕ 51:–**

| ಪ್ರ.ಸ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನ ರಕ್ಷಾ |
|---|---|---|---|---|---|---|
| 1 | ವಿದ್ಯಾರ್ಥಿಗಳು ಕೇಂದ್ರ ಶಾಲೆಗೆ ದಾಖಲಾಗಿದ್ದಾರೆಯೇ?(ದಾಖಲಾತಿ ವಹಿ ಅವಲೋಕಿಸುವುದು) ಹೌದು/ಇಲ್ಲ | ಹೌದು | 5 ಮಕ್ಕಳು | ಹೌದು | ಇಲ್ಲ | ಹೌದು |
| 2 | ವಿವಿಧ ಅಧಿಕಾರಿಗಳ ಭೇಟಿಯ ಸಂದರ್ಭದ ಹಾಜರಾತಿ(ಸಂದರ್ಶನ ವಹಿಯ ಹಾಜರಾತಿ) ಮಾಹಿತಿಯನ್ನು ಪರಿಗಣಿಸಲಾಗಿದೆ. | 45%, 25%, 26%, 28% | 29%, 30%, 35%, 35% | 46%, 44% | 20%, 31%, 48%, 26%, 22% | 11% |

- ಅಧ್ಯಯನಕಾರರು ತಮ್ಮ ಭೇಟಿಯಲ್ಲಿ ಸಂದರ್ಭದಲ್ಲಿ ದಾಖಲಿಸಿರುವ ಮತ್ತು ಸಂದರ್ಶನ ವಹಿಯಲ್ಲಿ ವಿವಿಧ ಅಧಿಕಾರಿಗಳು ನಮೂದಿಸಿರುವ ಹಾಜರಾತಿಯನ್ನು ವಿಶ್ಲೇಷಿಸಿದಾಗ 5 ಯುಡಿಸಿ ಕೇಂದ್ರಗಳ ಹಾಜರಾತಿಯು ತೃಪ್ತಿಕರವಾಗಿಲ್ಲದಿರುವುದು ಕಂಡು ಬಂದಿರುತ್ತದೆ.

**ಕೋಷ್ಟಕ 52:–**

| ಪ್ರಶ್ನೆ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| 3 | ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿ ಲಭ್ಯವಿದೆಯೇ? | ಇಲ್ಲ | ಇಲ್ಲ | ಇದೆ | ಇಲ್ಲ | ಇಲ್ಲ |
| 4 | ದಾಖಲಾಗಿರುವ ಮಕ್ಕಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯಲ್ಲಿರುವ ಮಕ್ಕಳ ಸಂಖ್ಯೆ: | ಕೇಂದ್ರಕ್ಕೆ ದಾಖಲಾಗಿರುವ ಮಕ್ಕಳಿಗೂ ಬ್ಲಾಕ್‌ಗಳಲ್ಲಿ ಲಭ್ಯವಿರುವ ಒ.ಒ.ಎಸ್.ಸಿ. ಮಕ್ಕಳ ಪಟ್ಟಿಗೂ ತಾಳೆಯಿರುವುದಿಲ್ಲ. | | | | |

- ಒಂದು ಕೇಂದ್ರವನ್ನು ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿ ಲಭ್ಯವಿರುವುದಿಲ್ಲ. ಕೇಂದ್ರಕ್ಕೆ ದಾಖಲಾಗಿರುವ ಮಕ್ಕಳಿಗೂ ಬ್ಲಾಕ್‌ಗಳಲ್ಲಿ ಲಭ್ಯವಿರುವ ಒ.ಒ.ಎಸ್.ಸಿ. ಮಕ್ಕಳ ಪಟ್ಟಿಯಲ್ಲಿರುವ ಮಕ್ಕಳ ಹೆಸರಿಗೂ ತಾಳೆ ಇರುವುದಿಲ್ಲ.

**ಭೌತಿಕ ಸೌಲಭ್ಯ /ದಾಖಲೆಗಳ ವ್ಯವಸ್ಥೆ ಮತ್ತು ನಿರ್ವಹಣೆ**

**ವಸತಿ ವ್ಯವಸ್ಥೆ ಮತ್ತು ಭದ್ರತೆಯ ವ್ಯವಸ್ಥೆ:–**

**ಕೋಷ್ಟಕ 53:–**

| ಪ್ರ. ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|---|---|---|---|---|
| | **ಪ್ರಶ್ನೆ** | **ಆಯ್ಕೆ** | | | | | **ನಿರ್ವಹಣೆ** | | | | |
| 5 | ಲಭ್ಯವಿರುವ ಕೊಠಡಿಗಳ ಸಂಖ್ಯೆ | 2 | 2 | 2 | 1 | 2 | 3 | 2 | 2 | 2 | – |
| 6 | ಐವತ್ತು ಮಕ್ಕಳಿಗಾಗುವಷ್ಟು ವಿಶಾಲವಾದ ಗಾಳಿ ಬೆಳಕುಗಳುಳ್ಳ ಕೊಠಡಿ ವ್ಯವಸ್ಥೆ | ಇಲ್ಲ | | | | | 1 | 1 | 2 | 2 | – |
| 7 | ಸುರಕ್ಷಿತವಾದ ಅಡುಗೆ ಕೋಣೆ | ಎಲ್ಲವೂ ಒಂದೇ ಕೊಠಡಿಯಲ್ಲಿದೆ. | | | | ಇದೆ | 3 | 3 | 2 | 2 | – |
| 8 | ಪ್ರತ್ಯೇಕ ತರಗತಿ ಕೊಠಡಿ | ಇಲ್ಲ | | | | ಇದೆ | 2 | 2 | 2 | 2 | – |
| 9 | ಕಟ್ಟಡಕ್ಕೆ ಭದ್ರತೆಯ ವ್ಯವಸ್ಥೆ | ಇಲ್ಲ | | | ಇದೆ | ಇಲ್ಲ | 3 | 2 | 2 | 1 | – |

- ಭೀಮ್ ಹೊರತುಪಡಿಸಿ ಉಳಿದೆಲ್ಲಾ ಕೇಂದ್ರಗಳಲ್ಲಿ ಎರಡು ಕೊಠಡಿಗಳಿರುತ್ತದೆ. ಕೊಠಡಿಗಳು 50 ಮಕ್ಕಳಿಗಾಗುವಷ್ಟು ವಿಶಾಲವಾಗಿಲ್ಲ. ಮಕ್ಕಳ ಸಂಖ್ಯೆ ತುಂಬಾ ಕಡಿಮೆ ಇರುವುದರಿಂದ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದಾರೆ.
- ಜನರಕ್ಷಾ ಕೇಂದ್ರ ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ಪ್ರತ್ಯೇಕ ಅಡುಗೆ ಕೋಣೆ ಮತ್ತು ತರಗತಿ ಕೊಠಡಿಗಳಿರುವುದಿಲ್ಲ.
- ಭದ್ರತೆಗೆ ಸಂಬಂಧಿಸಿದಂತೆ ಭೀಮ್–ಅಶೋಕಪುರಂ ಶಾಲೆಯಲ್ಲಿರುವುದರಿಂದ ಭದ್ರವಾದ ಆವರಣ ಮತ್ತು ಕಟ್ಟಡವು ಭದ್ರತಾ ವ್ಯವಸ್ಥೆಯನ್ನು ಹೊಂದಿರುತ್ತದೆ.

**ಶೌಚಾಲಯ ವ್ಯವಸ್ಥೆ**

**ಕೋಷ್ಟಕ 54:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| 10 | ಶೌಚಾಲಯಗಳ ಸಂಖ್ಯೆ | ಕೇಂದ್ರ ಶಾಲೆ ಬಳಕೆ | 2 | 1 | ಕೇಂದ್ರ ಶಾಲೆ ಬಳಕೆ | 2 |
| 11 | ಶೌಚಾಲಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿದೆಯೇ? | ಇಲ್ಲ | ಇದೆ | ಇಲ್ಲ | ಇದೆ | ಇದೆ |
| 12 | ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಇದೆಯೇ? | ಇದೆ | ಇದೆ | ಇದೆ | ಇದೆ | ಇದೆ |
| 13 | ಹೆಣ್ಣು ಮಕ್ಕಳಿದ್ದಲ್ಲಿ ಪ್ರತ್ಯೇಕ ವ್ಯವಸ್ಥೆ ಇದೆ–ಯೇ? | ಕೇಂದ್ರ ಶಾಲೆ ಬಳಕೆ | ಇದೆ | ಇಲ್ಲ | ಇದೆ | ಹೆಣ್ಣು ಮಕ್ಕಳಿಲ್ಲ |
| 14 | ಸ್ನಾನದ ಮನೆ ಇದೆಯೇ? | ಇದೆ | ಇದೆ | ಇದೆ | ಇಲ್ಲ (ಶೌಚಾಲಯದಲ್ಲಿ) | ಇದೆ |

- ಕೆಲವು ಕೇಂದ್ರಗಳಿಗೆ ಶೌಚಾಲಯ ವ್ಯವಸ್ಥೆ ಇದ್ದು, ಶೌಚಾಲಯ ಇಲ್ಲದಿರುವ ಕೇಂದ್ರಗಳಲ್ಲಿ ಕೇಂದ್ರ ಶಾಲೆಯ ಶೌಚಾಲಯಗಳನ್ನು ಬಳಸುತ್ತಿರುವುದು ಕಂಡು ಬಂದಿದೆ.
- ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ ಮತ್ತು ಜನಜಾಗೃತಿ– ಹಾರ್ಸ್‌ಲೇನ್ ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ವ್ಯವಸ್ಥೆ ಇರುವುದಿಲ್ಲ.
- ಜನಜಾಗೃತಿ– ಹಾರ್ಸ್‌ಲೇನ್ –ಈ ಕೇಂದ್ರದಲ್ಲಿ ಮಾತ್ರ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ ಇಲ್ಲದಿರುವುದನ್ನು ಗಮನಿಸಬಹುದು. ಉಳಿದ ಕೇಂದ್ರಗಳಲ್ಲಿ ಈ ಸಮಸ್ಯೆ ಕಂಡು ಬಂದಿರುವುದಿಲ್ಲ.
- ಭೀಮ್–ಅಶೋಕಪುರಂ ಈ ಕೇಂದ್ರದಲ್ಲಿರುವ ಮಕ್ಕಳು ಮಾತ್ರ ಶೌಚಾಲಯದಲ್ಲೇ ಸ್ನಾನ ಮಾಡುತ್ತಿದ್ದಾರೆ. ಉಳಿದ ಕೇಂದ್ರಗಳಲ್ಲಿ ಸ್ನಾನದ ಮನೆ ವ್ಯವಸ್ಥೆ ಇರುತ್ತದೆ.

**ನೀರು ಮತ್ತು ಇತರೆ ವ್ಯವಸ್ಥೆಗಳು:**

**ಕೋಷ್ಟಕ 55:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃ | ಜನ ಜಾಗೃ | [illegible] | [illegible] |
|---|---|---|---|---|---|---|
| 15 | ಕುಡಿಯಲು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ? | ಕುಡಿಯಲು ನೀರಿನ ವ್ಯವಸ್ಥೆ ಇರುತ್ತದೆ. ವಾಟರ್ ಫಿಲ್ಟರ್ ಅಳವಡಿಸಿರುವುದಿಲ್ಲ. | | | ಇದೆ | ಇದೆ |
| 16 | ಶೌಚ, ಬಟ್ಟೆ ತೊಳೆಯಲು ಮತ್ತು ಸ್ನಾನಕ್ಕೆ ನೀರಿನ ವ್ಯವಸ್ಥೆ ಇದೆಯೇ? | ಸ್ನಾನದ ಮನೆಯಲ್ಲಿ ಬರುವ ನೀರನ್ನೇ ಬಳಸಲಾಗುತ್ತಿದೆ. | | | ಇದೆ | ಇದೆ |
| 17 | ವಿದ್ಯುತ್ ಸೌಲಭ್ಯ ವ್ಯವಸ್ಥೆ ಇದೆಯೇ? | ಇದೆ | ಇದೆ | ಇದೆ | ಇದೆ | ಇದೆ |
| 18 | ದೂರದರ್ಶನ/ರೇಡಿಯೋ ವ್ಯವಸ್ಥೆ ಇದೆಯೇ? | ಇಲ್ಲ | ಇಲ್ಲ | ಇದೆ | ಇದೆ | ಇದೆ |

- ಎಲ್ಲಾ ಕೇಂದ್ರಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆ ಇದೆ. ಆದರೆ ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ, ಜಾಗೃತಿ–ಚಾಮುಂಡಿಪುರಂ ಈ ಎರಡು ಕೇಂದ್ರಗಳಲ್ಲಿ ವಾಟರ್ ಫಿಲ್ಟರ್ ಅಳವಡಿಸಿರುವುದಿಲ್ಲ.
- ಶೌಚ, ಸ್ನಾನ ಮತ್ತು ಬಟ್ಟೆ ಬರೆ ತೊಳೆಯಲು ಒಂದಲ್ಲಾ ಒಂದು ರೀತಿಯಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ.
- ಎಲ್ಲಾ ಕೇಂದ್ರಗಳಲ್ಲೂ ವಿದ್ಯುತ್ ವ್ಯವಸ್ಥೆ ಮಾಡಲಾಗಿದೆ. ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ, ಜಾಗೃತಿ– ಚಾಮುಂಡಿಪುರಂ ಈ ಎರಡು ಕೇಂದ್ರಗಳಲ್ಲಿ ದೂರದರ್ಶನ ಮತ್ತು ರೇಡಿಯೋ ವ್ಯವಸ್ಥೆಗಳಿರುವುದಿಲ್ಲ.

**ಮಕ್ಕಳಿಗೆ ಮಲಗುವ ವ್ಯವಸ್ಥೆ:**

**ಕೋಷ್ಟಕ 56:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| | | ಆಯ್ಕೆ | | | | |
| 19 | ಪ್ರತ್ಯೇಕವಾದ ಮಲಗುವ ಕೊಠಡಿ ಇದೆಯೇ? | ಇದೆ | ಪ್ರತ್ಯೇಕವಾಗಿ ಮಲಗುವ ಕೊಠಡಿ ಲಭ್ಯವಿರುವುದಿಲ್ಲ. | | | ಇದೆ |
| 20 | ಪ್ರತಿ ಮಗುವಿಗೂ ಬೆಡ್‌ಶೀಟ್ ಒದಗಿಸಲಾಗಿದೆಯೇ? | ಹೌದು | ಹೌದು | ಹೌದು | ಹೌದು | ಹೌದು |
| 21 | ಪ್ರತಿ ಮಗುವಿಗೂ ಬೆಡ್ಡಿಂಗ್ ವ್ಯವಸ್ಥೆಯನ್ನು ಒದಗಿಸಲಾಗಿದೆಯೇ? | ಪ್ರತಿ ಮಗುವಿಗೂ ಬೆಡ್ಡಿಂಗ್ ವ್ಯವಸ್ಥೆ ಮಾಡಿರುವುದಿಲ್ಲ, ಬದಲಾಗಿ ಚಾಪೆ ಒದಗಿಸಲಾಗಿದೆ. | | | ಚಾಪೆ, ಕಾರ್ಪೆಟ್ ನೀಡಿದೆ | ಇಲ್ಲ |

- ಜಾಗೃತಿ, ಜನಜಾಗೃತಿ ಮತ್ತು ಭೀಮ್ ಕೇಂದ್ರದಲ್ಲಿ ಮಕ್ಕಳಿಗೆ ಮಲಗಲು ಕೊಠಡಿ ಪ್ರತ್ಯೇಕ ಇರುವುದಿಲ್ಲ.
- ಎಲ್ಲಾ ಮಕ್ಕಳಿಗೂ ಬೆಡ್ ಶೀಟ್ ಒದಗಿಸಲಾಗಿದೆ. ಬೆಡ್ಡಿಂಗ್ ವ್ಯವಸ್ಥೆಯನ್ನು ಯಾವುದೇ ಕೇಂದ್ರದಲ್ಲಿ ಮಾಡಿರುವುದಿಲ್ಲ.

**ಕ್ರೀಡಾ ಚಟುವಟಿಕೆಗಳಿಗೆ ವ್ಯವಸ್ಥೆ:**

**ಕೋಷ್ಟಕ 57:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| 22 | ಕ್ರೀಡಾ ಚಟುವಟಿಕೆ ನಡೆಸಲು ಮೈದಾನ ವ್ಯವಸ್ಥೆ ಇದೆಯೇ? | ಇದೆ | ಇದೆ | ಇದೆ | ಇದೆ | ಇಲ್ಲ |
| 23 | ಆಟ ಆಡಲು ಕ್ರೀಡಾ ಸಾಮಗ್ರಿಗಳಿವೆಯೇ? | ಚೆಂಡು ಮಾತ್ರ ಲಭ್ಯವಿದೆ. | | ಕೆಲವು ಸಾಮಗ್ರಿಗಳು | ಚೆಸ್ ಬೋರ್ಡ್, ಬಾಲ್ | ಕೆಲವು |

- ಜನರಕ್ಷಾ ಒಂದು ಕೇಂದ್ರವನ್ನು ಹೊರತುಪಡಿಸಿ ಉಳಿದ ಎಲ್ಲಾ ಕೇಂದ್ರಗಳಲ್ಲಿ ಮಕ್ಕಳಿಗೆ ಆಟವಾಡಲು ಆಟದ ಮೈದಾನವಿರುತ್ತದೆ.
- ಆದರೆ ಆಟವಾಡಲು ಚೆಂಡು, ಚೆಸ್ ಇತ್ಯಾದಿ ಕೆಲವೇ ಕೆಲವು ಸಾಮಗ್ರಿಗಳು ಲಭ್ಯವಿದ್ದು, ಮಕ್ಕಳ ಆಟೋಟಗಳಿಗೆ ಹೆಚ್ಚಿನ ಆಟೋಪಕರಣಗಳಿಲ್ಲದಿರುವುದನ್ನು ಗಮನಿಸಬಹುದಾಗಿದೆ.

**ಊಟದ/ಉಪಹಾರದ ವ್ಯವಸ್ಥೆ:**

**ಕೋಷ್ಟಕ 58:–**

| ಪ್ರ. ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| | | ಆಯ್ಕೆ | | | | |
| 24 | ಶಾಲಾ ದಿನಗಳಲ್ಲಿ ಮದ್ಯಾಹ್ನದ ಊಟವನ್ನು ಅಕ್ಷರ ದಾಸೋಹದಡಿಯಲ್ಲಿ ನೀಡಲಾಗುತ್ತಿದೆಯೇ? | ಹೌದು | ಹೌದು | ಹೌದು | ಹೌದು | ಹೌದು |
| 25 | ಬೆಳಗ್ಗಿನ ಮತ್ತು ರಾತ್ರಿ ಊಟದ/ಉಪಾಹಾರ ಸಾಮಾಗ್ರಿಗಳ ದಾಸ್ತಾನು ವ್ಯವಸ್ಥೆ ಉತ್ತಮವಾಗಿದೆಯೇ? | ಇಲ್ಲ | ಇಲ್ಲ | ಇದೆ | ಇದೆ | – |
| 26 | ಊಟದ/ಉಪಹಾರ ಮೆನು(ಇಡ್ಲಿ, ಸಾಂಬಾರು, ಚಿತ್ರಾನ್ನ, ಉಪ್ಪಿಟ್ಟು, ಅವಲಕ್ಕಿ, ಪುಳಿಯೋಗರೆ ಮತ್ತು ಇನ್ನಿತರೆ, ರಾತ್ರಿ ಊಟಕ್ಕೆ ರಾಗಿಮುದ್ದೆ, ಚಪಾತಿ, ಅನ್ನ ಸಾಂಬಾರು, ಮಜ್ಜಿಗೆ, ರೊಟ್ಟಿ ಇತ್ಯಾದಿ)ಲಭ್ಯವಿದೆಯೇ? | ಮೆನು ಲಭ್ಯವಿರುತ್ತದೆ. | | | | ಅನ್ನ, ಸಾರು, ಉಪ್ಪಿಟ್ಟು |
| 27 | ಮೆನು ಪ್ರಕಾರ ಆಹಾರ ಒದಗಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 28 | ವಿಶೇಷ ಆಹಾರ ಸೌಲಭ್ಯ (ಭಾನುವಾರಗಳಂದು) | ಭಾನುವಾರಗಳಂದು ಭೇಟಿ ನೀಡಿಲ್ಲ. ಭಾನುವಾರಗಳಂದು ಮೊಟ್ಟೆ, ಚಿಕನ್ ನೀಡುತ್ತಾರೆಂದು ಮಕ್ಕಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. | | | | ಇದೆ |

- ಎಲ್ಲಾ ಕೇಂದ್ರಗಳಲ್ಲಿ ಶಾಲಾ ದಿನಗಳಲ್ಲಿ ಮಕ್ಕಳಿಗೆ ಮದ್ಯಾಹ್ನದ ಊಟವನ್ನು ಅಕ್ಷರ ದಾಸೋಹದಡಿಯಲ್ಲಿ ನೀಡಲಾಗುತ್ತಿದೆ.
- ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ, ಜಾಗೃತಿ–ಚಾಮುಂಡಿಪುರಂ ಈ ಕೇಂದ್ರಗಳಲ್ಲಿ ಊಟದ ಸಾಮಗ್ರಿಗಳ ದಾಸ್ತಾನು ಉತ್ತಮವಾಗಿಲ್ಲ. ಉಳಿದ ಕೇಂದ್ರಗಳಲ್ಲಿ ಉತ್ತಮವಾಗಿದೆ.
- ಎಲ್ಲಾ ಕೇಂದ್ರಗಳಲ್ಲಿ ಊಟ ತಿಂಡಿ ಮೆನು ಲಭ್ಯವಿದೆ, ಆದರೆ ಮೆನು ಪ್ರಕಾರ ಆಹಾರ ಒದಗಿಸದಿರುವುದು ಮಕ್ಕಳ ಜೊತೆ ಚರ್ಚಿಸಿದಾಗ ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಬಾತ್, ಉಪ್ಪಿಟ್ಟು ಇತ್ಯಾದಿಗಳನ್ನು ನೀಡುತ್ತಿರುವುದು ಕಂಡು ಬಂದಿದೆ.
- ಭಾನುವಾರಗಳಂದು ಮೊಟ್ಟೆ, ಚಿಕನ್ ನೀಡುತ್ತಾರೆಂದು ಮಕ್ಕಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಕೆಲವು ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು ಮಕ್ಕಳಿಗೆ ಭಾನುವಾರ ರಾತ್ರಿಗೆ ವಿಶೇಷ ಊಟ ನೀಡುತ್ತಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತಾರೆ

**ಇತರೆ ದೈನಂದಿನ ಬಳಕೆ ಸಾಮಾಗ್ರಿ ವ್ಯವಸ್ಥೆ:**

**ಕೋಷ್ಟಕ 59:–**

| ಪ್ರ. ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| 29 | ಪ್ರತಿ ಮಗುವಿಗೂ ಬಟ್ಟೆ, ಟವಲ್, ಟ್ರಂಕ್, ಹಾಸಿಗೆಗಳನ್ನು ಒದಗಿಸಲಾಗಿದೆಯೇ? | ಬಟ್ಟೆ ಹಾಗೂ ಟವೆಲ್ ನೀಡಲಾಗಿದೆ ಆದರೆ ಟ್ರಂಕ್ ಹಾಗೂ ಹಾಸಿಗೆಗಳನ್ನು ಒದಗಿಸಿರುವುದಿಲ್ಲ. | | | ಟ್ರಂಕ್, ಚಾಪೆ ನೀಡಿದೆ | ಇದೆ |
| 30 | ದೈನಂದಿನ ಸಾಮಗ್ರಿಗಳಾದ ಸ್ನಾನದ ಸೋಪು, ಬಟ್ಟೆ ತೊಳೆಯುವ ಸೋಪು, ಕೊಬ್ಬರಿ ಎಣ್ಣೆ, ಬಾಚಣಿಕೆ, ತಟ್ಟೆ, ಲೋಟ, ಪೇಸ್ಟ್, ಬ್ರಷ್, ಮುಖಾಲಂಕಾರ ಸಾಮಗ್ರಿ, ಇತ್ಯಾದಿಗಳನ್ನು ಒದಗಿಸಲಾಗಿದೆಯೇ? | ಹೌದು, ಆದರೆ ಮುಖ ಅಲಂಕಾರ ಸಾಮಗ್ರಿಗಳನ್ನು ನೀಡಿರುವುದಿಲ್ಲ. | | | | |

- ಎಲ್ಲಾ ಕೇಂದ್ರಗಳಲ್ಲಿ ಮಕ್ಕಳ ದಿನ ನಿತ್ಯದ ಬಳಕೆಗೆ ಬಟ್ಟೆ, ಟವಲ್ ಒದಗಿಸಲಾಗಿದೆ.
- ಭೀಮ್–ಅಶೋಕ ಪುರಂ ಈ ಒಂದು ಕೇಂದ್ರದಲ್ಲಿ ಮಾತ್ರ ಮಕ್ಕಳಿಗೆ ಟ್ರಂಕ್‌ಗಳನ್ನು ನೀಡಲಾಗಿದ್ದು, ಉಳಿದ ಯಾವುದೇ ಕೇಂದ್ರಗಳಲ್ಲಿ ಮಕ್ಕಳ ಬಟ್ಟೆ ಬರೆ ಮತ್ತು ಸಾಮಗ್ರಿಗಳನ್ನು ಜೋಡಿಸಿಕೊಳ್ಳಲು ಟ್ರಂಕ್‌ಗಳನ್ನು ಒದಗಿಸಿಲ್ಲ.
- ಮಕ್ಕಳಿಗೆ ಮಲಗಲು ಹಾಸಿಗೆಗಳನ್ನು ಯಾವ ಕೇಂದ್ರಗಳಲ್ಲೂ ವ್ಯವಸ್ಥೆ ಮಾಡಿರುವುದಿಲ್ಲ.
- ದೈನಂದಿನ ಸಾಮಗ್ರಿಗಳನ್ನು ಎಲ್ಲಾ ಕೇಂದ್ರದಲ್ಲಿ ನೀಡಲಾಗಿದ್ದು, ಮುಖ ಅಲಂಕಾರಿಕ ಸಾಮಗ್ರಿಗಳನ್ನು ಯಾವುದೇ ಕೇಂದ್ರದಲ್ಲಿ ನೀಡಿರುವುದಿಲ್ಲ.

**ವೇಳಾಪಟ್ಟಿ:**

**ಕೋಷ್ಟಕ 60:–**

| ಪ್ರಶ್ನೆ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| 31 | ವೇಳಾಪಟ್ಟಿ ಸಿದ್ಧಪಡಿಸುವರೇ | ಇಲ್ಲ | ಇಲ್ಲ | ಇದೆ | ಇದೆ | ಇದೆ |
| 32 | ವೇಳಾಪಟ್ಟಿಯಲ್ಲಿ ಊಟ, ವಿರಾಮ, ಮನರಂಜನೆ, ಶೌಚ, ಅಧ್ಯಯನಕ್ಕೆ, ಧ್ಯಾನಕ್ಕೆ ಅವಕಾಶ ನೀಡಲಾಗಿದೆಯೇ? | ಇಲ್ಲ | ಇಲ್ಲ | ಇದೆ | ಇಲ್ಲ | ಇಲ್ಲ |
| 33 | ವೇಳಾಪಟ್ಟಿಗನುಗುಣವಾಗಿ ತರಗತಿಗಳು ನಡೆಯುತ್ತಿದೆಯೇ? | ಇಲ್ಲ | ಇಲ್ಲ | ಇದೆ | ಇಲ್ಲ | ಇಲ್ಲ |

- ಎಲ್ಲಾ ಕೇಂದ್ರಗಳಲ್ಲಿ ವೇಳಾ ಪಟ್ಟಿ ಲಭ್ಯವಿದೆ. ಯಾವುದೇ ಕೇಂದ್ರದಲ್ಲಿ ನಿಯಮಿತವಾಗಿ ವೇಳಾಪಟ್ಟಿ ಸಿದ್ಧಪಡಿಸಿರುವುದಿಲ್ಲ ಮತ್ತು ಅದಕ್ಕನುಸಾರವಾಗಿ ಪಠ್ಯ ಸಹಪಠ್ಯ ಚಟುವಟಿಕೆಗಳು ನಡೆಯುತ್ತಿಲ್ಲ.

**ಮಕ್ಕಳನ್ನು ಸಿ.ಡಬ್ಲ್ಯೂ.ಸಿ ಮುಂದೆ ಹಾಜರುಪಡಿಸುವ, ಸಿಬ್ಬಂದಿ ಮತ್ತು ವೇತನದ ಬಗ್ಗೆ:**

**ಕೋಷ್ಟಕ 61:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃ | ಜನ ಜಾಗೃ | ಭೀಮ್ | ಜನರಕ್ಷಾ |
|---|---|---|---|---|---|---|
| 34 | ಕೇಂದ್ರಕ್ಕೆ ದಾಖಲಾದ ಪ್ರತಿ ಮಗುವನ್ನು ಸಂದರ್ಭಕ್ಕೆ ಅನುಗುಣವಾಗಿ ಸಿ.ಡಬ್ಲ್ಯೂ.ಸಿ ಮುಂದೆ ಹಾಜರುಪಡಿಸಲಾಗಿಯೇ? | ಹೌದು, ದಾಖಲೆ ಲಭ್ಯವಿಲ್ಲ. | | | ಒಂದು ಬಾರಿ | ಇಲ್ಲ |
| 35 | ನಿಗದಿತ ದಾಖಲಾತಿಗನುಗುಣವಾಗಿ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆಯೇ? (30–50 ಮಕ್ಕಳಿಗನುಗುಣವಾಗಿ) | ಒಬ್ಬರು | ಒಬ್ಬರು | ಹೌದು | ಇಬ್ಬರು | ನಾಲ್ಕು |
| 36 | ವಾರ್ಡನ್ | ಇಲ್ಲ | ಇಲ್ಲ | ಹೌದು | ಹೌದು | ಹೌದು |
| 37 | ಹೆಣ್ಣು ಮಕ್ಕಳಿದ್ದಲ್ಲಿ ಮಹಿಳಾ ವಾರ್ಡನ್ ಲಭ್ಯವಿರುವರೇ? | ಇಲ್ಲ, ಮಹಿಳಾ ಸ್ವಯಂ ಸೇವಕರು ನಿರ್ವಹಿಸುತ್ತಾರೆ. | | ಹೌದು | ಇಲ್ಲ, ಮಹಿಳಾ ಸ್ವಸೇ | ಹೌದು |
| 38 | ಕ್ಷೇತ್ರ ಕಾರ್ಯಕರ್ತರು | ಹೌದು, ದಾಖಲೆ ಇಲ್ಲ | | ಹೌದು | ಹೌದು, ದಾಖಲೆ ಇಲ್ಲ | ಹೌದು |
| 39 | ಅಡಿಗೆಯವರು | ಹೌದು | ಹೌದು | ಹೌದು | ಹೌದು | ಹೌದು |

- ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ, ಜಾಗೃತಿ– ಚಾಮುಂಡಿಪುರಂ ಈ ಕೇಂದ್ರದವರು ಮಕ್ಕಳನ್ನು ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಿರುತ್ತಾರೆ. ಆದರೆ ಯಾವುದೇ ದಾಖಲೆ ಕೇಂದ್ರದಲ್ಲಿ ಲಭ್ಯವಿರುವುದಿಲ್ಲ. ಜನರಕ್ಷಾ–ಕೆಸರೆ ಇವರು ಮಕ್ಕಳನ್ನು ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಿರುವುದಿಲ್ಲ. ಈ ಅಂಶವು ಬಹುಮುಖ್ಯವಾಗಿದ್ದು, ಕೇಂದ್ರಗಳು ಅದನ್ನು ಪರಿಗಣನೆಗೆ ತೆಗೆದುಕೊಳ್ಳದಿರುವುದು ಸ್ಪಷ್ಟವಾಗಿದೆ.
- ಜಾಗೃತಿ– ಚಾಮುಂಡಿಪುರಂ ಮತ್ತು ಜನರಕ್ಷಾ– ಕೆಸರೆ ಇಲ್ಲಿ ಸಿಬ್ಬಂದಿ ನೇಮಕ ಮಾಡಲಾಗಿದೆ. ಆದರೆ ಪರಿಪೂರ್ಣವಾಗಿಲ್ಲ. ಉಳಿದ ಕೇಂದ್ರಗಳಲ್ಲಿ ನಿಗದಿತ ದಾಖಲಾತಿಗನುಗುಣವಾಗಿ ಸಿಬ್ಬಂದಿಯನ್ನು ನೇಮಕ ಮಾಡಲಾಗಿಲ್ಲ.
- ಜನಜಾಗೃತಿ– ಹಾರ್ಸ್‌ಲೇನ್, ಭೀಮ್–ಅಶೋಕ ಪುರಂ, ಜನರಕ್ಷಾ– ಕೆಸರೆ ಈ ಕೇಂದ್ರಗಳಲ್ಲಿ ವಾರ್ಡನ್ ಕಾರ್ಯನಿರ್ವಹಿಸುತ್ತಿದ್ದಾರೆ, ಉಳಿದ ಕೇಂದ್ರಗಳಲ್ಲಿ ವಾರ್ಡನ್ ಇರುವುದಿಲ್ಲ.
- ಕ್ಷೇತ್ರ ಕಾರ್ಯಕರ್ತರು ಕಾರ್ಯನಿರ್ವಹಿಸಿದ ಬಗ್ಗೆ ದಾಖಲೆ ಲಭ್ಯವಿಲ್ಲ.
- ಎಲ್ಲಾ ಕೇಂದ್ರಗಳಲ್ಲೂ ಅಡುಗೆ ಸಿಬ್ಬಂದಿ ನೇಮಕ ಮಾಡಲಾಗಿದೆ.

ಒಟ್ಟಾರೆಯಾಗಿ ಸರಕಾರ ನಿಗದಿ ಪಡಿಸಿರುವ ಕ್ರಮದಲ್ಲಿ ಸಿಬ್ಬಂದಿ ನೇಮಕಾತಿ ಆಗದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಮಕ್ಕಳ ಸಂಖ್ಯೆಯೂ ನಿರೀಕ್ಷಿತ ಪ್ರಮಾಣದಲ್ಲಿಲ್ಲದಿರುವುದನ್ನು ಗಮನಿಸಬಹುದು.

**ಕಲಿಕಾ ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು ಹಾಗೂ ಕೌನ್ಸಿಲಿಂಗ್ ಬಗ್ಗೆ :–**

**ಕೋಷ್ಟಕ 62:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| 40 | ಮಕ್ಕಳಿಗೆ ಬರೆಯುವ ಸಾಮಗ್ರಿ, ಚಾರ್ಟ್, ಕಲರ್ ಪೇಪರ್, ನೋಟ್ ಪುಸ್ತಕ, ಪೆನ್ನು, ಪನ್ಸಿಲ್, ರಬ್ಬರ್, ಡ್ರಾಯಿಂಗ್ ಶೀಟ್, ಚಾಕ್ ಪೀಸ್, ಕ್ರೇಯಾನ್ಸ್, ಪೇಪರ್‌ಗಳನ್ನು ಒದಗಿಸಲಾಗಿದೆಯೆ? | ಪುಸ್ತಕ, ಪೆನ್ನು, ಪೆನ್ಸಿಲ್, ರಬ್ಬರ್‌ಗಳನ್ನು ಮಾತ್ರ ಮಕ್ಕಳಿಗೆ ನೀಡಲಾಗಿದೆ. | | | | |
| 41 | ವರ್ಷಕ್ಕೆ ಮೂರು ಬಾರಿ ಸ್ಥಳೀಯ ವೈದ್ಯರಿಂದ ಕೌನ್ಸಿಲಿಂಗ್ ಮಾಡಲಾಗುತ್ತಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 42 | ತಜ್ಞರಿಂದ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

- ಪುಸ್ತಕ, ಪೆನ್ನು, ಪೆನ್ಸಿಲ್, ರಬ್ಬರ್‌ಗಳನ್ನು ಮಾತ್ರ ಮಕ್ಕಳಿಗೆ ನೀಡಲಾಗಿದೆ. ಇತರೆ ಆಕರ್ಷಕ ಕಲಿಕಾ ಸಾಮಗ್ರಿಗಳನ್ನು ಒದಗಿಸಿರುವುದಿಲ್ಲ.
- ಸುತ್ತೋಲೆಯಲ್ಲಿ ತಿಳಿಸಿದಂತೆ ಯಾವುದೇ ಯುಡಿಸಿ ಕೇಂದ್ರದಲ್ಲಿ ವರ್ಷಕ್ಕೆ ಮೂರು ಬಾರಿ ಸ್ಥಳೀಯ ವೈದ್ಯರಿಂದ ಕೌನ್ಸಿಲಿಂಗ್ ಮಾಡಿಲ್ಲ. ಈ ಮಕ್ಕಳಿಗೆ ಕೌನ್ಸಿಲಿಂಗ್ ಅತಿ ಅಗತ್ಯವಾಗಿ ಬೇಕಾಗಿದ್ದು ಅದನ್ನು ಒದಗಿಸದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ತಜ್ಞರಿಂದ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿಲ್ಲ.

**ಜೀವನ ಕೌಶಲ ಮತ್ತು ಪ್ರವಾಸದ ಬಗ್ಗೆ:–**

**ಕೋಷ್ಟಕ 63:–**

| ಪ್ರ ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ ಜನರಕ್ಷಾ |
|---|---|---|---|---|---|---|
| 43 | ಎರಡು ತಿಂಗಳಿಗೆ ಜೀವನ ಕೌಶಲ ತರಬೇತಿಯನ್ನು ನೀಡಲಾಗಿದೆಯೇ? (ಯೋಗ, ಧ್ಯಾನ, ಪ್ರಾಣಾಯಾಮ, ಸಂಗೀತ) | ಇಲ್ಲ | ಹೌದು | ಹೌದು | ಇಲ್ಲ | ಹೌದು |
| 44 | ಮಕ್ಕಳಲ್ಲಿ ಪರಿಸರ ಪ್ರೇಮ, ಐತಿಹಾಸಿಕ ಸ್ಥಳಗಳ ಪ್ರಾಮುಖ್ಯತೆ ಹಾಗೂ ವೈಜ್ಞಾನಿಕ ಪ್ರವೃತ್ತಿಗಳನ್ನು ಬೆಳೆಸಲು ಪ್ರವಾಸ ಏರ್ಪಡಿಸಲಾಗಿದೆಯೇ? | ಇಲ್ಲ | ಹೌದು | ಇಲ್ಲ | ಇಲ್ಲ | ಹೌದು |
| 45 | ಭಾಷಾ ಪ್ರಪಂಚದ ಬಗ್ಗೆ ಅನುಭವ ಗಳಿಸಲು ಅನುಕೂಲವಾಗುವಂತೆ ಸ್ಥಳೀಯ ಪೋಲೀಸ್ ಠಾಣೆ, ನ್ಯಾಯಾಲಯ, ಅಂಚೆ ಕಛೇರಿ, ಬ್ಯಾಂಕ್ ಇತ್ಯಾದಿ ಭೇಟಿಗಳನ್ನು ಹಮ್ಮಿಕೊಳ್ಳಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

- ಜನಜಾಗೃತಿ– ಹಾರ್ಸ್‌ಲೇನ್, ಜಾಗೃತಿ– ಚಾಮುಂಡಿಪುರಂ ಮತ್ತು ಜನರಕ್ಷಾ– ಕೆಸರೆ ಈ ಕೇಂದ್ರಗಳಲ್ಲಿ ಎರಡು ತಿಂಗಳಿಗೆ ಜೀವನ ಕೌಶಲ ತರಬೇತಿಯನ್ನು ನೀಡಿರುತ್ತಾರೆ. ಆದರೆ ಉಳಿದೆರಡು ಕೇಂದ್ರಗಳಲ್ಲಿ ಜೀವನ ಕೌಶಲ ತರಬೇತಿಯನ್ನು ನೀಡಿಲ್ಲ.
- ಮಕ್ಕಳಲ್ಲಿ ಪರಿಸರ ಪ್ರೇಮ, ಐತಿಹಾಸಿಕ ಸ್ಥಳಗಳ ಪ್ರಾಮುಖ್ಯತೆ ಹಾಗೂ ವೈಜ್ಞಾನಿಕ ಪ್ರವೃತ್ತಿಗಳನ್ನು ಬೆಳೆಸಲು ಜಾಗೃತಿ ಮತ್ತು ಜನರಕ್ಷಾ ಕೇಂದ್ರಗಳಲ್ಲಿ ಮಾತ್ರ ಪ್ರವಾಸ ಏರ್ಪಡಿಸಲಾಗಿದೆ. ಉಳಿದ ಕೇಂದ್ರಗಳಲ್ಲಿ ಪ್ರವಾಸ ಏರ್ಪಡಿಸಿಲ್ಲ.
- ಐದು ಕೇಂದ್ರಗಳಲ್ಲಿ ಭಾಷಾ ಪ್ರಪಂಚದ ಬಗ್ಗೆ ಅನುಭವ ಗಳಿಸಲು ಅನುಕೂಲವಾಗುವಂತೆ ಸ್ಥಳೀಯ ಪೋಲೀಸ್ ಠಾಣೆ, ನ್ಯಾಯಾಲಯ, ಅಂಚೆ ಕಛೇರಿ, ಬ್ಯಾಂಕ್ ಇತ್ಯಾದಿ ಭೇಟಿಗಳನ್ನು ಹಮ್ಮಿಕೊಂಡಿರುವುದಿಲ್ಲ.

**ವಿದ್ಯುತ್ ಬಿಲ್, ನೀರಿನ ಬಿಲ್ ಪಾವತಿಸುವ ಮತ್ತು ವೈದ್ಯಕೀಯ ವ್ಯವಸ್ಥೆ:-**

**ಕೋಷ್ಟಕ 64:-**

| ಪ್ರಶ್ನೆ ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 46 | ವಿದ್ಯುತ್ ಬಿಲ್ ನೀರಿನ ಬಿಲ್ ಪಾವತಿಸಲಾಗಿದೆಯೇ (ಓಚರ್) | ಭಾಗಶ: ಪಾವತಿ | ವೋಚರ್ ಲಭ್ಯವಿಲ್ಲ | | | |
| 47 | ಕನಿಷ್ಠ ಪ್ರತಿ ತಿಂಗಳಿಗೊಮ್ಮೆ ಉಚಿತ ವೈದ್ಯಕೀಯ ಒದಗಿಸಲಾಗಿದೆಯೇ? | ಇಲ್ಲ | ಇಲ್ಲ | ಹೌದು | ಹೌದು | ಇಲ್ಲ |
| 48 | ವೈದ್ಯರ ಸಲಹೆಯಂತೆ ಔಷಧೋಪಚಾರ ಮಾಡಲಾಗಿದೆಯೇ?(ದಾಖಲಾತಿ ವೀಕ್ಷಣೆ ಮಾಡಿ ದಾಖಲಿಸಬೇಕು) | ಔಷೋಧೋಪಚಾರ ನೀಡಿದ ಬಗ್ಗೆ ಯಾವುದೇ ದಾಖಲೆ ಲಭ್ಯವಿಲ್ಲ. | | ಹೌದು | ಹೌದು | ಇಲ್ಲ |
| 49 | ಇಲಾಖೆಯಿಂದ ಹೆಲ್ತ್ ಕಾರ್ಡ್ ಪಡೆದು ಆರೋಗ್ಯ ಸ್ಥಿಯನ್ನು ದಾಖಲಿಸಲಾಗಿದೆಯೇ? | ಇಲ್ಲ | ಇಲ್ಲ | 19 ಮಕ್ಕಳ ದಾಖಲೆ ಇದೆ | ಇಲ್ಲ | ಇಲ್ಲ |
| 50 | ಮದ್ಯಾಹ್ನ ಉಪಾಹಾರ ಯೋಜನೆಯಡಿಯಲ್ಲಿ ನೀಡಲಾಗುವ ವಿಟಮಿನ್ ಮಾತ್ರೆಗಳನ್ನು ಮಕ್ಕಳಿಗೆ ವಿತರಿಸಲಾಗುತ್ತಿದೆಯೇ? | ಹೌದು | ಹೌದು | ಹೌದು | ಹೌದು | ಹೌದು |

- ಮಹಾತ್ಮಗಾಂಧಿ- ಲಕ್ಷ್ಮಿಪುರಂ ಈ ಕೇಂದ್ರದಲ್ಲಿ ಮಾತ್ರ ಭಾಗಶ: ವಿದ್ಯತ್ ಬಿಲ್ ಪಾವತಿಸಿದ ದಾಖಲೆ ಲಭ್ಯವಾಗಿದೆ. ಉಳಿದ ಕೇಂದ್ರಗಳು ವಿದ್ಯುತ್ ಬಿಲ್ ಪಾವತಿಸಿದ ವೋಚರ್ ಲಭ್ಯವಾಗಿಲ್ಲ.
- ಜನಜಾಗೃತಿ- ಹಾರ್ಸ್‌ಲೇನ್ ಮತ್ತು ಭೀಮ್- ಅಶೋಕಪುರಂ ಈ ಕೇಂದ್ರಗಳಲ್ಲಿ ತಿಂಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆ ನಡೆಸಿ ಮಕ್ಕಳಿಗೆ ಔಷಧೋಪಚಾರ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಉಳಿದ ಕೇಂದ್ರಗಳಲ್ಲಿ ಮಾಡಿಲ್ಲ.
- ಜನಜಾಗೃತಿ ಹೊರತುಪಡಿಸಿ ಉಳಿದ ನಾಲ್ಕು ಕೇಂದ್ರಗಳು ಇಲಾಖೆಯಿಂದ ಹೆಲ್ತ್ ಕಾರ್ಡ್ ಪಡೆದು ಮಕ್ಕಳ ಆರೋಗ್ಯ ಸ್ಥಿಯನ್ನು ದಾಖಲಿಸಿರುವುದಿಲ್ಲ.
- ಮದ್ಯಾಹ್ನ ಉಪಾಹಾರ ಯೋಜನೆಯಡಿಯಲ್ಲಿ ನೀಡಲಾಗುವ ವಿಟಮಿನ್ ಮಾತ್ರೆಗಳನ್ನು ಎಲ್ಲಾ ಕೇಂದ್ರಗಳಲ್ಲಿ ಮಕ್ಕಳಿಗೆ ವಿತರಿಸಲಾಗಿದೆ.

ಇತರೆ ವಹಿಗಳು ಮತ್ತು ನಿರ್ವಹಣೆ ಬಗ್ಗೆ:–

**ಕೋಷ್ಟಕ 65:–**

| ಪ್ರ ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 51 | ಮಕ್ಕಳ ಹಾಜರಾತಿ ವಹಿ | ಹೌದು | ಹೌದು | ಹೌದು | ಹೌದು | ಹೌದು |
| 52 | ಸ್ವಯಂ ಸೇವಕರ ಹಾಜರಾತಿ ವಹಿ | ಹೌದು | ಹೌದು | ಹೌದು | ಹೌದು | ಹೌದು |
| 53 | ಸ್ವಯಂ ಸೇವಕರ ಕ್ಷೇತ್ರ ಭೇಟಿ ವಹಿ | ಹೌದು | ಹೌದು | ಇಲ್ಲ | ಇಲ್ಲ | ಇಲ್ಲ |
| 54 | ಪಾಲಕರ ವಹಿ | ಇಲ್ಲ | ಇಲ್ಲ | ಹೌದು | ಇದೆ | ಇಲ್ಲ |
| 55 | ದಾಸ್ತಾನು ವಹಿ | ಹೌದು | ಹೌದು | ಹೌದು | ಹೌದು | ಇಲ್ಲ |
| 56 | ವೈದ್ಯಕೀಯ ಸೌಲಭ್ಯ ವಿತರಣಾ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 57 | ಇತರೆ ಸಾಮಗ್ರಿ ವಿತರಣೆ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 58 | ಮಕ್ಕಳಿಗೆ ಮನೆಗೆ ಹೋಗಲು ಅನುಮತಿ ನೀಡುವ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 59 | ಕಲಿಕೆಯ ಪ್ರಗತಿ ದಾಖಲೆ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 60 | ಕೇಂದ್ರದಿಂದ ತಪ್ಪಿಸಿಕೊಂಡು ಹೋಗಿರುವ ಮಕ್ಕಳ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 61 | ದೂರು ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 62 | ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲಿಸಿರುವ ವಹಿ | ಇಲ್ಲ | ಇಲ್ಲ | ಇಲ್ಲ | ಹೌದು | ಇಲ್ಲ |
| 63 | ಇಲಾಖಾ ಅಧಿಕಾರಿಗಳ ಸಂದರ್ಶನ ವಹಿ | ಹೌದು | ಹೌದು | ಹೌದು | ಹೌದು | ಹೌದು |

- ಐದು ಕೇಂದ್ರದವರು ಮಕ್ಕಳ ಹಾಜರಾತಿ ವಹಿ, ಸ್ವಯಂ ಸೇವಕರ ಹಾಜರಾತಿ ವಹಿ, ದಾಸ್ತಾನು ವಹಿ ಮತ್ತು ಇಲಾಖಾ ಸಂದರ್ಶಕರ ವಹಿಯನ್ನು ನಿರ್ವಹಿಸಿರುತ್ತಾರೆ.
- ಭೀಮ್– ಅಶೋಕಪುರಂ ಈ ಸಂಸ್ಥೆ ಹೊರತುಪಡಿಸಿ ಉಳಿದ ಕೇಂದ್ರದವರು ಸುತ್ತೋಲೆಯಲ್ಲಿ ತಿಳಿಸಿದಂತೆ ಸ್ವಯಂ ಸೇವಕರ ಕ್ಷೇತ್ರ ಭೇಟಿ ವಹಿ, ವೈದ್ಯಕೀಯ ಸೌಲಭ್ಯ ವಿತರಣಾ ವಹಿ, ಇತರೆ ಸಾಮಗ್ರಿ ವಿತರಣೆ ವಹಿ, ಕಲಿಕೆಯ ಪ್ರಗತಿ ದಾಖಲೆ ವಹಿ, ಕೇಂದ್ರದಿಂದ ತಪ್ಪಿಸಿಕೊಂಡು ಹೋಗಿರುವ ಮಕ್ಕಳ ವಹಿ, ದೂರು ವಹಿ, ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲಿಸಿರುವ ವಹಿ ನಿರ್ವಹಿಸಿರುವುದಿಲ್ಲ.

**ಖರ್ಚುವೆಚ್ಚದ ದಾಖಲೆಗಳು**

**ಕೋಷ್ಟಕ 66:–**

| ಪ್ರಶ್ನೆ ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 64 | ಊಟ ಉಪಹಾರ | ಇಲ್ಲ | ಇಲ್ಲ | ನಕಲು ಪ್ರತಿ ಇದೆ | | ಮಾಹಿತಿ ಲಭ್ಯವಿಲ್ಲ |
| 65 | ದೈನಂದಿನ ವಸ್ತುಗಳು | ಇಲ್ಲ | ಇಲ್ಲ | | | |
| 66 | ಬೆಡ್ಡಿಂಗ್ | ಇಲ್ಲ | ಇಲ್ಲ | | | |
| 67 | ಸಿ.ಡಬ್ಲ್ಯೂಸಿ ಮುಂದೆ ಹಾಜರು ಪಡಿಸಲು ಪ್ರಯಾಣ ವೆಚ್ಚ | ಇಲ್ಲ | ಇಲ್ಲ | | | |
| 68 | ಸಿಬ್ಬಂದಿ ವೇತನ | ಇಲ್ಲ | ಇಲ್ಲ | | | |
| 69 | ಮೆಡಿಕಲ್ ವೆಚ್ಚ | ಇಲ್ಲ | ಇಲ್ಲ | | | |
| 70 | ಸಹಾಯಕ ಪಾಠೋಪಕರಣಗಳು, ಸ್ಟೇಷನರಿ ಹಾಗೂ ಇತರೆ ಕಲಿಕೋಪಕರಣಗಳ ವೆಚ್ಚ | ಇಲ್ಲ | ಇಲ್ಲ | | | |
| 71 | ಕೌನ್ಸಿಲಿಂಗ್ | ಇಲ್ಲ | ಇಲ್ಲ | | | |
| 72 | ಜೀವನ ಕೌಶಲ ತರಬೇತಿ | ಇಲ್ಲ | ಇಲ್ಲ | | | |
| 73 | ಕೇಂದ್ರ ನಿರ್ವಹಣಾ ವೆಚ್ಚ | ಇಲ್ಲ | ಇಲ್ಲ | | | |
| 74 | ಇದುವರೆಗೆ ಖರ್ಚಾದ ಒಟ್ಟು ಅನುದಾನ | ಇಲ್ಲ | ಇಲ್ಲ | | | |
| 75 | ಇತರೆ | ಇಲ್ಲ | ಇಲ್ಲ | | | |

- ಜನಜಾಗೃತಿ– ಹಾರ್ಸ್‌ಲೇನ್ ಮತ್ತು ಭೀಮ್–ಅಶೋಕಪುರಂ ಈ ಎರಡು ಕೇಂದ್ರಗಳನ್ನು ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ಖರ್ಚುವೆಚ್ಚ, ಊಟ ಉಪಾಹಾರ, ದೈನಂದಿನ ವಸ್ತುಗಳು, ಬೆಡ್ಡಿಂಗ್, ಸಿಬ್ಬಂದಿ ವೇತನ, ಮೆಡಿಕಲ್ ವೆಚ್ಚ, ಕೌನ್ಸಿಲಿಂಗ್, ಜೀವನ ಕೌಶಲ ತರಬೇತಿ, ಇದುವರೆಗೆ ಖರ್ಚಾದ ಒಟ್ಟು ಅನುದಾನ, ಕೇಂದ್ರ ನಿರ್ವಹಣಾ ವೆಚ್ಚ ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ.

**ಕೋಷ್ಠಕ 67:–**

| ಪ್ರ ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 76 | ಕೇಂದ್ರವು ಶಾಲೆಯಲ್ಲಿ ನಡೆಯುತ್ತಿದ್ದರೆ ಆ ಶಾಲೆಯ ಅಥವಾ ಹತ್ತಿರದ ಶಾಲೆಯ ಮುಖ್ಯ ಶಿಕ್ಷಕರು ಉಸ್ತುವಾರಿ ಮಾಡುತ್ತಿದ್ದಾರೆಯೇ? | ಹೌದು | ಇಲ್ಲ | ಹೌದು | ಹೌದು | ಹೌದು |
| 77 | ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರಿಗೆ ಕೇಂದ್ರ ನಡೆಯುತ್ತಿರುವ ಬಗ್ಗೆ ಮಾಹಿತಿ ಇದೆಯೇ? | ಇದೆ | ಇದೆ | ಹೌದು | ಇದೆ | ಹೌದು |

- ಕೇಂದ್ರ ಶಾಲೆಯ ಅಥವಾ ಹತ್ತಿರದ ಶಾಲೆಯ ಮುಖ್ಯ ಶಿಕ್ಷಕರು ಯುಡಿಸಿ ಕೇಂದ್ರದ ಉಸ್ತುವಾರಿ ಮಾಡುತ್ತಿದ್ದಾರೆ. ಆದರೆ ತಮ್ಮ ಶಾಲೆಯಷ್ಟೇ ಕಾಳಜಿಯನ್ನು ಈ ಮಕ್ಕಳ ಮೇಲೆ ವ್ಯಕ್ತಪಡಿಸದಿರುವುದು ಭೇಟಿಯ ಸಂದರ್ಭದಲ್ಲಿ ಕಂಡು ಬಂದಿದೆ. ಕೇಂದ್ರ ಶಾಲೆಯವರು ಈ ಮಕ್ಕಳ ಗುಣಾತ್ಮಕ ಶಿಕ್ಷಣದ ಬಗ್ಗೆ ಇನ್ನೂ ಹೆಚ್ಚಿನ ಒಲವನ್ನು ತೋರಿಸಬೇಕಾಗಿದೆ.
- ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್‌ಡಿಎಂಸಿಯವರಿಗೆ ಕೇಂದ್ರ ನಡೆಯುತ್ತಿರುವ ಬಗ್ಗೆ ಮಾಹಿತಿ ಇದೆ. ಆದರೆ ಕಾಳಜಿ ಕಡಿಮೆ ಇದೆ.

**ಕೋಷ್ಠಕ 68:–**

| ಪ್ರ ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 78 | ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಎಲ್ಲಾ ಮಕ್ಕಳ ಭಾವಚಿತ್ರ ಸಹಿತ ಪೂರ್ಣ ವಿವರ ಇದೆ–ಯೇ? | ಇಲ್ಲ | ಇಲ್ಲ | ಇದೆ | ಇಲ್ಲ | ಇಲ್ಲ |
| 79 | ಸಿಡಬ್ಲ್ಯೂಸಿ( CWC) ಮುಂದೆ ಹಾಜರುಪಡಿಸಿದ ಮಕ್ಕಳ ಪಟ್ಟಿ ಇದೆಯೇ? | ಇಲ್ಲ | ಇಲ್ಲ | ಇಲ್ಲ | ಇದೆ | ಇಲ್ಲ |
| 80 | ಎಷ್ಟು ಬಾರಿ ಮಕ್ಕಳನ್ನು ಸಿಡಬ್ಲ್ಯೂಸಿ ಮುಂದೆ ಹಾಜರುಪಡಿಸಲಾಗಿದೆ? | ಇಲ್ಲ | ಇಲ್ಲ | ಇಲ್ಲ | ಒಂದು ಬಾರಿ | ಇಲ್ಲ |

- ಜನಜಾಗೃತಿ ಕೇಂದ್ರದಲ್ಲಿ ಮಾತ್ರ ತರಬೇತಿ ಪಡೆಯುತ್ತಿರುವ ಎಲ್ಲಾ ಮಕ್ಕಳ ಭಾವಚಿತ್ರ ಸಹಿತ ಪೂರ್ಣ ವಿವರ ಇದೆ.
- ಭೀಮ್– ಅಶೋಕಪುರಂ ಈ ಕೇಂದ್ರದವರು ಮಾತ್ರ ಮಕ್ಕಳನ್ನು ಒಂದು ಭಾರಿ ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಿರುತ್ತಾರೆ.

**ಕೋಷ್ಟಕ 69:–**

| ಪ್ರ. ಸಂ | ಪ್ರಶ್ನೆ | ಮಹಾತ್ಮ .ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನ ರಕ್ಷಾ |
|---|---|---|---|---|---|---|
| 81 | ಮಕ್ಕಳಿಗೆ ಪೋಷಕರಿದ್ದಲ್ಲಿ, ಅವರನ್ನು ಪೋಷಕರೊಂದಿಗೆ ಕಳಿಸಿರುವ ಬಗ್ಗೆ ಪೋಷಕರ ದೃಢೀಕರಣ, ವಿಳಾಸ ಹಾಗೂ ಸಿ.ಡಬ್ಲ್ಯೂ.ಸಿ. ದೃಢೀಕರಣ ಪಡೆದು ದಾಖಲೆ ನಿರ್ವಹಿಸಲಾಗಿದೆಯೇ? | ಇಲ್ಲ | ಭಾಗಶಃ | ಇಲ್ಲ | ಕೆಲವು ಮಕ್ಕಳಿಗೆ ನಿರ್ವಹಣೆ | ಇಲ್ಲ |
| 82 | ಒಂದು ವೇಳೆ ಪೋಷಕರು ಪುನ: ಮಕ್ಕಳನ್ನು ಕೆಲಸಗಳಿಗೆ ತೊಡಗಿಸಿದ್ದಲ್ಲಿ ಸೂಕ್ತ ದಾಖಲೆಯೊಂದಿಗೆ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಶಾಲಾ ವ್ಯಾಪ್ತಿಗೆ ಕರೆತರುವಂತೆ ಕ್ರಮ ವಹಿಸಲಾಗಿದೆಯೇ? | ಇಲ್ಲ | ಇಲ್ಲ | ಹೌದು | ಹೌದು | ಇಲ್ಲ |
| 83 | ಕೇಂದ್ರದಲ್ಲಿರುವ ಮಕ್ಕಳಲ್ಲಿ ಇಲಾಖೆ ಗುರುತಿಸಿರುವ ಮಕ್ಕಳು, ಪೋಲೀಸ್ ಇಲಾಖೆ, ಮತ್ತು ಡಬ್ಲ್ಯೂಸಿಡಿ (CWD) ಇಲಾಖೆಯ ಸಹಯೋಗದೊಂದಿಗೆ ಗುರುತಿಸಿದ ಮಕ್ಕಳ ಪೂರ್ಣ ದಾಖಲೆಯ ಮಾಹಿತಿಯನ್ನು ಕಡ್ಡಾಯವಾಗಿ ಕೇಂದ್ರದಲ್ಲಿ ನಿರ್ವಹಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಸಿಡಬ್ಲೂಸಿ ಯಿಂದ ನೀಡಿರುವ ಪಟ್ಟಿ ಲಭ್ಯವಿದೆ. | ಇಲ್ಲ |
| 84 | ಕೇಂದ್ರಕ್ಕೆ ದಾಖಲಾದ ಮಕ್ಕಳು ಕೆಲವು ದಿನಗಳ ನಂತರ ಪೋಷಕರೊಂದಿಗೆ ಕಳುಹಿಸಿದ್ದು, ಪುನ: ಅದೇ ಮಕ್ಕಳು ಕೇಂದ್ರಕ್ಕೆ ಸೇರಿರುವ ಬಗ್ಗೆ ಕಾರಣದೊಂದಿಗೆ ಮಾಹಿತಿ ಇಡಲಾಗಿದೆಯೇ? | ಹಾಳೆಗಳಲ್ಲಿ ಬರೆಸಿಟ್ಟು ಕೊಂಡಿ ರುತ್ತಾರೆ | ಇಲ್ಲ | ಹೌದು | ಇಲ್ಲ | ಇಲ್ಲ |

- ಮಕ್ಕಳಿಗೆ ಪೋಷಕರಿದ್ದಲ್ಲಿ, ಅವರನ್ನು ಪೋಷಕರೊಂದಿಗೆ ಕಳಿಸಿರುವ ಬಗ್ಗೆ ಪೋಷಕರ ದೃಢೀಕರಣ, ವಿಳಾಸ ಹಾಗೂ ಸಿ.ಡಬ್ಲ್ಯೂ.ಸಿ. ದೃಢೀಕರಣ ಪಡೆದ ಬಗ್ಗೆ ದಾಖಲೆಯನ್ನು ಜಾಗೃತಿ ಮತ್ತು ಭೀಮ್ ಹೊರತುಪಡಿಸಿ ಉಳಿದ ಯಾವುದೇ ಕೇಂದ್ರಗಳು ನಿರ್ವಹಿಸಿಲ್ಲ.
- ಒಂದು ವೇಳೆ ಪೋಷಕರು ಪುನ: ಮಕ್ಕಳನ್ನು ಕೆಲಸಗಳಿಗೆ ತೊಡಗಿಸಿದ್ದಲ್ಲಿ ಸೂಕ್ತ ದಾಖಲೆಯೊಂದಿಗೆ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಶಾಲಾ ವ್ಯಾಪ್ತಿಗೆ ಕರೆತರುವಂತೆ ಜನಜಾಗೃತಿ ಮತ್ತು ಭೀಮ್ ಸಂಸ್ಥೆ ಮಾತ್ರ ಕ್ರಮ ವಹಿಸಿದೆ.
- ಭೀಮ್ – ಅಶೋಕಪುರಂ ಈ ಒಂದು ಕೇಂದ್ರ ಹೊರತುಪಡಿಸಿ ಉಳಿದ ಯಾವುದೇ ಕೇಂದ್ರಗಳು ಕೇಂದ್ರದಲ್ಲಿರುವ ಮಕ್ಕಳಲ್ಲಿ ಇಲಾಖೆ ಗುರುತಿಸಿರುವ ಮಕ್ಕಳು, ಪೋಲೀಸ್ ಇಲಾಖೆ, ಮತ್ತು ಸಿಡಬ್ಲ್ಯೂ.ಡಿ. (CWD) ಇಲಾಖೆಯ ಸಹಯೋಗದೊಂದಿಗೆ ಗುರುತಿಸಿದ ಮಕ್ಕಳ ಬಗ್ಗೆ ಪೂರ್ಣ ಮಾಹಿತಿಯನ್ನು ನಿರ್ವಹಿಸಿಲ್ಲ.
- ಕೇಂದ್ರಕ್ಕೆ ದಾಖಲಾದ ಮಕ್ಕಳು ಕೆಲವು ದಿನಗಳ ನಂತರ ಪೋಷಕರೊಂದಿಗೆ ಕಳುಹಿಸಿದ್ದು, ಪುನ: ಅದೇ ಮಕ್ಕಳು ಕೇಂದ್ರಕ್ಕೆ ಸೇರಿರುವ ಬಗ್ಗೆ ಕಾರಣದೊಂದಿಗೆ ಮಾಹಿತಿಯನ್ನು ಎರಡು ಕೇಂದ್ರದವರು ನಿರ್ವಹಿಸಿರುತ್ತಾರೆ. 3 ಕೇಂದ್ರಗಳು ನಿರ್ವಹಿಸಿಲ್ಲ.

**ಕೋಷ್ಟಕ 70:–**

| ಪ್ರ. ಸಂ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನ ರಕ್ಷಾ |
|---|---|---|---|---|---|---|
| 85 | ಪ್ರತಿಯೊಂದು ಕೇಂದ್ರದಲ್ಲಿ ಮಗುವಿನ IEP ಯನ್ನು ಕಡ್ಡಾಯವಾಗಿ ಇಡಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |
| 86 | ಕೇಂದ್ರದ ಶಾಲಾ ಮುಖ್ಯಸ್ಥರು ಪ್ರತಿ ದಿನ ಕೇಂದ್ರಕ್ಕೆ ಭೇಟಿ ನೀಡಿ ನೋಂದಾಯಿಸಿದ ಇಲ್ಲಾ ಮಕ್ಕಳು ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದು, ಪ್ರತಿ ತಿಂಗಳು ಸಿ.ಆರ್.ಪಿ. ಅಥವಾ ಜಿಲ್ಲಾ ಕಛೇರಿಯ ಗಮನಕ್ಕೆ ತರುತ್ತಿದ್ದಾರೆಯೇ? | ಹೌದು | ಇಲ್ಲ | ಹೌದು | ಭೇಟಿ ನೀಡುತ್ತಾರೆ ಆದರೆ ಮೇಲಧಿಕಾರಿಗಳ ಗಮನಕ್ಕೆ ತರುತ್ತಿಲ್ಲ. | ಹೌದು |
| 87 | 12 ತಿಂಗಳುಗಳೊಳಗೆ ಮುಖ್ಯವಾಹಿನಿಗೆ ಸೇರುವ ಅರ್ಹತೆಯುಳ್ಳ ಮಕ್ಕಳಿದ್ದಲ್ಲಿ ಹತ್ತಿರದ ಶಾಲೆಗೆ ದಾಖಲಿಸಲಾಗಿದೆಯೇ? ಇದ್ದಲ್ಲಿ ಮಕ್ಕಳ ಸಂಖ್ಯೆ–––––– | 3 | 5 | ಕಳೆದ ವರ್ಷ 20 | ಇಲ್ಲ | 2 |
| 88 | ಕೇಂದ್ರದಲ್ಲಿ ಯಾವುದಾದರೂ ಮಗುವಿಗೆ 12 ತಿಂಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಇರಲು ಅವಕಾಶ ನೀಡಲಾಗಿದೆಯೇ? | ಇಲ್ಲ | 1 | 4 ಮಕ್ಕಳು | ಇಲ್ಲ | ಇಲ್ಲ |
| 89 | ವಿಶೇಷ ತರಬೇತಿ ಪಡೆದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿರುವ ಬಗ್ಗೆ ದಾಖಲೆಗಳಿವೆಯೇ?(ಕ್ಷೆರಾಕ್ಸ್ ಪ್ರತಿ ಇರಲಿ) | ಇಲ್ಲ | 5 | ಇಲ್ಲ | ಇಲ್ಲ | ಇಲ್ಲ |
| 90 | ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾದಲ್ಲಿ ಆ ಶಾಲೆಯ ಮುಖ್ಯ ಶಿಕ್ಷಕರಿಂದ ದೃಢೀಕರಣ ಪಡೆದು ದಾಖಲೆಯನ್ನು ನಿರ್ವಹಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು |

- ಭಿನ್ನ ಕಲಿಕಾ ಮಟ್ಟ ಮತ್ತು ಕಲಿಕಾ ಅಂತರವನ್ನು ಹೊಂದಿರುವ ಮಕ್ಕಳ ಕಲಿಕೆಯನ್ನು ಗುಣಾತ್ಮಕವಾಗಿ ಹೆಚ್ಚಿಸಬೇಕಾದರೆ ವೈಯಕ್ತಿಕ ಶೈಕ್ಷಣಿಕ ಯೋಜನೆ(ಐಇಪಿ) ತುಂಬಾ ಮುಖ್ಯವಾಗಿದೆ. ಆದರೆ ಯಾವ ಕೇಂದ್ರವೂ ಮಗುವಿನ IEP ಯನ್ನು ಸಿದ್ಧಪಡಿಸುವಲ್ಲಿ ಕಾರ್ಯಪ್ರವೃತ್ತರಾಗದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಈ ಬಗ್ಗೆ ಸ್ವಯಂಸೇವಕರಿಗೂ ಸ್ಪಷ್ಟತೆ ಇರುವುದು ಕಂಡು ಬಂದಿಲ್ಲ. ಇದು ಒಂದು ಗಮನಾರ್ಹವಾದ ಅಂಶವಾಗಿದೆ.
- ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು ಕೇಂದ್ರ ಶಾಲೆಯ ಮಕ್ಕಳ ಹಾಜರಾತಿಯನ್ನು ಪ್ರತಿ ದಿನ ಗಮನಿಸುತ್ತಿದ್ದಾರೆ. ಆದರೆ ಸಮಸ್ಯೆಗಳನ್ನು ಯಾವುದೇ ಮೇಲಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ.
- 12 ತಿಂಗಳುಗಳೊಳಗೆ ಮುಖ್ಯವಾಹಿನಿಗೆ ಸೇರುವ ಅರ್ಹತೆಯುಳ್ಳ ಒಟ್ಟು 30 ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲಿಸಲಾಗಿದೆ.
- ಒಟ್ಟು 5 ಮಕ್ಕಳಿಗೆ 12 ತಿಂಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಕೇಂದ್ರದಲ್ಲಿ ಇರಲು ಅವಕಾಶ ನೀಡಲಾಗಿದೆ.
- ವಿಶೇಷ ತರಬೇತಿ ಪಡೆದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿರುವ ಬಗ್ಗೆ ಹೆಚ್ಚಿನ ಕೇಂದ್ರಗಳು(ಜಾಗೃತಿ ಹೊರತುಪಡಿಸಿ) ದಾಖಲೆಗಳನ್ನು ಇಟ್ಟಿಲ್ಲ.

- ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾದಲ್ಲಿ ಆ ಶಾಲೆಯ ಮುಖ್ಯ ಶಿಕ್ಷಕರಿಂದ ದೃಢೀಕರಣ ಪಡೆದ ಬಗ್ಗೆ ಜನರಕ್ಷಾ ಕೇಂದ್ರ ಮಾತ್ರ ದಾಖಲೆಯನ್ನು ನಿರ್ವಹಿಸಲಾಗಿದೆ.

**ಕೋಷ್ಟಕ 71:–**

| ಪ್ರ.ಸ | ಪ್ರಶ್ನೆ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನ ರಕ್ಷಾ |
|---|---|---|---|---|---|---|
| 91 | ಪೋಷಕರಿಲ್ಲದ, ಆಶ್ರಯವಿಲ್ಲದ, ವಸತಿ ಸೌಲಭ್ಯವಿಲ್ಲದ ಅನಾಥ ಮಕ್ಕಳಿಗೆ ಉಚಿತ ವಸತಿಯುತ ದಾಖಲಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇದೆ | ಹೌದು |
| 92 | ವಿಶೇಷ ಸಂದರ್ಭಗಳಲ್ಲಿ ಕೇಂದ್ರಗಳಿಂದ ಮಕ್ಕಳನ್ನು ಮುಕ್ತಗೊಳಿಸಿದ ಬಗ್ಗೆ CWC ಗೆ ಹಸ್ತಾಂತರಿಸಿ ದೃಡೀಕರಣವನ್ನು ಪಡೆದುಕೊಳ್ಳಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಹೌದು |
| 93 | ಗುರುತಿಸಿರುವ ಮಕ್ಕಳಿಗೆ ನಿಯಮಾನುಸಾರ ನಿಗದಿ ಪಡಿಸಿದ ಘಟಕ ವೆಚ್ಚದಂತೆ ಹಂಚಿಕೆ ಮಾಡಲಾದ ಎಲ್ಲಾ ಸೌಲಭ್ಯವನ್ನು ಒದಗಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಮಾಹಿತಿ ಇಲ್ಲ |
| 94 | ಮಕ್ಕಳು ಉತ್ತಮ ಮಾನಸಿಕ ಸ್ಥಿರತೆ, ಆತ್ಮ ವಿಶ್ವಾಸ, ನಾಗರೀಕತೆ ಬೆಳೆಸುವ ಬಗ್ಗೆ ಅಗತ್ಯ ಶೈಕ್ಷಣಿಕ ಸಾಮರ್ಥ್ಯಗಳನ್ನು ಬೆಳೆಸಲು ಚಿಣ್ಣರ ಅಂಗಳ 1, 2 ಮತ್ತು 3 ಪುಸ್ತಕಗಳನ್ನು ಬಳಸಲಾಗಿದೆಯೇ? | ಇಲ್ಲ | ಇಲ್ಲ | ಹೌದು | ಇಲ್ಲ | ಹೌದು |
| 95 | ಈ ಮಕ್ಕಳು ಬೇರೆ ಮಕ್ಕಳಂತೆ ಶಾಲೆಯ ಪರಿಸರದಲ್ಲಿ ನಿರಾಳವಾಗಿ, ಮುಕ್ತವಾಗಿ ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಸಹಭಾಗಿಗಳಾಗುತ್ತಿದ್ದಾರೆಯೇ? | ಹೌದು | ಇಲ್ಲ | ಹೌದು | ಇಲ್ಲ | ಹೌದು |
| 96 | ವಿಶೇಷ ತರಬೇತಿಗೆ ಒಳಪಟ್ಟ ಮಕ್ಕಳು ವಾರದಲ್ಲಿ ಕನಿಷ್ಠ 2 ದಿನ ಶಾಲಾ ಅವಧಿಯಲ್ಲಿ ಹತ್ತಿರದ ಶಾಲೆಗೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೂಕ್ತ ತರಗತಿಗೆ ಹಾಜರಾಗುವಂತೆ ಮಾಡಲಾಗಿದೆಯೇ? | ಇಲ್ಲ | ಇಲ್ಲ | ಹೌದು | ಇಲ್ಲ | ಹೌದು |
| 97 | ಪ್ರತಿ ತಿಂಗಳು ಮಕ್ಕಳ ಕಲಿಕಾ ಮಟ್ಟವನ್ನು ಪರಿಶೀಲಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸಲಾಗಿದೆಯೇ? | ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

- ವಿಶೇಷ ಸಂದರ್ಭಗಳಲ್ಲಿ ಕೇಂದ್ರಗಳಿಂದ ಮಕ್ಕಳನ್ನು ಮುಕ್ತಗೊಳಿಸಿದ ಬಗ್ಗೆ ಜನರಕ್ಷಾ ಕೇಂದ್ರ ಮಾತ್ರ CWC ಗೆ ಹಸ್ತಾಂತರಿಸಿ ದೃಡೀಕರಣವನ್ನು ಪಡೆದುಕೊಂಡಿದೆ. ಸ್ವಲ್ಪ ಮಟ್ಟಿಗೆ ಭೀಮ್ ಕೇಂದ್ರವು ಈ ಪ್ರಯತ್ನವನ್ನು ಮಾಡಿದೆ.
- ಮಕ್ಕಳು ಉತ್ತಮ ಮಾನಸಿಕ ಸ್ಥಿರತೆ, ಆತ್ಮ ವಿಶ್ವಾಸ, ನಾಗರೀಕತೆ ಬೆಳೆಸುವ ಬಗ್ಗೆ ಅಗತ್ಯ ಶೈಕ್ಷಣಿಕ ಸಾಮರ್ಥ್ಯಗಳನ್ನು ಬೆಳೆಸಲು ಚಿಣ್ಣರ ಅಂಗಳ 1, 2 ಮತ್ತು 3 ಪುಸ್ತಕಗಳನ್ನು ಬಳಸಿರುವುದಿಲ್ಲ.(ಜನಜಾಗೃತಿ ಮತ್ತು ಜನರಕ್ಷಾ ಹೊರತುಪಡಿಸಿ).
- ಮಕ್ಕಳು ಬೇರೆ ಮಕ್ಕಳಂತೆ ಶಾಲೆಯ ಪರಿಸರದಲ್ಲಿ ನಿರಾಳವಾಗಿ, ಮುಕ್ತವಾಗಿ ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಸಹಭಾಗಿಗಳಾಗುವ ನಿಟ್ಟಿನಲ್ಲಿ 3 ಕೇಂದ್ರಗಳು ಪ್ರಯತ್ನ ಮಾಡಿವೆ.

* ವಿಶೇಷ ತರಬೇತಿಗೆ ಒಳಪಟ್ಟ ಮಕ್ಕಳು ವಾರದಲ್ಲಿ ಕನಿಷ್ಠ 2 ದಿನ ಶಾಲಾ ಅವಧಿಯಲ್ಲಿ ಹತ್ತಿರದ ಶಾಲೆಗೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೂಕ್ತ ತರಗತಿಗೆ ಹಾಜರಾಗುವಂತೆ ಮಾಡಿರುವ ಪ್ರಯತ್ನ ತುಂಬಾ ಕಡಿಮೆ ಇದೆ.
* ಮಕ್ಕಳ ಕಲಿಕಾ ಪ್ರಗತಿಯನ್ನು ಪರಿಶೀಲಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುತ್ತಿಲ್ಲ. ಇದು ಗಮನಾರ್ಹ ಅಂಶವಾಗಿದೆ.

**ಕೋಷ್ಟಕ 72:–**

| ಪ್ರ.ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| ಉಸ್ತುವಾರಿ(ಭೇಟಿ ವರದಿಯಲ್ಲಿದ್ದ ಹಾಜರಾತಿಯ ವಿವರವನ್ನು ಗುರುತಿಸಿಕೊಳ್ಳಿರಿ) | | | | | | |
| 98 | ಡಿಡಿಪಿಐ/ಡಿವೈಪಿಸಿ ಕಛೇರಿಯಿಂದ ಭೇಟಿ ನೀಡಲಾದ ಅಧಿಕಾರಿಗಳ ಭೇಟಿ ಸಂಖ್ಯೆ: | 1+3=4 | 0 | 1 ಕಾರ್ಯಾಗಾರದ ನಂತರ | 0+2=2 | 0 |
| 99 | ಡಯಟ್ ಅಧಿಕಾರಿಗಳ ಭೇಟಿ ಸಂಖ್ಯೆ: | 1 | 0 | 0 | 3 | 0 |
| 100 | ಕ್ಷೇತ್ರ ಶಿಕ್ಷಣಾಧೀಕಾರಿಗಳ ಭೇಟಿ ಸಂಖ್ಯೆ: | 1 | 0 | 0 | 0 | 1 |
| 101 | ಬಿ.ಆರ್.ಸಿ./ಬಿ.ಆರ್.ಪಿ./ಸಿ.ಆರ್.ಪಿ. ಭೇಟಿ ಸಂಖ್ಯೆ: | 1+4+9+4 | 4+1 | 3 | 5 | 3 |
| 102 | ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು: | ಪ್ರತಿ ದಿನ | 0 | ಪ್ರತಿ ದಿನ | ಪ್ರತಿ ದಿನ | 1 |
| 103 | ನಾಲ್ಕು ತಿಂಗಳಿಗೊಮ್ಮೆ ಪೋಷಕರು ಮತ್ತು ಸಾರ್ವಜನಿಕರ ಎದುರಿನಲ್ಲಿ ಸಾಮೂಹಿಕ ಪ್ರದರ್ಶನವನ್ನು ಏರ್ಪಡಿಸಲಾಗಿದೆಯೇ? | ಇಲ್ಲ | 0 | ಇಲ್ಲ | ಇದೆ | ಇಲ್ಲ |
| 104 | ಭೇಟಿಯ ವೇಳೆಯಲ್ಲಿ ವಿದ್ಯಾರ್ಥಿಗಳ ಸ್ವಚ್ಛತೆ( ಉಗುರು, ಕೂದಲು ವಸ್ತ್ರ) | ಸಾಧಾರಣ | ಸ್ವಚ್ಛತೆ ಇಲ್ಲ | ಸ್ವಚ್ಛತೆ ಇಲ್ಲವೇ ಇಲ್ಲ | ಸಾಧರಣ | ಇಲ್ಲ |
| 105 | ಭೇಟಿಯ ವೇಳೆಯಲ್ಲಿ ಆಹಾರ ಧಾನ್ಯಗಳ ಗುಣಮಟ್ಟ: | ಉತ್ತಮ | ಉತ್ತಮ | ಸಾಧಾರಣ | ಸಾಧಾರಣ | ಸಾಧಾರಣ |
| 106 | ಭೇಟಿಯ ವೇಳೆಯಲ್ಲಿ ಆಹಾರದ ಗುಣಮಟ್ಟ: | ಉತ್ತಮ | ಸಾಧಾರಣ | ಅತೃಪ್ತಿಕರ | ಅತೃಪ್ತಿಕರ | ಸಾಧಾರಣ |
| 107 | ಮಕ್ಕಳ ಶಿಸ್ತು: ಕೆಲಸ ಕೊಟ್ಟಾಗ ತೊಡಗಿಕೊಳ್ಳುವುದು, ಸೂಚನೆ ಆಲಿಸುವುದು, ಪರಸ್ಪರರಿಗೆ ತೊಂದರೆ ಮಾಡದಿರುವುದು ------ಇತ್ಯಾದಿ) | ಕನಿಷ್ಟ | ಕನಿಷ್ಟ | ಇಲ್ಲ | ಇಲ್ಲ | ತುಂಬಾ ಅಶಿಸ್ತು ಇದೆ |

* ಮೇಲಿನ ಕೋಷ್ಟಕದ 98 ರಿಂದ 102 ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಿಸಿದಾಗ ಇಲಾಖಾ ಅಧಿಕಾರಿಗಳ ಅನುಪಾಲನೆ ಕಡಿಮೆ ಇರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಡಯಟ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಭೇಟಿ ತುಂಬಾ ಕಡಿಮೆ ಇದೆ. ಕೆಲವು ಕೇಂದ್ರಗಳಿಗೆ ಡಿಡಿಪಿಐ/ಡಿವೈಪಿಸಿ ಕಛೇರಿಯ ಭೇಟಿಯೂ ಕಡಿಮೆ ಇದೆ.

- ಎನ್.ಜಿ.ಒ ನಡೆಸುತ್ತಿರುವ ಒಂದು ಶೈಕ್ಷಣಿಕ ಚಟುಚವಟಿಕೆಗೆ ನಿರಂತರವಾಗಿ ಮಾರ್ಗದರ್ಶನ ನೀಡಬಲ್ಲವರೆಂದರೆ ಕೇಂದ್ರ ಶಾಲೆಯ ಮುಖ್ಯಸ್ಥರು. ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು ಪ್ರತಿದಿನ ಕೇಂದ್ರಕ್ಕೆ ಭೇಟಿ ನೀಡುತ್ತಿದ್ದರೂ ಕೇಂದ್ರದ ಬಗ್ಗೆ ತೆಗೆದುಕೊಳ್ಳುತ್ತಿರುವ ಕಾಳಜಿ ಕಡಿಮೆ ಇರುವುದು ಅಧ್ಯಯನದಿಂದ ಕಂಡು ಬರುತ್ತದೆ.
- ಭೇಟಿಯ ಅವಧಿಯಲ್ಲಿಯೂ ಮಕ್ಕಳ ಸ್ವಚ್ಛತೆ ಕಡಿಮೆ ಇರುವುದು ಕಂಡು ಬಂದಿದೆ. ಆದುದರಿಂದ ಸ್ವಚ್ಛತೆಗೆ ಹೆಚ್ಚು ಆದ್ಯತೆಯನ್ನು ನೀಡಬೇಕಾಗಿದೆ.
- ಆಹಾರದ ಗುಣಮಟ್ಟ ಸಾಧಾರಣವಾಗಿದೆ.
- ಮಕ್ಕಳಲ್ಲಿ ಶಿಸ್ತು ಕಡಿಮೆ ಇರುವುದನ್ನು ಭೇಟಿಯ ವೇಳೆಯಲ್ಲಿ ಗಮನಿಸಲಾಗಿದೆ.

**108) ಪಠ್ಯಪುಸ್ತಕ ವಿತರಣೆ:**

**ಕೋಷ್ಠಕ 73:–**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| ಸರಬರಾಜಾಗಿಲ್ಲ ಮತ್ತು ಮಾಹಿತಿ ಇಲ್ಲ | | | | | | | |

- ಇಲಾಖೆಯಿಂದ ಸರಬರಾಜಾಗುವ ಪಠ್ಯಪುಸ್ತಕ ಅಥವಾ ಚಿಣ್ಣರ ಅಂಗಳದ ಪುಸ್ತಕಗಳನ್ನು ಈ ಮಕ್ಕಳ ಕಲಿಕೆಗಾಗಿ ಬಳಸಬೇಕಾಗಿದ್ದು, ಯಾವುದೇ ಪುಸ್ತಕಗಳು ಕೇಂದ್ರಕ್ಕೆ ಸರಬರಾಜಾಗಿರುವುದಿಲ್ಲ.

**109) ಸಮವಸ್ತ್ರ**

**ಕೋಷ್ಠಕ 74:–**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| ಸರಬರಾಜಾಗಿಲ್ಲ ಮತ್ತು ಮಾಹಿತಿ ಇಲ್ಲ | | | | | | | |

- ಇಲಾಖೆಯಿಂದ ಸರಬರಾಜಾಗಿರುವ ಸಮವಸ್ತ್ರವನ್ನು ಈ ಮಕ್ಕಳಿಗೆ ವಿತರಿಸಿರುವುದಿಲ್ಲ.

**110) ನೋಟ್‌ಬುಕ್**

**ಕೋಷ್ಟಕ 75:–**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| ಒಂದು ಪುಸ್ತಕವನ್ನು ನೀಡಲಾಗಿದ್ದು, ಒಂದೇ ಪುಸ್ತಕದಲ್ಲಿ ಎಲ್ಲವನ್ನೂ ಬರೆಯುತ್ತಿದ್ದಾರೆ. ಕೆಲವು ಕಡೆ 4–5 ಪುಸ್ತಕಗಳನ್ನು ಬರೆಯಲು ನೀಡಿರುತ್ತಾರೆ. | | | | | | | |

- ಹೆಚ್ಚಿನ ಕೇಂದ್ರಗಳಲ್ಲಿ ಮಕ್ಕಳು ಒಂದೇ ಪುಸ್ತಕದಲ್ಲಿ ಎಲ್ಲವನ್ನೂ ಬರೆಯುತ್ತಿದ್ದಾರೆ. ಕೆಲವು ಕಡೆ ಈ ವರೆಗೆ 4–5 ಪುಸ್ತಕಗಳನ್ನು ಬರೆಯಲು ನೀಡಿರುತ್ತಾರೆ.

111) **ತಪ್ಪಿಸಿಕೊಂಡು ಹೋಗಿರುವ ಮಕ್ಕಳ ವಿವರ:**

**ಕೋಷ್ಟಕ 76:–**

| ಪ್ರ. ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 111 | ತಪ್ಪಿಸಿಕೊಂಡು ಹೋಗಿರುವ ಮಕ್ಕಳ ಸಂಖ್ಯೆ ಮತ್ತು ಕಾರಣಗಳು: | 02–ಮನೆಗೆ ಹೋಗಿರುವುದು | – | 25–ಮನೆಗೆ ಹೋಗಿರುವುದು | 2 | 3– ಕಳ್ಳತನ ಮಾಡಲು |
| ಆ | ತೆಗೆದುಕೊಂಡ ಕ್ರಮ: | ಪೋಷಕರ ಮನವೊಲಿಸುವುದು | – | ಪೋಷಕರ ಮನವೊಲಿಸುವುದು | ಪೋಲೀಸ್‌ಗೆ ದೂರು | |

- ಎರಡು ಕೇಂದ್ರಗಳಲ್ಲಿ ಈ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಉಳಿದ 3 ಕೇಂದ್ರಗಳಿಂದ ಒಟ್ಟು 27 ಮಕ್ಕಳು ಮನೆಗೆ ತಪ್ಪಿಸಿಕೊಂಡು ಹೋಗಿರುತ್ತಾರೆ ಮತ್ತು 3 ಮಕ್ಕಳು ಕಳ್ಳತನ ಮಾಡಲು ಹೋಗಿರುತ್ತಾರೆ. ಸ್ವಯಂ ಸೇವಕರು ಸೂಕ್ತ ಕ್ರಮ ಜರುಗಿಸಿ ಮಕ್ಕಳನ್ನು ವಾಪಾಸು ಕರೆಸಿರುತ್ತಾರೆ.

112)

**ಕೋಷ್ಟಕ 77:–**

| ಪ್ರ. ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 112 | ಹಿಂದೆ ಕೇಂದ್ರದಲ್ಲಿದ್ದ ಮಕ್ಕಳ ಜಾಡು ಹಿಡಿದ ಬಗ್ಗೆ ಮಾಹಿತಿ ಇದೆಯೇ? ಇದ್ದಲ್ಲಿ ವಿವರ | ಇಲ್ಲ | ಇಲ್ಲ | ಹೌದು | ಇದೆ | ಹೌದು |

- ಜನಜಾಗೃತಿ ಮತ್ತು ಜನರಕ್ಷಾ ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ಹಿಂದೆ ಕೇಂದ್ರದಲ್ಲಿದ್ದ ಮಕ್ಕಳ ಜಾಡು ಹಿಡಿದ ಬಗ್ಗೆ ಮಾಹಿತಿ ಸಿಕ್ಕಿರುವುದಿಲ್ಲ.

113)

**ಕೋಷ್ಟಕ 78:–**

| ಪ್ರ. ಸಂ | ಪ್ರಶ್ನೆ | [illegible] | [illegible] | [illegible] | [illegible] | [illegible] |
|---|---|---|---|---|---|---|
| 113 | ಕೇಂದ್ರ ಶಾಲೆಗೂ ಈ ಕೇಂದ್ರಕ್ಕೂ ಇರುವ ಸಂಬಂಧ: | ಸಾಧಾರಣ | ಸಾಧಾರಣ | ಉತ್ತಮ | ಸಾಧಾರಣ | ಸಾಧಾರಣ |

- ಕೇಂದ್ರ ಶಾಲೆಗೂ ಕೇಂದ್ರಕ್ಕೂ ಇರುವ ಸಂಬಂಧ ಸಾಧರಣವಾಗಿದೆ. ಕೆಲವು ಕಡೆ ಕೇಂದ್ರದ ಮಕ್ಕಳಿಗೆ ನೀರು ಒದಗಿಸದಿರುವುದು, ಸರಕಾರದಿಂದ ಸರಬರಾಜಾಗಿರುವ ಸಮವಸ್ತ್ರ, ಪಠ್ಯ ಪುಸ್ತಕ ಇತ್ಯಾದಿ ಸೌಲಭ್ಯಗಳನ್ನು ನೀಡದಿರುವುದು ಕಂಡು ಬಂದಿದೆ.

114)ಸಂದರ್ಶಕರ ವಹಿಯ ಮುಖ್ಯಾಂಶಗಳು:(ಭೇಟಿ ನೀಡಿರುವ ಅಧಿಕಾರಿಗಳ ಸಂಖ್ಯೆ ಮತ್ತು ಹಿಮ್ಮಾಹಿತಿ ಮತ್ತು ಬೇರೆ ಬೇರೆ ದಿನದ ಹಾಜರಾತಿ ಗುರುತಿಸಿಕೊಳ್ಳಬಹುದು)

- ಮಕ್ಕಳ ಹಾಜರಾತಿ ಬಗ್ಗೆ
- ಸ್ವಚ್ಚತೆಯ ಬಗ್ಗೆ
- ಸುತ್ತೋಲೆಯ ಅನ್ವಯ ಅನುಪಾಲನೆ ಕಡಿಮೆ ಇದೆ.
- ಕಲಿಕೆಯ ಬಗ್ಗೆ ಕಡಿಮೆ ಹಿಮ್ಮಾಹಿತಿ ದಾಖಲಿಸಲಾಗಿದೆ.

**115)ಮಕ್ಕಳ ಕಲಿಕೆಯ ಪ್ರಗತಿ**

**ಕೋಷ್ಟಕ 79:–**

| ಯುಡಿಸಿ ಕೇಂದ್ರದ ಹೆಸರು | ವಯಸ್ಸು ಮತ್ತು ಮಕ್ಕಳ ಸಂಖ್ಯೆ | **ಕಲಿಕೆಯ ಮಟ್ಟ**(ಮಕ್ಕಳ ಕಲಿಕೆಯನ್ನು ಪರಿಶೀಲಿಸಿ ಸಾಮರ್ಥ್ಯ ಗಳಿಸಿರುವ ಮಕ್ಕಳ ಸಂಖ್ಯೆ ಬರೆಯಿರಿ) | | | |
|---|---|---|---|---|---|
| | | ಓದುವುದು | ಬರೆಯುವುದು | ಸರಳ ಲೆಕ್ಕಾಚಾರ | ಇತರೆ |
| | 6 ರಿಂದ 8 | ಅಕ್ಷರ | ಅಕ್ಷರ | ಸಂಖ್ಯೆಗಳು (1–20) ಸಂಕಲನ, ವ್ಯವಕಲನ | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| ಮಹಾತ್ಮಗಾಂಧಿ | 4 | 0 | 0 | 0 | 0 |
| ಜಾಗೃತಿ | 2 | 1(ಕೆಲವು ಅಕ್ಷರ ಮಾತ್ರ) | 1(ಕೆಲವು ಅಕ್ಷರ ಮಾತ್ರ) | 1 | 1 |
| ಜನ ಜಾಗೃತಿ | 4 | 0 | 0 | 0 | 0 |
| ಭೀಮ್ | 6 | 3(ಕೆಲವು ಅಕ್ಷರ ಮಾತ್ರ) | 3(ಕೆಲವು ಅಕ್ಷರ ಮಾತ್ರ) | 2 | 6 |
| ಜನರಕ್ಷಾ | 1 | 0 | 0 | 0 | 0 |
| ಒಟ್ಟು | 17 | 4 | 4 | 3 | 7 |

- ಭೀಮ್ ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿರುವ ಮಕ್ಕಳ ಭಾಷಾ ಕಲಿಕೆ ತೃಪ್ತಿಕರವಾಗಿಲ್ಲ.
- ಗಣಿತ ಕಲಿಕೆಯು ತೃಪ್ತಿಕರವಾಗಿಲ್ಲ. ಆದರೆ ಗಣಿತದಲ್ಲಿ ವ್ಯಾವಹಾರಿಕವಾಗಿ ಮಕ್ಕಳು ಚುರುಕಾಗಿರುವುದು ಸ್ಪಷ್ಟವಾಗಿದೆ.

**ಕೋಷ್ಠಕ 80:–**

| ಯುಡಿಸಿ ಕೇಂದ್ರದ ಹೆಸರು | ವಯಸ್ಸು/ಮಕ್ಕಳ ಸಂಖ್ಯೆ | **ಕಲಿಕೆಯ ಮಟ್ಟ**(ಮಕ್ಕಳ ಕಲಿಕೆಯನ್ನು ಪರಿಶೀಲಿಸಿ ಸಾಮರ್ಥ್ಯ ಗಳಿಸಿರುವ ಮಕ್ಕಳ ಸಂಖ್ಯೆ ಬರೆಯಿರಿ) | | | |
|---|---|---|---|---|---|
| | 8 ರಿಂದ 12 | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ(ಓದುವುದು) | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ(ಬರೆಯುವುದು) | ಸಂಖ್ಯೆಗಳು 1–100 ಸಂಕಲನ, ವ್ಯವಕಲನ, ಗುಣಾಕಾರ, ಸರಳ ಭಾಗಾಕಾರ | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| ಮಹಾತ್ಮಗಾಂಧಿ | 5 | 2(ಕಾಗುಣತ ಬರುತ್ತದೆ, ಒತ್ತಕ್ಷರ ಬರುವುದಿಲ್ಲ | 3 | 5 | 5 |
| ಜಾಗೃತಿ | 6 | 0 | 0 (ಒತ್ತಕ್ಷರ ಬರುತ್ತಿಲ್ಲ | ಸಂಖ್ಯೆ ಬರುತ್ತದೆ, ಗುಣಾಕಾರ ಭಾಗಾಕಾರ ಬರುತ್ತಿಲ್ಲ. | 6 |
| ಜನ ಜಾಗೃತಿ | 10 | 0 | 0 | 0 | 0 |
| ಭೀಮ್ | 2 | 1 | 1 | 1 | 1 |
| ಜನರಕ್ಷಾ | 2 | 0 | 0 | 0 | 0 |
| | **25** | **3** | **4** | **6** | **12** |

- 6–8 ವಯಸ್ಸಿನ ಗುಂಪಿನಲ್ಲಿ ಭೀಮ್ ಮತ್ತು ಮಹಾತ್ಮ ಗಾಂಧಿ ಕೇಂದ್ರದ ಮಕ್ಕಳು ಸ್ವಲ್ಪ ಮಟ್ಟಿಗೆ ಕಲಿಕೆಯನ್ನು ಸಾಧಿಸಿರುತ್ತಾರೆ. ಉಳಿದ ಕೇಂದ್ರಗಳಲ್ಲಿ ಕಲಿಕೆ ಉತ್ತಮವಾಗಿರುವುದಿಲ್ಲ.

**ಕೋಷ್ಟಕ 81:–**

| ಯುಡಿಸಿ ಕೇಂದ್ರದ ಹೆಸರು | ವಯಸ್ಸು / ಮಕ್ಕಳ ಸಂಖ್ಯೆ | **ಕಲಿಕೆಯ ಮಟ್ಟ**(ಮಕ್ಕಳ ಕಲಿಕೆಯನ್ನು ಪರಿಶೀಲಿಸಿ ಸಾಮರ್ಥ್ಯ ಗಳಿಸಿರುವ ಮಕ್ಕಳ ಸಂಖ್ಯೆ ಬರೆಯಿರಿ) | | | |
|---|---|---|---|---|---|
| | 13–14 | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ, ವಾಕ್ಯವೃಂದ | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ, ವಾಕ್ಯವೃಂದ | ಮೂಲ ಕ್ರಿಯೆಯ ಸರಳ ಲೆಕ್ಕಗಳು | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| ಮಹಾತ್ಮಗಾಂಧಿ | 3 | 1 (ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 1(ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 1 | 1 |
| ಜಾಗೃತಿ | 0 | 0 | 0 | 0 | 0 |
| ಜನ ಜಾಗೃತಿ | 8 | 6 (ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 6 (ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 0 | 0 |
| ಭೀಮ್ | 3 | 2(ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 2(ಕೆಲವು ಅಕ್ಷರ ಮತ್ತು ಸರಳ ಪದ ಮಾತ್ರ) | 2 | 3 |
| ಜನರಕ್ಷಾ | – | – | – | – | – |
| ಒಟ್ಟು | **14** | **9** | **9** | **3** | **4** |

- 6–8 ವಯಸ್ಸಿನ ಗುಂಪಿನಲ್ಲಿ ಭೀಮ್ ಮತ್ತು ಮಹಾತ್ಮ ಗಾಂಧಿ ಕೇಂದ್ರದ ಮಕ್ಕಳು ಸ್ವಲ್ಪ ಮಟ್ಟಿಗೆ ಕಲಿಕೆಯನ್ನು ಸಾಧಿಸಿರುತ್ತಾರೆ. ಉಳಿದ ಕೇಂದ್ರಗಳಲ್ಲಿ ಕಲಿಕೆ ಉತ್ತಮವಾಗಿರುವುದಿಲ್ಲ.

116) ವೀಕ್ಷಕರ ಅಭಿಪ್ರಾಯಗಳು (ದಾನದ ವಿವರಗಳಿದ್ದಲ್ಲಿ ದಾಖಲಿಸಬಹುದು/ಒಟ್ಟಾರೆ ಕೇಂದ್ರದ ಕಾರ್ಯ ನಿರ್ವಹಣೆ ಹೇಗಿದೆ?)

- ಮಕ್ಕಳ ಸ್ವಚ್ಛತೆ ಬಗ್ಗೆ.
- ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ.

# ಯುಡಿಸಿ ಕೇಂದ್ರದ ಮಕ್ಕಳ ಪ್ರಶ್ನಾವಳಿ ವಿಶ್ಲೇಷಣೆ:

**ವಿತರಿಸಿರುವ ಸೌಲಭ್ಯಗಳ ಬಗ್ಗೆ:**

**ಕೋಷ್ಟಕ 82:–**

| ಕ್ರ ಸಂ | ವಿತರಿಸಿರುವ ಸೌಲಭ್ಯ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನ ರಕ್ಷಾ |
|---|---|---|---|---|---|---|
| | **ಉತ್ತರಿಸಿದ ಮಕ್ಕಳ ಸಂಖ್ಯೆ** | 6 | 9 | 22 | 8 | 3 |
| **1** | ಪೇಸ್ಟ್ ನೀಡಿರುತ್ತಾರೆ–1, ನೀಡಿಲ್ಲ–2 | 6 | 6 | 22 | 8 | 0 |
| 2 | ಬ್ರಶ್ ನೀಡಿರುತ್ತಾರೆ–1, ನೀಡಿಲ್ಲ–2 | 6 | 7 | 20 | 8 | 3 |
| **3** | ಸ್ನಾನದ ಮತ್ತು ಬಟ್ಟೆ ತೊಳೆಯುವ ಸೋಪು ನೀಡಿರುತ್ತಾರೆ–1, ನೀಡಿಲ್ಲ–2 | 6 | 7 | 22 | 8 | 3 |
| 4 | ಕೊಬ್ಬರಿ ಎಣ್ಣೆ ನೀಡಿರುತ್ತಾರೆ–1, ನೀಡಿಲ್ಲ–2 | 6 | 4 | 20 | 6 | 0 |
| **5** | ಮುಖಾಲಂಕರಣ ಸಾಮಗ್ರಿ ನೀಡಿರುತ್ತಾರೆ–1, ನೀಡಿಲ್ಲ–2 | 1 | 9 | 20 | 6 | 0 |
| 6 | ತಟ್ಟೆ ಲೋಟ ನೀಡಿರುತ್ತಾರೆಯೇ? ನೀಡಿರುತ್ತಾರೆ–1, ನೀಡಿಲ್ಲ–2 | 6 | 6 | 20 | 8 | 3 |
| **7** | ಬೆಡ್‌ಶೀಟ್ ನೀಡಿರುತ್ತಾರೆ–1, ನೀಡಿಲ್ಲ–2 | 6 | 8 | 19 | 8 | 3 |
| 8 | ಬೆಡ್ಡಿಂಗ್ ನೀಡಿರುತ್ತಾರೆ–1, ನೀಡಿಲ್ಲ–2 | 6 | 0 | 13 | 8 | 0 |
| **9** | ಟ್ರಂಕ್ ನೀಡಿರುತ್ತಾರೆ–1, ನೀಡಿಲ್ಲ–2 | 0 | 0 | 3 | 8 | 3 |
| 10 | ಸಮವಸ್ತ್ರ ನೀಡಿರುತ್ತಾರೆ–1, ನೀಡಿಲ್ಲ–2 | 0 | 2 | 20 | 6 | 0 |
| **11** | ಪಠ್ಯಪುಸ್ತಕ ನೀಡಿರುತ್ತಾರೆ–1, ನೀಡಿಲ್ಲ–2 | 0 | 7 | 20 | 8 | 3 |
| 12 | ನೋಟ್ ಪುಸ್ತಕ ನೀಡಿರುತ್ತಾರೆ–1, ನೀಡಿಲ್ಲ–2 | 6 | 7 | 20 | 8 | 3 |
| **13** | ಪೆನ್/ಪೆನ್ಸಿಲ್ ನೀಡಿರುತ್ತಾರೆ–1, ನೀಡಿಲ್ಲ–2 | 6 | 0 | 22 | 8 | 3 |
| 14 | ಚಾರ್ಟ್, ಕಲರ್ ಪೇಪರ್, ರಬ್ಬರ್, ಡ್ರಾಯಿಂಗ್ ಶೀಟ್, ಚಾಕ್ ಪೀಸ್, ಕ್ರೇಯಾನ್ಸ್, ಪೇಪರ್‌ಗಳನ್ನು ನೀಡಿದ್ದಾರೆಯೆ? ನೀಡಿರುತ್ತಾರೆ–1, ನೀಡಿಲ್ಲ–2 | 0 | 0 | 22 | 6 | 0 |

- ಮೇಲಿನ ಕೋಷ್ಟಕವನ್ನು ವಿಶ್ಲೇಷಿಸಿದಾಗ ಪೇಸ್ಟ್, ಬ್ರಷ್, ಸ್ನಾನದ ಮತ್ತು ಬಟ್ಟೆ ತೊಳೆಯುವ ಸೋಪು, ಕೊಬ್ಬರಿ ಎಣ್ಣೆ, ಮುಖಾಲಂಕರಣ ಸಾಮಗ್ರಿ(ಮಹಾತ್ಮಗಾಂದಿ ಮತ್ತು ಜನರಕ್ಷಾ ಹೊರತುಪಡಿಸಿ), ತಟ್ಟೆ ಲೋಟ, ನೋಟ್ ಪುಸ್ತಕ, ಪೆನ್/ಪೆನ್ಸಿಲ್, ಬೆಡ್‌ಶೀಟ್ ಈ ಸಾಮಗ್ರಿಗಳನ್ನು ಎಲ್ಲಾ ಕೇಂದ್ರದವರು ಒದಗಿಸಿರುತ್ತಾರೆಂದು ಮಕ್ಕಳು ಅಭಿಪ್ರಾಯಪಟ್ಟಿರುತ್ತಾರೆ. ನೋಟ್ ಪುಸ್ತಕಗಳನ್ನು ವರ್ಷಕ್ಕೆ ಕೆಲವು ಕೇಂದ್ರಗಳಲ್ಲಿ 2–3 ಅಥವಾ 6–7 ರಷ್ಟು ವಿತರಿಸಿರುವುದು ಭೇಟಿಯ ವೇಳೆಯಲ್ಲಿ ಗಮನಿಸಲಾಗಿದೆ.
- ಬೆಡ್ಡಿಂಗ್, ಟ್ರಂಕ್‌ಗಳು ಒಂದೆರಡು ಕೇಂದ್ರಗಳನ್ನು ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ವಿತರಣೆಯಾಗಿರುವುದಿಲ್ಲ. ಅಧ್ಯಯನ ಭೇಟಿ ನಂತರ ಕೆಲವು ಕೇಂದ್ರಗಳವರು ಮಕ್ಕಳಿಗೆ ಈ ಸಾಮಗ್ರಿಗಳನ್ನು ಸರಬರಾಜು ಮಾಡಿರುತ್ತಾರೆ.

* ಇಲಾಖೆಯಿಂದ ಸರಬರಾಜಾಗುವ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳು ಸಮರ್ಪಕವಾಗಿ ಕೇಂದ್ರದ ಮಕ್ಕಳಿಗೆ ವಿತರಣೆಯಾಗಿರುವುದಿಲ್ಲ. ಚಾರ್ಟ್, ಕಲರ್ ಪೇಪರ್, ರಬ್ಬರ್, ಡ್ರಾಯಿಂಗ್ ಶೀಟ್, ಚಾಕ್ ಪೀಸ್, ಕ್ರೇಯಾನ್ಸ್, ಪೇಪರ್‌ಗಳನ್ನು (ಎರಡು ಕೇಂದ್ರ ಹೊರತುಪಡಿಸಿ ಉಳಿದ ಕೇಂದ್ರದವರು) ಒದಗಿಸಿರುವುದಿಲ್ಲ. ಈ ವಸ್ತುಗಳು ಮಕ್ಕಳಿಗೆ ಅತಿ ಅಗತ್ಯವಾಗಿ ಬೇಕಾಗಿರುವುದರಿಂದ ಈ ಕೊರತೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

**ಆಹಾರ ವ್ಯವಸ್ಥೆಯ ಬಗ್ಗೆ:–**

**ಕೋಷ್ಟಕ 83:–**

| ಕ್ರ ಸಂ | ವಿತರಿಸಿರುವ ಸೌಲಭ್ಯ | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| | **ಉತ್ತರಿಸಿದ ಮಕ್ಕಳ ಸಂಖ್ಯೆ** | 6 | 9 | 22 | 8 | 3 |
| 15 | ಬೆಳಗಿನ ಉಪಹಾರ ಮೆನು ಪ್ರಕಾರ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | 0 | 6 | 22 | 8 | 3 |
| 16 | ಬೆಳಗಿನ ಉಪಹಾರವನ್ನು ರುಚಿ ಮತು ಸ್ವಚ್ಛವಾಗಿ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | 6 | 6 | 22 | 6 | 3 |
| **17** | ಮಧ್ಯಾಹ್ನದ ಬಿಸಿಯೂಟವನ್ನು ಶಾಲೆಯಿಂದ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | 6 | 7 | 22 | 8 | 3 |
| 18 | ಊಟದ ಬಳಿಕ ನಿಮಗೆ ವಿಟಮಿನ್ ಮಾತ್ರೆ ನೀಡುತ್ತಿದ್ದಾರೆಯೇ? ಹೌದು–1, ಇಲ್ಲ–2 | 3 | 5 | 22 | 8 | 0 |
| **19** | ರಾತ್ರಿ ಊಟವನ್ನು ರುಚಿಕರವಾಗಿ ಮೆನು ಪ್ರಕಾರ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | 3 | 3 | 22 | 8 | 0 |
| 20 | ಭಾನುವಾರ ವಿಶೇಷ ಆಹಾರ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | 5 | 6 | 22 | 6 | 3 |

* ಆಹಾರ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಮಕ್ಕಳು ಸಕಾರಾತ್ಮಕವಾಗಿ ಉತ್ತರಿಸಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ ಮತ್ತು ಇದೊಂದು ಧನಾತ್ಮಕ ಅಂಶವಾಗಿದೆ.

**ಕೋಷ್ಠಕ 84:–**

| ಕ್ರ ಸಂ | ಪ್ರಶ್ನೆಗಳು | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| 21 | ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದೆಯೇ? ಹೌದು–1, ಇಲ್ಲ–2 | 0 | 0 | 22 | 8 | 3 |
| **22** | ನೀರಿನ ವ್ಯವಸ್ಥೆ ಇದೆಯೇ? ಹೌದು–1, ಇಲ್ಲ–2 | 0 | 0 | 22 | 8 | 3 |
| **23** | ವೇಳಾಪಟ್ಟಿಯಂತೆ ಕಲಿಸುತ್ತಾರೆಯೇ? ಹೌದು–1, ಇಲ್ಲ–2 | 2 | 3 | 22 | 6 | 3 |
| 24 | ನಿಮಗೆ ಅರ್ಥವಾಗುವಂತೆ ಕಲಿಸುತ್ತಿದ್ದಾರೆಯೇ? ಹೌದು–1, ಇಲ್ಲ–2 | 6 | 8 | 22 | 4 | 3 |
| **25** | ನಿಮ್ಮ ಸ್ವಚ್ಛತೆಯ ಬಗ್ಗೆ ನಿನಗೆ ಅರಿವಿದೆಯೇ? ಹೌದು–1, ಇಲ್ಲ–24 | 6 | 9 | 22 | 8 | 3 |
| 26 | ಮನರಂಜನೆಗೆ ಏನೇನು ಚಟುವಟಿಕೆಗಳನ್ನು ನೀಡುತ್ತಾರೆ( ಆಟ/ಟಿ.ವಿ/ಹಾಡು/ನೃತ್ಯ/ನಾಟಕ) | 4 | 5 | 21 | 8 | 0 |
| **27** | ನಿಮ್ಮನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಾರೆಯೇ? ಹೌದು–1, ಇಲ್ಲ–2 | 0 | 0 | 5 | ಇಲ್ಲ | 3 |
| 28 | ಪ್ರತಿ ದಿನ ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಸಂಗೀತ ಇತ್ಯಾದಿಗಳನ್ನು ಮಾಡಿಸುತ್ತಿದ್ದಾರೆಯೇ? | 4 | 5 | 20 | | 0 |
| **29** | ಪ್ರತಿ ತಿಂಗಳು ವೈದ್ಯರು ತಪಾಸಣೆಯನ್ನು ಮಾಡುತ್ತಾರೆಯೇ? ಹೌದು–1, ಇಲ್ಲ–2 | 0 | 0 | 20 | ಇಲ್ಲ | 1 |

- ಮಕ್ಕಳೊಂದಿಗಿನ ಸಂದರ್ಶನದ ಅವಧಿಯಲ್ಲಿ ಮಕ್ಕಳು ಬಹಳ ಧೈರ್ಯದಿಂದ ಉತ್ತರಿಸುತ್ತಿರುವುದನ್ನು ಗಮನಿಸಲಾಗಿದೆ. ಕೇಂದ್ರಗಳ ಸಿಬ್ಬಂದಿಗಳು ಕೆಲವು ಪ್ರಶ್ನೆಗಳಿಗೆ ಮಕ್ಕಳನ್ನು ಉತ್ತರಿಸಲು ತಯಾರು ಮಾಡಿರುವುದು ಅವರ ಉತ್ತರದಿಂದ ಸ್ಪಷ್ಟವಾಗುತ್ತಿತ್ತು.
- ಶಿಕ್ಷಕರು ವೇಳಾಪಟ್ಟಿಯಂತೆ, ತಮಗೆ ಅರ್ಥವಾಗುವಂತೆ ಕಲಿಸುತ್ತಾರೆಂದು ಮಕ್ಕಳು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ವೇಳಾಪಟ್ಟಿ ನಿಯಮಾನುಸಾರ ರಚನೆಯಾಗಿರುವುದಿಲ್ಲ. ನೋಟ್ ಪುಸ್ತಕದಲ್ಲಿ ಕ್ರಮಬದ್ಧವಾಗಿ ಬರೆಯುತ್ತಿಲ್ಲ. ಮಕ್ಕಳ ಕಲಿಕೆಯೂ ತೃಪ್ತಿಕರವಾಗಿರುವುದಿಲ್ಲ. ತಾವೇನು ಕಲಿಯಬೇಕಾಗಿದೆ ಎನ್ನುವುದು ಮಕ್ಕಳಿಗೆ ಸ್ಪಷ್ಟತೆ ಇಲ್ಲದಿರುವುದರಿಂದ ಹೀಗೆ ಹೇಳಿರಬಹುದು.
- ಪ್ರವಾಸಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿಲ್ಲ ಮತ್ತು ಪ್ರತಿ ಮಾಹೆ ವೈದ್ಯಕೀಯ ತಪಾಸಣೆಯನ್ನು ಮಾಡಿ–ರುವುದಿಲ್ಲ(ಜನಜಾಗೃತಿ ಮತ್ತು ಜನರಕ್ಷಾ ಹೊರತುಪಡಿಸಿ) ಎಂದು ಮಕ್ಕಳು ಅಭಿಪ್ರಾಯಪಟ್ಟಿರುತ್ತಾರೆ.
- ಪ್ರತಿ ದಿನ ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಸಂಗೀತ ಇತ್ಯಾದಿಗಳನ್ನು ಮಾಡಿಸುತ್ತಿದ್ದಾರೆಂದು ಮೂರು ಕೇಂದ್ರಗಳ ಮಕ್ಕಳು ಉತ್ತರಿಸಿರುತ್ತಾರೆ.

**ಕೋಷ್ಟಕ 85:–**

| ಕ್ರ ಸಂ | ಪ್ರಶ್ನೆಗಳು | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| **30** | ನೀವು ಶಾಲೆಯಲ್ಲಿ ಸಂತೋಷವಾಗಿರುವಿರಾ? ಹೌದು–1, ಇಲ್ಲ–2 | 3 | 4 | 18 | 8 | 3 |
| **31** | ಶಿಕ್ಷಕರು ನಿಮ್ಮನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಾರೆಯೇ? ಹೌದು–1, ಇಲ್ಲ–2 | 5 | 5 | 17 | 8 | 3 |
| 32 | ಕೇಂದ್ರದಲ್ಲಿ ಯಾರನ್ನು ಕಂಡರೆ ಇಷ್ಟ? ಹೆಸರು ಬರೆ | ನಿಂಗರಾಜ | ಶೈಲ | ಶ್ರೀನಿವಾಸ | ಮಿಸ್ ಶೋಭಾವತಿ | ರಾಜೇಶ, ಸಿದ್ಧರಾಜು |
| **33** | ಕೇಂದ್ರದಲ್ಲಿ ಹೊಡೆಯುವುದು, ಬೈಯುವುದು ಮಾಡುತ್ತಾರೆಯೇ? ಹೌದು–1, ಇಲ್ಲ–2 | 4 | 3 | 5 | ಇಲ್ಲ | 2 |
| 34 | ಪಾಠದ ಅವಧಿಯಲ್ಲಿ ಏನೇನು ಚಟುವಟಿಕೆ ಮಾಡುತ್ತಾರೆ? | ಆಟ–2 ಪಾಠ–4 ಹಾಡು–2 | ಪಾಠ–5, ಹಾಡು, ಕುಣಿತ–4 | ಪಾಠ ಚಿತ್ರಕಲೆ, ಹಾಡು ಇತ್ಯಾದಿ–19, ಬರಿಪಾಠ–2, | ಇಲ್ಲ | ಎ,ಬಿ,ಸಿ,ಡಿ ಮಗ್ಗಿ |

- ಯುಡಿಸಿ ಕೇಂದ್ರದಲ್ಲಿ ಮಕ್ಕಳು ಸಂತೋಷವಾಗಿರುವುದಾಗಿ ಮತ್ತು ಶಿಕ್ಷಕರು ತಮ್ಮನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ.
- ಭೀಮ್ ಹೊರತುಪಡಿಸಿ ಉಳಿದ ಕೇಂದ್ರಗಳಲ್ಲಿ ಕೆಲವು ಮಕ್ಕಳು ಕೇಂದ್ರದಲ್ಲಿ ಸ್ವಯಂಸೇವಕರು ಬೈಯುತ್ತಾರೆ ಮತ್ತು ಹೊಡೆಯುತ್ತಾರೆಂದು ತಿಳಿಸಿರುತ್ತಾರೆ.
- ಪಾಠದ ಅವಧಿಲ್ಲಿ ಆಟ, ಪಾಠ, ಹಾಡು, ಚಿತ್ರಕಲೆ, ಮಗ್ಗಿ ಮತ್ತು ಎ,ಬಿ,ಸಿ,ಡಿ ಹೇಳಿಕೊಡುತ್ತಾರೆ ಎಂದು ತಿಳಿಸಿರುತ್ತಾರೆ.

**ಕೋಷ್ಟಕ 86:–**

| ಕ್ರ ಸಂ | ಪ್ರಶ್ನೆಗಳು | ಮಹಾತ್ಮ ಗಾಂಧಿ | ಜಾಗೃತಿ | ಜನ ಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| 35 | ಏನಾದರೂ ತೊಂದರೆಯಾದಾಗ ಯಾರೊಂದಿಗೆ ಹೇಳಿಕೋಳ್ಳುತ್ತೀರಿ. ನಿಮ್ಮ ಸಮಸ್ಯೆಗಳಿಗೆ ಸಂಬಂಧಪಟ್ಟವರು ಹೇಗೆ ಸ್ಪಂದಿಸುತ್ತಾರೆ. | ಸ್ವಯಂ ಸೇವಕರಿಗೆ–6 | ಸ್ವಯಂ ಸೇವಕರಿಗೆ–9 | ಸ್ವಯಂ ಸೇವಕರಿಗೆ–15, ಬರೆದಿಲ್ಲ–7 | | ಸಿದ್ಧರಾಜು ವಿವರ ನೀಡಿಲ್ಲ. |
| 36 | ಹೆಣ್ಣು ಮಕ್ಕಳಿದ್ದಲ್ಲಿ ಅವರ ಸಮಸ್ಯೆಗಳನ್ನು ಯಾರು ಪರಿಹರಿಸುತ್ತಾರೆ. | ಅಡಿಗೆಯವರಿಗೆ–1 | ಅಡಿಗೆಯವರಿಗೆ–9 | ಶಿಕ್ಷಕರಿಗೆ–20, ಬರೆದಿಲ್ಲ–2 | ಸ್ವಯಂ ಸೇವಕರಿಗೆ | – |
| **37** | ಶಾಲೆಗೆ ಸೇರಿದ ನಂತರ ನಿಮ್ಮಲ್ಲಾಗಿರುವ ಬದಲಾವಣೆಗಳೇನು? | ಸ್ವಚ್ಛತೆ, ಶಾಂತ–1 ಚೆನ್ನಾಗಿದ್ದೇನೆ–1 | ಸ್ವಚ್ಛತೆ, ಶಾಂತ–3 ಚೆನ್ನಾಗಿದ್ದೇನೆ–2 ಇಲ್ಲ–3 ಬರೆದಿಲ್ಲ–1 | ಚೆನ್ನಾಗಿ ಓದು ಬರೆಯುವುದನ್ನು–10, ಶಿಸ್ತು, ನಡವಳಿಕೆ–4, ಬೀಡಿ ಸೇದುತ್ತಿದ್ದೆ–ಈಗ ಇಲ್ಲ–2 | ಚೆನ್ನಾಗಿ ಓದುತ್ತೇನೆ. | ಏನು ಇಲ್ಲ |
| 38 | ಮುಂದೆ ನಿವೇನಾಗಬೇಕೆಂದು ಬಯಸುವಿರಿ? | ಪೋಲೀಸ್–3 ಡಾಕ್ಟರ್–1, ಇಂಜಿನಿಯರ್–1 ಬರೆದಿಲ್ಲ–2 | ಪೋಲೀಸ್–4 ಡಾಕ್ಟರ್–1, ಇಂಜಿನಿಯರ್–2 ಬರೆದಿಲ್ಲ–2 | ಪೋಲೀಸ್–12, ಸೈನಿಕ–2 ಡಾಕ್ಟರ್–1, ಶಿಕ್ಷಕ–3, ಇಂಜಿನಿಯರ್–2 ಬರೆದಿಲ್ಲ–2 | ಟೀಚರ್ | ಮಿಲಿಟರಿ–2. ಬರೆದಿಲ್ಲ–1 |
| **39** | ನೀವು ಕೇಂದ್ರದಲ್ಲಿರಲು ಇಷ್ಟಪಡುತ್ತೀರಾ? ಹೊರಗಿರಲು ಇಷ್ಟಪಡುತ್ತೀರಾ? ನಿಮಗೆ ಕೇಂದ್ರದಲ್ಲಿ ಯಾರನ್ನು ಕಂಡರೆ ಇಷ್ಟ? | ಹಾಸ್ಟಲ್ ಇಷ್ಟ–3, ಮನೆ ಇಷ್ಟ–3 | ಹಾಸ್ಟಲ್ ಇಷ್ಟ–4, ಹೊರಗೆ ಇಷ್ಟ–3, ಸ್ವಯಂಸೇವಕರು | ಹಾಸ್ಟಲ್ ಇಷ್ಟ–19, **ಬರೆದಿಲ್ಲ–3, ಸ್ವಯಂಸೇವಕರು** | ಹೌದು–8 ಶೋಭಾ ಮಿಸ್ | ಇಷ್ಟ–2, ಬರೆದಿಲ್ಲ–1 |

- ಎಲ್ಲಾ ಕೇಂದ್ರದ ಮಕ್ಕಳು ತಮಗೇನಾದರೂ ಸಮಸ್ಯೆಯಾದಲ್ಲಿ ಸ್ವಯಂಸೇವಕರಿಗೆ ತಿಳಿಸುವುದಾಗಿ ತಿಳಿಸಿರುತ್ತಾರೆ. ಇದರಿಂದ ಮಕ್ಕಳಿಗೆ ಸ್ವಯಂಸೇವಕರಲ್ಲಿ ವಿಶ್ವಾಸವಿರುವುದು ಸ್ಪಷ್ಟವಾಗುತ್ತಿದೆ.
- ಹೆಣ್ಣು ಮಕ್ಕಳ ಸಮಸ್ಯೆಗಳಿಗೆ ಅಡುಗೆಯವರು ಪರಿಹಾರ ನೀಡುತ್ತಿರುವುದಾಗಿ ಮಕ್ಕಳು ತಿಳಿಸಿರುತ್ತಾರೆ.
- ಜನರಕ್ಷಾ ಹೊರತುಪಡಿಸಿ ಉಳಿದ ಎಲ್ಲಾ ಕೇಂದ್ರದ ಮಕ್ಕಳು ತಮ್ಮಲ್ಲಿ ಸ್ವಚ್ಛತೆ, ಶಾಂತತೆ, ಶಿಸ್ತು, ನಡವಳಿಕೆ ಇತ್ಯಾದಿಗಳಲ್ಲಿ ಆಗಿರುವ ಬದಲಾವಣೆಯನ್ನು ಅಭಿವ್ಯಕ್ತಿಸಿರುತ್ತಾರೆ.

- ಒಟ್ಟು 48 ಮಕ್ಕಳಲ್ಲಿ 7 ಮಕ್ಕಳನ್ನು ಹೊರತುಪಡಿಸಿ ಉಳಿದೆಲ್ಲಾ ಮಕ್ಕಳು ಮುಂದೆ ತಾವೇನಾಗಬೇಕೆಂಬ ಆಕಾಂಕ್ಷೆ ಹೊಂದಿರುತ್ತಾರೆ. ಅದರಲ್ಲೂ 23 ಮಕ್ಕಳು ಪೋಲಿಸ್/ಸೈನಿಕನಾಗುವುದಾಗಿ ತಿಳಿಸಿರುತ್ತಾರೆ.
- ಒಟ್ಟು 36 ಮಕ್ಕಳು ಹಾಸ್ಟೆಲ್‌ನಲ್ಲಿರಲು ಇಷ್ಟಪಡುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಈ ನಿಟ್ಟಿನಲ್ಲಿ ಈ ಮಕ್ಕಳಿಗೆ ಈ ಕೇಂದ್ರಗಳು ಉತ್ತಮ, ಸುರಕ್ಷಿತ ಮತ್ತು ಆಶ್ರಯ ನೀಡುವ ಕೇಂದ್ರಗಳಾಗಿವೆ ಎಂದು ಸ್ಪಷ್ಟವಾಗುತ್ತಿದೆ.

ಯು.ಡಿ.ಸಿ. ಕೇಂದ್ರದ ಸ್ವಯಂಸೇವಕರ ಪ್ರಶ್ನಾವಳಿ ವಿಶ್ಲೇಷಣೆ:

**ಕೋಷ್ಟಕ 87:–**

| ಕ್ರ ಸಂ | ವಿತರಿಸಿರುವ ಸೌಲಭ್ಯ | ಮಹಾತ್ಮ ಗಾಂಧಿ | ಜಾಗೃತಿ | ಜನಜಾಗೃತಿ | ಭೀಮ್ | ಜನರಕ್ಷಾ |
|---|---|---|---|---|---|---|
| | **ಸೇವಾವಧಿ:** | | 6 ತಿಂಗಳು | 3 ವರ್ಷ | 2007 ರಿಂದ | 6 ತಿಂಗಳು |
| | **ವಿದ್ಯಾರ್ಹತೆ:** | ಬಿ., ಬಿಇಡಿ | ಎಂ.ಎ, ಬಿಇಡಿ, ಎಂಫಿಲ್ | ಬಿ.ಎ, ಡಿ.ಇಡಿ | ಬಿ.ಎ | ಪಿ.ಯು.ಸಿ |
| 1 | **ಸಂಸ್ಥೆಯಲ್ಲಿ ವಾಸವಿದ್ದೀರಾ?** | ಹೌದು | ಹೌದು | ಹೌದು | ಹೌದು | ಹೌದು |
| 2 | ಪಡೆದಿರುವ ತರಬೇತಿ ವಿವರ | ಇಲ್ಲ | ಇಲ್ಲ | ಇಲ್ಲ | Child right , OOC, posco Act | ಇಲ್ಲ |
| 3 | ನೀಡಲಾಗಿರುವ ವೇತನ | 4000 | 6000 | 4500 | 3000 | 3000 |
| 4 | ಮಕ್ಕಳ ಕಲಿಕೆಗೆ ಏನೇನು ಯೋಜನೆ ಹಾಕಿಕೊಂಡಿರುತ್ತೀರಿ? | ಅಸಮಂಜಸ ಉತ್ತರ | ಪೂರಕ ಬೋಧನೆ | ವೈಯಕ್ತಿಕ ಅಧ್ಯಯನ ಮತ್ತು ಪರಿಹಾರ ಬೋಧನೆ | ವೈಯಕ್ತಿಕ ಸ್ವಚ್ಛತೆ | ಟೀಚಿಂಗ್ ಗೈಡ್ಸ್, ಹಾಡಿನ ಮೂಲಕ ಪಾಠ |
| 5 | ಮಕ್ಕಳ ಪ್ರಗತಿಗಾಗಿ ನೀವು ಮಾಡುತ್ತಿರುವ ಕಾರ್ಯ ಚಟುವಟಿಕೆಗಳೇನು? | ಪೂರ್ವಜ್ಞಾನಕ್ಕೆ ಅನುಗುಣವಾಗಿ ಚಟುವಟಿಕೆ | ತರಬೇತಿ ಇಲ್ಲ, ಪಠ್ಯ ಪುಸ್ತಕ ಸರಬರಾಜು ಇಲ್ಲ, ಆದರೂ ಪೂರಕವಾಗಿ ಪಾಠ ಮಾಡುತ್ತೇನೆ | ಹೊರಾಂಗಣ ಮತ್ತು ಒಳಾಂಗಣ ಆಟ, ಸಾಂಸ್ಕೃತಿಕ ಕಾರ್ಯಕ್ರಮ, | ಪರಿಹಾರ ಬೋಧನೆ, ಆಪ್ತ ಸಮಾಲೋಚನೆ, ನಿರಂತರ ಕಲಿಕೆ | ಆಟ, ಹಾಡು, ಅಂತ್ಯಾಕ್ಷರಿ, ಕಿರು ಪರೀಕ್ಷೆ, ಮರು ಪರೀಕ್ಷೆ |

- ಕೇಂದ್ರದಲ್ಲಿ ಪದವಿಪೂರ್ವದಿಂದ ಎಂ.ಫಿಲ್‌ವರೆಗೆ ಪದವಿಯನ್ನು ಹೊಂದಿದ ಸ್ವಯಂಸೇವಕರಿರುತ್ತಾರೆ.
- ಎಲ್ಲಾ ಸ್ವಯಂ ಸೇವಕರು ಕೇಂದ್ರದಲ್ಲೇ ವಾಸವಿರುತ್ತಾರೆ.
- ಒಬ್ಬರನ್ನು ಹೊರತುಪಡಿಸಿ ಉಳಿದ ಸ್ವಯಂಸೇವಕರಿಗೆ ಯಾವುದೇ ತರಬೇತಿ ಆಗಿಲ್ಲ.

- ಇವರ ವೇತನವು ತಿಂಗಳಿಗೆ 3000/ ದಿಂದ 6000/- ವರೆಗೆ ನೀಡಲಾಗುತ್ತಿದೆ. (ಸಿಬ್ಬಂದಿಗಳು ಕಡಿಮೆ ಇರುವಲ್ಲಿ ನಿಗಧಿಪಡಿಸಿರುವ ವೇತನಕ್ಕಿಂತ ಹೆಚ್ಚು ನೀಡಿರಬಹುದು)
- ಮಕ್ಕಳ ಕಲಿಕೆಗಾಗಿ ತಾವು ಮಕ್ಕಳ ವೈಯಕ್ತಿಕ ಅಧ್ಯಯನ, ಪೂರಕ ಬೋಧನೆ, ಪರಿಹಾರ ಬೋಧನೆ ಇತ್ಯಾದಿ ಮಾಡುವುದಾಗಿ ತಿಳಿಸಿರುತ್ತಾರೆ.
- ಮಕ್ಕಳ ಪ್ರಗತಿಗಾಗಿ ವಿವಿಧ ಚಟುವಟಿಕೆಗಳನ್ನು ಮಾಡುವುದಾಗಿ ತಿಳಿಸಿರುತ್ತಾರೆ.

**ಕೋಷ್ಟಕ 88:–**

| ಕ್ರ ಸಂ | ವಿತರಿಸಿರುವ ಸೌಲಭ್ಯ | [illegible] | [illegible] | [illegible] | [illegible] | [illegible] |
|---|---|---|---|---|---|---|
| 6 | ಕೇಂದ್ರ ಶಾಲೆಯ ಮುಖ್ಯಸ್ಥರು ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆಯೇ? ವಿವರ ನೀಡಿ. | ಸಹಕರಿಸುತ್ತಾರೆ. ಆದರೆ ನೀರಿನ ಸೌಲಭ್ಯ ಒದಗಿಸುತ್ತಿಲ್ಲ. | ಹೌದು | ಹೌದು | ಹೌದು | ಹೌದು |
| **7** | ನಿಮ್ಮನ್ನು ನಿಯೋಜಿಸಿದ ಎನ್‌ಜಿಒ ಸಂಸ್ಥೆ ನಿಮಗೆ ಬೇಕಾದ ಎಲ್ಲಾ ಸಹಕಾರವನ್ನು ನೀಡುತ್ತಿದೆಯೇ? | ಹೌದು | ಹೌದು | ಹೌದು | ಹೌದು | ಹೌದು |
| 8 | ಇಲಾಖೆಯಿಂದ ನಿಮಗೆ ಯಾವ ರೀತಿಯ ಸಹಕಾರ ಮತ್ತು ಮಾರ್ಗದರ್ಶನ ಬೇಕಾಗಿದೆ? | ತರಬೇತಿ ನೀಡಬೇಕು | ಪಠ್ಯ ಪುಸ್ತಕ ನೀಡಬೇಕು, ಇಲಾಖೆಯಿಂದ ಮಾರ್ಗದರ್ಶನ ಬೇಕು. | ಪಠ್ಯ ಪುಸ್ತಕ, ಸಮವಸ್ತ್ರ ನೀಡಬೇಕು, ಮಕ್ಕಳ ಮಾಹಿತಿ ನಿಖರವಾಗಿ ಬೇಕು. | ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಕರೆತರಲು ಸಹಕಾರ ಮತ್ತು ಮಾರ್ಗದರ್ಶನ ಬೇಕು. | ಪಠ್ಯ ಪುಸ್ತಕ, ಸಮವಸ್ತ್ರ ನೀಡಬೇಕು. |
| **9** | ಕೇಂದ್ರದಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳೇನು? | ನೀರಿನ ಸಮಸ್ಯೆ, ಶುಚಿತ್ವದ ಸಮಸ್ಯೆ | ಮಕ್ಕಳ ಸಮಸ್ಯೆಗಳನ್ನು ಬಗೆಹರಿಸುವುದು. | ಮಕ್ಕಳು ಮನೆಗೆ ಓಡಿ ಹೋಗುವುದು. | ಇಲ್ಲ | ಸೆಕ್ಯೂರಿಟಿ ಇಲ್ಲ, ಹೊರಗಿನ ಮಕ್ಕಳು ಬಂದು ಮಕ್ಕಳೊಂದಿಗೆ ಜಗಳವಾಡುತ್ತಾರೆ. |
| 10 | ಕೇಂದ್ರದ ಮಕ್ಕಳಿಗಾಗಿ ನೀವು ಮಾಡಿರುವ ವಿಶೇಷ ಸಾಧನೆ ಏನು? | ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತೇನೆ. ಸಂಬಳ ಸಾಕಾಗುತ್ತಿಲ್ಲ, ಆದರೂ ಕಲಿಸುತ್ತೇನೆ. | ಮಕ್ಕಳಿಗೆ ತಿಳಿವಳಿಕೆ, ಓದು, ಬರೆಹ ಕಲಿಸುತ್ತೇನೆ. | ಬೋಧನೆ ಮಾಡುವುದು, ಕಲಿಕಾ ಪ್ರಗತಿ ತಿಳಿಯುವುದು, ಚರ್ಚಾ ಸ್ಪರ್ಧೆ, ರಸಪ್ರಶ್ನೆ | ಶಾಲೆಯಿಂದ ಹೊರಗುಳಿದ ಮಕ್ಕಳ ಪಾಲನೆ ಮತ್ತು ಪೋಷಣೆ | ಪರಿಸರದ ಅರಿವು ಮತ್ತು ಸ್ವಚ್ಛತೆ |

- ಕೇಂದ್ರ ಶಾಲೆಯ ಮುಖ್ಯಸ್ಥರು ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆಂದು ಎಲ್ಲಾ ಸ್ವಯಂಸೇವಕರು ಅಭಿಪ್ರಾಯಪಟ್ಟಿರುತ್ತಾರೆ.
- ತಮ್ಮನ್ನು ನಿಯೋಜಿಸಿದ ಎನ್.ಜಿ.ಓ ಸಂಸ್ಥೆಯು ಕೂಡಾ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆಂದು ಎಲ್ಲಾ ಸ್ವಯಂಸೇವಕರು ಅಭಿಪ್ರಾಯಪಟ್ಟಿರುತ್ತಾರೆ.
- ಇಲಾಖೆಯಿಂದ ತಮಗೆ ತರಬೇತಿ, ಮಾರ್ಗದರ್ಶನ, ಮಕ್ಕಳಿಗಾಗಿ ಪ್ರೋತ್ಸಾಹದಾಯಕ ಸವಲತ್ತು ಇತ್ಯಾದಿಗಳನ್ನು ನೀಡಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ.
- ಕೇಂದ್ರದವರು ನೀರಿನ ಸಮಸ್ಯೆ, ಶುಚಿತ್ವದ ಸಮಸ್ಯೆ, ಮಕ್ಕಳು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು, ಸೆಕ್ಯೂರಿಟಿ ಇಲ್ಲದಿರುವುದು ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.
- ಸ್ವಯಂ ಸೇವಕರು ಮಕ್ಕಳನ್ನು ಪ್ರೀತಿಯಿಂದ ನೋಡಿಕೊಳ್ಳುವುದು, ಓದು ಬರೆಹ ಕಲಿಸುವುದು, ಪಾಲನೆ ಪೋಷಣೆ ಮಾಡುವುದು, ಪರಿಸರ ಮತ್ತು ಸ್ವಚ್ಛತೆಯ ಅರಿವು ಮೂಡಿಸುವುದಾಗಿ ತಿಳಿಸಿರುತ್ತಾರೆ. ಇವೆಲ್ಲವೂ ಸ್ವಯಂಸೇವಕರು ಮಾಡಲೇಬೇಕಾದ ಕಾರ್ಯವಾಗಿರುತ್ತದೆ.

## ಅನುಪಾಲನಾಧಿಕಾರಿಗಳಿಗಳ ಪ್ರಶ್ನಾವಳಿಯ ವಿಶ್ಲೇಷಣೆ:

**ಕೋಷ್ಟಕ 89:–**

| ಕ್ರ ಸಂ | ಪ್ರಶ್ನೆ | ಅಭಿಪ್ರಾಯ | |
|---|---|---|---|
| | | ಹೌದು | ಇಲ್ಲ |
| 1 | ಯು.ಡಿ.ಸಿ. ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದ ಸವಲತ್ತುಗಳ ಬಗ್ಗೆ ಇರುವ ಸುತ್ತೋಲೆಗಳನ್ನು (ಟಮ್ಸ್ & ಕಂಡಿಷನ್ಸ್) ಎಲ್ಲ ಓದಿರುವಿರಾ? | 4 | 3 |
| 2 | ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಅನುಪಾಲನಾ ಅಧಿಕಾರಿಗಳಿಗೆ ಯು.ಡಿ.ಸಿ. ಕೇಂದ್ರಗಳು ನೀಡಬೇಕಾಗಿರುವ ಎಲ್ಲಾ ಸವಲತ್ತುಗಳ ಬಗ್ಗೆ ಸ್ಪಷ್ಟತೆ ಇದೆಯೇ? | 2 | 4 |
| 3 | ಯುಡಿಸಿ ಕೇಂದ್ರ ನಿರ್ವಹಣೆಯಾಗುತ್ತಿರುವ ಶಾಲಾ ಮುಖ್ಯಸ್ಥರಿಗೆ ನೀಡಿರುವ ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಲಾಗಿದೆಯೇ? | 4 | 3 |
| 4 | ಪ್ರತಿ ಮಗುವಿಗೆ ಇಡೀ ವರ್ಷಕ್ಕೆ ಖರ್ಚು ಮಾಡುವ ಘಟಕ ವೆಚ್ಚವೆಷ್ಟು? .. | ಬರೆದಿಲ್ಲ–6 | 4000 ಎಂದು– 1 |
| 5 | ನೀವು ಈ ವರೆಗೆ ಪ್ರತಿ ಕೇಂದ್ರಕ್ಕೂ ತಾವು ನೀಡಿರುವ ಭೇಟಿಗಳ ಸಂಖ್ಯೆ: .. | ಒಬ್ಬರು–1 ಬಾರಿ, ಒಬ್ಬರು–2 ಬಾರಿ, ಒಬ್ಬರು–3 ಬಾರಿ, ಒಬ್ಬರು–4 ಬಾರಿ, ಒಬ್ಬರು–6 ಬಾರಿ, ತಿಳಿಸಿಲ್ಲ–2 | |

- ಮೇಲಿನ ದತ್ತಾಂಶವನ್ನು ವಿಶ್ಲೇಷಿಸಿದಾಗ ಯು.ಡಿ.ಸಿ. ಕೇಂದ್ರಗಳ ನಿರ್ವಹಣೆ ಬಗ್ಗೆ 50% ಕ್ಕಿಂತ ಹೆಚ್ಚು ಅನುಪಾಲನಾಧಿಕಾರಿಗಳಿಗೆ ಅಸ್ಪಷ್ಟತೆ ಇರುವುದು ಕಂಡು ಬಂದಿದೆ. ಟರ್ಮ್ಸ್ & ಕಂಡಿಷನ್ ಸ್ಪಷ್ಟವಾಗಿದೆ ಎಂದು ಹೆಚ್ಚಿನವರು ಅಭಿಪ್ರಾಯ ವ್ಯಕ್ತಪಡಿಸಿದರೂ ಇಡೀ ವರ್ಷಕ್ಕೆ ನೀಡಲಾದ ಘಟಕ ವೆಚ್ಚವೆಷ್ಟು ಎನ್ನುವ ಪ್ರಶ್ನೆಗೆ ಒಬ್ಬರೂ ಸಮರ್ಪಕವಾಗಿ ಉತ್ತರಿಸಿರುವುದಿಲ್ಲ. ಇದರಿಂದ ಸುತ್ತೋಲೆ ಓದಿರುವ ಬಗ್ಗೆ ಮತ್ತು ಯು.ಡಿ.ಸಿ. ಕೇಂದ್ರಗಳ ನಿರ್ವಹಣೆ ಕುರಿತಂತೆ ಆಯಾ ಬ್ಲಾಕಿನ ಅನುಪಾಲನಾಧಿಕಾರಿಗಳನ್ನು ಸುಶಿಕ್ಷಿತರನ್ನಾಗಿ ಮಾಡದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ಇಡೀ ವರ್ಷದಲ್ಲಿ ಅನುಪಾಲನಾಧಿಕಾರಿಗಳು ನೀಡಿರುವ ಭೇಟಿಗಳ ಸಂಖ್ಯೆಯೂ ಕಡಿಮೆ ಇರುತ್ತದೆ.

**ಕೋಷ್ಟಕ 90:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 6 | ಕೇಂದ್ರಗಳು ಮಕ್ಕಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ? | |
| ಅ | ಗುಣಾತ್ಮಕ ಶಿಕ್ಷಣ ಇಲ್ಲ | 1 |
| ಆ | ತೃಪ್ತಿ ಇಲ್ಲ | 1 |
| ಇ | ಅಸಮಂಜಸ ಉತ್ತರ | 5 |

- ಯುಡಿಸಿ ಕೇಂದ್ರಗಳು ಮಕ್ಕಳ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ಬ್ಲಾಕ್ ಹಂತದ ಅನುಪಾಲನಾಧಿಕಾರಿಗಳು ಉತ್ತಮ ಅಭಿಪ್ರಾಯವನ್ನು ನೀಡಿರುವುದಿಲ್ಲ.

**ಕೋಷ್ಟಕ 91:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 7 | ಯುಡಿಸಿ ಕೇಂದ್ರಗಳ ಪರಿಣಾಮಕಾರಿ ನಿರ್ವಹಣೆಗೆ ಕ್ಷೇತ್ರದ ಕಾರ್ಯನಿರ್ವಾಹಕರನ್ನು ಹೇಗೆ ಸಿದ್ಧಪಡಿಸಿರುವಿರಿ? | |
| ಅ | ಅಸಮಂಜಸ ಉತ್ತರ | 7 |

- ಯುಡಿಸಿ ಕೇಂದ್ರಗಳ ಪರಿಣಾಮಕಾರಿ ನಿರ್ವಹಣೆಗೆ ಕ್ಷೇತ್ರದ ಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ನೀಡುವ ಬಗ್ಗೆ ಅನುಪಾಲನಾಧಿಕಾರಿಗಳಿಗೆ ಸ್ಪಷ್ಟತೆ ಇರುವುದಿಲ್ಲ.

**ಕೋಷ್ಟಕ 92:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 8 | ಕೇಂದ್ರ ಶಾಲೆಯ ಮುಖ್ಯಸ್ಥರು ಯಾವ ರೀತಿ ಸಹಕಾರ ನೀಡುತ್ತಾರೆ? | |
| ಅ | ಎಲ್ಲಾ ರೀತಿಯ ಸಹಕಾರ | 5 |
| ಆ | ಊಟ, ಹಾಲು | 1 |
| ಇ | ಶಾಲೆಗೆ ದಾಖಲು | 1 |

- ಕೇಂದ್ರ ಶಾಲೆಯ ಮುಖ್ಯಸ್ಥರು ಕೇಂದ್ರಕ್ಕೆ ಸಹಕಾರ ನೀಡುವ ಬಗ್ಗೆ ಅನುಪಾಲನಾಧಿಕಾರಿಗಳು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

**ಕೋಷ್ಟಕ 93:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 9 | ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನಕ್ಕನುಗುಣವಾಗಿ ಕೇಂದ್ರದವರು ಸವಲತ್ತುಗಳನ್ನು ನೀಡುತ್ತಿದ್ದಾರೆಯೇ? | |
| ಅ | ಪರವಾಗಿಲ್ಲ | 1 |
| ಆ | ಹೌದು | 3 |
| ಇ | ಬರೆದಿಲ್ಲ | 3 |

- ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನಕ್ಕನುಗುಣವಾಗಿ ಕೇಂದ್ರದವರು ಸವಲತ್ತುಗಳನ್ನು ನೀಡುತ್ತಿದ್ದಾರೆಂದು 43% ಅನುಪಾಲನಾಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

- ಶೇ 57 ಅನುಪಾಲನಾಧಿಕಾರಿಗಳು ಸವಲತ್ತುಗಳನ್ನು ನಿಯಮಾನುಸಾರ ಒದಗಿಸುತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

**ಕೋಷ್ಠಕ 94:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 10 | ಎಷ್ಟು ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾಗಿದ್ದಾರೆ? | |
| ಅ | ಬರೆದಿಲ್ಲ | 7 |

- ಅನುಪಾಲನಾಧಿಕಾರಿಗಳಿಗೆ ಕೇಂದ್ರದ ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾಗಿರುವ ಬಗ್ಗೆ ಯಾವುದೇ ಸ್ಪಷ್ಟವಾದ ಮಾಹಿತಿ ಇಲ್ಲ ಮತ್ತು ಈ ಅಂಶದ ಅನುಪಾಲನೆಯನ್ನು ಮಾಡಿರುವುದಿಲ್ಲ.

**ಕೋಷ್ಠಕ 95:–**

| ಕ್ರ ಸಂ | ಪ್ರಶ್ನೆ ಮತ್ತು ಅಭಿಪ್ರಾಯಗಳು | ಅಭಿಪ್ರಾಯಗಳ ಸಂಖ್ಯೆ |
|---|---|---|
| 11 | ಯುಡಿಸಿ ಕೇಂದ್ರ ನಿರ್ವಹಣೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? | |
| ಅ | ಉತ್ತಮವಾಗಿಲ್ಲ | 4 |
| ಆ | ತೃಪ್ತಿಕರ | 2 |
| ಇ | ಊಟ, ವಸತಿ ಉತ್ತಮ ಆದರೆ ಕಲಿಕೆ ಬಗ್ಗೆ ಗಮನ ಅಗತ್ಯ | 1 |

- ಯುಡಿಸಿ ಕೇಂದ್ರದ ನಿರ್ವಹಣೆ ಬಗ್ಗೆ ಹೆಚ್ಚಿನ ಅನುಪಾಲನಾಧಿಕಾರಿಗಳು ಉತ್ತಮವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

***************************

# ಅಧ್ಯಯನದ ಒಳನೋಟಗಳು

- ಯು.ಡಿ.ಸಿ. ಕೇಂದ್ರಗಳು ಶಾಲೆಯಿಂದ ಹೊರಗುಳಿದ ಮತ್ತು ಅನಾಥ ಮಕ್ಕಳಿಗೆ ಉತ್ತಮ ತಂಗುದಾಣವಾಗಿದೆ.
- ಯು.ಡಿ.ಸಿ. ಕೇಂದ್ರಗಳಲ್ಲಿ ಮಕ್ಕಳಿಗೆ ಊಟ, ಆಶ್ರಯ ಮತ್ತು ತಕ್ಕ ಮಟ್ಟಿಗೆ ಮಾರ್ಗದರ್ಶನ ಲಭ್ಯವಾಗುತ್ತಿದೆ.
- 5ಯು.ಡಿ.ಸಿ. ಕೇಂದ್ರಗಳಲ್ಲಿರುವ ಮಕ್ಕಳ ಹಾಜರಾತಿಯು ತೃಪ್ತಿಕರವಾಗಿರುವುದಿಲ್ಲ.(ಸಂದರ್ಶಕರ ವಹಿಯಲ್ಲಿ ವಿವಿಧ ಅಧಿಕಾರಿಗಳು ದಾಖಲಿಸಿದ ಹಾಜರಾತಿಯನ್ನು ಪರಿಗಣಿಸಿದೆ. 11% ದಿಂದ 45%ದ ವರೆಗೆ ಮಾತ್ರ)
- ಯು.ಡಿ.ಸಿ. ಕೇಂದ್ರದ ಎಲ್ಲಾ ಮಕ್ಕಳು ಕೇಂದ್ರ ಶಾಲೆಗೆ ದಾಖಲಾಗಿರುತ್ತಾರೆ.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿ ಯು.ಡಿ.ಸಿ. ಕೇಂದ್ರಗಳಲ್ಲಿ ಲಭ್ಯವಿರುವುದಿಲ್ಲ. ಕೇಂದ್ರಕ್ಕೆ ದಾಖಲಾಗಿರುವ ಮಕ್ಕಳಿಗೂ ದೃಢೀಕರಿಸಿದ ಒ.ಒ.ಎಸ್.ಸಿ. ಪಟ್ಟಿಯಲ್ಲಿರುವ ಮಕ್ಕಳ ಹೆಸರಿಗೂ ತಾಳೆ ಇರುವುದಿಲ್ಲ.
- ಮಕ್ಕಳು ಹಾಸ್ಟೆಲನ್ನು ಮತ್ತು ಸ್ವಯಂಸೇವಕರನ್ನು ಇಷ್ಟಪಡುತ್ತಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಆದರೆ ಇಲಾಖೆ ನಿಗದಿಪಡಿಸಿರುವ ಯಾವುದೇ ಸೌಲಭ್ಯಗಳ ಬಗ್ಗೆ ಅವರಿಗೆ ಅರಿವಿರುವುದಿಲ್ಲ. ತಮ್ಮ ಮನೆಯ ಪರಿಸ್ಥಿತಿ ಮತ್ತು ಸಾಮಾಜಿಕ ಪರಿಸ್ಥಿತಿಗೆ ಹೋಲಿಸಿದಾಗ ಈ ಕೇಂದ್ರಗಳಲ್ಲಿ ಆಶ್ರಯ ಸಿಕ್ಕಿರುವುದು ಅವರಿಗೆ ಒಂದು ಧನಾತ್ಮಕ ಅವಕಾಶವಾಗಿರುತ್ತದೆ.

**ಭೌತಿಕ ಸೌಲಭ್ಯಗಳು:**

- ಭೀಮ್ ಹೊರತು ಪಡಿಸಿ ಉಳಿದೆಲ್ಲಾ ಕೇಂದ್ರಗಳಲ್ಲಿ ಎರಡು ಕೊಠಡಿಗಳಿರುತ್ತದೆ. ಕೊಠಡಿಗಳು 50 ಮಕ್ಕಳಿಗಾಗುವಷ್ಟು ವಿಶಾಲವಾಗಿಲ್ಲ. ಮಕ್ಕಳ ಸಂಖ್ಯೆ ತುಂಬಾ ಕಡಿಮೆ ಇರುವುದರಿಂದ ನಿರ್ವಹಣೆ ಸಾಧ್ಯವಾಗಿದೆ. ಐದರಲ್ಲಿ ಎರಡು ಕೇಂದ್ರ ಮಾತ್ರ ಭದ್ರವಾದ ಆವರಣ ಮತ್ತು ಕಟ್ಟಡಕ್ಕೆ ಭದ್ರತೆಯ ವ್ಯವಸ್ಥೆಯನ್ನು ಹೊಂದಿರುತ್ತದೆ.
- ಕೆಲವು ಕೇಂದ್ರಗಳಿಗೆ ಶೌಚಾಲಯ ವ್ಯವಸ್ಥೆ ಇದ್ದು, ಶೌಚಾಲಯ ಇಲ್ಲದಿರುವ ಕೇಂದ್ರದ ಮಕ್ಕಳು ಕೇಂದ್ರ ಶಾಲೆಯ ಶೌಚಾಲಯಗಳನ್ನು ಬಳಸುತ್ತಿದ್ದಾರೆ.
- ಜನಜಾಗೃತಿ–ಹಾರ್ಸ್‌ಲೇನ್–ಈ ಕೇಂದ್ರದಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ ಇರುವುದಿಲ್ಲ.
- ಎಲ್ಲಾ ಕೇಂದ್ರಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆ ಇದೆ. ಆದರೆ ಕೆಲವು ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ.
- ಎಲ್ಲಾ ಕೇಂದ್ರಗಳಲ್ಲೂ ವಿದ್ಯುತ್ ವ್ಯವಸ್ಥೆ ಮಾಡಲಾಗಿದೆ. ಮಹಾತ್ಮಗಾಂಧಿ ಟ್ರಸ್ಟ್–ಲಕ್ಷ್ಮಿಪುರಂ, ಜಾಗೃತಿ–ಚಾಮುಂಡಿಪುರಂ ಹೊರತು ಪಡಿಸಿ ಉಳಿದ ಕೇಂದ್ರಗಳಲ್ಲಿ ದೂರದರ್ಶನ ಮತ್ತು ರೇಡಿಯೋ ವ್ಯವಸ್ಥೆ ಮಾಡಲಾಗಿದೆ.
- ಜಾಗೃತಿ, ಜನಜಾಗೃತಿ ಮತ್ತು ಭೀಮ್ ಕೇಂದ್ರದಲ್ಲಿ ಮಕ್ಕಳಿಗೆ ಪ್ರತ್ಯೇಕ ಮಲಗುವ ಕೊಠಡಿ ಇಲ್ಲ. ಎಲ್ಲಾ ಮಕ್ಕಳಿಗೂ ಬೆಡ್ ಶೀಟ್ ಒದಗಿಸಲಾಗಿದೆ ಆದರೆ ಯಾವುದೇ ಕೇಂದ್ರದಲ್ಲಿ ಬೆಡ್ಡಿಂಗ್ ವ್ಯವಸ್ಥೆಯನ್ನು ಮಾಡಿರುವುದಿಲ್ಲ.

- ಜನರಕ್ಷಾ ಒಂದು ಕೇಂದ್ರವನ್ನು ಹೊರತುಪಡಿಸಿ ಉಳಿದ ಎಲ್ಲಾ ಕೇಂದ್ರಗಳಲ್ಲಿ ಮಕ್ಕಳಿಗೆ ಆಟವಾಡಲು ಆಟದ ಮೈದಾನವಿರುತ್ತದೆ. ಆಟವಾಡಲು ಚೆಂಡು, ಚೆಸ್ ಇತ್ಯಾದಿ ಕೆಲವೇ ಕೆಲವು ಸಾಮಗ್ರಿಗಳು ಲಭ್ಯವಿದ್ದು, ಮಕ್ಕಳ ಆಟೋಟಗಳಿಗೆ ಹೆಚ್ಚಿನ ಆಟೋಪಕರಣಗಳಿಲ್ಲದಿರುವುದು ಕಂಡು ಬಂದಿದೆ.
- ಮಕ್ಕಳ ದಿನ ಬಳಕೆಗೆ ಅಗತ್ಯವಿರುವ ಬಟ್ಟೆ, ಟವಲ್ ಒದಗಿಸಲಾಗಿದೆ. ಭೀಮ್–ಅಶೋಕಪುರಂ ಈ ಒಂದು ಕೇಂದ್ರದಲ್ಲಿ ಮಾತ್ರ ಮಕ್ಕಳಿಗೆ ಟ್ರಂಕ್‌ಗಳನ್ನು ನೀಡಲಾಗಿದ್ದು, ಉಳಿದ ಯಾವುದೇ ಕೇಂದ್ರಗಳಲ್ಲಿ ಮಕ್ಕಳ ಬಟ್ಟೆ ಬರೆ ಮತ್ತು ಸಾಮಗ್ರಿಗಳನ್ನು ಜೋಡಿಸಿಕೊಳ್ಳಲು ಟ್ರಂಕ್‌ಗಳನ್ನು ಒದಗಿಸಿಲ್ಲ.
- ದೈನಂದಿನ ಸಾಮಗ್ರಿಗಳನ್ನು ಎಲ್ಲಾ ಕೇಂದ್ರದಲ್ಲಿ ನೀಡಲಾಗಿದ್ದು, ಮುಖ ಅಲಂಕಾರಿಕ ಸಾಮಗ್ರಿಗಳನ್ನು ಯಾವುದೇ ಕೇಂದ್ರದಲ್ಲಿ ನೀಡಿರುವುದಿಲ್ಲ.
- ಎಲ್ಲಾ ಕೇಂದ್ರದವರು ಮಕ್ಕಳಿಗೆ ಪುಸ್ತಕ, ಪೆನ್ನು, ಪೆನ್ಸಿಲ್, ರಬ್ಬರ್‌ಗಳನ್ನು ಮಾತ್ರ ವಿತರಿಸಿರುತ್ತಾರೆ. ಚಿತ್ರ ಬರೆಯುವ ಇತರೆ ಕಲಿಕಾ ಸಾಮಗ್ರಿಗಳನ್ನು ಒದಗಿಸಿರುವುದಿಲ್ಲ. ಮಕ್ಕಳು ಸಾಮಾನ್ಯವಾಗಿ ಚಿತ್ರ ಬರೆಯುವುದನ್ನು ಇಷ್ಟಪಡುವುದರಿಂದ ಈ ನಿಟ್ಟಿನಲ್ಲಿ ಸೌಲಭ್ಯವನ್ನು ಒದಗಿಸಬೇಕಾಗಿದೆ.

**ವಹಿಗಳ ನಿರ್ವಹಣೆ:**

- ಎಲ್ಲಾ ಕೇಂದ್ರದವರು ಮಕ್ಕಳ ಹಾಜರಾತಿ ವಹಿ, ಸ್ವಯಂ ಸೇವಕರ ಹಾಜರಾತಿ ವಹಿ, ದಾಸ್ತಾನು ವಹಿ ಮತ್ತು ಇಲಾಖಾ ಸಂದರ್ಶಕರ ವಹಿಯನ್ನು ನಿರ್ವಹಿಸಿರುತ್ತಾರೆ.
- ಭೀಮ್– ಅಶೋಕಪುರಂ ಈ ಸಂಸ್ಥೆ ಹೊರತುಪಡಿಸಿ ಉಳಿದ ಕೇಂದ್ರದವರು ಸುತ್ತೋಲೆಯಲ್ಲಿ ತಿಳಿಸಿದಂತೆ ಸ್ವಯಂಸೇವಕರ ಕ್ಷೇತ್ರ ಭೇಟಿ ವಹಿ, ವೈದ್ಯಕೀಯ ಸೌಲಭ್ಯ ವಿತರಣಾ ವಹಿ, ಇತರೆ ಸಾಮಗ್ರಿ ವಿತರಣೆ ವಹಿ, ಕಲಿಕೆಯ ಪ್ರಗತಿ ದಾಖಲೆ ವಹಿ, ಕೇಂದ್ರದಿಂದ ತಪ್ಪಿಸಿಕೊಂಡು ಹೋಗಿರುವ ಮಕ್ಕಳ ವಹಿ, ದೂರು ವಹಿ, ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲಿಸಿರುವ ವಹಿ ನಿರ್ವಹಿಸಿರುವುದಿಲ್ಲ.
- ಜನಜಾಗೃತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಎಲ್ಲಾ ಮಕ್ಕಳ ಭಾವಚಿತ್ರ ಸಹಿತ ಪೂರ್ಣ ವಿವರವನ್ನು ದಾಖಲಿಸಲಾಗಿದೆ.

**ಇತರೆ ಸೌಲಭ್ಯಗಳ ವ್ಯವಸ್ಥೆ:–**

- ಮಧ್ಯಾಹ್ನ ಮಕ್ಕಳು ಅಕ್ಷರ ದಾಸೋಹದ ಊಟ ಮಾಡುತ್ತಾರೆ. ವಿಟಮಿನ್ ಮಾತ್ರೆಗಳನ್ನು ನೀಡಲಾಗುತ್ತಿದೆ. ಬೆಳಿಗ್ಗೆ ಮತ್ತು ರಾತ್ರಿ ಊಟ ಮತ್ತು ಉಪಹಾರವನ್ನು ಕೇಂದ್ರದಲ್ಲೇ ಸಿದ್ಧಮಾಡಿ ವಿತರಿಸಲಾಗುತ್ತದೆ. ಆಹಾರದ ಮೆನು ಇದ್ದರೂ ನಿಯಮಿತವಾಗಿ ಮೆನು ಪ್ರಕಾರ ಊಟೋಪಚಾರಗಳು ನಡೆಯುತ್ತಿಲ್ಲ. ವಿವಿಧ ಬಾತ್, ಉಪ್ಪಿಟ್ಟು ಮಾಡಿ ವಿತರಿಸಲಾಗುತ್ತಿದೆ.
- ಎಲ್ಲಾ ಕೇಂದ್ರಗಳಲ್ಲಿ ವೇಳಾ ಪಟ್ಟಿ ಲಭ್ಯವಿದೆ. ಯಾವುದೇ ಕೇಂದ್ರದಲ್ಲಿ ನಿಯಮಿತವಾಗಿ ವೇಳಾಪಟ್ಟಿ ಸಿದ್ಧಪಡಿಸಿರುವುದಿಲ್ಲ ಮತ್ತು ಅದಕ್ಕನುಸಾರವಾಗಿ ಪಠ್ಯ, ಸಹಪಠ್ಯ ಚಟುವಟಿಕೆಗಳು ನಡೆಯುತ್ತಿಲ್ಲ. ಅಕ್ಷರ ಅಭ್ಯಾಸ, ಆಟ ಇತ್ಯಾದಿಗಳನ್ನು ಮನಸೋಇಚ್ಛೆ ಮಾಡಲಾಗುತ್ತದೆ.

- ಭೀಮ್– ಅಶೋಕಪುರಂ ಈ ಕೇಂದ್ರದವರು ಮಾತ್ರ ಕೆಲವು ಮಕ್ಕಳನ್ನು ಒಂದು ಭಾರಿ ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಿರುತ್ತಾರೆ. ಕೇಂದ್ರದವರು ಮಕ್ಕಳನ್ನು ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸಿರುವುದಕ್ಕೆ ಕೇಂದ್ರದಲ್ಲಿ ಯಾವುದೇ ಮಾಹಿತಿ ಲಭ್ಯವಿಲ್ಲ. ಈ ಅಂಶವು ಬಹುಮುಖ್ಯವಾಗಿದ್ದು, ಕೇಂದ್ರಗಳು ಅದನ್ನು ಪರಿಗಣನೆಗೆ ತೆಗೆದುಕೊಳ್ಳದಿರುವುದು ಸ್ಪಷ್ಟವಾಗಿದೆ.
- ಸುತ್ತೋಲೆಯಲ್ಲಿ ತಿಳಿಸಿದಂತೆ ಯಾವುದೇ ಯು.ಡಿ.ಸಿ. ಕೇಂದ್ರದಲ್ಲಿ ವರ್ಷಕ್ಕೆ ಮೂರು ಬಾರಿ ಸ್ಥಳೀಯ ವೈದ್ಯರಿಂದ ಕೌನ್ಸಿಲಿಂಗ್ ಮಾಡಿಲ್ಲ. ಈ ಮಕ್ಕಳಿಗೆ ಕೌನ್ಸಿಲಿಂಗ್ ಅತಿ ಅಗತ್ಯವಾಗಿ ಬೇಕಾಗಿದ್ದು, ಕೌನ್ಸಿಲಿಂಗ್ ಮಾಡದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಇದನ್ನು ಸ್ವಯಂ ಸೇವಕರೇ ತಮಗೆ ಗೊತ್ತಿರುವ ರೀತಿಯಲ್ಲಿ ಮಾಡಿರುತ್ತಾರೆ ಮತ್ತು ಮಕ್ಕಳ ನಡವಳಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗಳಾಗಿರುವುದಾಗಿ ತಿಳಿಸಿರುತ್ತಾರೆ.
- ತಜ್ಞರಿಂದ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಯಾವ ಕೇಂದ್ರಗಳಲ್ಲೂ ಏರ್ಪಡಿಸಿರುವುದಿಲ್ಲ.
- ಕೆಲವು ಕೇಂದ್ರದವರು ಪ್ರವಾಸ ಕಾರ್ಯಕ್ರಮ ಮತ್ತು ಜೀವನ ಕೌಶಲ ತರಬೇತಿಗಳನ್ನು ಹಮ್ಮಿಕೊಂಡಿರುತ್ತಾರೆ.
- ಭಾಷಾ ಪ್ರಪಂಚದ ಬಗ್ಗೆ ಅನುಭವ ಗಳಿಸಲು ಅನುಕೂಲವಾಗುವಂತೆ ಯಾವುದೇ ಕೇಂದ್ರದವರು ಸ್ಥಳೀಯ ಪೋಲೀಸ್ ಠಾಣೆ, ನ್ಯಾಯಾಲಯ, ಅಂಚೆ ಕಛೇರಿ, ಬ್ಯಾಂಕ್ ಇತ್ಯಾದಿ ಭೇಟಿಗಳನ್ನು ಹಮ್ಮಿಕೊಂಡಿರುವುದಿಲ್ಲ.
- ಕೇಂದ್ರಗಳಲ್ಲಿ 3 ತಿಂಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆ ನಡೆಸಿ ಮಕ್ಕಳಿಗೆ ಔಷಧೋಪಚಾರ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಆದರೆ ಕೆಲವು ಕೇಂದ್ರದದವರು ಅನಾರೋಗ್ಯವಿರುವ ಮಕ್ಕಳಿಗೆ ಸಂದರ್ಭಾನುಸಾರ ಔಷಧೋಪಚಾರವನ್ನು ಮಾಡಿರುತ್ತಾರೆ.
- ಜನಜಾಗೃತಿ ಹೊರತುಪಡಿಸಿ ಉಳಿದ ನಾಲ್ಕು ಕೇಂದ್ರಗಳು ಇಲಾಖೆಯಿಂದ ಹೆಲ್ತ್ ಕಾರ್ಡ್ ಪಡೆದು ಮಕ್ಕಳ ಆರೋಗ್ಯ ಸ್ಥಿಯನ್ನು ದಾಖಲಿಸಿರುವುದಿಲ್ಲ.
- 12 ತಿಂಗಳುಗಳೊಳಗೆ ಮುಖ್ಯವಾಹಿನಿಗೆ ಸೇರುವ ಅರ್ಹತೆಯುಳ್ಳ ಒಟ್ಟು 30 ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲಿಸಲಾಗಿದೆ.
- ವಿಶೇಷ ತರಬೇತಿಗೆ ಒಳಪಟ್ಟ ಮಕ್ಕಳು ವಾರದಲ್ಲಿ ಕನಿಷ್ಠ 2 ದಿನ ಶಾಲಾ ಅವಧಿಯಲ್ಲಿ ಹತ್ತಿರದ ಶಾಲೆಗೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೂಕ್ತ ತರಗತಿಗೆ ಹಾಜರಾಗುವಂತೆ ಮಾಡಬೇಕಾಗಿದ್ದು, ಈ ನಿಟ್ಟಿನಲ್ಲಿ ಪ್ರಯತ್ನ ತುಂಬಾ ಕಡಿಮೆ ಇದೆ.
- ಭೇಟಿಯ ಅವಧಿಯಲ್ಲಿಯೂ ಮಕ್ಕಳ ಸ್ವಚ್ಛತೆ ಮತ್ತು ಶಿಸ್ತು ಕಡಿಮೆ ಇರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಆದುದರಿಂದ ಸ್ವಚ್ಛತೆಗೆ ಮತ್ತು ಶಿಸ್ತಿಗೆ ಹೆಚ್ಚು ಆದ್ಯತೆಯನ್ನು ನೀಡಬೇಕಾಗಿದೆ.
- ಕೇಂದ್ರದ ಮಕ್ಕಳಿಗೆ ಇಲಾಖೆಯಿಂದ ಸರಬರಾಜಾಗಿರುವ ಪಠ್ಯಪುಸ್ತಕ, ಸಮವಸ್ತ್ರ ವಿತರಣೆಯನ್ನು ಮಾಡಿರುವುದಿಲ್ಲ.
- ಒಂದು ಕೆಂದ್ರದಲ್ಲಿ ಮಕ್ಕಳು ತಪ್ಪಿಸಿಕೊಂಡು ಹೋದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಉಳಿದ 3 ಕೇಂದ್ರಗಳಿಂದ ಒಟ್ಟು 27 ಮಕ್ಕಳು ಮನೆಗೆ ತಪ್ಪಿಸಿಕೊಂಡು ಹೋಗಿರುತ್ತಾರೆ ಮತ್ತು 3 ಮಕ್ಕಳು ತಪ್ಪಿಸಿಕೊಂಡು ಹೋಗಿರುತ್ತಾರೆ.

- ತಪ್ಪಿಸಿಕೊಂಡ ಮಕ್ಕಳ ಬಗ್ಗೆ ಸ್ವಯಂ ಸೇವಕರು ಸೂಕ್ತ ಕ್ರಮ ಜರುಗಿಸಿ ಮಕ್ಕಳನ್ನು ವಾಪಾಸು ಕರೆಸಿರುತ್ತಾರೆ. ಒಂದು ಕೇಂದ್ರದಲ್ಲಿ 2 ಮಕ್ಕಳು ತಪ್ಪಿಸಿಕೊಂಡು ಹೋಗಿದ್ದು, ಪೊಲೀಸರಿಗೆ ದೂರು ಸಲ್ಲಿಸಿರುತ್ತಾರೆ.

**ಸ್ವಯಂಸೇವಕರ ಕಾರ್ಯ ನಿರ್ವಹಣೆ:**

- ಕೇಂದ್ರಗಳಲ್ಲಿ ಇಲಾಖೆ ನಿಗಧಿಪಡಿಸಿದ ಸಂಖ್ಯೆಗಿಂತ ಮಕ್ಕಳ ಸಂಖ್ಯೆ ಕಡಿಮೆ ಇದ್ದು, ನಿಯಮಾನುಸಾರ ಸಿಬ್ಬಂದಿ ನೇಮಕ ಆಗದಿರುವುದರಿಂದ ಎಲ್ಲಾ ಜವಾಬ್ದಾರಿಯೂ ಸ್ವಯಂಸೇವಕರ ಮೇಲಿದ್ದು, ಅವರು ತಮ್ಮ ಕೈಲಾದಷ್ಟು ಮಟ್ಟಿಗೆ ಕೇಂದ್ರದ ನಿರ್ವಹಣೆ ಮಾಡಿರುವುದು ಅಧ್ಯಯನದಿಂದ ಕಂಡು ಬಂದಿದೆ.
- ಎಲ್ಲಾ ಸ್ವಯಂ ಸೇವಕರು ಪಿ.ಯು.ಸಿ ಮೇಲಿನ ವಿದ್ಯಾರ್ಹತೆಯನ್ನು ಹೊಂದಿದ್ದು, ಒಬ್ಬರು ಎಂ.ಫಿಲ್ ಪದವಿಯನ್ನು ಹೊಂದಿದ್ದರು. ಒಬ್ಬರನ್ನು ಹೊರತುಪಡಿಸಿ ಯಾರಿಗೂ ಯಾವುದೇ ತರಬೇತಿಯನ್ನು ನೀಡಿರುವುದಿಲ್ಲ.
- ಯುಡಿಸಿ ಕೇಂದ್ರದ ಸಿಬ್ಬಂದಿಗಳಿಗೆ ತರಬೇತಿ, ಮಾರ್ಗದರ್ಶನದ ಕೊರತೆ ಇದೆ

**ಅನುಪಾಲನೆ:**

- ಕೇಂದ್ರ ಶಾಲೆಯ ಅಥವಾ ಹತ್ತಿರದ ಶಾಲೆಯ ಮುಖ್ಯ ಶಿಕ್ಷಕರು ಯುಡಿಸಿ ಕೇಂದ್ರದ ಉಸ್ತುವಾರಿ ಮಾಡುತ್ತಿದ್ದಾರೆ. ಆದರೆ ತಮ್ಮ ಶಾಲೆಯಷ್ಟೇ ಕಾಳಜಿಯನ್ನು ಈ ಮಕ್ಕಳ ಮೇಲೆ ವ್ಯಕ್ತಪಡಿಸದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಕೇಂದ್ರ ಶಾಲೆಯವರು ಈ ಮಕ್ಕಳ ಗುಣಾತ್ಮಕ ಶಿಕ್ಷಣದ ಬಗ್ಗೆ ಇನ್ನೂ ಹೆಚ್ಚಿನ ಒಲವನ್ನು ತೋರಿಸಬೇಕಾಗಿದೆ.
- ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು ಕೇಂದ್ರದ ಮಕ್ಕಳ ಹಾಜರಾತಿಯನ್ನು ಪ್ರತಿ ದಿನ ಗಮನಿಸುತ್ತಿದ್ದಾರೆ. ಆದರೆ ಸಮಸ್ಯೆಗಳನ್ನು ಯಾವುದೇ ಮೇಲಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ.
- ಕೇಂದ್ರ ಶಾಲೆಗೂ ಕೇಂದ್ರಕ್ಕೂ ಇರುವ ಸಂಬಂಧ ಸಾಧಾರಣವಾಗಿದೆ. ಕೆಲವು ಕಡೆ ಕೇಂದ್ರದ ಮಕ್ಕಳಿಗೆ ನೀರು ಒದಗಿಸದಿರುವುದು, ಸರಕಾರದಿಂದ ಸರಬರಾಜಾಗಿರುವ ಸಮವಸ್ತ್ರ, ಪಠ್ಯ ಪುಸ್ತಕ ಇತ್ಯಾದಿ ಸೌಲಭ್ಯಗಳನ್ನು ವಿತರಿಸದಿರುವುದು ಕಂಡು ಬಂದಿದೆ.
- ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರಿಗೆ ಯುಡಿಸಿ ಕೇಂದ್ರ ನಡೆಯುತ್ತಿರುವ ಬಗ್ಗೆ ಮಾಹಿತಿ ಇದೆ. ಆದರೆ ಕಾಳಜಿ ಕಡಿಮೆ ಇದೆ.
- ಯು.ಡಿ.ಸಿ. ಕೇಂದ್ರಗಳ ನಿರ್ವಹಣೆ ಕುರಿತ ಸುತ್ತೋಲೆ ಮತ್ತು ಟರ್ಮ್ಸ್ & ಕಂಡಿಷನ್ಸ್ ಓದಿರುವ ಬಗ್ಗೆ ಮತ್ತು ಯು.ಡಿ.ಸಿ. ಕೇಂದ್ರಗಳ ನಿರ್ವಹಣೆ ಕುರಿತಂತೆ ಆಯಾ ಬ್ಲಾಕಿನ ಅನುಪಾಲನಾಧಿಕಾರಿಗಳನ್ನು ಸುಶಿಕ್ಷಿತರನ್ನಾಗಿ ಮಾಡದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.
- ಇಲಾಖಾ ಅಧಿಕಾರಿಗಳ ಅನುಪಾಲನೆ ಕಡಿಮೆ ಇರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಡಯಟ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಭೇಟಿ ತುಂಬಾ ಕಡಿಮೆ ಇದೆ. ಕೆಲವು ಕೇಂದ್ರಗಳಿಗೆ ಡಿ.ಡಿ.ಪಿ.ಐ./ಡಿ.ವೈ.ಪಿ.ಸಿ. ಕಛೇರಿಯ ಭೇಟಿಯೂ ಕಡಿಮೆ ಇದೆ.

**ಮಕ್ಕಳ ಕಲಿಕೆ:**

- ಮಕ್ಕಳು ವಾಸ್ತವವಾಗಿ ಮುಂದೆ ತಾವು ಉತ್ತಮ ವ್ಯಕ್ತಿಗಳಾಗಬೇಕೆಂಬ ಆಕಾಂಕ್ಷೆ ಹೊಂದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಅದಕ್ಕೆ ಪೂರಕವಾದ ಕಲಿಕಾ ವಾತಾವರಣ ನಿರ್ಮಿಸಬೇಕಾದ ಅಗತ್ಯವಿದೆ.
- ಭಿನ್ನ ಕಲಿಕಾ ಮಟ್ಟ ಮತ್ತು ಕಲಿಕಾ ಅಂತರವನ್ನು ಹೊಂದಿರುವ ಮಕ್ಕಳ ಕಲಿಕೆಯನ್ನು ಗುಣಾತ್ಮಕವಾಗಿ ಹೆಚ್ಚಿಸಬೇಕಾದರೆ ವೈಯಕ್ತಿಕ ಶೈಕ್ಷಣಿಕ ಯೋಜನೆ(ಐಇಪಿ) ತುಂಬಾ ಮುಖ್ಯವಾಗಿದೆ. ಆದರೆ ಯಾವ ಕೇಂದ್ರವೂ ಮಗುವಿನ IEP ಯನ್ನು ಸಿದ್ಧಪಡಿಸುವಲ್ಲಿ ಕಾರ್ಯಪ್ರವೃತ್ತರಾಗದಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಈ ಬಗ್ಗೆ ಸ್ವಯಂಸೇವಕರಿಗೂ ಸ್ಪಷ್ಟತೆ ಇರುವುದಿಲ್ಲ. ಮಕ್ಕಳ ಕಲಿಕಾ ಪ್ರಗತಿಯನ್ನು ಪರಿಶೀಲಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುತ್ತಿಲ್ಲ.
- ಮಕ್ಕಳ ನಡವಳಿಕೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ.
- ಶಿಸ್ತು ಮತ್ತು ಸ್ವಚ್ಛತೆಯಲ್ಲಿ ಸುಧಾರಣೆಯಾಗಬೇಕಾಗಿದೆ.
- ಕಲಿಕೆ ತೃಪ್ತಿಕರವಾಗಿಲ್ಲ. ಕೆಲವು ಮಕ್ಕಳ ಕಲಿಕೆ ಸಾಧಾರಣವಾಗಿದೆ.

*****************

# ಶೈಕ್ಷಣಿಕ ನಿಹಿತಾರ್ಥಗಳು

- ಯು.ಡಿ.ಸಿ. ಕೇಂದ್ರದಲ್ಲಿರುವ ಮಕ್ಕಳ ಹಾಜರಾತಿಯನ್ನು ಉತ್ತಮಪಡಿಸುವಂತೆ ಕ್ರಮಕೈಗೊಳ್ಳುವುದು.
- ನಗರದ ಸೌಲಭ್ಯ ವಂಚಿತ ಮಕ್ಕಳ ಜೊತೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿರುವ ಒ.ಓಎಸ್.ಸಿ ಪಟ್ಟಿಯಲ್ಲಿರುವ ಮಕ್ಕಳು ಕೇಂದ್ರದಲ್ಲಿ ದಾಖಲಾಗುವಂತೆ ಕ್ರಮಕೈಗೊಳ್ಳುವುದು. ಸಂಜೆಯ ಮೇಲೆ ಕೇಂದ್ರಕ್ಕೆ ಹೆಚ್ಚು ಮಕ್ಕಳು ದಾಖಲಾಗುತ್ತಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಈ ಮಕ್ಕಳು ಅಕ್ಕಪಕ್ಕದ ಮಕ್ಕಳು ಆಗಿರುವ ಸಾಧ್ಯತೆಗಳು ಹೆಚ್ಚು. ಈ ಅಂಶಗಳನ್ನು ಅನುಪಾಲನೆಯಲ್ಲಿ ಕಡ್ಡಾಯವಾಗಿ ಗಮನಿಸುವಂತೆ ಮಾಡಬೇಕಾಗಿದೆ.

**ಭೌತಿಕ ಸೌಲಭ್ಯಗಳು:**

- ಯು.ಡಿ.ಸಿ. ಕೇಂದ್ರದಲ್ಲಿರುವ ಮಕ್ಕಳಿಗೆ ಸುತ್ತೋಲೆಯಲ್ಲಿ ನಿಗದಿಪಡಿಸಿದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
- ಪ್ರತ್ಯೇಕ ಮಲಗುವ ಕೊಠಡಿ, ತರಗತಿ ಕೊಠಡಿ ಮತ್ತು ಅಡುಗೆ ಕೊಠಡಿ ವ್ಯವಸ್ಥೆ ಇರುವಲ್ಲಿ ಕೇಂದ್ರಗಳನ್ನು ವ್ಯವಸ್ಥೆಗೊಳಿಸುವುದು.
- ಮಕ್ಕಳನ್ನು ಆಕರ್ಷಿಸುವ ಅಂಶವೆಂದರೆ ಆಟ ಮತ್ತು ಕ್ರೀಡೆಯಾದುದರಿಂದ ಆಟೋಟಗಳಿಗೆ ಹೆಚ್ಚಿನ ಆಟೋಪಕರಣಗಳನ್ನು ಒದಗಿಸುವುದು.
- ಮಕ್ಕಳು ಕೇಂದ್ರದಲ್ಲಿ ತಮಗೆ ವಿತರಿಸುವ ಆಹಾರದ ಬಗ್ಗೆ ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸಾಧ್ಯವಾದಷ್ಟು ಆಹಾರದ ಮೆನು ಪ್ರಕಾರ ನಿಯಮಿತವಾಗಿ ಊಟ ಉಪಹಾರ ನೀಡುವಂತೆ ಕ್ರಮಕೈಗೊಳ್ಳುವುದು.
- ನಿಯಮಿತವಾಗಿ ವೇಳಾಪಟ್ಟಿ ಸಿದ್ಧಪಡಿಸಿ ಅದಕ್ಕನುಸಾರವಾಗಿ ಪಠ್ಯ, ಸಹಪಠ್ಯ ಚಟುವಟಿಕೆಗಳು ನಡೆಯುವಂತೆ ಸಂಬಂಧ ಪಟ್ಟ ತಾಲ್ಲೂಕಿನ ಬಿ.ಇ.ಒ., ಬಿ.ಆರ್.ಸಿ.ಗಳು ಮತ್ತು ಇತರೆ ಅನುಪಾಲನಾಧಿಕಾರಿಗಳು ಕ್ರಮಕೈಗೊಳ್ಳುವುದು.
- ಕೇಂದ್ರದಲ್ಲಿ ದಾಖಲಾದ ಮಕ್ಕಳನ್ನು ಕಡ್ಡಾಯವಾಗಿ ಸಿ.ಡಬ್ಲ್ಯೂ.ಸಿ. ಮುಂದೆ ಹಾಜರು ಪಡಿಸುವಂತೆ ಕ್ರಮಕೈಗೊಳ್ಳುವುದು.
- ಕೆಂದ್ರದಲ್ಲಿರುವ ಮಕ್ಕಳು ವಿವಿಧ ಮನ:ಸ್ಥಿತಿಗಳನ್ನು ಹೊಂದಿದ್ದು, ಆಪ್ತ ಸಮಾಲೋಚನೆ ಅವರ ಅಗತ್ಯವಾಗಿದೆ. ಆದುದರಿಂದ ಸುತ್ತೋಲೆಯಲ್ಲಿ ತಿಳಿಸಿದಂತೆ ಯುಡಿಸಿ ಕೇಂದ್ರದಲ್ಲಿ ವರ್ಷಕ್ಕೆ ಮೂರು ಬಾರಿ ಸ್ಥಳೀಯ ವೈದ್ಯರಿಂದ ಕೌನ್ಸಿಲಿಂಗ್ ಮಾಡಿಸುವುದು.
- ತಜ್ಞರಿಂದ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣ, ಪ್ರವಾಸ ಕಾರ್ಯಕ್ರಮ ಮತ್ತು ಜೀವನ ಕೌಶಲ ತರಬೇತಿ, ಭಾಷಾ ಪ್ರಪಂಚದ ಬಗ್ಗೆ ಅನುಭವ ಗಳಿಸಲು ಅನುಕೂಲವಾಗುವಂತೆ ಸ್ಥಳೀಯ ಪೋಲೀಸ್ ಠಾಣೆ, ನ್ಯಾಯಾಲಯ, ಅಂಚೆ ಕಛೇರಿ, ಬ್ಯಾಂಕ್ ಇತ್ಯಾದಿ ಭೇಟಿಗಳನ್ನು ಹಮ್ಮಿಕೊಳ್ಳುವಂತೆ ಕ್ರಮಕೈಗೊಳ್ಳುವುದು.
- ಕೇಂದ್ರಗಳಲ್ಲಿ 3 ತಿಂಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆ ನಡೆಸಿ ಮಕ್ಕಳಿಗೆ ಔಷಧೋಪಚಾರ ಮಾಡುವುದು ಮತ್ತು ಇಲಾಖೆಯಿಂದ ಹೆಲ್ತ್ ಕಾರ್ಡ್ ಪಡೆದು ಮಕ್ಕಳ ಆರೋಗ್ಯ ಸ್ಥಿಯನ್ನು ದಾಖಲಿಸುವುದು.

- ಇಲಾಖೆ ನಿಗದಿಪಡಿಸಿದ ಎಲ್ಲಾ ವಹಿಗಳನ್ನು ನಿರ್ವಹಿಸುವುದು.
- ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿಯವರು ಯು.ಡಿ.ಸಿ. ಕೇಂದ್ರದ ಮಕ್ಕಳ ಬಗ್ಗೆ ಅತ್ಯಂತ ಕಾಳಜಿಯಿಂದ ಬೆಂಬಲ ನೀಡುವುದು.
- ವಿಶೇಷ ತರಬೇತಿಗೆ ಒಳಪಟ್ಟ ಮಕ್ಕಳು ವಾರದಲ್ಲಿ ಕನಿಷ್ಠ 2 ದಿನ ಶಾಲಾ ಅವಧಿಯಲ್ಲಿ ಹತ್ತಿರದ ಶಾಲೆಗೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೂಕ್ತ ತರಗತಿಗೆ ಹಾಜರಾಗುವಂತೆ ಕ್ರಮಕೈಗೊಳ್ಳುವುದು.
- ಕೇಂದ್ರ ಶಾಲೆಯು ಯು.ಡಿ.ಸಿ. ಕೇಂದ್ರಗಳ ಪರಿಣಾಮಕಾರಿ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು. ಈ ಮಕ್ಕಳ ಕುರಿತಂತೆ ಮಲತಾಯಿ ಧೋರಣೆಯನ್ನು ತೋರದೆ, ಇರುವ ಎಲ್ಲಾ ಸೌಲಭ್ಯಗಳ ಬಳಕೆ ಮಾಡುವಂತೆ ಸಹಕರಿಸುವುದು.
- ಅನುಪಾಲನೆಯನ್ನು ಪರಿಣಾಮಕಾರಿ ಮತ್ತು ಗುಣಾತ್ಮಕವಾಗಿ ಮಾಡುವುದು.
- ಡಯಟ್, ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಅನುಪಾಲನಾಧಿಕಾರಿಗಳಿಗೆ ಯು.ಡಿ.ಸಿ. ಕೇಂದ್ರದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡುವುದು ಮತ್ತು ಭೇಟಿಯ ಅಂಶಗಳ ಪುನರಾವಲೋಕನ ಮಾಡುವುದು.

**ಮಕ್ಕಳ ಕಲಿಕೆ:**

- ಭಿನ್ನ ಕಲಿಕಾ ಮಟ್ಟ ಮತ್ತು ಕಲಿಕಾ ಅಂತರವನ್ನು ಹೊಂದಿರುವ ಮಕ್ಕಳ ಕಲಿಕೆಯನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ವೈಯಕ್ತಿಕ ಶೈಕ್ಷಣಿಕ ಯೋಜನೆ (ಐಇಪಿ) ಸಿದ್ಧಪಡಿಸುವಂತೆ ಸ್ವಯಂಸೇವಕರಿಗೆ ತರಬೇತಿ ನೀಡುವುದು.
- ನಿಯಮಿತವಾಗಿ ಮಕ್ಕಳ ಕಲಿಕಾ ಪ್ರಗತಿಯನ್ನು ಗುರುತಿಸಿ, ಪರಿಶೀಲಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು. ಮುಖ್ಯವಾಗಿ ಇಲ್ಲಿ ಕಲಿಕೆ ಎಂದರೆ ಮಕ್ಕಳ ಆರಂಭಿಕ ನಡವಳಿಕೆಗಳನ್ನು ಗುರುತಿಸಿ ದಾಖಲಿಸುವುದು ಸೂಕ್ತ.
- ಮಕ್ಕಳ ಶಿಸ್ತು ಮತ್ತು ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡುವುದು.
- ಸುತ್ತೋಲೆಯಲ್ಲಿ ನಿಗದಿಪಡಿಸಿದಂತೆ ಮಕ್ಕಳು ತಮ್ಮ ವಯಸ್ಸಿಗನುಗುಣವಾಗಿ ಕಲಿಯಬೇಕಾದ ವಿಚಾರಗಳನ್ನು ಕಲಿಯುವಂತೆ ಮೇಲ್ವಿಚಾರಣೆ ಮಾಡುವುದು.

*****************

# ಉಪಸಂಹಾರ

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ 'ನಗರದ ಶಿಕ್ಷಣ ಸೌಲಭ್ಯ ವಂಚಿತ ಮಕ್ಕಳ ಚಿಣ್ಣರ ತಂಗುಧಾಮ'ವು ಒಂದು ಉತ್ತಮ ಕಾರ್ಯತಂತ್ರವಾಗಿದೆ. ಈ ಕಾರ್ಯತಂತ್ರದ ನಿರ್ವಹಣೆಯನ್ನು ಸರಕಾರೇತರ ಸಂಸ್ಥೆಗಳಿಗೆ ವಹಿಸಿದ್ದು, ಅದರ ಕಾರ್ಯನಿರ್ವಹಣೆಯ ಫಲಿತಾಂಶವನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಅವಕಾಶ ಮಾಡಿಕೊಟ್ಟಿದೆ. ಈ ಕಾರ್ಯತಂತ್ರದಲ್ಲಿ ಎಷ್ಟೋ ಶಾಲೆಯಿಂದ ಹೊರಗುಳಿದಿರುವ, ಅನಾಥ ಅಥವಾ ಇತರೆ ಮಕ್ಕಳು ಆಶ್ರಯ ಪಡೆದಿರುತ್ತಾರೆ.

ಅಧ್ಯಯನವು ಈ ಕಾರ್ಯತಂತ್ರದ ನಿರ್ವಹಣೆ ಬಗ್ಗೆ ಸಾಕಷ್ಟು ಒಳನೋಟಗಳನ್ನು ನೀಡಿದೆ. ಈ ಕೇಂದ್ರಗಳು ಮಕ್ಕಳಿಗೆ ಉತ್ತಮ ತಂಗುದಾಣವಾಗಿರುವುದು ನಿಜ. ಮಕ್ಕಳ ಚಿಕ್ಕ ವಯಸ್ಸಿಗೆ ಊಹೆ ಮಾಡಲಾಗದಷ್ಟು ಕೆಟ್ಟ ಮತ್ತು ಕಲುಷಿತ ಸಾಮಾಜಿಕ ಮತ್ತು ಕೌಟುಂಬಿಕ ಪರಿಸರದಲ್ಲಿರುವ ಮಕ್ಕಳು ಈ ಕೇಂದ್ರಗಳಲ್ಲಿ ಅಲ್ಪ ಸ್ವಲ್ಪ ಮಾರ್ಗದರ್ಶನದೊಂದಿಗೆ ಒಂದು ನೆಲೆಯನ್ನು ಕಂಡುಕೊಂಡಿದ್ದಾರೆ. ಆದರೆ ಈ ಕೇಂದ್ರವು ಇಲಾಖೆ ನೀಡಿರುವ ಷರತ್ತುಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆಯೇ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಅಧ್ಯಯನದ ಆದ್ಯತೆಯಾಗಿತ್ತು. ಇದಕ್ಕೆ ಪೂರಕವಾಗಿ ಮಕ್ಕಳ ಆರಂಭಿಕ ಸ್ಥಿತಿಗೂ ಅಧ್ಯಯನದ ಅವಧಿಯಲ್ಲಿ ಇದ್ದ ಸ್ಥಿತಿಗತಿಗೂ ಇರುವ ವ್ಯತ್ಯಾಸಗಳನ್ನು ಗಮನಿಸುವಂತಹ ದಾಖಲೆಗಳ ಲಭ್ಯತೆ ಇಲ್ಲದಿರುವುದು ದೊಡ್ಡ ಸವಾಲೇ ಆಗಿತ್ತು.

ಭೇಟಿಯ ಅವಧಿಯಲ್ಲಿ ವಾಸ್ತವವಾಗಿ ಇದ್ದ ಪರಿಸ್ಥಿತಿಯೊಳಗೆ ಮಕ್ಕಳಿಗೆ ಕೇಂದ್ರದಲ್ಲಿ ನೀಡಲಾದ ಎಲ್ಲಾ ಸವಲತ್ತು, ಮಕ್ಕಳ ಸ್ಥಿತಿಗತಿ, ಸಮಸ್ಯೆಗಳು, ಕಲಿಕೆ ಇತ್ಯಾದಿಗಳ ಕುರಿತು ಅಧ್ಯಯನವು ಬೆಳಕನ್ನು ಚೆಲ್ಲಿದೆ. ಹೆಸರೇ ಸೂಚಿಸುವಂತೆ ಸ್ವಯಂಸೇವಾ ಸಂಸ್ಥೆಗಳು ಇನ್ನಷ್ಟು ಕಾಳಜಿಯಿಂದ ಕಾರ್ಯ ಮಾಡಬೇಕೆಂಬುದು ಇಲ್ಲಿ ದಿಟವಾಗಿದೆ. ಅನುಷ್ಠಾನಾಧಿಕಾರಿಗಳು ಮತ್ತು ಅನುಪಾಲನಾಧಿಕಾರಿಗಳು ಈ ಬಗ್ಗೆ ಹೆಚ್ಚು ಅರಿತುಕೊಂಡು, ಇತರರಿಗೂ ಅರಿವನ್ನು ಮೂಡಿಸಿ, ಮಕ್ಕಳ ಹಿತದೃಷ್ಟಿ ಮತ್ತು ಸ್ವಸ್ಥ ಸಮಾಜದ ದೃಷ್ಟಿಕೋನದಿಂದ ಕಾರ್ಯ ನಿರ್ವಹಿಸಬೇಕಾಗಿದೆ. 'ಎಲ್ಲಾ ಮಕ್ಕಳು ನಮ್ಮ ನಾಡಿನ ಮಕ್ಕಳು' ಎನ್ನುವ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಇಲಾಖೆಯು ಯಾವ ಉದ್ದೇಶವನ್ನಿಟ್ಟುಕೊಂಡು ಕಾರ್ಯತಂತ್ರಗಳನ್ನು ಜಾರಿಗೊಳಿಸಿದೆಯೋ ಅದು ಸಾರ್ಥಕಥೆಯನ್ನು ಪಡೆಯಲು ಸಾಧ್ಯವಾಗಿದೆ.

*****************

# ಅನುಬಂಧಗಳು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು-10. TEL NO: 0821-2446419,

Web Site:http://diet.karnatakaeducation.org.in/mysore
E MAIL:diet.mysore@gmail.com

## ಯು.ಡಿ.ಸಿ ಕೇಂದ್ರಗಳ ಅಧ್ಯಯನ

## ಯು.ಡಿ.ಸಿ ಕೇಂದ್ರದ ವೀಕ್ಷಣ ನಮೂನೆ

**ಸಾಮಾನ್ಯ ವಿವರ:**

- ಯು.ಡಿ.ಸಿ ಕೇಂದ್ರದ ಹೆಸರು ಮತ್ತು ವಿಳಾಸ:
- ಸ್ವಯಂ ಸೇವಾ ಸಂಸ್ಥೆಯ ಹೆಸರು:
- ಆಪ್ತ ಸಮಾಲೋಚಕರ ಹೆಸರು

1). ದಾಖಲಾತಿ ಹಾಜರಾತಿ ವಿವರ

1. ವಿದ್ಯಾರ್ಥಿಗಳು ಕೇಂದ್ರ ಶಾಲೆಗೆ ದಾಖಲಾಗಿದ್ದಾರೆಯೇ?(ದಾಖಲಾತಿ ವಹಿ ಅವಲೋಕಿಸುವುದು) ಹೌದು/ಇಲ್ಲ
2. ದಾಖಲಾತಿ ಹಾಜರಾತಿ ವಿವರ (ಹಾಜರಾತಿಯನ್ನು ಮಾತ್ರ 3–4 ಬಾರಿ ಬೇರೆ ಬೇರೆ ಅವಧಿಗಳಲ್ಲಿ ಭೇಟಿ ಮಾಡಿ ವೀಕ್ಷಿಸಿ ದಾಖಲಿಸುವುದು)

| ಭೇಟಿ ಮಾಡಿದ ದಿನಾಂಕ | ಭೇಟಿ ಸಮಯ | ದಾಖಲಾತಿ | ಹಾಜರಾತಿ |
|---|---|---|---|
| | | | |
| | | | |
| | | | |
| | | | |

3. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿ ಲಭ್ಯವಿದೆಯೇ?
4. ದಾಖಲಾಗಿರುವ ಮಕ್ಕಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯಲ್ಲಿರುವ ಮಕ್ಕಳ ಸಂಖ್ಯೆ:

**ಭೌತಿಕ ಸೌಲಭ್ಯ /ದಾಖಲೆಗಳ ವ್ಯವಸ್ಥೆ ಮತ್ತು ನಿರ್ವಹಣೆ**

**ವಸತಿ ವ್ಯವಸ್ಥೆ:**

| ಕ್ರ ಸಂ | ಭೌತಿಕ ಸೌಲಭ್ಯ ವ್ಯವಸ್ಥೆ | ನಿಮ್ಮ ಆಯ್ಕೆಗೆ ಸರಿ ಗುರುತು ಹಾಕಿ | ನಿರ್ವಹಣೆ<br>ವೀಕ್ಷಣೆ ಮಾಡಿ ಸೂಕ್ತ ಸಂಖ್ಯೆ ದಾಖಲಿಸಿ. ಉತ್ತಮ–1, ಸಾಧಾರಣ–2, ಅತ್ಯುತ್ತಮ–3 |
|---|---|---|---|
| **ಕೊಠಡಿ ವ್ಯವಸ್ಥೆ** | | | |
| 5. | ಲಭ್ಯವಿರುವ ಕೊಠಡಿಗಳ ಸಂಖ್ಯೆ | 1/2/3/4 | |
| 6. | ಐವತ್ತು ಮಕ್ಕಳಿಗಾಗುವಷ್ಟು ವಿಶಾಲವಾದ ಗಾಳಿ ಬೆಳಕುಗಳುಳ್ಳ ಕೊಠಡಿ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| 7. | ಸುರಕ್ಷಿತವಾದ ಅಡುಗೆ ಕೋಣೆ ಇದೆಯೇ? | ಇದೆ/ಎಲ್ಲವೂ ಒಂದೇ ಕೊಠಡಿಯಲ್ಲಿದೆ. | |
| 8. | ಪ್ರತ್ಯೇಕ ತರಗತಿ ಕೊಠಡಿ ಇದೆಯೇ: | ಇದೆ/ಎಲ್ಲವೂ ಒಂದೇ ಕೊಠಡಿಯಲ್ಲಿದೆ. | |
| **ಭದ್ರತೆಯ ವ್ಯವಸ್ಥೆ** | | | |
| 9. | ಕಟ್ಟಡಕ್ಕೆ ಭದ್ರತೆಯ ವ್ಯವಸ್ಥೆ | ಇದೆ/ಇಲ್ಲ | |
| **ಶೌಚಾಲಯ ವ್ಯವಸ್ಥೆ** | | | |
| 10. | ಶೌಚಾಲಯಗಳ ಸಂಖ್ಯೆ | 1/2/3/4 | |
| 11. | ಶೌಚಾಲಯ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಕಷ್ಟಿದೆಯೇ? | ಇದೆ/ಇಲ್ಲ | |
| 12. | ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| 13. | ಹೆಣ್ಣುಮಕ್ಕಳಿದ್ದಲ್ಲಿ ಪ್ರತ್ಯೇಕ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| 14. | ಸ್ನಾನದ ಮನೆ ಇದೆಯೇ? | ಇದೆ/ಇಲ್ಲ | |
| **ನೀರಿನ ವ್ಯವಸ್ಥೆ** | | | |
| 15. | ಕುಡಿಯಲು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| 16. | ಶೌಚ, ಬಟ್ಟೆ ತೊಳೆಯಲು ಮತ್ತು ಸ್ನಾನಕ್ಕೆ ನೀರಿನ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| **ಇತರೆ ವ್ಯವಸ್ಥೆ** | | | |
| 17. | ವಿದ್ಯುತ್ ಸೌಲಭ್ಯ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| 18. | ದೂರದರ್ಶನ/ರೇಡಿಯೋ ವ್ಯವಸ್ಥೆ ಇದೆಯೇ? | ಇದೆ/ಇಲ್ಲ | |
| **ಪ್ರತ್ಯೇಕವಾಗಿ ಮಲಗುವ ವ್ಯವಸ್ಥೆ** | | | |
| 19. | ಪ್ರತ್ಯೇಕವಾದ ಮಲಗುವ ಕೊಠಡಿ ಇದೆಯೇ? | ಇದೆ/ಇಲ್ಲ | |

| | | | |
|---|---|---|---|
| 20. | ಪ್ರತಿ ಮಗುವಿಗೂ ಬೆಡ್‌ಶೀಟ್ ಒದಗಿಸಲಾಗಿದೆಯೇ? | | |
| 21. | ಪ್ರತಿ ಮಗುವಿಗೂ ಬೆಡ್ಡಿಂಗ್ ವ್ಯವಸ್ಥೆಯನ್ನು ಒದಗಿಸಲಾಗಿದೆಯೇ? | ಇದೆ/ಇಲ್ಲ | |
| **ಕ್ರೀಡಾ ಚಟುವಟಿಕೆಗಳಿಗೆ ವ್ಯವಸ್ಥೆ:** | | | |
| 22. | ಕ್ರೀಡಾ ಚಟುವಟಿಕೆ ನಡೆಸಲು ಮೈದಾನ ವ್ಯವಸ್ಥೆ ಇದೆಯೇ? | | |
| 23. | ಆಟ ಆಡಲು ಕ್ರೀಡಾ ಸಾಮಗ್ರಿಗಳಿವೆಯೇ? | | |
| **ಊಟದ/ಉಪಾಹಾರ** | | | |
| 24. | ಶಾಲಾ ದಿನಗಳಲ್ಲಿ ಮದ್ಯಾಹ್ನದ ಊಟವನ್ನು ಅಕ್ಷರ ದಾಸೋಹದಡಿಯಲ್ಲಿ ನೀಡಲಾಗುತ್ತಿದೆಯೇ? | ಇದೆ/ಇಲ್ಲ | |
| 25. | ಬೆಳಗ್ಗಿನ ಮತ್ತು ರಾತ್ರಿ ಊಟದ/ಉಪಾಹಾರ ಸಾಮಾಗ್ರಿಗಳ ದಾಸ್ತಾನು ವ್ಯವಸ್ಥೆ ಉತ್ತಮವಾಗಿದೆಯೇ? | | |
| 26. | ಊಟದ/ಉಪಹಾರ ಮೆನು(ಇಡ್ಲಿ, ಸಾಂಬಾರು, ಚಿತ್ರಾನ್ನ, ಉಪ್ಪಿಟ್ಟು, ಅವಲಕ್ಕಿ, ಪುಳಿಯೋಗರೆ ಮತ್ತು ಇನ್ನಿತರೆ, ರಾತ್ರಿ ಊಟಕ್ಕೆ ರಾಗಿಮುದ್ದೆ, ಚಪಾತಿ, ಅನ್ನ ಸಾಂಬಾರು, ಮಜ್ಜಿಗೆ, ರೊಟ್ಟಿ ಇತ್ಯಾದಿ | ಇದೆ/ಇಲ್ಲ | |
| 27. | ಮೆನು ಪ್ರಕಾರ ಆಹಾರ ಒದಗಿಸಲಾಗಿದೆಯೇ? | ಇದೆ/ಇಲ್ಲ | |
| 28. | ವಿಶೇಷ ಆಹಾರ ಸೌಲಭ್ಯ (ಭಾನುವಾರಗಳಂದು) | ಇದೆ/ಇಲ್ಲ | |
| **ಇತರೆ ದೈನಂದಿನ ಬಳಕೆ ಸಾಮಾಗ್ರಿ** | | | |
| 29. | ಪ್ರತಿ ಮಗುವಿಗೂ ಬಟ್ಟೆ, ಟವಲ್, ಟ್ರಂಕ್, ಹಾಸಿಗೆಗಳನ್ನು ಒದಗಿಸಲಾಗಿದೆಯೇ? | ಇದೆ/ಇಲ್ಲ | |
| 30. | ದೈನಂದಿನ ಸಾಮಗ್ರಿಗಳಾದ ಸ್ನಾನದ ಸೋಪು, ಬಟ್ಟೆ ತೊಳೆಯುವ ಸೋಪು, ಕೊಬ್ಬರಿ ಎಣ್ಣೆ, ಬಾಚಣಿಕೆ, ತಟ್ಟೆ, ಲೋಟ, ಪೇಸ್ಟ್, ಬ್ರಷ್, ಮುಖಾಲಂಕಾರ ಸಾಮಗ್ರಿ, ಇತ್ಯಾದಿಗಳನ್ನು ಒದಗಿಸಲಾಗಿದೆಯೇ? | ಹೌದು/ಇಲ್ಲ | |
| **ವೇಳಾಪಟ್ಟಿ** | | | |
| 31. | ವೇಳಾಪಟ್ಟಿ ಸಿದ್ದಪಡಿಸುವರೇ | ಹೌದು/ಇಲ್ಲ | |
| 32. | ವೇಳಾಪಟ್ಟಿಯಲ್ಲಿ ಊಟ, ವಿರಾಮ, ಮನರಂಜನೆ, ಶೌಚ, ಅಧ್ಯಯನಕ್ಕೆ, ಧ್ಯಾನಕ್ಕೆ ಅವಕಾಶ ನೀಡಲಾಗಿದೆಯೇ? | ಹೌದು/ಇಲ್ಲ | |
| 33. | ವೇಳಾಪಟ್ಟಿಗನುಗುಣವಾಗಿ ತರಗತಿಗಳು ನಡೆಯುತ್ತಿದೆಯೇ? | ಹೌದು/ಇಲ್ಲ | |
| **ಸಿ.ಡಬ್ಲ್ಯೂ.ಸಿ ಮುಂದೆ ಹಾಜರುಪಡಿಸುವ ಬಗ್ಗೆ** | | | |
| 34. | ಕೇಂದ್ರಕ್ಕೆ ದಾಖಲಾದ ಪ್ರತಿ ಮಗುವನ್ನು ಸಂದರ್ಭಕ್ಕನುಗುಣವಾಗಿ ಸಿ.ಡಬ್ಲ್ಯೂ.ಸಿ ಮುಂದೆ ಹಾಜರುಪಡಿಸಲಾಗಿಯೇ? | | |
| **ಸಿಬ್ಬಂದಿ ಮತ್ತು ವೇತನ** | | | |
| 35. | ನಿಗದಿತ ದಾಖಲಾತಿಗನುಗುಣವಾಗಿ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆಯೇ?(30–50 ಮಕ್ಕಳಿಗನುಗುಣವಾಗಿ) | | |

| | | | |
|---|---|---|---|
| 36. | ವಾರ್ಡನ್ | | |
| 37. | ಹೆಣ್ಣು ಮಕ್ಕಳಿದ್ದಲ್ಲಿ ಮಹಿಳಾ ವಾರ್ಡಣ್ ಲಭ್ಯವಿರುವರೇ? | | |
| 38. | ಕ್ಷೇತ್ರ ಕಾರ್ಯಕರ್ತರು | | |
| 39. | ಅಡಿಗೆಯವರು | | |
| **ಕಲಿಕಾ ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು:** | | | |
| 40. | ಮಕ್ಕಳಿಗೆ ಬರೆಯುವ ಸಾಮಗ್ರಿ, ಚಾರ್ಟ್, ಕಲರ್ ಪೇಪರ್, ನೋಟ್ ಪುಸ್ತಕ, ಪೆನ್ನು, ಪನ್ಸಿಲ್, ರಬ್ಬರ್, ಡ್ರಾಯಿಂಗ್ ಶೀಟ್, ಚಾಕ್ ಪೀಸ್, ಕ್ರೇಯಾನ್ಸ್, ಪೇಪರ್‌ಗಳನ್ನು ಒದಗಿಸಲಾಗಿದೆಯೆ? | | |
| **ಕೌನ್ಸಿಲಿಂಗ್** | | | |
| 41. | ವರ್ಷಕ್ಕೆ ಮೂರು ಬಾರಿ ಸ್ಥಳೀಯ ವೈದ್ಯರಿಂದ ಕೌನ್ಸಿಲಿಂಗ್ ಮಾಡಲಾಗುತ್ತಿದೆಯೇ? | | |
| 42. | ತಜ್ಞರಿಂದ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಲಾಗಿದೆಯೇ? | | |
| **ಜೀವನ ಕೌಶಲ** | | | |
| 43. | ಎರಡು ತಿಂಗಳಿಗೆ ಜೀವನ ಕೌಶಲ ತರಬೇತಿಯನ್ನು ನೀಡಲಾಗಿದೆಯೇ? (ಯೋಗ, ಧ್ಯಾನ, ಪ್ರಾಣಾಯಾಮ, ಸಂಗೀತ) | | |
| **ಪ್ರವಾಸ** | | | |
| 44. | ಮಕ್ಕಳಲ್ಲಿ ಪರಿಸರ ಪ್ರೇಮ, ಐತಿಹಾಸಿಕ ಸ್ಥಳಗಳ ಪ್ರಾಮುಖ್ಯತೆ ಹಾಗೂ ವೈಜ್ಞಾನಿಕ ಪ್ರವೃತ್ತಿಗಳನ್ನು ಬೆಳೆಸಲು ಪ್ರವಾಸ ಏರ್ಪಡಿಸಲಾಗಿದೆಯೇ? | | |
| 45. | ಭಾಷಾ ಪ್ರಪಂಚದ ಬಗ್ಗೆ ಅನುಭವ ಗಳಿಸಲು ಅನುಕೂಲವಾಗುವಂತೆ ಸ್ಥಳೀಯ ಪೋಲೀಸ್ ಠಾಣೆ, ನ್ಯಾಯಾಲಯ, ಅಂಚೆ ಕಛೇರಿ, ಬ್ಯಾಂಕ್ ಇತ್ಯಾದಿ ಭೇಟಿಗಳನ್ನು ಹಮ್ಮಿಕೊಳ್ಳಲಾಗಿದೆಯೇ? | | |
| **ವಿದ್ಯುತ್ ಬಿಲ್ ನೀರಿನ ಬಿಲ್ ಪಾವತಿಸುವ ಬಗ್ಗೆ:** | | | |
| 46. | ವಿದ್ಯುತ್ ಬಿಲ್ ನೀರಿನ ಬಿಲ್ ಪಾವತಿಸಲಾಗಿದೆಯೇ(ಓಚರ್) | | |
| **ವೈದ್ಯಕೀಯ ವ್ಯವಸ್ಥೆ** | | | |
| 47. | ಕನಿಷ್ಠ ಪ್ರತಿ ತಿಂಗಳಿಗೊಮ್ಮೆ ಉಚಿತ ವೈದ್ಯಕೀಯ ಒದಗಿಸಲಾಗಿದೆಯೇ? | | ಹೌದು/ಇಲ್ಲ |
| 48. | ವೈದ್ಯರ ಸಲಹೆಯಂತೆ ಔಷದೋಪಚಾರ ಮಾಡಲಾಗಿದೆಯೇ?(ದಾಖಲಾತಿ ವೀಕ್ಷಣೆ ಮಾಡಿ ದಾಖಲಿಸಬೇಕು) | | ಹೌದು/ಇಲ್ಲ |
| 49. | ಇಲಾಖೆಯಿಂದ ಹೆಲ್ತ್ ಕಾರ್ಡ್ ಪಡೆದು ಆರೂಗ್ಯ ಸ್ಥಿಯನ್ನು ದಾಖಲಿಸಲಾಗಿದೆಯೇ? | | |
| 50. | ಮದ್ಯಾಹ್ನ ಉಪಾಹಾರ ಯೋಜನೆಯಡಿಯಲ್ಲಿ ನೀಡಲಾಗುವ ವಿಟಮಿನ್ ಮಾತ್ರೆಗಳನ್ನು ಮಕ್ಕಳಿಗೆ ವಿತರಿಸಲಾಗುತ್ತಿದೆಯೇ? | | |
| **ಇತರೆ ವಹಿಗಳು:** | | | |
| 51. | ಮಕ್ಕಳ ಹಾಜರಾತಿ ವಹಿ | ಇದೆ/ಇಲ್ಲ | |
| 52. | ಸ್ವಯಂ ಸೇವಕರ ಹಾಜರಾತಿ ವಹಿ | ಇದೆ/ಇಲ್ಲ | |
| 53. | ಸ್ವಯಂ ಸೇವಕರ ಕ್ಷೇತ್ರ ಭೇಟಿ ವಹಿ | ಇದೆ/ಇಲ್ಲ | |

| | | | |
|---|---|---|---|
| 54. | ಪಾಲಕರ ವಹಿ | ಇದೆ/ಇಲ್ಲ | |
| 55. | ದಾಸ್ತಾನು ವಹಿ | ಇದೆ/ಇಲ್ಲ | |
| 56. | ವೈದ್ಯಕೀಯ ಸೌಲಭ್ಯ ವಿತರಣಾ ವಹಿ | ಇದೆ/ಇಲ್ಲ | |
| 57. | ಇತರೆ ಸಾಮಗ್ರಿ ವಿತರಣೆ ವಹಿ | ಇದೆ/ಇಲ್ಲ | |
| 58. | ಮಕ್ಕಳಿಗೆ ಮನೆಗೆ ಹೋಗಲು ಅನುಮತಿ ನೀಡುವ ವಹಿ | | |
| 59. | ಕಲಿಕೆಯ ಪ್ರಗತಿ ದಾಖಲೆ ವಹಿ | ಇದೆ/ಇಲ್ಲ | |
| 60. | ಕೇಂದ್ರದಿಂದ ತಪ್ಪಿಸಿಕೊಂಡು ಹೋಗಿರುವ ಮಕ್ಕಳ ವಹಿ | ಇದೆ/ಇಲ್ಲ | |
| 61. | ದೂರು ವಹಿ | ಇದೆ/ಇಲ್ಲ | |
| 62. | ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲಿಸಿರುವ ವಹಿ | ಇದೆ/ಇಲ್ಲ | |
| 63. | ಇಲಾಖಾ ಅಧೀಕಾರಿಗಳ ಸಂದರ್ಶನ ವಹಿ | | |
| | **ಖರ್ಚುವೆಚ್ಚದ ದಾಖಲೆಗಳು** | | |
| | **ಐಟಂ** | **ವೆಚ್ಚ ರೂಗಳಲ್ಲಿ** | **ವೋಚರ್ ಪರಿಶೀಲಿಸಿ ಷರಾ** |
| 64. | ಊಟ ಉಪಹಾರ | | |
| 65. | ದೈನಂದಿನ ವಸ್ತುಗಳು | | |
| 66. | ಬೆಡ್ಡಿಂಗ್ | | |
| 67. | ಸಿಡಬ್ಲ್ಯೂ ಮುಂದೆ ಹಾಜರು ಪಡಿಸಲು ಪ್ರಯಾಣ ವೆಚ್ಚ | | |
| 68. | ಸಿಬ್ಬಂದಿ ವೇತನ | | |
| 69. | ಮೆಡಿಕಲ್ ವೆಚ್ಚ | | |
| 70. | ಸಹಾಯಕ ಪಾಠೋಪಕರಣಗಳು, ಸ್ಟೇಷನರಿ ಹಾಗೂ ಇತರೆ ಕಲಿಕೋಪಕರಣಗಳ ವೆಚ್ಚ | | |
| 71. | ಕೌನ್ಸಿಲಿಂಗ್ | | |
| 72. | ಜೀವನ ಕೌಶಲ ತರಬೇತಿ | | |
| 73. | ಕೇಂದ್ರ ನಿರ್ವಹಣಾ ವೆಚ್ಚ | | |
| 74. | ಇದುವರೆಗೆ ಖರ್ಚಾದ ಒಟ್ಟು ಅನುದಾನ | | |
| 75. | ವಿವರ ಇದ್ದಲ್ಲಿ | | |
| 76. | ಕೇಂದ್ರವು ಶಾಲೆಯಲ್ಲಿ ನಡೆಯುತ್ತಿದ್ದರೆ ಆ ಶಾಲೆಯ ಅಥವಾ ಹತ್ತುರದ ಶಾಲೆಯ ಮುಖ್ಯ ಶಿಕ್ಷಕರು ಉಸ್ತುವಾರಿ ಮಾಡುತ್ತಿದ್ದಾರೆಯೇ? | | |
| 77. | ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್‌ಡಿಎಂಸಿಯವರಿಗೆ ಕೇಂದ್ರ ನಡೆಯುತ್ತಿರುವ ಬಗ್ಗೆ ಮಾಹಿತಿ ಇದೆಯೇ? | | |

| | | |
|---|---|---|
| 78. | ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಎಲ್ಲಾ ಮಕ್ಕಳ ಭಾವಚಿತ್ರ ಸಹಿತ ಪೂರ್ಣ ವಿವರ ಇದೆ–ಯೇ? | |
| 79. | ಸಿಡಬ್ಲ್ಯೂಸಿ( ಅಫಅ) ಮುಂದೆ ಹಾಜರುಪಡಿಸಿದ ಮಕ್ಕಳ ಪಟ್ಟಿ ಇದೆಯೇ? | |
| 80. | ಎಷ್ಟು ಬಾರಿ ಮಕ್ಕಳನ್ನು ಸಿಡಬ್ಲ್ಯೂಸಿ ಮುಂದೆ ಹಾಜರುಪಡಿಸಲಾಗಿದೆ? | |
| 81. | ಮಕ್ಕಳಿಗೆ ಪೋಷಕರಿದ್ದಲ್ಲಿ, ಅವರನ್ನು ಪೋಷಕರೊಂದಿಗೆ ಕಳಿಸಿರುವ ಬಗ್ಗೆ ಪೋಷಕರ ದೃಢೀಕರಣ, ವಿಳಾಸ ಹಾಗೂ ಸಿಡಬ್ಲ್ಯೂಸಿ ದೃಡೀಕರಣ ಪಡೆದು ದಾಖಲೆ ನಿರ್ವಹಿಸಲಾಗಿದೆಯೇ? | |
| 82. | ಒಂದು ವೇಳೆ ಪೋಷಕರು ಪುನ: ಮಕ್ಕಳನ್ನು ಕೆಲಸಗಳಿಗೆ ತೊಡಗಿಸಿದ್ದಲ್ಲಿ ಸೂಕ್ತ ದಾಖಲೆಯೊಂದಿಗೆ ಪೋಲೀಸ್ ಇಲಾಖೆಯ ಸಹಕಾರದೊಂದಿಗೆ ಶಾಲಾ ವ್ಯಾಪ್ತಿಗೆ ಕರೆತರುವಂತೆ ಕ್ರಮ ವಹಿಸಲಾಗಿದೆಯೇ? | |
| 83. | ಕೇಂದ್ರದಲ್ಲಿರುವ ಮಕ್ಕಳಲ್ಲಿ ಇಲಾಖೆ ಗುರುತಿಸಿರುವ ಮಕ್ಕಳು, ಪೋಲೀಸ್ ಇಲಾಖೆ, ಮತ್ತು ಡಬ್ಲ್ಯೂಸಿಡಿ(CWD) ಇಲಾಖೆಯ ಸಹಯೋಗದೊಂದಿಗೆ ಗುರುತಿಸಿದ ಮಕ್ಕಳ ಪೂರ್ಣ ದಾಖಲೆಯ ಮಾಹಿತಿಯನ್ನು ಕಡ್ಡಾಯವಾಗಿ ಕೇಂದ್ರದಲ್ಲಿ ನಿರ್ವಹಿಸಲಾಗಿದೆಯೇ? | |
| 84. | ಕೇಂದ್ರಕ್ಕೆ ದಾಖಲಾದ ಮಕ್ಕಳು ಕೆಲವು ದಿನಗಳ ನಂತರ ಪೋಷಕರೊಂದಿಗೆ ಕಳುಹಿಸಿದ್ದು, ಪುನ: ಅದೇ ಮಕ್ಕಳು ಕೇಂದ್ರಕ್ಕೆ ಸೇರಿರುವ ಬಗ್ಗೆ ಕಾರಣದೊಂದಿಗೆ ಮಾಹಿತಿ ಇಡಲಾಗಿದೆಯೇ? | |
| 85. | ಪ್ರತಿಯೊಂದು ಕೇಂದ್ರದಲ್ಲಿ ಮಗುವಿನ ಖಇಕ ಯನ್ನು ಕಡ್ಡಾಯವಾಗಿ ಇಡಲಾಗಿದೆಯೇ? | |
| 86. | ಕೇಂದ್ರದ ಶಾಲಾ ಮುಖ್ಯಸ್ಥರು ಪ್ರತಿ ದಿನ ಕೇಂದ್ರಕ್ಕೆ ಭೇಟಿ ನೀಡಿ ನೋಂದಾಯಿಸಿದ ಇಲ್ಲಾ ಮಕ್ಕಳು ನಿರಂತರವಾಗಿ ಹಾಜರಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದು, ಪ್ರತಿ ತಿಂಗಳು ಸಿಆರ್‌ಪಿ ಅಥವಾ ಜಿಲ್ಲಾ ಕಛೇರಿಯ ಗಮನಕ್ಕೆ ತರುತ್ತಿದ್ದಾರೆಯೇ? | |
| 87. | 12 ತಿಂಗಳುಗಳೊಳಗೆ ಮುಖ್ಯವಾಹಿನಿಗೆ ಸೇರುವ ಅರ್ಹತೆಯುಳ್ಳ ಮಕ್ಕಳಿದ್ದಲ್ಲಿ ಹತ್ತಿರದ ಶಾಲೆಗೆ ದಾಖಲಿಸಲಾಗಿದೆಯೇ? ಇದ್ದಲ್ಲಿ ಮಕ್ಕಳ ಸಂಖ್ಯೆ------ | |
| 88. | ಕೇಂದ್ರದಲ್ಲಿ ಯಾವುದಾದರೂ ಮಗುವಿಗೆ 12 ತಿಂಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಇರಲು ಅವಕಾಶ ನೀಡಲಾಗಿದೆಯೇ? | |
| 89. | ವಿಶೇಷ ತರಬೇತಿ ಪಡೆದಿರುವ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸಿರುವ ಬಗ್ಗೆ ದಾಖಲೆಗಳಿವೆಯೇ?(ಕ್ಸೆರಾಕ್ಸ್ ಪ್ರತಿ ಇರಲಿ) | |
| 90. | ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾದಲ್ಲಿ ಆ ಶಾಲೆಯ ಮುಖ್ಯ ಶಿಕ್ಷಕರಿಂದ ದೃಢೀಕರಣ ಪಡೆದು ದಾಖಲೆಯನ್ನು ನಿರ್ವಹಿಸಲಾಗಿದೆಯೇ? | |
| 91. | ಪೋಷಕರಿಲ್ಲದ , ಆಶ್ರಯವಿಲ್ಲದ, ವಸತಿ ಸೌಲಭ್ಯವಿಲ್ಲದ ಅನಾಥ ಮಕ್ಕಳಿಗೆ ಉಚಿತ ವಸತಿಯುತ ದಾಖಲಿಸಲಾಗಿದೆಯೇ? | |
| 92. | ವಿಶೇಷ ಸಂದರ್ಭಗಳಲ್ಲಿ ಕೇಂದ್ರಗಳಿಂದ ಮಕ್ಕಳನ್ನು ಮುಕ್ತಗೊಳಿಸಿದ ಬಗ್ಗೆ ಅಫಅ ಗೆ ಹಸ್ತಾಂತರಿಸಿ ದೃಡೀಕರಣವನ್ನು ಪಡೆದುಕೊಳ್ಳಲಾಗಿದೆಯೇ? | |

| | | |
|---|---|---|
| 93. | ಗುರುತಿಸಿರುವ ಮಕ್ಕಳಿಗೆ ನಿಯಮಾನುಸಾರ ನಿಗದಿ ಪಡಿಸಿದ ಘಟಕ ವೆಚ್ಚದಂತೆ ಹಂಚಿಕೆ ಮಾಡಲಾದ ಎಲ್ಲಾ ಸೌಲಭ್ಯವನ್ನು ಒದಗಿಸಲಾಗಿದೆಯೇ? | |
| 94. | ಮಕ್ಕಳು ಉತ್ತಮ ಮಾನಸಿಕ ಸ್ಥಿರತೆ, ಆತ್ಮ ವಿಶ್ವಾಸ, ನಾಗರೀಕತೆ ಬೆಳೆಸುವ ಬಗ್ಗೆ ಅಗತ್ಯ ಶೈಕ್ಷಣಿಕ ಸಾಮರ್ಥ್ಯಗಳನ್ನು ಬೆಳೆಸಲು ಚಿಣ್ಣರ ಅಂಗಳ 1, 2 ಮತ್ತು 3 ಪುಸ್ತಕಗಳನ್ನು ಬಳಸಲಾಗಿದೆಯೇ? | |
| 95. | ಈ ಮಕ್ಕಳು ಬೇರೆ ಮಕ್ಕಳಂತೆ ಶಾಲೆಯ ಪರಿಸರದಲ್ಲಿ ನಿರಾಳವಾಗಿ, ಮುಕ್ತವಾಗಿ ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಸಹಭಾಗಿಗಳಾಗುತ್ತಿದ್ದಾರೆಯೇ? | |
| 96. | ವಿಶೇಷ ತರಬೇತಿಗೆ ಒಳಪಟ್ಟ ಮಕ್ಕಳು ವಾರದಲ್ಲಿ ಕನಿಷ್ಠ 2 ದಿನ ಶಾಲಾ ಅವಧಿಯಲ್ಲಿ ಹತ್ತಿರದ ಶಾಲೆಗೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೂಕ್ತ ತರಗತಿಗೆ ಹಾಜರಾಗುವಂತೆ ಮಾಡಲಾಗಿದೆಯೇ? | |
| 97. | ಪ್ರತಿ ತಿಂಗಳು ಮಕ್ಕಳ ಕಲಿಕಾ ಮಟ್ಟವನ್ನು ಪರಿಶೀಲಿಸಿ ಪ್ರತ್ಯೇಕ ವಹಿಯಲ್ಲಿ ದಾಖಲಿಸಲಾಗಿದೆಯೇ? | |
| | **ಉಸ್ತುವಾರಿ(ಭೇಟಿ ವರದಿಯಲ್ಲಿದ್ದ ಹಾಜರಾತಿಯ ವಿವರವನ್ನು ಗುರುತಿಸಿಕೊಳ್ಳಿರಿ)** | |
| 98. | ಡಿಪಿಐ/ಡಿವೈಪಿಸಿ ಕಛೇರಿಯಿಂಡ ಭೇಟಿ ನೀಡಲಾದ ಅಧಿಕಾರಿಗಳ ಭೇಟಿ ಸಂಖ್ಯೆ: | |
| 99. | ಡಯಟ್ ಅಧಿಕಾರಿಗಳ ಭೇಟಿ ಸಂಖ್ಯೆ: | |
| 100. | ಕ್ಷೇತ್ರ ಶಿಕ್ಷಣಾಧೀಕಾರಿಗಳ ಭೇಟಿ ಸಂಖ್ಯೆ: | |
| 101. | ಬಿಆರ್‌ಸಿ/ಬಿಆರ್‌ಪಿ/ಸಿಆರ್‌ಪಿ ಭೇಟಿ ಸಂಖ್ಯೆ: | |
| 102. | ಕೇಂದ್ರ ಶಾಲೆಯ ಮುಖ್ಯ ಶಿಕ್ಷಕರು: | |
| 103. | ನಾಲ್ಕು ತಿಂಗಳಿಗೊಮ್ಮೆ ಪೋಷಕರು ಮತ್ತು ಸಾರ್ವಜನಿಕರ ಎದುರಿನಲ್ಲಿ ಸಾಮೂಹಿಕ ಪ್ರದರ್ಶನವನ್ನು ಏರ್ಪಡಿಸಲಾಗಿದೆಯೇ? | |
| 104. | ಭೇಟಿಯ ವೇಳೆಯಲ್ಲಿ ವಿದ್ಯಾರ್ಥಿಗಳ ಸ್ವಚ್ಛತೆ( ಉಗುರು, ಕೂದಲು ವಸ್ತ್ರ) | |
| 105. | ಭೇಟಿಯ ವೇಳೆಯಲ್ಲಿ ಆಹಾರ ಧಾನ್ಯಗಳ ಗುಣಮಟ್ಟ: | |
| 106. | ಭೇಟಿಯ ವೇಳೆಯಲ್ಲಿ ಆಹಾರದ ಗುಣಮಟ್ಟ: | |
| 107. | ಮಕ್ಕಳ ಶಿಸ್ತು: ಕೆಲಸ ಕೊಟ್ಟಾಗ ತೊಡಗಿಕೊಳ್ಳುವುದು, ಸೂಚನೆ ಆಲಿಸುವುದು, ಪರಸ್ಪರರಿಗೆ ತೊಂದರೆ ಮಾಡದಿರುವುದು ------ಇತ್ಯಾದಿ) | |

108. **ಪಠ್ಯಪುಸ್ತಕ ವಿತರಣೆ**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| | | | | | | | |
| | | | | | | | |

109. **ಸಮವಸ್ತ್ರ**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| | | | | | | | |

110. **ನೋಟ್‌ಬುಕ್**

| ಕನ್ನಡ | | ಇಂಗ್ಲೀಷ್ | | ಗಣಿತ | | ಪರಿಸರ ಅಧ್ಯಯನ | |
|---|---|---|---|---|---|---|---|
| ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ | ಸರಬರಾಜು | ವಿತರಣೆ |
| | | | | | | | |

111.ತಪ್ಪಿಸಿಕೊಂಡು ಹೊಗಿರುವ ಮಕ್ಕಳ ವಿವರ:

ಅ. ತಪ್ಪಿಸಿಕೊಂಡು ಹೊಗಿರುವ ಮಕ್ಕಳ ಸಂಖ್ಯೆ ಮತ್ತು ಕಾರಣಗಳು:

ಇ. ತೆಗೆದುಕೊಂಡ ಕ್ರಮ:

112.ಹಿಂದೆ ಕೇಂದ್ರದಲ್ಲಿರುವ ಮಕ್ಕಳ ಜಾಡು ಹಿಡಿದ ಬಗ್ಗೆ ಮಾಹಿತಿ ಇದೆಯೇ? ಇದ್ದಲ್ಲಿ ವಿವರ

113.ಕೇಂದ್ರ ಶಾಲೆಗೂ ಈ ಕೇಂದ್ರಕ್ಕೂ ಇರುವ ಸಂಬಂಧ:

114.ಸಂದರ್ಶಕರ ವಹಿಯ ಮುಖ್ಯಾಂಶಗಳು:(ಭೇಟಿ ನೀಡಿರುವ ಅಧಿಕಾರಿಗಳ ಸಂಖ್ಯೆ ಮತ್ತು ಹಿಮ್ಮಾಹಿತಿ ಮತ್ತು ಬೇರೆ ಬೇರೆ ದಿನದ ಹಾಜರಾತಿ ಗುರುತಿಸಿಕೊಳ್ಳಬಹುದು)

115. ಮಕ್ಕಳ ಕಲಿಕೆಯ ಪ್ರಗತಿ

| ವಯಸ್ಸು ಮತ್ತು ಮಕ್ಕಳ ಸಂಖ್ಯೆ | **ಕಲಿಕೆಯ ಮಟ್ಟ**(ಮಕ್ಕಳ ಕಲಿಕೆಯನ್ನು ಪರಿಶೀಲಿಸಿ ಸಾಮರ್ಥ್ಯ ಗಳಿಸಿರುವ ಮಕ್ಕಳ ಸಂಖ್ಯೆ ಬರೆಯಿರಿ) | | | |
|---|---|---|---|---|
| | ಓದುವುದು | ಬರೆಯುವುದು | ಸರಳ ಲೆಕ್ಕಾಚಾರ | ಇತರೆ |
| 6 ರಿಂದ 8 | ಅಕ್ಷರ | ಅಕ್ಷರ | ಸಂಖ್ಯೆಗಳು (1–20) ಸಂಕಲನ, ವ್ಯವಕಲನ | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| | | | | |
| 8 ರಿಂದ 12 | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ | ಸಂಖ್ಯೆಗಳು 1–100 ಸಂಕಲನ, ವ್ಯವಕಲನ, ಗುಣಾಕಾರ, ಸರಳ ಭಾಗಾಕಾರ | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| | | | | |
| 13–14 | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ, ವಾಕ್ಯ ವೃಂದ | ಅಕ್ಷರ, ಒತ್ತಕ್ಷರ, ಸರಳ ಪದ, ವಾಕ್ಯ, ವಾಕ್ಯ ವೃಂದ | ಮೂಲ ಕ್ರಿಯೆಯ ಸರಳ ಲೆಕ್ಕಗಳು | ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ಸಾಮಾಜಿಕ ಕೌಶಲ |
| | | | | |

116.ವೀಕ್ಷಕರ ಅಭಿಪ್ರಾಯಗಳು(ದಾನದ ವಿವರಗಳಿದ್ದಲ್ಲಿ ದಾಖಲಿಸಬಹುದು/ಒಟ್ಟಾರೆ ಕೇಂದ್ರದ ಕಾರ್ಯ ನಿರ್ವಹಣೆ ಹೇಗಿದೆ?)

**ಅಧಿಕಾರಿಗಳ ಸಹಿ**

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು-10.

TEL NO:
0821-2446419,
Web Site:http://diet.karnatakaeducation.org.in/mysore
E MAIL:diet.mysore@gmail.com

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

**ವಿದ್ಯಾರ್ಥಿಗಳಿಗಾಗಿ ಪ್ರಶ್ನಾವಳಿ**

ಯುಡಿಸಿ/ಆರ್‌ಎಸ್‌ಟಿ ಕೇಂದ್ರದ ಹೆಸರು

ವಿದ್ಯಾರ್ಥಿಯ ಹೆಸರು : ವಯಸ್ಸು:

| ಕ್ರ ಸಂ | ವಿತರಿಸಿರುವ ಸೌಲಭ್ಯ | ನಿಮ್ಮ ಆಯ್ಕೆಯ ಸಂಖ್ಯೆಯನ್ನು ದಾಖಲಿಸಿ ಸರಿ ಗುರುತು ಹಾಕಿ |
|---|---|---|
| 1. | ಪೇಸ್ಟ್ ನೀಡಿರುತ್ತಾರೆ-1, ನೀಡಿಲ್ಲ-2 | |
| 2. | ಬ್ರಶ್ ನೀಡಿರುತ್ತಾರೆ-1, ನೀಡಿಲ್ಲ-2 | |
| 3. | ಸ್ನಾನದ ಮತ್ತು ಬಟ್ಟೆ ತೊಪಳೆಯುವ ಸೋಪು ನೀಡಿರುತ್ತಾರೆ-1, ನೀಡಿಲ್ಲ-2 | |
| 4. | ಕೊಬ್ಬರಿ ಎಣ್ಣೆ ನೀಡಿರುತ್ತಾರೆ-1, ನೀಡಿಲ್ಲ-2 | |
| 5. | ಮುಖಾಲಂಕರಣ ಸಾಮಗ್ರಿ ನೀಡಿರುತ್ತಾರೆ-1, ನೀಡಿಲ್ಲ-2 | |
| 6. | ತಟ್ಟೆ ಲೋಟ ನೀಡಿರುತ್ತಾರೆಯೇ? ನೀಡಿರುತ್ತಾರೆ-1, ನೀಡಿಲ್ಲ-2 | |
| 7. | ಬೆಡ್‌ಶೀಟ್ ನೀಡಿರುತ್ತಾರೆ-1, ನೀಡಿಲ್ಲ-2 | |
| 8. | ಬೆಡ್ಡಿಂಗ್ ನೀಡಿರುತ್ತಾರೆ-1, ನೀಡಿಲ್ಲ-2 | |
| 9. | ಟ್ರಂಕ್ ನೀಡಿರುತ್ತಾರೆ-1, ನೀಡಿಲ್ಲ-2 | |
| 10. | ಸಮವಸ್ತ್ರ ನೀಡಿರುತ್ತಾರೆ-1, ನೀಡಿಲ್ಲ-2 | |
| 11. | ಪಠ್ಯಪುಸ್ತಕ ನೀಡಿರುತ್ತಾರೆ-1, ನೀಡಿಲ್ಲ-2 | |
| 12. | ನೋಟ್ ಪುಸ್ತಕ ನೀಡಿರುತ್ತಾರೆ-1, ನೀಡಿಲ್ಲ-2 | |
| 13. | ಪೆನ್/ಪೆನ್ಸಿಲ್ ನೀಡಿರುತ್ತಾರೆ-1, ನೀಡಿಲ್ಲ-2 | |
| 14. | ಚಾರ್ಟ್, ಕಲರ್ ಪೇಪರ್, ರಬ್ಬರ್, ಡ್ರಾಯಿಂಗ್ ಶೀಟ್, ಚಾಕ್ ಪೀಸ್, ಕ್ರೇಯಾನ್ಸ್, ಪೇಪರ್‌ಗಳನ್ನು ನೀಡಿದ್ದಾರೆಯೆ? ನೀಡಿರುತ್ತಾರೆ-1, ನೀಡಿಲ್ಲ-2 | |
| 15. | ಬೆಳಗಿನ ಉಪಹಾರ ಮೆನು ಪ್ರಕಾರ ನೀಡಲಾಗುತ್ತಿದೆಯೇ? ಹೌದು-1, ಇಲ್ಲ-2 | |
| 16. | ಬೆಳಗಿನ ಉಪಹಾರವನ್ನು ರುಚಿ ಮತು ಸ್ವಚ್ಚವಾಗಿ ನೀಡಲಾಗುತ್ತಿದೆಯೇ? ಹೌದು-1, ಇಲ್ಲ-2 | |
| 17. | ಮಧ್ಯಾಹ್ನದ ಬಿಸಿಯೂಟವನ್ನು ಶಾಲೆಯಿಂದ ನೀಡಲಾಗುತ್ತಿದೆಯೇ? ಹೌದು-1, ಇಲ್ಲ-2 | |
| 18. | ಊಟದ ಬಳಿಕ ನಿಮಗೆ ವಿಟಮಿನ್ ಮಾತ್ರೆ ನೀಡುತ್ತಿದ್ದಾರೆಯೇ? ಹೌದು-1, ಇಲ್ಲ-2 | |

| | | |
|---|---|---|
| 19. | ರಾತ್ರಿ ಊಟವನ್ನು ರುಚಿಕರವಾಗಿ ಮೆನು ಪ್ರಕಾರ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | |
| 20. | ಭಾನುವಾರ ವಿಶೇಷ ಆಹಾರ ನೀಡಲಾಗುತ್ತಿದೆಯೇ? ಹೌದು–1, ಇಲ್ಲ–2 | |
| 21. | ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದೆಯೇ? ಹೌದು–1, ಇಲ್ಲ–2 | |
| 22. | ನೀರಿನ ವ್ಯವಸ್ಥೆ ಇದೆಯೇ? ಹೌದು–1, ಇಲ್ಲ–2 | |
| 23. | ವೇಳಾಪಟ್ಟಿಯಂತೆ ಕಲಿಸುತ್ತಾರೆಯೇ? ಹೌದು–1, ಇಲ್ಲ–2 | |
| 24. | ನಿಮಗೆ ಅರ್ಥವಾಗುವಂತೆ ಕಲಿಸುತ್ತಿದ್ದಾರೆಯೇ? ಹೌದು–1, ಇಲ್ಲ–2 | |
| 25. | ನಿಮ್ಮ ಸ್ವಚ್ಛತೆಯ ಬಗ್ಗೆ ನಿನಗೆ ಅರಿವಿದೆಯೇ? ಹೌದು–1, ಇಲ್ಲ–2 | |
| 26. | ಮನರಂಜನೆಗೆ ಏನೇನು ಚಟುವಟಿಕೆಗಳನ್ನು ನೀಡುತ್ತಾರೆ( ಆಟ/ಟಿ.ವಿ/ಹಾಡು/ನೃತ್ಯ/ನಾಟಕ) | |
| 27. | ನಿಮ್ಮನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಾರೆಯೇ? ಹೌದು–1, ಇಲ್ಲ–2 | |
| 28. | ಪ್ರತಿ ದಿನ ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಸಂಗೀತ ಇತ್ಯಾದಿಗಳನ್ನು ಮಾಡಿಸುತ್ತಿದ್ದಾರೆಯೇ? | |
| 29. | ಪ್ರತಿ ತಿಂಗಳು ವೈದ್ಯರು ತಪಾಸಣೆಯನ್ನು ಮಾಡುತ್ತಾರೆಯೇ? ಹೌದು–1, ಇಲ್ಲ–2 | |
| 30. | ನೀವು ಶಾಲೆಯಲ್ಲಿ ಸಂತೋಷವಾಗಿರುವಿರಾ? ಹೌದು–1, ಇಲ್ಲ–2 | |
| 31. | ಶಿಕ್ಷಕರು ನಿಮ್ಮನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳುತ್ತಾರೆಯೇ? ಹೌದು–1, ಇಲ್ಲ–2 | |
| 32. | ಕೇಂದ್ರದಲ್ಲಿ ಯಾರನ್ನು ಕಂಡರೆ ಇಷ್ಟ? ಹೆಸರು ಬರೆ | |
| 33. | ಕೇಂದ್ರದಲ್ಲಿ ಹೊಡೆಯುವುದು, ಬೈಯುವುದು ಮಾಡುತ್ತಾರೆಯೇ? ಹೌದು–1, ಇಲ್ಲ–2 | |
| 34. | ಪಾಠದ ಅವಧಿಯಲ್ಲಿ ಏನೇನು ಚಟುವಟಿಕೆ ಮಾಡುತ್ತಾರೆ? | |
| 35. | ಏನಾದರೂ ತೊಂದರೆಯಾದಾಗ ಯಾರೊಂದಿಗೆ ಹೇಳಿಕೊಳ್ಳುತ್ತೀರಿ. ನಿಮ್ಮ ಸಮಸ್ಯೆಗಳಿಗೆ ಸಂಬಂಧಪಟ್ಟವರು ಹೇಗೆ ಸ್ಪಂದಿಸುತ್ತಾರೆ. | |
| 36. | ಪ್ರೌಢವಸ್ಥೆಗೆ ಬಂದ ಹೆಣ್ಣು ಮಕ್ಕಳಿದ್ದಲ್ಲಿ ಅವರ ಸಮಸ್ಯೆಗಳನ್ನು ಯಾರು ಪರಿಹರಿಸುತ್ತಾರೆ. | |
| 37. | ಶಾಲೆಗೆ ಸೇರಿದ ನಂತರ ನಿಮ್ಮಲ್ಲಾಗಿರುವ ಬದಲಾವಣೆಗಳೇನು? | |
| 38. | ಮುಂದೆ ನಿವೇನಾಗಬೇಕೆಂದು ಬಯಸುವಿರಿ? | |
| 39. | ನೀವು ಕೇಂದ್ರದಲ್ಲಿರಲು ಇಷ್ಟಪಡುತ್ತೀರಾ? ಹೊರಗಿರಲು ಇಷ್ಟಪಡುತ್ತೀರಾ? ನಿಮಗೆ ಕೇಂದ್ರದಲ್ಲಿ ಯಾರನ್ನು ಕಂಡರೆ ಇಷ್ಟ? | |

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

**ಸ್ವಯಂ ಸೇವಕರಿಗಾಗಿ ಪ್ರಶ್ನೆಗಳು**

ಯುಡಿಸಿ/ಆರ್‌ಎಸ್‌ಟಿ ಕೇಂದ್ರದ ಹೆಸರು

ಸ್ವಯಂ ಸೇವಕರ ಹೆಸರು : ವಿದ್ಯಾರ್ಹತೆ:

ಸೇವಾವಧಿ: ಪಡೆದಿರುವ ತರಬೇತಿ

1) ಸಂಸ್ಥೆಯಲ್ಲಿ ವಾಸವಿದ್ದೀರಾ?
2) ಪಡೆದಿರುವ ತರಬೇತಿ ವಿವರ
3) ನೀಡಲಾಗಿರುವ ವೇತನ
4) ಮಕ್ಕಳ ಕಲಿಕೆಗೆ ಏನೇನು ಯೋಜನೆ ಹಾಕಿಕೊಂಡಿರುತ್ತೀರಿ?
5) ಮಕ್ಕಳ ಪ್ರಗತಿಗಾಗಿ ನೀವು ಮಾಡುತ್ತಿರುವ ಕಾರ್ಯ ಚಟುವಟಿಕೆಗಳೇನು?
6) ಕೇಂದ್ರ ಶಾಲೆಯ ಮುಖ್ಯಸ್ಥರು ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿದ್ದಾರೆಯೇ? ವಿವರ ನೀಡಿ
7) ನಿಮ್ಮನ್ನು ನಿಯೋಜಿಸಿದ ಎನ್‌ಜಿಓ ಸಂಸ್ಥೆ ನಿಮಗೆ ಬೇಕಾದ ಎಲ್ಲಾ ಸಹಕಾರವನ್ನು ನೀಡುತ್ತಿದೆಯೇ?
8) ಇಲಾಖೆಯಿಂದ ನಿಮಗೆ ಯಾವ ರೀತಿಯ ಸಹಕಾರ ಮತ್ತು ಮಾರ್ಗದರ್ಶನ ಬೇಕಾಗಿದೆ?
9) ಕೇಂದ್ರದಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳೇನು?
10) ಕೇಂದ್ರದ ಮಕ್ಕಳೀಗಾಗಿ ನೀವು ಮಾಡಿರುವ ವಿಶೇಷ ಸಾಧನೆ ಏನು?

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

### ಆಪ್ತ ಸಮಾಲೋಚಕರಿಗಾಗಿ ಪ್ರಶ್ನಾವಳಿ

ಯುಡಿಸಿ/ಆರ್‌ಎಸ್‌ಟಿ ಕೇಂದ್ರದ ಹೆಸರು:

ಆಪ್ತ ಸಮಾಲೋಚಕರ ಹೆಸರು : ವಿದ್ಯಾರ್ಹತೆ:

1) ಯುಡಿಸಿ ಕೇಂದ್ರದ ಸುತ್ತೋಲೆಯ ಪ್ರಕಾರ ನಿಮ್ಮ ಜವಾಬ್ದಾರಿಗಳೇನು ಎನ್ನುವ ಅಂಶದ ಬಗ್ಗೆ ನಿಮಗೆ ಸ್ಪಷ್ಟತೆ ಇದೆಯೇ?
2) ಪ್ರತಿ ಮಗುವಿಗೆ ಎಷ್ಟು ಅವಧಿಗೊಮ್ಮ ಆಪ್ತ ಸಮಾಲೋಚನೆ ಮಾಡುತ್ತೀರಿ?
3) ಯುಡಿಸಿ ಕೇಂದ್ರದ ಮಕ್ಕಳು ಯಾವ ರೀತಿ ಸಮಸ್ಯೆ ಎದುರಿಸುತ್ತಿದ್ದಾರೆ?
4) ನೀವು ಹೇಗೆ ಅವರ ಸಮಸ್ಯೆಗಳನ್ನು ಪರಿಹರಿಸುವಿರಿ?
5) ವಿದ್ಯಾರ್ಥಿಗಳಲ್ಲಿ ಕಂಡಿರುವ ಸುಧಾರಣೆಗಳೇನು?
6) ಮಕ್ಕಳು ನಿರ್ಭಯವಾಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆಯೇ? ಇಲ್ಲವಾದಲ್ಲಿ ನೀವೇನು ಮಾಡುತ್ತೀರಿ?
7) ಮಕ್ಕಳ ಪ್ರವೇಶ ಹಂತದಲ್ಲಿರುವ ಸ್ಥಿತಿಗೂ ಈಗ ಇರುವ ಸ್ಥಿತಿಗಳಲ್ಲಾಗಿರುವ ಗುಣಾತ್ಮಕ ಬದಲಾವಣೆಯನ್ನು ವಿವರಿಸುವಿರಾ?
8) ನಿಮ್ಮ ಆಪ್ತ ಸಮಾಲೋಚನೆಯಿಂದ ಸುಧಾರಣೆಯಾಗಿರುವ ಮಕ್ಕಳ ವಿವರಗಳಿದ್ದಲ್ಲಿ ತಿಳಿಸಿ.
9) ನಿಮ್ಮಿಂದ ಪರಿಹರಿಸಲು ಸಾಧ್ಯವಾಗದ ಸಮಸ್ಯೆಗಳಿದ್ದಲ್ಲಿ ನೀವೇನು ಮಾಡುವಿರಿ?
10) ಯುಡಿಸಿ ಕೇಂದ್ರದ ಮಕ್ಕಳಿಗಾಗಿ ನಿಮ್ಮ ಕಾಳಜಿಗಳೇನು?
11) ಕೇಂದ್ರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

**ಯುಡಿಸಿ ಕೇಂದ್ರದ ಶಾಲಾ ಮುಖ್ಯ ಶಿಕ್ಷಕರಿಗಾಗಿ ಪ್ರಶ್ನಾವಳಿ**

**ಕೇಂದ್ರ ಶಾಲೆಯ ಹೆಸರು:**

**ಮುಖ್ಯ ಶಿಕ್ಷಕರ ಹೆಸರು:**

1) ಯುಡಿಸಿ ಕೇಂದ್ರಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ನೀವು ಓದಿರುವಿರಾ? ಹೌದು/ಇಲ್ಲ
2) ಯುಡಿಸಿ ಕೇಂದ್ರಕ್ಕೆ ಸಂಬಂಧಿಸಿದಂತೆ ನಿಮ್ಮ ಜವಾಬ್ದಾರಿಗಳ ಕುರಿತು ನಿಮಗೆ ಸ್ಪಷ್ಟತೆ ಇದೆಯೇ? ಹೌದು/ಇಲ್ಲ
3) ಕೇಂದ್ರದಲ್ಲಿ ದಾಖಲಾಗಿರುವ ಮಕ್ಕಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿರುವ ಶಾಲೆಯಿಂದ ಹೊರಗುಳಿದ ಪಟ್ಟಿಯಲ್ಲಿರುವ ಎಷ್ಟು ಮಕ್ಕಳು ಕೇಂದ್ರಕ್ಕೆ ದಾಖಲಾಗಿರುತ್ತಾರೆ?
4) ಕೇಂದ್ರಕ್ಕೆ ದಾಖಲಾದ ಮಕ್ಕಳನ್ನು ದಾಖಲಾತಿ ವಹಿಯಲ್ಲಿ ದಾಖಲಿಸಲಾಗಿದೆಯೇ? ಹೌದು/ಇಲ್ಲ
5) ಎಷ್ಟು ದಿನಗಳಿಗೊಮ್ಮೆ ನೀವು ಕೇಂದ್ರಕ್ಕೆ ಭೇಟಿಯನ್ನು ನೀಡುತ್ತೀರಿ?
6) ಎನ್‌ಜಿಓ ಸಂಸ್ಥೆಯು ಇಲಾಖೆಯು ನಿಗದಿಪಡಿಸಿದಂತೆ ನೀಡಬೇಕಾದ ಸೌಲಭ್ಯಗಳನ್ನು ಮಕ್ಕಳಿಗೆ ನೀಡುತ್ತಿದೆಯೇ? ಹೌದು/ಇಲ್ಲ
7) ಮಕ್ಕಳ ವಾಸ್ತವ ಹಾಜರಾತಿಯನ್ನು ಪ್ರತಿದಿನ ದಾಖಲಿಸಲಾಗುತ್ತದೆಯೇ? ಹೌದು/ಇಲ್ಲ
8) ಪ್ರತಿದಿನದ ಹಾಜರಾತಿಗನುಗುಣವಾಗಿ ಮಕ್ಕಳಿಗೆ ಬಿಸಿಯೂಟವನ್ನು ಒದಗಿಸಲಾಗುತ್ತಿದೆಯೇ? ಹೌದು/ಇಲ್ಲ
9) ಈ ದಿನದಂದು ಬಿಸಿಯೂಟ ಮಾಡಿರುವ ಕೇಂದ್ರದ ಮಕ್ಕಳ ಸಂಖ್ಯೆ
10) ಸ್ವಯಂ ಸೇವಕರ ಪಾಠಾವಲೋಕನವನ್ನು ನೀವು ಮಾಡಿರುವಿರಾ? ಹೌದು/ಇಲ್ಲ
11) ಸ್ವಯಂ ಸೇವಕರ ತರಗತಿ ನಿರ್ವಹಣೆ ಬಗ್ಗೆ ನಿಮ್ಮ ಅಭಿಪ್ರಾಯ
12) ಮುಖ್ಯವಾಹಿನಿಗೆ ದಾಖಲಾಗಲು ಅರ್ಹವಾಗಿರುವ ಮಕ್ಕಳನ್ನು ನಿಮ್ಮ ಶಾಲೆಯ ತರಗತಿಗಳಲ್ಲಿ ಕಲಿಯಲು ಅವಕಾಶ ಕಲ್ಪಿಸಲಾಗಿದೆಯೇ? ಹೌದು/ಇಲ್ಲ
13) 12 ತಿಂಗಳ ತರಬೇತಿ ಮುಗಿದ ಬಳಿಕ ಮಕ್ಕಳು ಮುಖ್ಯವಾಹಿನಿಗೆ ಸೇರಲು ಅಗತ್ಯವಿರುವ ದಾಖಲೆಗಳನ್ನು ಒದಗಿಸಲಾಗುತ್ತಿದೆಯೇ? ಹೌದು/ಇಲ್ಲ
14) ಯುಡಿಸಿ ಕೇಂದ್ರದಲ್ಲಿ 12 ತಿಂಗಳ ತರಬೇತಿ ಮುಗಿಸಿರುವ ಎಷ್ಟು ಮಕ್ಕಳು ನಿಮ್ಮ ಶಾಲೆ (ಮುಖ್ಯವಾಹಿನಿ) ಯಲ್ಲಿ ಕಲಿಯುತ್ತಿದ್ದಾರೆ?
15) ಯುಡಿಸಿ ಕೇಂದ್ರದ ಗುಣಮಟ್ಟದ ಬಗ್ಗೆ ನಿಮ್ಮ ಅಭಿಪ್ರಾಯ
16) ಮಕ್ಕಳ ಕಲಿಕೆ ಬಗ್ಗೆ ನಿಮ್ಮ ಅಭಿಪ್ರಾಯ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು–10. TEL NO: 0821-2446419,
Web Site:http://diet.karnatakaeducation.org.in/mysore
E MAIL:diet.mysore@gmail.com

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

**ದಿವೈಪಿಸಿ/ಎಪಿಸಿ**

1. ಯುಡಿಸಿ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದ ಸವಲತ್ತುಗಳ ಬಗ್ಗೆ ಇರುವ ಸುತ್ತೋಲೆಗಳನ್ನು(ಟರ್ಮ್ಸ್ & ಕಂಡಿಷನ್ಸ್) ಎಲ್ಲ ಅನುಪಾಲನಾಧಿಕಾರಿ/ಅನುಷ್ಠಾನಾಧಿಕಾರಿಗಳಿಗೆ ನೀಡಲಾಗಿದೆಯೇ? ಹೌದು/ಇಲ್ಲ
2. ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಅನುಪಾಲನಾಧಿಕಾರಿಗಳಿಗೆ ಯುಡಿಸಿ ಕೇಂದ್ರಗಳು ನೀಡಬೇಕಾಗಿರುವ ಎಲ್ಲಾ ಸವಲತ್ತುಗಳ ಬಗ್ಗೆ ಸ್ಪಷ್ಟತೆ ಇದೆಯೇ? ಹೌದು/ಇಲ್ಲ
3. ಯುಡಿಸಿ ಕೇಂದ್ರ ನಿರ್ವಹಣೆಯಾಗುತ್ತಿರುವ ಶಾಲಾ ಮುಖ್ಯಸ್ಥರಿಗೆ ನೀಡಿರುವ ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡಲಾಗಿದೆಯೇ? ಹೌದು/ಇಲ್ಲ
4. ಪ್ರತಿ ಮಗುವಿಗೆ ಇಡೀ ವರ್ಷಕ್ಕೆ ಖರ್ಚು ಮಾಡುವ ಘಟಕ ವೆಚ್ಚವೆಷ್ಟು? .. .. .. .. .. .. ..
5. ನೀವು ಈ ವರೆಗೆ ಪ್ರತಿ ಕೇಂದ್ರಕ್ಕೂ ತಾವು ನೀಡಿರುವ ಭೇಟಿಗಳ ಸಂಖ್ಯೆ: .. .. .. .. .. .. ..
6. ಕೇಂದ್ರಗಳು ಮಕ್ಕಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ?
7. ಯುಡಿಸಿ ಕೇಂದ್ರಗಳ ಪರಿಣಾಮಕಾರಿ ನಿರ್ವಹಣೆಗೆ ಕ್ಷೇತ್ರದ ಕಾರ್ಯನಿರ್ವಾಹಕರನ್ನು ಹೇಗೆ ಸಿದ್ಧಪಡಿಸಿರುವಿರಿ?
8. ಕೇಂದ್ರ ಶಾಲೆಯ ಮುಖ್ಯಸ್ಥರು ಯಾವ ರೀತಿ ಸಹಕಾರ ನೀಡುತ್ತಾರೆ?
9. ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನಕ್ಕನುಗುಣವಾಗಿ ಕೇಂದ್ರದವರು ಸವಲತ್ತುಗಳನ್ನು ನೀಡುತ್ತಿದ್ದಾರೆಯೇ?
10. ಎಷ್ಟು ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾಗಿದ್ದಾರೆ?
11. ಯುಡಿಸಿ ಕೇಂದ್ರ ನಿರ್ವಹಣೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತಮಹಲ್, ಮೈಸೂರು-10. TEL NO: 0821-2446419,
Web Site:http://diet.karnatakaeducation.org.in/mysore
E MAIL:diet.mysore@gmail.com

## ಯುಡಿಸಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಅಧ್ಯಯನ

**ಅನುಪಾಲನಾಧಿಕಾರಿಗಳಿಗಾಗಿ ಪ್ರಶ್ನಾವಳಿ**

1. ಯುಡಿಸಿ ಕೇಂದ್ರಗಳ ನಿರ್ವಹಣೆಗೆ ಸಂಬಂಧಿಸಿದ ಸವಲತ್ತುಗಳ ಬಗ್ಗೆ ಇರುವ ಸುತ್ತೋಲೆಗಳನ್ನು(ಟಮ್ಸ್ & ಕಂಡಿಷನ್ಸ್) ಓದಿರುವಿರಾ? ಹೌದು/ಇಲ್ಲ
2. ನಿಮಗೆ ಯುಡಿಸಿ ಕೇಂದ್ರಗಳು ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ನೀಡಬೇಕಾಗಿರುವ ಎಲ್ಲಾ ಸವಲತ್ತುಗಳ ಬಗ್ಗೆ ಸ್ಪಷ್ಟತೆ ಇದೆಯೇ? ಹೌದು/ಇಲ್ಲ
3. ಯುಡಿಸಿ ಕೇಂದ್ರ ನಿರ್ವಹಣೆಯಾಗುತ್ತಿರುವ ಶಾಲಾ ಮುಖ್ಯಸ್ಥರಿಗೆ ನೀಡಿರುವ ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆ ಇದೆ-ಯೇ? ಹೌದು/ಇಲ್ಲ
4. ಪ್ರತಿ ಮಗುವಿಗೆ ಇಡೀ ವರ್ಷಕ್ಕೆ ಖರ್ಚು ಮಾಡುವ ಘಟಕ ವೆಚ್ಚವೆಷ್ಟು? .. .. .. .. .. .. ..
5. ನೀವು ಈ ವರೆಗೆ ಪ್ರತಿ ಕೇಂದ್ರಕ್ಕೂ ನೀಡಿರುವ ಭೇಟಿಗಳ ಸಂಖ್ಯೆ: .. .. .. .. .. .. ..
6. ಯುಡಿಸಿ ಕೇಂದ್ರದ ಗುಣಾತ್ಮಕ ನಿರ್ವಹಣೆಗೆ ನೀಡಿರುವಿರಿ?
7. ಕೇಂದ್ರಗಳು ಮಕ್ಕಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ?
8. ಕೇಂದ್ರ ಶಾಲೆಯ ಮುಖ್ಯಸ್ಥರು ಯಾವ ರೀತಿ ಸಹಕಾರ ನೀಡುತ್ತಾರೆ?
9. ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನಕ್ಕನುಗುಣವಾಗಿ ಕೇಂದ್ರದವರು ಸವಲತ್ತುಗಳನ್ನು ನೀಡುತ್ತಿದ್ದಾರೆಯೇ?
10. ಯುಡಿಸಿ ಕೇಂದ್ರ ನಿರ್ವಹಣೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

****************************************